# ಸಂಕಲನ

ವರ್ಷ ೫

ಜುಲಾಯಿ + ಆಗಸ್ಟ್
೨೦೦೪

೨೮

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

## ಸಂಕಲನದ ಲೇಖಕರಿಗೆ + ಓದುಗರಿಗೆ ಕೆಲವು ಸೂಚನೆಗಳು

೧. ಲೇಖನಗಳ ಕೈಬರೆಹದ / ಟೈಪ್ ಮಾಡಿದ / ಡಿಟಿಪಿ ಮಾಡಿದ ಮೂಲ ಪ್ರತಿಗಳನ್ನೇ ಕಳಿಸಬೇಕು. ಝೆರಾಕ್ಸ್ ಪ್ರತಿ ಪರಿಶೀಲಿಸಲಾಗುವುದಿಲ್ಲ.

೨. ಲೇಖನಗಳು ಪ್ರಕಟಣೆಗೆ ಸ್ವೀಕೃತವಾದರೆ ಅವು ತಲುಪಿದ ೨ ತಿಂಗಳೊಳಗೆ ತಿಳಿಸಲಾಗುವುದು.

೩. ಸಂಕಲನದ ೧ ಸಂಚಿಕೆ ಪ್ರಕಟವಾಗುವಾಗ ಅದರ ಮುಂದಿನ ೩ ಸಂಚಿಕೆಗಳಿಗಾಗಿ ಆಯ್ದ ಲೇಖನಗಳು ಡಿಟಿಪಿ ಆಗಿ ಸಿದ್ಧವಾಗಿರುವುದರಿಂದ ಯಾವುದೇ ಹೊಸ ಲೇಖನ ಕನಿಷ್ಠ ನಾಲ್ಕಾರು ತಿಂಗಳ ನಂತರ ಪ್ರಕಟವಾಗುತ್ತದೆ. ಆದ್ದರಿಂದ ಲೇಖಕರು ಅನಗತ್ಯ ಕುತೂಹಲ ಅಥವಾ ಅವಸರ ತಳೆಯದಿರಲು ಕೋರಿಕೆ.

೪. ಉತ್ತರವನ್ನು ನಿರೀಕ್ಷಿಸಿ ಯಾರೂ ಸ್ವವಿಳಾಸದ ಲಕೋಟೆ ಅಥವಾ ಅಂಚೆಚೀಟಿ ಕಳಿಸುವುದು ಬೇಡ. ಕವಿತೆಗಳನ್ನು ಹೊರತುಪಡಿಸಿ ಅಸ್ವೀಕೃತ ಲೇಖನಗಳನ್ನು ಸಂಕಲನದ ವೆಚ್ಚದಲ್ಲಿಯೇ ಆಯಾ ಲೇಖಕರಿಗೆ ಮರಳಿಸಲಾಗುವುದು.

೫. **ಪರಿಶೀಲನೆಗೆ ಪುಸ್ತಕದ ೨ ಪ್ರತಿ ಕಳಿಸಿದರೆ ಮಾತ್ರ ಪರಿಗಣಿಸಲಾಗುವುದು.** ಎರಡು ಪ್ರತಿ ಸ್ವೀಕರಿಸಿದ ಮಾತ್ರಕ್ಕೆ ಅದರ ಪರಿಶೀಲನೆ ಮಾಡಿಸಲೇಬೇಕೆಂಬುದು ಸಂಕಲನಕ್ಕೆ ಬಂಧನಕಾರಿಯಲ್ಲ. ಒಮ್ಮೊಮ್ಮೆ ಪರಿಶೀಲಿತ ವಿಮರ್ಶಾಲೇಖನ ಪ್ರಕಟಣೆಗೆ ಸಿಗುವುದು ಅತಿ ವಿಳಂಬದ್ದೂ ಕಷ್ಟದ್ದೂ ಆಗಬಹುದಾಗಿದೆ.

೬. ಜನವರಿ, ಮಾರ್ಚ್, ಮೇ, ಜುಲಾಯಿ, ಸಪ್ಟಂಬರ್, ನವಂಬರ್ ತಿಂಗಳಲ್ಲಿ ಪ್ರಕಟವಾಗುವ ಸಂಚಿಕೆಗಳು ಸಕಾಲದಲ್ಲಿ ಚಂದಾಹಣ ಕೊಟ್ಟ ಎಲ್ಲರಿಗೂ ಸಾಮಾನ್ಯವಾಗಿ ಆಯಾ ತಿಂಗಳ ೧೦-೧೨ ನೇ ದಿನಾಂಕದೊಳಗಾಗಿ ತಲುಪುತ್ತವೆ.

೭. ಲೇಖಕರು ತಮ್ಮ ಒಳ್ಳೆಯ ಬರೆಹಗಳನ್ನು ಕಳಿಸುವುದರೊಂದಿಗೆ ತಮ್ಮ ಗಮನಕ್ಕೆ ಬರುವ ಹೊಸ ಲೇಖಕರ ಒಳ್ಳೆಯ ಲೇಖನಗಳನ್ನೂ ಸಂಕಲನಕ್ಕೆ ಕಳಿಸಲು ಪ್ರೇರೇಪಿಸಿರಿ.

೮. ಪ್ರಕಟವಾಗುವ ಪ್ರತಿಯೊಂದು ಲೇಖನಕ್ಕೆ ಸಾಂಕೇತಿಕ ಗೌರವಧನ ರೂ. ೧೦೦/- ಲೇಖನ ಪ್ರಕಟವಾದ ಎರಡು ವಾರದೊಳಗಾಗಿ ಕಳಿಸಲಾಗುವುದು.

# ಸಂಕಲನ

ಜುಲಾಯಿ + ಆಗಸ್ಟ್ ೨೦೦೬

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ

ಧಾರವಾಡ - ೫೮೦ ೦೦೪

R N I No. KARKAN 14160 / 10 / 1 / 2002 - TC
SANKALANA :
A Kannada Literary Magazine
Volume 5, Issue 4 : July + August 2006
Edited by Dr. Siddhaling Pattanshetti
Hoomane, Shridevinagar, Vidyagiri, Dharwad - 580 004
Printed by Saraswati Offset Printers, Shivaji Road, Dharwad - 580 001

•
•
•

ಸಂಕಲನ - ೨೮
ಸಂಪುಟ ೫, ಸಂಚಿಕೆ ೪ : ಜುಲಾಯಿ + ಆಗಸ್ಟ್ ೨೦೦೬
ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಡಾ. ಹೇಮಾ ಪಟ್ಟಣಶೆಟ್ಟಿ
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪
✆ : ೦೮೩೬-೨೪೬ ೨೭೧೮, ಮೊಬೈಲ್ : ೯೪೪೮೬ ३೦೬३೭, ೯೪೪೮೮ ೬೧೬೦೪

•

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ
ಅಭಿಪ್ರಾಯಗಳ ಹೊಣೆ, ಹಕ್ಕು ಆಯಾ ಲೇಖಕರವು.

•

ವಾರ್ಷಿಕ ಚಂದಾ ರೂ. ೨೦೦/- (ಚೆಕ್ ೨೨೦/-)
೨೦೦೫ ರಿಂದ ಒಟ್ಟು ३ ವರ್ಷಗಳ ಚಂದಾ ರೂ. ೫೦೦/- (ಚೆಕ್ ೫೫೦/-)

•

ಡಿಟಿಪಿ : ಬಿಜಿಗ್ರಾಫಿಕ್ಸ್, ೧ನೇ ಕ್ರಾಸ್, ಜೋಶಿ ಫಾರ್ಮ್, ಧಾರವಾಡ - ೫೮೦ ೦೦೮
ಮೊಬೈಲ್ : ೯೯೮೦३ ८೧೮೬೯

# ಸಂಕಲನ -೨೮ : ಪರಿವಿಡಿ


೧. ಒನ್ನೇಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ ೫
೨. ಸಮಾಜವಾದಿಯ ಕನಸು – ರಾಮಚಂದ್ರ ದೇವ ೬–೧೨
೩. ಎರಡು ಕವಿತೆಗಳು – ರೋಹಿತ ಚಕ್ರತೀರ್ಥ ೧೨–೧೩
೪. ತೀ.ನಂ.ಶ್ರೀಕಂಠಯ್ಯನವರ ವಿಮರ್ಶಾಕೃತಿಗಳು – ಜಿ. ಆರ್. ತಿಪ್ಪೇಸ್ವಾಮಿ ೧೪–೨೧
೫. ತೆರೆಯಲು ತೋರಣದ ಬಾಗಿಲು – ಮಹಾಂತಪ್ಪ ನಂದೂರ ೨೧
೬. ಗುರುರಾಜ ಮಾರ್ಪಳ್ಳಿಯವರ 'ಅತಂತ್ರ' – ಮಾಧವಿ ಭಂಡಾರಿ ೨೨–೨೭
೭. ಸತ್ಯ ಮತ್ತು ಸೌಂದರ್ಯ : ಕೆಲವು ಟಿಪ್ಪಣಿಗಳು – ಪ್ರಕಾಶ ಹಲಗೇರಿ ೨೮–೩೪
೮. ಮೀನುಗಾರಿಕೆ ಕವನಗಳು – ಎಸ್. ಎಂ. ಶಿವಪ್ರಕಾಶ್ ೩೪–೩೫
೯. ಹೇಮಾ ಪಟ್ಟಣಶೆಟ್ಟಿಯವರ 'ಕನ್ನಡ ನಾಟಕಗಳಲ್ಲಿ ಸ್ತ್ರೀಲೋಕ'
– ಸಿ. ಎನ್. ರಾಮಚಂದ್ರನ್ ೩೬–೩೯
೧೦. ಎರಡು ಕವಿತೆಗಳು – ಸುಶೀಲಾ ಆರ್. ರಾವ್ ೩೯–೪೦
೧೧. ಬದ್ಧತೆ – ಅಶೋಕ ನರೋಡೆ ೪೦
೧೨. ರಾಮನವಮಿಯ ದಿನ – ರಾಮಗಿರಿ ರವೀಂದ್ರ ೪೧
೧೩. ಜೇಬು+ಕೊಸರೊಂದು – ಆರ್. ನಿರ್ಮಲ ೪೧–೪೨
೧೪. ಕಥಾನಗರ -೧ – ಜೋಗಿಂದರ್ ಪಾಲ್ / ಅಬ್ದುಲ್ ಮಜೀದ್ ಖಾನ್ ೪೨–೪೪
೧೧. ನನ್ನ ಶಾಲಾ ಗುರುಗಳು : ಗೌರವ-೧೧ – ಎಲ್. ವಿ. ಶಾಂತಕುಮಾರಿ ೪೫–೫೩
೧೨. ಅಯ್ದು ಕವಿತೆಗಳು – ವಸುಂಧರಾ ದೇಸಾಯಿ ೫೪
೧೩. ನನ್ನ ಅವ್ವ ನನ್ನ ಅಪ್ಪ : ಕೃತಜ್ಞತೆ-೨೮ – ಆರ್. ಮೋಹನ್ ಕುಮಾರ್ ೫೫–೫೯
೧೩. ಮೂರು ಚಿಂತನ – ಸಿದ್ಧಲಿಂಗ ಪಟ್ಟಣಶೆಟ್ಟಿ ೫೯–೬೩

೧೬. ಪುಸ್ತಕ ಪರಿಶೀಲನೆ : ೬೪–೭೫
೧. ಕಲ್ಲಚ್ಚಿನ ಕನ್ನಡ ಹೊತ್ತಗೆಗಳ ವಿವರಣ ಸೂಚಿ : ಸಂ. ಗೌ. ಮ. ಉಮಾಪತಿ ಶಾಸ್ತ್ರಿ
– ಷ. ಶೆಟ್ಟರ್
೨. ಡೊಳ್ಳಿನ ಹಾಡುಗಳು : ಜ್ಯೋತಿ ಹೊಸೂರ – ಎ. ಮುರಿಗೆಪ್ಪ
೩. ಹೊಚ್ಚ ಹೊಸತು ಹವೆ : ಎಂ. ಎಸ್. ವೆಂಕಟರಾಮಯ್ಯ – ಪ್ರಹ್ಲಾದ ಅಗಸನಕಟ್ಟೆ
೪. ಅಮ್ಮಣಗಿ : ಒಂದು ಅಧ್ಯಯನ : ಸಂ.ಎಲ್.ವ್ಹಿ.ಪಾಟೀಲ, ಗುರುಪಾದ ಮರಿಗುದ್ದಿ – ಎಂ. ಡಿ. ವಕ್ಕುಂದ
೫. ಕನಸು ನನಸಾಯಿತು : ಅನು. ಕೃ. ಶಿ. ಹೆಗಡೆ – ವಿಜಯಲಕ್ಷ್ಮಿ ರೇವಣಕರ
೬. ಮನುಷ್ಯರನ್ನು ನಂಬಬಹುದು : ಸುಹಾಸಂ – ಪರಮೇಶ್ವರಿ ಲೋಕೇಶ್ವರ್
೭. ವಲಸೆ ಹೋದ ಕನ್ನಡಿಗನ ಕತೆ : ಹಿರೇಮಲ್ಲೂರ ಈಶ್ವರನ್ – ಮೋತಿಲಾಲ ಹಲವಾಯಿ
೮. ದೇಹವೀಣೆಯ ಸಪ್ತಸ್ವರ : ವಸಂತ. ಅ. ಕುಲಕರ್ಣಿ – ಈಶ್ವರಚಂದ್ರ ಚಿಂತಾಮಣಿ
೯. ಜುಮುರು ಮಳೆ : ಸುಮಂಗಲಾ – ಸುನಂದಾ ಪ್ರಕಾಶ ಕಡಮೆ
೧೦. ನೆರಳು ಚೆಲ್ಲಿದ ಮಾಮರ : ಸಂ. ಶಿವರಾಂ ಪೈಲೂರು – ದೇಶಪಾಂಡೆ ಸುಬ್ಬರಾಯ
೧೧. ಕಾಳಾಮುಖ ದರ್ಶನ : ಎಸ್. ಎಸ್. ಹಿರೇಮಠ – ಚಿಕ್ಕೇರಿ ನಾರಾಯಣ್
೧೨. ಹರಿಯುವ ನದಿಗೆ ಮೈಯೆಲ್ಲ ಕಾಲು : ಜಂಬಣ್ಣ ಅಮರಚಿಂತ – ದುಷ್ಯಂತ ನಾಡಗೌಡ
೧೭. ಸಂಕಲನ : ಅನಿಸಿಕೆ ೭೫–೭೯
೧೮. ಕಡೀಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ ೮೦ + ಆವರಣ ಪುಟ ೩

## ಸಂಪಾದಕರ ಮಾತು

ಈ ಸಂಚಿಕೆಯಲ್ಲಿ 'ಕವಿರಾಜಮಾರ್ಗಮಂಥನ' ಲೇಖನವನ್ನು ಪ್ರಕಟಿಸಿಲ್ಲ. ಪ್ರಕಟಣೆಗೆ ಸ್ವೀಕೃತವಾದ ಅನೇಕ ಲೇಖನ, ಕವಿತೆ ಹಾಗೆಯೇ ಉಳಿದಿದ್ದುವು. 'ಕವಿರಾಜಮಾರ್ಗ' ಮಾಲಿಕೆಗೆ ಇದೊಂದು ಸಲ ಗ್ಯಾಪ್ ಮಾಡಿಕೊಳ್ಳೋಣ ಎಂದು ಪ್ರೊ. ಷ. ಶೆಟ್ಟರ್ ಅವರನ್ನು ವಿನಂತಿಸಿದ್ದೆವು. ಈ ಸಲ ಅವರೇ ಬರೆದ ಒಂದು ಪುಸ್ತಕ ಪರಿಶೀಲನೆಯನ್ನು ಪ್ರಕಟಿಸಿದ್ದೇವೆ.

ನಮ್ಮ ಪತ್ರಗಳಿಗೆ ಪ್ರತಿಕ್ರಿಯಿಸಿ ಮುನ್ನೂರರಷ್ಟು ಹಳೆಯ ಉದ್ರಿ ಚಂದಾದಾರರಲ್ಲಿ ೪೦-೫೦ ಮಂದಿ ತಮ್ಮ ಚಂದಾ ಕಳಿಸಿ ಉಪಕರಿಸಿದ್ದಾರೆ. ಅವರಿಗೆ ನಾವು ಕೃತಜ್ಞರಾಗಿದ್ದೇವೆ.

ಏಳೆಂಟು ಗ್ರಂಥಾಲಯಗಳ ಗ್ರಂಥಪಾಲಕರು ವಿಶ್ವಾಸದಿಂದ ಸಂಕಲನಕ್ಕೆ ಆದೇಶ ನೀಡಿದ್ದಾರೆ. ಅವರಿಗೂ ಕೃತಜ್ಞತೆಗಳು. ಮನಸ್ಸು ಮಾಡಿದರೆ ನಮ್ಮ ಅನೇಕ ಗ್ರಂಥಾಲಯಗಳ ಅಧಿಕಾರಿಗಳು ಸಂಕಲನವನ್ನು ತರಿಸಿಕೊಂಡು ಅಸಂಖ್ಯ ಓದುಗರಿಗೆ, ಸಾಹಿತ್ಯಾಸಕ್ತರಿಗೆ, ಲೇಖಕರಿಗೆ ಅನುಕೂಲ ಮಾಡಿಕೊಡಬಹುದಾಗಿದೆ.

೧ ಜುಲಾಯಿ ೨೦೦೬
ಹೂಮನೆ, ಧಾರವಾಡ-೪

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

# ಒನ್ನೇಪುಟ

— ಸಿದ್ಧಲಿಂಗ ಪಟ್ಟಣಶೆಟ್ಟಿ

ಬೀರಬಲ್, ತಾನಸೇನ, ಗಂಗಕವಿ, ಟೋಡರಮಲ್, ರಹೀಮ್ ಮುಂತಾದವರು ೯ ಮಂದಿ ಅಕಬರ್ ಬಾದಶಾಹನ ಆಸ್ಥಾನದ ಪ್ರಸಿದ್ಧ ನವರತ್ನ ಅನಿಸಿಕೊಂಡಿದ್ದರು. ಪ್ರಸಿದ್ಧರಲ್ಲಿ ಕೆಲವರು ಕತೆ ಆಗಿ ಉಳಿತಾರ. ಕೆಲವರು ಬರೇ ಹೆಸರ ಆಗತಾರ, ಇನ್ನ ಕೆಲವರು ಹೆಸರಾಂತರಾಗತಾರ. ಚರಿತ್ರೆಯಾಗುವ ಇತಿಹಾಸ ಮತ್ತು ಚಾರಿತ್ರ್ಯವಾಗುವ ಕಾವ್ಯ ಎರಡರಲ್ಲೂ ಇವತ್ತಿಗೂ ಉಳಿದಿರುವ ಅದ್ಭುತ ವ್ಯಕ್ತಿತ್ವ ರಹೀಮ್‌ನದು. ಅವನ ಪೂರ್ಣ ಹೆಸರು ಅಬ್ದುರ್‌ರಹೀಮ್ ಖಾನ್‌ಖಾನಾ. ಗಜನಿಯಿಂದ ಬಂದಿದ್ದ ಅವನ ತಂದೆ ಬೈರಮ್‌ಖ್ಯಾ ಮೊದಲ ಮುಗಲ್ ಬ್ಯಾಬರ್‌ನಲ್ಲಿ ಕೆಲಸಕ್ಕ ಸೇರಿ ತನ್ನ ಯೋಗ್ಯತೆ, ಪರಾಕ್ರಮ, ಚತುರತೆಯಿಂದ ಭಾಳ ಮ್ಯಾಲಕ ಬಂದಿದ್ದ. ಹುಮಾಯ್ಯೂ, ಅಕಬರರ ಕಾಲಕ್ಕೂ ಆಡಳಿತದೊಳಗ ದೊಡ್ಡ ಹುದ್ದೆ ಅನುಭೋಗಿಸಿದ್ದ. ಆಡಳಿತಗಾರ, ಪರಾಕ್ರಮಿ, ಕಲಾಪ್ರೇಮಿ, ಕವಿ, ರಾಜನೀತಿಪಟುವಾಗಿದ್ದ ಅವನ ಎಲ್ಲಾ ಗುಣಗಳ ಜೊತೆಗೆ ಕಾವ್ಯ, ಬಹುಭಾಷಾಜ್ಞಾನ, ಸಹೃದಯತೆಗಳು ಅಪ್ಪನ ಮಗ ರಹೀಮ್‌ನೊಳಗ ಇಮ್ಮಡಿಯಾಗಿ ಸ್ಫುರಿಸಿದುವು.

ಅರಬೀ, ಫಾರಸೀ, ತುರ್ಕೀ ಅಲ್ಲದೆ ಸಂಸ್ಕೃತ, ಹಿಂದಿಗಳನ್ನೂ ರಹೀಮ್ ಚೆನ್ನಾಗಿ ಕಲಿತಿದ್ದ. ಹಿಂದೂ ಧರ್ಮಗ್ರಂಥಗಳನ್ನ ಆಸ್ಥೆಯಿಂದ ಓದಿದ್ದ. ಹಿಂದೂ ಧರ್ಮ, ಸಂಸ್ಕೃತಿಗಳನ್ನ ಹಿಂದೂಗಳ್ಹಂಗ್ಅ ತಿಳಕೊಂಡು ಹಂಗ್ಅ ಪ್ರೀತಿಸಿದ ಮೊಟ್ಟಮೊದಲ ಮುಸ್ಲಿಂ ಕವಿ ರಹೀಮ್. ಅವನ ಜೀವನದ ಮುಕ್ಕಾಲು ಭಾಗದೊಳಗ ಭೌತಿಕ ಮತ್ತು ಮಾನಸಿಕ ಸಮೃದ್ಧಿ, ಸಂತೋಷ, ವಿಲಾಸ, ವೈಭವ ತುಂಬಿದ್ದುವು. ಹೆಂಡರು ಮಕ್ಕಳು ಜಾಗೀರು ಆಸ್ತಿ ಕೀರ್ತಿ ದೊಡ್ಡವರ ಸಾಮೀಪ್ಯ ಎದರದೂ ತ್ರುಟಿ ಇರಲಿಲ್ಲ. ಆದರ ತನ್ನ ಕಣ್ಣಮುಂದ್ಅ ಬೆಳೆದ ವಯಸ್ಸಾದ ಗಂಡುಮಕ್ಕಳು ಸತ್ತಿದ್ದು, ಹೆಣ್ಣುಮಕ್ಕಳು ವಿಧವೆಯರಾದದ್ದು, ಆಗ ರಾಜನಾಗಿದ್ದ ಜಹಾಂಗೀರ್ ಅವಮಾನಿಸಿ ಜಾಗೀರು ಕಸಗೊಂಡಿದ್ದು ಇತ್ಯಾದಿಯಿಂದಾಗಿ ರಹೀಮ್ ಭಾಳ ಜರ್ಜರಿತನಾಗಿಬಿಟ್ಟ. ಕಡಿಕಡೀಕ ಅವನ ಪ್ರತಿಭೆ ಯೋಗ್ಯತೆ ಸಜ್ಜನಿಕೆ ಕಾವ್ಯರಚನೆಗಳೇ ಅವನ ಕೈ ಹಿಡಿದುವು. ೧೬೨೭ನೇ ಇಸ್ವಿಯೊಳಗ ೭೨ನೇ ವಯಸ್ಸಿನ್ಯಾಗ ದಿಲ್ಲಿಯೊಳಗ ಹುಮಾಯ್ಯೂನ ಸಮಾಧಿಯ ಪಕ್ಕದೊಳಗ್ಅ ಅವನೂ ಮಕಬರಾಸ್ಥನಾದ.

ಭಾವುಕ ಕವಿ, ಅನುವಾದಕನಾಗಿದ್ದ ರಹೀಮ್ ಹಿಂದೀ, ಫಾರಸೀ, ತುರ್ಕೀ ಭಾಷೆಗಳಲ್ಲಿ ರಚಿಸಿದ ಕಾವ್ಯ ಈಗಲೂ ತಮ್ಮ ಸಾಹಿತ್ಯಗುಣಗಳಿಂದಾಗಿ ಗೌರವಾರ್ಹ ಅನಿಸ್ಯಾವು. ದೋಹಾವಲೀ, ನಗರಶೋಭಾ, ಮದನಾಷ್ಟಕ, ಖೇಟಕೌತುಕಮ್, ಬರವೈನಾಯಿಕಾಭೇದ ಮುಂತಾದುವು ಅವನ ಹಿಂದೀ ಕೃತಿಗಳು.

ರಹೀಮ್‌ನ ಅನುಭವದ್ರವ್ಯದ ರಸಪಾಕದಂತಿರುವ ನೂರಾರು ನೀತಿಬೋಧಕ ದ್ವಿಪದಿಗಳು ಭಾಳ ಪ್ರಸಿದ್ಧ ಆಗ್ಯಾವು. ಸಾಹಿತಿಗಳಿಗಷ್ಟೇ ಅಲ್ಲ, ಸಾಮಾನ್ಯರ ಬಾಯಾಗೂ ಗಾದೆಮಾತುಗಳ್ಹಂಗ ಬಳಸಲ್ಪಡತಾವು. ರಹೀಮ್ ಹೇಳತಾನ : 'ರಹಿಮನ ಧಾಗಾ ಪ್ರೇಮ್ ಕಾ, ಮತ್ ತೊಡೋ ಛಿಟಕಾಯ್/ ಟೂಟೇ ಸೆ ಫಿರ್ ನಾ ಮಿಲೇ, ಮಿಲೇ ತೋ ಗ್ಯಾಠ್ ಪಡ್ ಜಾಯ್.' (ಪ್ರೀತಿ ಅನ್ನುವ ದಾರ ಭಾಳ ಸೂಕ್ಷ್ಮ. ಅದನ್ನ ಅತ್ತಿತ್ತ ಎಳೆದಾಡಿ ಹರೀಬ್ಯಾಡ್ರಿ. ಈ ದಾರ ಏನಾರ ಆಗಿ ಒಮ್ಮೆ ಹರೀತೆಂದ್ರ, ಮತ್ತ ಮೊದಲಿನ್ಹಂಗ ಮಾಡೂದು ಕಷ್ಟ. ಮಾಡಿದರೂ ತುಂಡು ಕೂಡಿಸಿದಲ್ಲೆ ಗಂಟು ಆಕ್ಕತಿ.) ಹಂಗ್ಅ ಇನ್ನಷ್ಟು ದೋಹೆ : 'ಸಜ್ಜನರು, ನಮಗ ಬೇಕಾದವರು ನೂರುನೂರು ಸಲ ಸಿಟ್ಟಿಗೇಳಬಹುದು, ಬ್ಯಾಸರಾ ಮಾಡಕೋಬಹುದು, ಆದರೂ ಅವರ್ನ ರಮಿಸರಿ, ಪ್ರೀತಿಸಿರಿ. ಮುತ್ತಿನ ಹಾರ ಎಷ್ಟು ಸಲ ಹರದರೂ, ಅವು ಮುತ್ತು, ಅವುನ್ನ ಸರಾ ಮಾಡಿ ಇಟಗೋಬೇಕು', 'ಗಿಡ ತನ್ನ ಹಣ್ಣು ತಾನ್ಅ ತಿನ್ನೂದುಲ್ಲ, ಸರೋವರ ತನ್ನ ನೀರು ತಾನ್ಅ ಕುಡಿಯೂದುಲ್ಲ. ಹಂಗನ್ಅ ಸಜ್ಜನರು ಸಂಗ್ರಹಿಸುವ ಸಂಪತ್ತು ಪರೋಪಕಾರಕ್ಕಾಗೇ ಇರತೈತಿ', 'ಹಾವು, ಕುದುರೆ ಹೆಣ್ಣು ರಾಜ ನೀಚಗುಣಜಾತಿಜನ ಮತ್ತು ಖಡ್ಗಗಳನ್ನ ಸಂಭಾಳಿಸಿ, ಎಚ್ಚರಿಕೆಯಿಂದ ಇಟಗೋಬೇಕು. ಸ್ವಲ್ಪ ಸಡ್ಲ ಸಿಕ್ಕರೂ ಅವು ಹೊರಳತಾವು.'

# ಸಮಾಜವಾದಿಯ ಕನಸು

— ರಾಮಚಂದ್ರ ದೇವ

ಪ್ರೊ. ಕೆ. ನ. ಶಿವತೀರ್ಥನ್ ಮತ್ತು ಡಾ. ... ಕೃಷ್ಣಮೂರ್ತಿ ಹನೂರು ನನ್ನ ಬರವಣಿಗೆ ಬಗ್ಗೆ ಬರೆದ ಲೇಖನಗಳನ್ನು ಸಂಗ್ರಹಿಸಿ ಪುಸ್ತಕ ಪ್ರಕಟಿಸಿದ್ದಾರೆ. ಸುಮಾರಾಗಿ ಇಂದು ಲೇಖಕರ ಬಗೆಗಿನ ಪುಸ್ತಕ ಅಂದರೆ ಅಭಿನಂದನ ಗ್ರಂಥಗಳನ್ನು ತರುವುದು ಸಾಮಾನ್ಯವಾಗಿದೆ. ಇಂಥಾ ಸಂದರ್ಭದಲ್ಲಿ ನನ್ನ ಕೃತಿಗಳ ಮೇಲ... ವಿಮರ್ಶಾತ್ಮಕ ಲೇಖನಗಳಿರುವ ಈ ಪುಸ್ತಕ ತಂದು ಓದುಗರು ನನ್ನ ಬರವಣಿಗೆ ಬಗ್ಗೆ ಮಾತ್ರ ಗಮನ ಹರಿಸುವ ಹಾಗೆ ಮಾಡಿದ್ದಾರೆ. ವೈಯಕ್ತಿಕ ಜೀವನದ ಬಗೆಗಿನ ಅನೇಕೊ... ಟುಗಳನ್ನು ಹೇಳುವುದೇ ಸಾಹಿತ್ಯದ ಚರ್ಚೆ ಎಂದಾಗಿರುವ ಇಂದಿನ ಸಂದರ್ಭದಲ್ಲಿ ... ಇದು ನಾನು ಸಂತೋಷಪಡಬೇಕಾದ ಕೆಲಸವಾಗಿದೆ.

ಶಿವತೀರ್ಥನ್ ... ಮತ್ತು ನಾನು ಸುಮಾರು ನಲುವತ್ತು ವರ್ಷಗಳಿಗೂ ಹಿಂದಿನಿಂದ ಸ್ನೇಹಿತರು. ನಾವು ಮೊದಲು ಭೇಟಿಯಾದದ್ದು ರಾಮಮನೋಹರ ಲೋಹಿಯಾರ ಸಂಯುಕ್ತ ಸಮಾಜವಾದಿ ಪಕ್ಷದ ಯುವ ಸಂಘಟನೆಯಾದ ಸಮಾಜವಾದಿ ಯುವಜನ ಸಭಾದ ಕಛೇರಿಯಲ್ಲಿ. ೧೯... ೬೬ ರಲ್ಲಿ. ನಾರಾಯಣ ಶಾಸ್ತ್ರಿ ರಸ್ತೆಯಲ್ಲಿದ್ದ ಅದರ ಕಛೇರಿಯಲ್ಲಿ ಸೇರುತ್ತಿದ್ದಾಗ ನಾವು ವ... ಹಾರಾಜಾ ಕಾಲೇಜು ಅಥವಾ ಮಾನಸಗಂಗೋತ್ರಿಯಲ್ಲಿ ವಿದ್ಯಾರ್ಥಿಗಳಾಗಿದ್ದೆವು. ಆಗ ... ಇಪ್ಪತ್ತರ ಹರೆಯದ ಆಸುಪಾಸಿನಲ್ಲಿದ್ದ ನಮಗೆ ಸಮಾಜವಾದಿ ಯುವಜನ ಸಭಾ ಪ್ರ... ತಿಯೊಂದು ವಿಷಯದ ಬಗ್ಗೆ ಚರ್ಚೆ ಮಾಡುವ ಒಂದು ವೇದಿಕೆಯಾಗಿತ್ತು.

ಸಮಾಜವಾದಿ ಯುವಜನ ಸಭಾಕ್ಕೆ ಆಗ ಬರುತ್ತಿದ್ದವರಲ್ಲಿ ದೊಡ್ಡವರು ಟಿ. ಎನ್. ನಾಗರಾಜ್, ಎಂ. ಡಿ. ನಂಜುಂಡಸ್ವಾಮಿ ಮತ್ತು ಬಿ. ಎನ್. ಶ್ರೀರಾಮ. ನಂಜುಂಡಸ್ವಾಮಿ ಆಗತಾನೇ ಜರ್ಮನಿಯಿಂದ ಓದು ಮುಗಿಸಿ ಬಂದಿದ್ದರು. ಟಿ. ಎನ್. ನಾಗರಾಜ್ ೧೯೬೭ ರಲ್ಲಿ ಸಂಯುಕ್ತ ಸಮಾಜವಾದಿ ಪಕ್ಷದ ವತಿಯಿಂದ ಪಾರ್ಲಿಮೆಂಟು ಚುನಾವಣೆಗೆ ನಿಂತು ಸೋತಿದ್ದರು. ವಕೀಲರು. ಮೈಸೂರಿನ ಕೋರ್ಟಿನಲ್ಲಿ ಕನ್ನಡದಲ್ಲಿ ವಾದ ಮಂಡಿಸಿದ ಮೊದಲಿಗರಲ್ಲಿ ಒಬ್ಬರು. ಅವರು ನಮ್ಮನ್ನು ಹೆಗ್ಗಡೆದೇವನಕೋಟೆ ಮೊದಲಾದ ಕಡೆ ತಮ್ಮ ಒಂದು ಹಳೆ ವ್ಯಾನಿನಲ್ಲಿ ಸುತ್ತಿಸಿದ್ದರು. ಬಿ. ಎನ್. ಶ್ರೀರಾಮ ಆಗ ಇಂಗ್ಲಿಷ್ ಅಧ್ಯಾಪಕರಾಗಿದ್ದರು. ಪೂರ್ಣಚಂದ್ರ ತೇಜಸ್ವಿಯವರ ಜೊತೆ ಸೇರಿ ಲಹರಿ ಎಂಬ ಕಾವ್ಯಕ್ಕೇ ಮೀಸಲಾದ ಪತ್ರಿಕೆ ಸಂಪಾದಿಸಿ ಪ್ರಕಟಿಸುತ್ತಿದ್ದರು. ತೇಜಸ್ವಿ ಆಗ ಲೋಹಿಯಾರ ವಿಚಾರಗಳನ್ನು ಸಂಗ್ರಹಿಸಿ ಒಂದು ಕೆಂಪು ಪುಸ್ತಕ ಪ್ರಕಟಿಸಿದ್ದರು. ಮ್ಯಾನ್‌ಕೈಂಡ್ ರೀತಿಯಲ್ಲಿ ಮಾನವ ಎಂಬೊಂದು ಪತ್ರಿಕೆ ಆಗ ಪ್ರಕಟವಾಗಲು ಪ್ರಾರಂಭವಾಗಿತ್ತು.

ಮೇಲೆ ಹೇಳಿದ ಹಿರಿಯರನ್ನು ಬಿಟ್ಟರೆ ಸಮಾಜವಾದಿ ಯುವಜನ ಸಭಾದ ಕಛೇರಿಗೆ ಬರುತ್ತಿದ್ದವರು ನಾವು ವಿದ್ಯಾರ್ಥಿಗಳು— ಕೆ. ರಾಮದಾಸ್, ಶ್ರೀಕೃಷ್ಣ ಆಲನಹಳ್ಳಿ, ದೇವನೂರು ಮಹದೇವ, ಸೂ. ರಮಾಕಾಂತ, ಕೆ. ನ. ಶಿವತೀರ್ಥನ್, ನಾನು. ನಮ್ಮಲ್ಲಿ ಈಗ ಅನೇಕ ಬದಲಾವಣೆಗಳಾಗಿವೆ, ಏರುಪೇರುಗಳಾಗಿವೆ. ಆದರೂ ನಮ್ಮ ಜೀವನದೃಷ್ಟಿ ಸಮಾಜವಾದಿಯಾಗಿ ಉಳಿದಿದೆ. ಅದು ರೂಪುಗೊಂಡ ಅರವತ್ತರ ದಶಕದ, ಲೋಹಿಯಾ ಇನ್ನೂ ಬದುಕಿದ್ದ ದಿನಗಳ, ಗೆಳೆಯ ಶಿವತೀರ್ಥನ್. ಇಂದು ಅವರು ಸಿದ್ಧರಾಮಯ್ಯನವರ ಅಹಿಂದ ಸಂಘಟನೆ ಬಗ್ಗೆ ಒಲವುಳ್ಳವರು.

ಸ್ವತಃ ಕವಿಯಾದ ಶಿವತೀರ್ಥನ್‌ರ "ಗೆಂಡಗಯ್ಯ" ನನಗೆ ಪ್ರಿಯವಾದ ಕವನ. ಅದು ತನ್ನ ಚೌಕಟ್ಟನ್ನು ಮೀರುವುದಿಲ್ಲ ಎನ್ನುವುದು ನಿಜ. ಆದರೆ ಕನ್ನಡದ ಲಿಖಿತ ಸಾಹಿತ್ಯಕ್ಕೆ ಗೆಂಡಗಯ್ಯ ಎಂಬೊಬ್ಬ ಜಾನಪದ ವ್ಯಕ್ತಿಯನ್ನು ಈ ಕಾವ್ಯ ಪರಿಚಯಿಸುತ್ತದೆ. ಬೆಸ್ತ ಜನಾಂಗಕ್ಕೆ ಪ್ರತ್ಯೇಕವಾದ ಪುರಾಣವನ್ನು ಲಿಖಿತ ಸಾಹಿತ್ಯದ ಮೂಲಕ ಕಟ್ಟಿಕೊಡುವ ಪ್ರಯತ್ನವನ್ನು ಶಿವತೀರ್ಥನ್ ಈ ಕವನದ ಮೂಲಕ ಪ್ರಾರಂಭಿಸಿದರು. ಆ ಕೆಲಸವನ್ನು ಅವರು ಪೂರ್ಣ ಮಾಡಿದರೆ ಇಡೀ ಬೆಸ್ತ ಜನಾಂಗದ ಒಂದು ಪುರಾಣವನ್ನೇ ಆಧುನಿಕ ಕನ್ನಡದಲ್ಲಿ ಅವರು ಪುನರ್‌ನಿರ್ಮಿಸಬಹುದು, ಮತ್ತು ಈ ಪುರಾಣಕ್ಕೆ ನಮಗೆ ಈಗ ಪರಿಚಿತವಿರುವ ಅನೇಕ ಪುರಾಣಗಳಂತೆ ನಮ್ಮ ಆಶೋತ್ತರಗಳನ್ನು ಬಿಂಬಿಸುವ ಶಕ್ತಿ ಪ್ರಾಪ್ತವಾಗಬಲ್ಲುದು. ಅವರು ಅದನ್ನು ಮಾಡದಿದ್ದರೂ ಪೌರಾಣಿಕ ಗೆಂಡಗಯ್ಯನ ಸಾಮರ್ಥ್ಯ ಮತ್ತು ಉಚ್ಚೆಯಲ್ಲಿ ಗಾಳ ಹಾಕುತ್ತಾ ಕೂತ ಇಂದಿನ ಜನಾಂಗದ ವೈಫಲ್ಯ– ಇವುಗಳ ಮಧ್ಯದ ವೈದೃಶ್ಯ ಆಧುನಿಕ ಕನ್ನಡ ಕಾವ್ಯದ ಪರಿಣಾಮಕಾರಿ ಭಾಗಗಳಾಗಿವೆ.

ಈ ಪುಸ್ತಕದ ಇನ್ನೊಬ್ಬ ಸಂಪಾದಕರಾದ ಡಾ. ಕೃಷ್ಣಮೂರ್ತಿ ಹನೂರು ಪ್ರಖ್ಯಾತ ಕಥೆಗಾರರು. ಎ. ಕೆ. ರಾಮಾನುಜನ್‌ರ ಗೌರವ, ಆಸಕ್ತಿಗಳಿಗೆ ಪಾತ್ರರಾಗಿದ್ದ ಜಾನಪದ ವಿದ್ವಾಂಸರು. ಅವರು ಸಂಪಾದಿಸಿದ 'ಸಿರಿಯಜ್ಜಿ ಹಾಡುಗಳು' ಜಾನಪದ ಕ್ಷೇತ್ರಕ್ಕೆ ಸಂದ ಅಮೂಲ್ಯ ಕೊಡುಗೆ. ಶಿಷ್ಟ ಜೀವನದೃಷ್ಟಿಗಿಂತ ಭಿನ್ನವಾಗಿರುವ ಜಾನಪದ ಜೀವನದೃಷ್ಟಿಯ ಬಗ್ಗೆ ಅಧಿಕೃತವಾಗಿ ಬರೆಯಬಲ್ಲ ಕೆಲವೇ ವಿದ್ವಾಂಸರಲ್ಲಿ ಅವರೊಬ್ಬರು.

ಈ ಸಮಾರಂಭದ ಆತಿಥೇಯರಲ್ಲಿ ಚ. ಸರ್ವಮಂಗಳ, ಮೀನಾ ಮೈಸೂರು, ಹನೀಫ್, ಶ್ರೀಕಾಂತ ಸೇರಿದ್ದಾರೆ. ಸರ್ವಮಂಗಳ ಸ್ಥಳೀಯ ಆಚರಣೆಗಳಲ್ಲೊಂದಾದ ಅಮ್ಮನ ಗುಡ್ಡಕ್ಕೆ ಯಾತ್ರೆ ಹೋಗುವುದನ್ನು ಒಳ್ಳೆಯ ಕವನವಾಗಿ ಮಾಡಿದವರು. 'ಗೆಂಡಗಯ್ಯ' ಕವನದಂತೆ ಈ ಕವನವೂ ಜಾನಪದೀಯ ವಸ್ತುವೊಂದನ್ನು ಸಾರ್ವತ್ರಿಕ ಪುರಾಣದ ಮಟ್ಟಕ್ಕೇರಿಸುವ ಪ್ರಯತ್ನವಾಗಿದೆ. ಮೀನಾ ಮೈಸೂರು ತಮ್ಮ ಎತ್ತಣಿಂದೆತ್ತ ಕೃತಿಗಾಗಿ ಪ್ರಖ್ಯಾತರು. ಇದು ಪ್ರವಾಸ ಕಥನವಲ್ಲ. ಫ್ರಾನ್ಸ್ ಮತ್ತು ಕನ್ನಡ ನಾಡಿನ ಸಂಬಂಧಗಳನ್ನು ಎರಡು ಸಂಸ್ಕೃತಿಗಳ ಸಂಬಂಧವೆಂದು ವಿಶ್ಲೇಷಿಸುವ ಅರ್ಥಪೂರ್ಣ ಕೃತಿ. ನಮಗೆ ಫ್ರಾನ್ಸ್ ಎಂದರೆ ಸಾರ್ತ್ರ್, ಆಲ್ಬರ್ಟ್ ಕಮೂ, ಜೀನ್ ಶೆನೆ, ಪಿಕಾಸೋ, ಬಾದಿಲೇರ್ ಮೊದಲಾದವರು. ಇವರೆಲ್ಲಾ ಕನ್ನಡ ಬೌದ್ಧಿಕ ಜಗತ್ತಿನ ಮೇಲೆ ಪ್ರಭಾವ ಬೀರಿದವರು. ಆದರೆ ಮೀನಾ ತಮ್ಮ ಈ ಪುಸ್ತಕದಲ್ಲಿ ಫ್ರಾನ್ಸಿನ ಸಾಧಾರಣ ಜನಜೀವನದ ಬಗ್ಗೆ ಬರೆದಿದ್ದಾರೆ. ಜೊತೆಗೆ ಯಾವುದೋ ರೈಲ್ವೆ ಸ್ಟೇಷನ್ನಿನಲ್ಲಿ ಸಲ್ವಡರ್ ಡಾಲಿಯ ಚಿತ್ರಗಳನ್ನು ನೋಡಿದ್ದನ್ನೂ ಬರೆದಿದ್ದಾರೆ. ಮೈಸೂರು ತಾಲ್ಲೂಕಾಫೀಸಿನಲ್ಲಿ ಗುಮಾಸ್ತೆಯಾಗಿ ಕೆಲಸ ಮಾಡುತ್ತಿದ್ದ ಈ ಮೀನಾ ಕಳೆದ ಸುಮಾರು ಇಪ್ಪತ್ತು ವರ್ಷಗಳಲ್ಲಿ ಗಮನಾರ್ಹ ಮಹಿಳೆಯಾಗಿ ಬೆಳೆದ ಪರಿಯೇ ಅದ್ಭುತವಾದದ್ದು. ಸಾಂಪ್ರದಾಯಿಕ ಕುಟುಂಬದಿಂದ ಬಂದ ಅವರು ಅಂತರಜಾತಿ ಪ್ರೇಮವಿವಾಹ ಆದದ್ದು ಮಾತ್ರವಲ್ಲ– ಫ್ರಾನ್ಸಿನ ಒಬ್ಬರನ್ನು ವರಿಸಿ ಅಂತರದೇಶಿಯ ವಿವಾಹ ಕೂಡಾ ಆದವರು. ಲೋಹಿಯಾರಂಥ ಮಹಾನ್ ಸಮಾಜವಾದಿಗಳು ಖಂಡಾಂತರಗಳ ಮತ್ತು ಜಾತೀಯ ವೈಷಮ್ಯವನ್ನು ಪ್ರೇಮವಿವಾಹದ ಮೂಲಕ ಮೀರಬೇಕೆಂದು ಕನಸು ಕಂಡಿದ್ದರು. ಆ ಕನಸನ್ನು ನನಸು ಮಾಡಿದ ಕೆಲವರು ಸಮಾಜವಾದಿಗಳಲ್ಲಿ ಮೀನಾ ಒಬ್ಬರು.

ಇವತ್ತಿನ ಆತಿಥೇಯರಲ್ಲಿ ಒಬ್ಬರಾಗಿರುವ ಶ್ರೀಕಾಂತ ಅವರು ತಮ್ಮ ರಾಜಕೀಯ, ಸಾಮಾಜಿಕ ವಿಚಾರಧಾರೆಯಲ್ಲಿ ನನಗಿಂತ ಸಂಪೂರ್ಣ ಭಿನ್ನರು. ಅವರು ಬಿಜೆಪಿಯ ಬೆಂಬಲಿಗರು. ಬಹುಶಃ ಸದಸ್ಯರು. ಬಲಪಂಥೀಯರಾದ ಶ್ರೀಕಾಂತ ಇರುವ ಈ ಸಮಾರಂಭದಲ್ಲಿ ಎಡಪಂಥೀಯ ವಿಚಾರಧಾರೆಯ ನೀವೇಕೆ ಭಾಗವಹಿಸುತ್ತೀರಿ ಎಂದು ಅನೇಕರು ನನ್ನನ್ನು ಕೇಳಿದ್ದಾರೆ. ಆದರೆ, ಇಲ್ಲಿ ಮುಖ್ಯ ವಿಚಾರ ಏನೆಂದರೆ– ಶ್ರೀಕಾಂತರ ಘೋಷಿತ ರಾಜಕೀಯ ಪ್ರಣಾಳಿಕೆ ಏನೇ ಇದ್ದರೂ– ಅವರೊಬ್ಬ ಲೇಖಕರು. ಒಬ್ಬ ಲೇಖಕ ತನ್ನ ಬರವಣಿಗೆಯಲ್ಲಿ ತನ್ನ ಘೋಷಿತ ನಿಲುವನ್ನು ಮೀರುತ್ತಾನೆ. ಅಲ್ಲದೆ ನಮ್ಮೆಲ್ಲರ ಮುಖ್ಯ ಕಾಳಜಿ ಕನ್ನಡ ಸಾಹಿತ್ಯ, ಕನ್ನಡ ಭಾಷೆ. ಬಲಪಂಥೀಯ ವಿಚಾರಧಾರೆಯ ಬಹುದೊಡ್ಡ ಲೇಖಕರಾದ ಗೋಪಾಲಕೃಷ್ಣ ಅಡಿಗರು ಮತ್ತು ಎಡಪಂಥೀಯ ವಿಚಾರಧಾರೆಯ ಅನೇಕ ಲೇಖಕರು ಒಟ್ಟಿಗೆ ಸೇರುತ್ತಿದ್ದೆವು. ಅವರ ಕಾವ್ಯದ ಶ್ರೇಷ್ಠತೆ ಒಪ್ಪಿಯೂ ನಾವು ಅವರ ಜೊತೆ ಭಿನ್ನಮತ ಹೊಂದಿದವರಾಗಿದ್ದೆವು.

ಉದಾಹರಣೆಗೆ ಅವರ 'ಭೂತ' ಕವನ ಫಲಿತ ಸಮಾಜದ ಚಿತ್ರಣವನ್ನು, "ಅಗೆದುತ್ತ ಗದ್ದೆಗಳ ಕರ್ಮಭೂಮಿಯ ವರಣ / ಭತ್ತ ಗೋಧುವೆ ಹಣ್ಣು ಬಿಟ್ಟ ಬೃಂದಾವನ / ಗುಡಿ ಗೋಪುರಗಳ ಬಂಗಾರ ಶಿಖರ" ಎಂಬ ವಿವರಗಳಲ್ಲಿ ಕೊಡುತ್ತದೆ. ನನಗೆ ಇದಕ್ಕಿಂತ ಬಸವಣ್ಣನವರ, "ಉಳ್ಳವರು ಶಿವಾಲಯವ ಮಾಡುವರು / ನಾನೇನ ಮಾಡುವೆ – ಬಡವನಯ್ಯಾ / ಎನ್ನ ಕಾಲೇ ಕಂಬ, ದೇಹವೇ ದೇಗುಲ, / ಶಿರವೇ ಹೊನ್ನ ಕಳಶ. / ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ." ಎಂಬ ಪದ್ಯದ ನಿಲುವು ಹೆಚ್ಚು ರ್‍ಯಾಡಿಕಲ್ ಅನ್ನಿಸುತ್ತದೆ.

ಹಾಗೆಯೇ, ಅಡಿಗರು ಯಜ್ಞವನ್ನು ಒಪ್ಪಿಕೊಂಡವರು. ಅವರ 'ಶಾಂತವೇರಿಯ ಅಶಾಂತ ಸಂತ' ಇದಕ್ಕೆ ಉದಾಹರಣೆ. ಇದಕ್ಕಿಂತ ಯಜ್ಞದ ಟೀಕೆಯೂ ಆದ ಬುದ್ಧನ 'ಪ್ರತಿಯೊಂದೂ ಬೆಂಕಿ ಹತ್ತಿ ಉರಿಯುತ್ತಿದೆ' ಎಂಬ ಗಯಾಶೀರ್ಷದ ಪ್ರಥಮ ಪ್ರವಚನ ನನಗೆ ಹೆಚ್ಚು ಅರ್ಥಪೂರ್ಣ ಅನ್ನಿಸುತ್ತದೆ. ಆದರೂ ಅಡಿಗರ ಶ್ರೇಷ್ಠ ಕಾವ್ಯ ನಮ್ಮ ಮೇಲೆ ಪರಿಣಾಮ ಬೀರುತ್ತದೆ ಮತ್ತು ಕನ್ನಡ ಭಾಷೆಯ ಆಯಾಮಗಳನ್ನು ವಿಸ್ತರಿಸುತ್ತದೆ ಎಂಬ ಬಗ್ಗೆ ಎರಡು ಮಾತಿಲ್ಲ. ಸಾಹಿತ್ಯದ ಬಗೆಗಿನ ಕಾಳಜಿಯಿಂದಾಗಿಯೇ ಲೇಖಕರಾದ ನಾವು ನಮ್ಮ ರಾಜಕೀಯ ನಿಲುವು ಏನೇ ಇದ್ದರೂ ಒಟ್ಟು ಸೇರಲು ಆಸಕ್ತರಾಗಿರುತ್ತೇವೆ.

ಶ್ರೀಕಾಂತರು ಆತಿಥೇಯರಲ್ಲಿ ಒಬ್ಬರಾಗಿರುವುದು ನನಗೆ ಇನ್ನೊಂದು ಕಾರಣಕ್ಕೂ ಸಂತೋಷ ಕೊಟ್ಟಿತು. ನನ್ನದೇ ಸಮಾಜವಾದಿ ನಿಲುವಿನ ಲೇಖಕರು / ಓದುಗರು ನನ್ನನ್ನು ಮೆಚ್ಚುವುದು ಸಹಜ. ಆದರೆ ನನಗಿಂತ ತದ್ವಿರುದ್ಧ ವಿಚಾರಧಾರೆಯ ಶ್ರೀಕಾಂತ ಅವರು ನನ್ನ ಬರವಣಿಗೆ ಮೆಚ್ಚಿದ್ದು ನನ್ನ ಬರವಣಿಗೆಗೆ ಸಂದ ಗೌರವವೆಂದೇ ತಿಳಿಯುತ್ತೇನೆ. ಅವರು ಮತ್ತು ನಾನು ೧೯೭೨-೭೩ ರಲ್ಲಿ ಮೈಸೂರಿನ ಬನುಮಯ್ಯ ಕಾಲೇಜಿನಲ್ಲಿ ಸಹೋದ್ಯೋಗಿಗಳಾಗಿದ್ದೆವು. ಆನಂತರದ ಈ ಮೂವತ್ತಮೂರು ವರ್ಷಗಳ ಅವಧಿಯಲ್ಲಿ ನಾವು ಯಾವುದೇ ಸಂಪರ್ಕ ಇಟ್ಟುಕೊಂಡಿರಲಿಲ್ಲ. ಈಗ ಸುಮಾರು ಎರಡು ತಿಂಗಳ ಹಿಂದೆ ಶಿವತೀರ್ಥನ್ ಮನೆಯಿಂದ ಅವರು ಫೋನ್ ಮಾಡಿ ಹೀಗೊಂದು ಸಮಾರಂಭ ಇಟ್ಟುಕೊಳ್ಳುತ್ತೇವೆ ಎಂದರು. ಹೀಗೆ ಇದ್ದಕ್ಕಿದ್ದಂತೆ ಅವರು ನನ್ನ ಬಗ್ಗೆ ಸಮಾರಂಭ

ಇಟ್ಟುಕೊಳ್ಳುವ ಬಗ್ಗೆ ಯೋಚನೆ ಮಾಡಬೇಕಾದರೆ ಅವರು ನನ್ನ ಬರವಣಿಗೆ ಬಗ್ಗೆ ಆಕರ್ಷಿತರಾದದ್ದು ಹೊರತು ಬೇರೆ ಯಾವುದೇ ಕಾರಣ ಇರಲು ಸಾಧ್ಯವಿಲ್ಲ. ತನ್ನ ಬರವಣಿಗೆ ಮಾತ್ರದಿಂದ ತನಗಿಂತ ಸಂಪೂರ್ಣ ಭಿನ್ನ ವಿಚಾರಧಾರೆಯ ಇನ್ನೊಬ್ಬ ಆಕರ್ಷಿತನಾಗುತ್ತಾನೆನ್ನುವುದು ಒಬ್ಬ ಲೇಖಕನ ಸಾರ್ಥಕ ಕ್ಷಣಗಳು.

ಇಲ್ಲಿ ಸೇರಿರುವ ಎಲ್ಲರ ಪರಿಚಯ ನನಗಿಲ್ಲ. ಬಿ. ಎಂ. ಹನೀಫ್ ನನ್ನ ಮೆಚ್ಚಿನ ಅಂಕಣಕಾರರಲ್ಲೊಬ್ಬರು. ಅವರು ಇತ್ತೀಚೆಗೆ ಅಭಿಷೇಕ ಬಚ್ಚನ್‌ಗೆ ಬರೆದ ಒಂದು ಬಹಿರಂಗ ಪತ್ರ ಪ್ರೇಮದ ಮಹತ್ವ ತಿಳಿಸುವುದರ ಜೊತೆಗೆ ಪುರೋಹಿತಶಾಹಿಯನ್ನು ಬಹಳ ಚೆನ್ನಾಗಿ ತರಾಟೆಗೆ ತೆಗೆದುಕೊಂಡಿತ್ತು. ಎಸ್. ದಿವಾಕರ್ ನಮ್ಮನ್ನು ಜಗತ್ತಿನ ಅತ್ಯುತ್ತಮ ಸಾಹಿತ್ಯ ಕೃತಿಗಳಿಗೆ ಪರಿಚಯ ಮಾಡಿಸುತ್ತಿರುವವರು. ೧೯೭೦ ರ ದಶಕದಲ್ಲಿ ಪೋಲಿಶ್ ಸಾಹಿತ್ಯ–ಕಲೆಗಳನ್ನು ಸಾಕ್ಷಿಯ ಒಂದು ವಿಶೇಷ ಸಂಚಿಕೆಯ ಮೂಲಕ ಕನ್ನಡಕ್ಕೆ ತಂದ ಅವರು ಅನಂತರ ನಿರಂತರವಾಗಿ ಬೇರೆ ಬೇರೆ ಭಾಷೆಗಳ ಕತೆ, ಕವನ, ಲೇಖನಗಳನ್ನು ತಂದು ನಮ್ಮ ಅರಿವು ಹೆಚ್ಚಿಸಿದ್ದಾರೆ. ಅವರು ಕನ್ನಡದ ಕೆಲವು ಒಳ್ಳೆಯ ಕತೆಗಳ ಲೇಖಕರು ಕೂಡಾ ಹೌದು.

ಎಲ್ಲಾ ಅರ್ಥಗಳಲ್ಲಿ ಇದು ಬೇರೆ ಬೇರೆ ತತ್ತ್ವಪ್ರಣಾಳಿಕೆ, ಸಾಧನೆಗಳಿರುವ ಲೇಖಕ, ಪತ್ರಕರ್ತ, ಬುದ್ಧಿಜೀವಿಗಳ ಸಭೆಯಾಗಿದೆ. ಹೀಗಾಗಿ ನನ್ನ ಕೆಲವು ಆತಂಕಗಳನ್ನು, ವಿಚಾರಗಳನ್ನು ನಿಮ್ಮ ಜೊತೆ ಹಂಚಿಕೊಳ್ಳಬಯಸುತ್ತೇನೆ. ಅದಕ್ಕಿಂತ ಮೊದಲು, ನಾನು ನಿಮಗೆ ನನ್ನ ಹಿನ್ನೆಲೆ ಬಗ್ಗೆ ಕೆಲವು ವಿವರ ತಿಳಿಸಬೇಕಾಗಿದೆ.

೧೯೮೦ ರಲ್ಲಿ ನಾನು ನವದೆಹಲಿಯ ಅಮೆರಿಕನ್ ಎಂಬೆಸ್ಸಿಗೆ ಸೇರಿದ ಯುನೈಟೆಡ್ ಸ್ಟೇಟ್ಸ್ ಲೈಬ್ರರಿ ಆಫ್ ಕಾಂಗ್ರೆಸ್‌ನಲ್ಲಿ ಗ್ರಂಥಪಾಲಕನಾಗಿದ್ದೆ. ತುಂಬಾ ಸಂಬಳ, ಪರ್ಕ್ ಪಡೆಯುತ್ತಿದ್ದ ನನಗೆ ಆಗ ಮೂರು ಆಯ್ಕೆಗಳಿದ್ದವು. ನಾನು ಅದೇ ಹುದ್ದೆಯಲ್ಲಿ ಮುಂದುವರಿದು ದೆಹಲಿಯ ಒಂದು ಪ್ರತಿಷ್ಠಿತ ಬಡಾವಣೆಯಲ್ಲಿ ಮನೆ ಮಾಡಿಕೊಂಡು ವಾಸಿಸಿ ಈಗ ನಿವೃತ್ತಿಯ ಹತ್ತಿರ ಬರಬಹುದಿತ್ತು. ಅಥವಾ ಆಗ ನನ್ನ ಸಂಸ್ಥೆಯ ಅಮೆರಿಕನ್ ಡೈರೆಕ್ಟರ್ ಸಲಹೆ ಮಾಡಿದಂತೆ, ಅವರ ಸಹಾಯದಿಂದ ಅಮೆರಿಕಾದಲ್ಲಿ ಒಂದು ಕೆಲಸ ಪಡೆದು ಅಲ್ಲಿ ಹೋಗಿ ನೆಲೆಸಿ ಅನಿವಾಸಿ ಭಾರತೀಯನ ಅನುಕೂಲಗಳನ್ನೂ ಗ್ರೀನ್‌ಕಾರ್ಡನ್ನೂ ಪಡೆಯಬಹುದಾಗಿತ್ತು. ಅಥವಾ ಕರ್ನಾಟಕಕ್ಕೆ ವಾಪಾಸು ಬಂದು ಇಲ್ಲಿನ ಜನರ ಜೊತೆ ನನ್ನ ಭಾಷೆಯಲ್ಲಿ ಕೆಲಸ ಮಾಡಬಹುದಿತ್ತು. ಹಣದ ದೃಷ್ಟಿಯಿಂದ ಏನೇನೂ ಆಕರ್ಷಕವಲ್ಲದಿದ್ದರೂ ನಾನು ಮೂರನೆಯದನ್ನು ಆರಿಸಿ ದೆಹಲಿಯ ಆ ಕೆಲಸ ಬಿಟ್ಟು ಬೆಂಗಳೂರಿಗೆ ಬಂದು ಪತ್ರಕರ್ತನಾಗಿ ಕೆಲಸ ಮಾಡಲು ಪ್ರಾರಂಭಿಸಿದೆ. ಇಪ್ಪತ್ತು ವರ್ಷಗಳ ನಂತರ ೨೦೦೦ ರಲ್ಲಿ ನನಗೆ ಮತ್ತೆ ಮೂರು ಆಯ್ಕೆಗಳು ಎದುರಾದವು. ಆಗ ಬೆಂಗಳೂರಿನಲ್ಲಿ ಸ್ವಂತ ಮನೆ ಹೊಂದಿದ್ದ ನಾನು ಅಲ್ಲಿಯೇ ವಾಸ ಮಾಡಬಹುದಾಗಿತ್ತು. ದೆಹಲಿಯ ಅಮೆರಿಕನ್ ಎಂಬೆಸ್ಸಿಯ ಕೆಲಸ ಅಥವಾ ಬೇರೆ ಅಂಥದೇ ಕೆಲಸ ಹಿಡಿಯಬಹುದಾಗಿತ್ತು. ಅಥವಾ ಹಳ್ಳಿಗೆ ಹೋಗಿ ಕೃಷಿಕನಾಗಬಹುದಿತ್ತು. ಇಲ್ಲಿಯೂ ನನಗೆ ಹಳ್ಳಿಗೆ ಹೋಗಿ ಕೃಷಿಕನಾಗಿ ಜೀವಿಸುವುದು ಹೆಚ್ಚು ಅರ್ಥಪೂರ್ಣ ಜೀವನ ಅನ್ನಿಸಿತು. ಈ ಆಯ್ಕೆಗೆ ನನ್ನನ್ನು ಪ್ರೇರಿಸಿದ್ದು ವಿದ್ಯಾರ್ಥಿಯಾಗಿದ್ದಾಗ ಪ್ರಭಾವ ಬೀರಿದ್ದ ಲೋಹಿಯಾ ವಿಚಾರ ಹಾಗೂ ಗಾಂಧೀ ವಿಚಾರ. ಹೀಗಾಗಿ ಕಳೆದ ಆರು ವರ್ಷಗಳಿಂದ ನಾನು ಕೃಷಿಕನಾಗಿ ಒಂದು ಹಳ್ಳಿಯಲ್ಲಿ ವಾಸಿಸುತ್ತಿದ್ದೇನೆ.

ಆದರೆ ಈ ಅವಧಿಯಲ್ಲಿ ಕೃಷಿಕರ ಜೀವನದಲ್ಲಿ ಆತಂಕ ಹುಟ್ಟಿಸುವ ಬದಲಾವಣೆಗಳು ಗ್ಲೋಬಲೈಸೇಶನ್ನಿನಿಂದಾಗಿ ಆಗುತ್ತಿವೆ. ಇಂಥಾ ಸಂದರ್ಭದಲ್ಲಿ ಒಬ್ಬ ಕೃಷಿಕನಾಗಿ ಮತ್ತು ಲೇಖಕನಾಗಿ ನನಗೆ ಏನನ್ನಿಸುತ್ತದೆ ಎಂಬುದನ್ನು ನಿಮ್ಮ ಗಮನಕ್ಕೆ ತರಬಯಸುತ್ತೇನೆ.

ಗ್ಲೋಬಲೈಸೇಶನ್ ದಾಳಿ ಬಹಳ ಸೂಕ್ಷ್ಮವಾಗಿ ನಡೆಯುತ್ತಾ ನಮ್ಮ ಅಭ್ಯುದಯವನ್ನು ಕ್ಷಣ ಕ್ಷಣಕ್ಕೆ ತಿರುಚುತ್ತಿದೆ. ಅದರ ಪ್ರಖ್ಯಾತ ಉದಾಹರಣೆ ಕೇಂದ್ರ ಮಂತ್ರಿಮಂಡಲದ ಇತ್ತೀಚಿನ ಪುನರ್ರಚನೆ ಸಂದರ್ಭದಲ್ಲಿ ವ್ಯಕ್ತವಾಯಿತು. ಪೆಟ್ರೋಲಿಯಂ ಸಚಿವರಾಗಿದ್ದ ಮಣಿಶಂಕರ್ ಅಯ್ಯರ್ ಅವರನ್ನು ಅವರ ಹುದ್ದೆಯಿಂದ ತೆಗೆದು ಬೇರೊಬ್ಬ ಅಮೆರಿಕಾ ಪರವಾಗಿ ಇರುವವರನ್ನು ಆ ಕೆಲಸಕ್ಕೆ ನೇಮಿಸಲಾಯಿತು. ಅಯ್ಯರ್ ಅವರನ್ನು ಆ ಹುದ್ದೆಯಿಂದ ತೆಗೆದು ಹಾಕುವ ಕೆಲವು ದಿನಗಳ ಮೊದಲು, ಏಷಿಯಾದ ದೇಶಗಳು ತಮ್ಮ ಎನರ್ಜಿಯ ಅಗತ್ಯಗಳಿಗೆ ಸಂಬಂಧಪಟ್ಟಂತೆ ಸ್ವತಂತ್ರವಾಗುವ, ತನ್ಮೂಲಕ ಅಮೆರಿಕಾದ ಹಿಡಿತದಿಂದ ಈ ವಿಷಯದಲ್ಲಿ ಪಾರಾಗುವ ಕುರಿತ ತಮ್ಮ ವಿಚಾರಗಳನ್ನು ಚೀನಾದ ಒಂದು ಸಭೆಯಲ್ಲಿ ವ್ಯಕ್ತಪಡಿಸಿದ್ದರು. ನಮ್ಮ ಕಾಲ್‌ಸೆಂಟರ್‌ಗಳು, ಮಾಲ್‌ಗಳು ಅಮೆರಿಕಾದ ಕನಸುಗಳು ನಮ್ಮ ಮೇಲೆ ಮಾಡುವ ಸವಾರಿಯ ಪರಿಣಾಮವಾಗಿವೆ. ಇವು ನಮ್ಮ ಜನರ ಜೀವನಕ್ರಮವನ್ನು, ರೀತಿನೀತಿಗಳನ್ನು ನಿಧಾನವಾಗಿ ಬದಲಾಯಿಸುತ್ತವೆ. ಅಮೆರಿಕಾದ ವಸ್ತುಗಳಿಗೆ ಇಲ್ಲಿನ ಲಕ್ಷಗಟ್ಟಲೆ ಮಧ್ಯಮ ವರ್ಗದ ಜನ ಒಳ್ಳೆಯ ಗಿರಾಕಿಗಳು ಎಂಬುದನ್ನು ಜಾರ್ಜ್ ಬುಶ್ ಅವರೇ ಮೊನ್ನೆ ಇಲ್ಲಿಗೆ ಬಂದಾಗ ಹೇಳಿದ್ದಾರೆ. ಹೀಗೆ ಬೇರೆ ದೇಶಗಳಿಂದ ಬಂದ ವಸ್ತುಗಳಿಂದಾಗಿ ಅಥವಾ ಬೇರೆ ದೇಶಗಳ ಪಾಲುಗಾರಿಕೆ / ಉಸ್ತುವಾರಿಯಲ್ಲಿರುವ ಕಾರ್ಖಾನೆಗಳಲ್ಲಿ ತಯಾರಾದ ಉತ್ಪನ್ನಗಳಿಂದಾಗಿ ನಮ್ಮ ಅನೇಕ ಸಣ್ಣ ಕೈಗಾರಿಕೆಗಳು, ಗುಡಿ ಕೈಗಾರಿಕೆಗಳು, ಏಕವ್ಯಕ್ತಿ ಉತ್ಪನ್ನ ಘಟಕಗಳು ಮುಚ್ಚುತ್ತಿವೆ. ಕೃಷಿಯಲ್ಲಿಯೂ ನಾವು ಊಟಕ್ಕೆ ಉಪಯೋಗಿಸುವ ಅಕ್ಕಿಯ ಬದಲು ವೆನಿಲ್ಲಾದಂಥ ವಾಣಿಜ್ಯ ಬೆಳೆ ಬೆಳೆಯುತ್ತಿದ್ದೇವೆ. ಅಂದರೆ ನಾವೆಲ್ಲರೂ ಹೆಚ್ಚು ಹೆಚ್ಚು ಬೇರೆ ದೇಶಗಳ ಮೇಲೆ, ಅಲ್ಲಿನ ಗಿರಾಕಿಗಳ ಮೇಲೆ ಅವಲಂಬಿತರಾಗುತ್ತಿದ್ದೇವೆ.

ಬೀಜಮಸೂದೆ ಬಂದರೆ ನಮ್ಮ ಕೃಷಿಕರು ಪರಾವಲಂಬಿಯಾಗಬೇಕಾಗುತ್ತದೆ ಮತ್ತು ಅದು ನಮ್ಮನ್ನು ಸ್ವಾತಂತ್ರ್ಯ ಚಳವಳಿ ಪ್ರಾರಂಭವಾಗುವುದಕ್ಕಿಂತ ಹಿಂದಿನ ಸ್ಥಿತಿಗೆ ಒಯ್ಯುತ್ತದೆ. ಖಾದಿ ಮೂಲಕ ಗಾಂಧೀಜಿ ದೊಡ್ಡ ಯಂತ್ರಗಳನ್ನು ಮತ್ತು ಬ್ರಿಟಿಶ್ ವ್ಯಾಪಾರಿಗಳನ್ನು ಎದುರಿಸಿದರು. ಖಾದಿಗಾಗಿ ಹತ್ತಿ ಬೆಳೆಯುವ ರೈತ ಸ್ವಾವಲಂಬಿಯಾಗುತ್ತಿದ್ದ. ಚರಕಾದ ಮೂಲಕ ದೊಡ್ಡ ಕಾರ್ಖಾನೆಗಳನ್ನು, ಮ್ಯಾಂಚೆಸ್ಟರ್ ಗಿರಣಿಗಳನ್ನು ಅವರು ಎದುರಿಸಿದರು. ಖಾದಿ ಭಂಡಾರಗಳ ಮಾರಾಟದ ಮೂಲಕ ವ್ಯಾಪಾರಿಗಳನ್ನೂ, ಎದುರಿಸಿದರು. ಪರಿಣಾಮವಾಗಿ ನಮ್ಮ ಆರ್ಥಿಕತೆ, ಜೀವನಕ್ರಮ ವ್ಯಾಪಾರಿಕೇಂದ್ರಿತ ಆಗುವುದರ ಬದಲು ರೈತಕೇಂದ್ರಿತ, ದೈಹಿಕ ಶ್ರಮಕೇಂದ್ರಿತ, ವ್ಯಕ್ತಿಸಾಮರ್ಥ್ಯ ಕೇಂದ್ರಿತವಾಯಿತು. ಬೀಜಮಸೂದೆ ಬಂದರೆ ಮತ್ತೆ ಅದು ವ್ಯಾಪಾರಿ ಕೇಂದ್ರಿತ, ಬಹುರಾಷ್ಟ್ರೀಯ ಕೇಂದ್ರಿತ, ಬ್ಯೂರೋಕ್ರಸಿ ಕೇಂದ್ರಿತ ಆಗುತ್ತದೆ.

ಎರಡನೆಯ ಮುಖ್ಯ ಸಮಸ್ಯೆ ಎಂದರೆ, ಹೆಚ್ಚುತ್ತಿರುವ ಹಿಂಸೆ. ಕೋಮು ಗಲಭೆ, ನಕ್ಸಲೀಯರ ದಾಳಿಗಳು ಇಂದು ನಾಡಿನಾದ್ಯಂತ ವ್ಯಾಪಿಸಿವೆ. ಕೋಮುಗಲಭೆ ಹಿಂದೂ ಮುಸ್ಲಿಂಗೆ ಸೀಮಿತವಾಗಿಲ್ಲ. ದಲಿತರ ಮೇಲೆ ದೌರ್ಜನ್ಯ ನಡೆಯುತ್ತಿದೆ. ಲಿಂಗಾಯತ-ಒಕ್ಕಲಿಗರ ಮಧ್ಯದ ಜಗಳ ಕೊಲೆಗಳಲ್ಲೂ ಪರ್ಯವಸಾನವಾದದ್ದಿದೆ.

ಹೀಗೆ, ಈಗ ಈ ನಾಡು ಹೊರಗಿನ ಅಮೆರಿಕಾದಿಂದ, ಒಳಗಿನ ಹಿಂಸೆ-ದ್ವೇಷಗಳಿಂದ ಕುದಿಯುತ್ತಿದೆ. ಇಂಥಲ್ಲಿ ಒಬ್ಬ ಲೇಖಕನ ಜವಾಬ್ದಾರಿ ಏನು ಎಂಬುದರ ಬಗ್ಗೆ ಯೋಚಿಸಬೇಕಾಗಿದೆ.

ಹೀಗೆ, ನಾಡು ಕುದಿಯುತ್ತಿದ್ದಾಗ ಗಾಂಧೀಜಿ ಸಂಘಟಿಸಿದ ಚಳವಳಿಯ ಬುನಾದಿ ಆಗಿದ್ದದ್ದು ನಮ್ಮ ಸಾಮಾನ್ಯರೆಂದು ಪರಿಗಣಿಸಲಾದ ಜನರ ತಿಳಿವಳಿಕೆ, ಬುದ್ಧಿಶಕ್ತಿ ಹಾಗೂ ನೈತಿಕತೆ. ಸರಳ ಜೀವನವನ್ನು ಒಪ್ಪಿಕೊಂಡಿದ್ದ ಜನ ದುಬಾರಿ ಇಂಗ್ಲಿಷ್ ವಸ್ತ್ರಗಳನ್ನು ಸುಟ್ಟರು. ದೊಡ್ಡ ಬಂಗಲೆ, ಹೆಚ್ಚು ಸಂಬಳದ ನೌಕರಿ, ಐಷಾರಾಮ ಜೀವನಕ್ರಮ ತ್ಯಜಿಸಿದರು. ಸರಳತೆ, ವಿಚಾರವಂತಿಕೆ ನಮ್ಮ ಜನರಲ್ಲಿ ಈಗಲೂ ಜೀವಂತವಾಗಿದೆ. ಇತ್ತೀಚಿನ ಸುನಾಮಿ ದುರಂತದಲ್ಲಿ ಮಗನನ್ನು ಕಳೆದುಕೊಂಡ ಒಬ್ಬರಿಗೆ ಒಂದು ಲಕ್ಷ ಪರಿಹಾರ ಸಿಕ್ಕಿತು. ಅದಾದ ಕೆಲವು ದಿನಕ್ಕೆ ಮಗ ವಾಪಾಸು ಬಂದಾಗ ಹೆತ್ತವರು ತಾವಾಗಿ ಸಿಕ್ಕ ಪರಿಹಾರಧನವನ್ನು ಸರಕಾರಕ್ಕೆ ಹಿಂತಿರುಗಿಸಿದರು. ಸುನಾಮಿಯನ್ನೇ ನೆಪಮಾಡಿಕೊಂಡು ಲಕ್ಷಗಟ್ಟಲೆ ಹೊಡೆಯುವ ಅಧಿಕಾರಿ, ರಾಜಕಾರಣಿಗಳ ಮಧ್ಯೆ ಸಾಮಾನ್ಯ ಜನ ತೋರಿಸಿದ ಸ್ವಾಭಿಮಾನ, ನೈತಿಕತೆ ಎದ್ದು ಕಾಣುತ್ತದೆ. ಇಂಥಾ ವ್ಯಕ್ತಿತ್ವದ ವ್ಯಾಪಕ ಬೆಳವಣಿಗೆ ಸಮಾಜವಾದಿಯ ಕನಸು.

ನನ್ನ ಮನೆಗೊಬ್ಬ ಕೆಲಸದವ ಬರುತ್ತಾನೆ. ಹರಿಜನ. ಅವನ ಮನೆ ಸುಮಾರು ಮೂರು ಮೈಲಿ ದೂರದಲ್ಲಿದೆ. ನನ್ನ ಮನೆಯಿಂದ ಅರ್ಧ ಮೈಲಿ ದೂರದಲ್ಲಿ ಸರಕಾರ ಕಟ್ಟಿಸಿದ ಒಂದು ಮನೆ ಖಾಲಿಯಿದೆ. ಅದು ನಿನಗೆ ಸಿಗುವಂತೆ ಮಾಡುತ್ತೇನೆ ಎಂದೆ. ತನಗೆ ಈಗಾಗಲೇ ಒಂದು ಎಕರೆ ಜಾಗ ಮತ್ತು ಮನೆ ಇರುವುದಾಗಿಯೂ ಆ ಸರಕಾರಿ ಮನೆಯನ್ನು ಮನೆಯಿಲ್ಲದ ಬೇರೆ ಯಾರಿಗಾದರೂ ಕೊಡಿಸಬೇಕೆಂದೂ ಹೇಳಿದ. ಎರಡೆರಡು ಬಂಗಲೆ, ಸೈಟುಗಳನ್ನು ಲಂಚ ಹೊಡೆದ ದುಡ್ಡಿನಲ್ಲಿ ಜನ ಮಾಡಿಕೊಳ್ಳುತ್ತಾರೆಂಬುದನ್ನು ಅವನು ತಿಳಿಯದವನಲ್ಲ. ಆದರೂ ಯುವಕನಾದ, ಹತ್ತು ವರ್ಷದ ಒಳಗಿನ ಎರಡು ಶಾಲೆಗೆ ಹೋಗುವ ಮಕ್ಕಳಿರುವ, ಯಾವಾಗಲೂ ಹಣಕ್ಕಾಗಿ ಪರದಾಡುವ ಅವನಿಗೆ ಹಾಗನ್ನಿಸಿತು. ಇಂಥಾ ಸ್ವಾಭಿಮಾನದ, ನ್ಯಾಯಾನ್ಯಾಯ ವಿವೇಚನೆಯ ಬೆಳವಣಿಗೆಯೂ ಸಮಾಜವಾದಿ ಕಂಡ ಕನಸು.

ಉಳ್ಳವರು ಶಿವಾಲಯ ಮಾಡುತ್ತಾರೆ. ಶಿವಾಲಯದಲ್ಲಿ ಅಥವಾ ದೇವಸ್ಥಾನದಲ್ಲಿ ದೇವರ ಪ್ರತಿಮೆಗಳು, ಪುರೋಹಿತರು, ಪೂಜೆ ಪುನಸ್ಕಾರಗಳು, ಭಕ್ತರು ಇರುತ್ತಾರೆ. ಹಣ್ಣುಕಾಯಿ ಅಂಗಡಿ, ಹೂವಿನ ಅಂಗಡಿ, ಚಪ್ಪಲಿ ನೋಡಿಕೊಳ್ಳಲು ಜನ ಇರುತ್ತಾರೆ. ಜೊತೆಗೆ ಪ್ರತಿ ದೇವಸ್ಥಾನದ, ಪ್ರತಿ ಮಠದ, ಪ್ರತಿ ಮಸೀದಿ, ಚರ್ಚು, ಗುರುದ್ವಾರದ ಎದುರು ಒಂದು ಭಿಕ್ಷುಕರ ಪಡೆಯೂ ಕೂತಿರುತ್ತದೆ. ಆದರೆ, ಕಾಲೇ ಕಂಬವಾಗಿ, ದೇಹವೇ ದೇಗುಲವಾಗಿ, ಶಿರವೇ ಹೊನ್ನ ಕಳಶವಾದರೆ, ಬಡವ ಶ್ರೀಮಂತ ಎಂಬ ಭೇದವಿಲ್ಲ. ಭಿಕ್ಷುಕರೂ ಇಲ್ಲ. ಪ್ರತಿಯೊಬ್ಬ ಇನ್ನೊಬ್ಬನಿಗೆ ಸಮಾನ. ಹೀಗಾದಾಗ ನೈತಿಕ ನರಕದಲ್ಲಿ ಬಿದ್ದಿರುವ ಜಾರ್ಜ್ ಬುಶ್‌ನಂಥಾ ರಾಕ್ಷಸರು ಸುನಾಮಿ ಸಂತ್ರಸ್ತ ತಂದೆ-ತಾಯಿಯರ ಅಥವಾ ನನ್ನ ಮನೆ ಕೆಲಸದ ಹರಿಜನನ ನೈತಿಕ ಮಟ್ಟಕ್ಕೆ ಏರುತ್ತಾರೆ. ಇದೂ ಸಮಾಜವಾದಿಯ ಕನಸು.

ಇದು ಸಾಹಿತ್ಯದ ಕನಸೂ ಹೌದು. ಶಿವರಾಮ ಕಾರಂತ, ಕುವೆಂಪು, ಅಡಿಗ, ಮಾಸ್ತಿ, ಬೇಂದ್ರೆ, ಶ್ರೀರಂಗ, ಪುರಂದರದಾಸರು ಮೊದಲಾದ ನಮ್ಮ ಎಲ್ಲಾ ದೊಡ್ಡ ಲೇಖಕರು

ಸಮಾಜದ, ವ್ಯಕ್ತಿಯ ಹುಳುಕುಗಳನ್ನು ತೋರಿಸುತ್ತಲೇ ನಮ್ಮ ಸಾಮಾನ್ಯರಲ್ಲಿರುವ ಅಸಾಮಾನ್ಯ ಗುಣವನ್ನೂ ಎತ್ತಿ ಹಿಡಿದಿದ್ದಾರೆ. ಆದ್ದರಿಂದಲೇ ಸಾಹಿತ್ಯ ಗ್ಲೋಬಲೈಸೇಶನ್ನಿನ, ಜಾತೀಯತೆಯ ಅಥವಾ ಇನ್ನು ಯಾವುದೇ ದಾಳಿಯನ್ನು ಪ್ರತಿರೋಧಿಸುವ ಸಂವೇದನೆ ಬೆಳೆಸುವ ಶಕ್ತಿಯಾಗಿದೆ. ಆದರೆ ಸಾಹಿತ್ಯದ ಈ ಪ್ರತಿರೋಧ ಗುಣವನ್ನು ಜನರಿಗೆ ತಿಳಿಸುವ ಪ್ರಚಾರದ ಕೆಲಸವನ್ನು ಮಾತ್ರ ನಾವು ಸರಿಯಾಗಿ ಮಾಡುತ್ತಿಲ್ಲ ಎನ್ನಿಸುತ್ತದೆ. ಬಹುಶಃ ಸಾಹಿತ್ಯಿಕ ಎನೆಕ್ಡೋಟುಗಳ ಬದಲು ಸಾಹಿತ್ಯಕೃತಿಗಳ ಚರ್ಚೆಯನ್ನು ಹೆಚ್ಚಾಗಿ ಮಾಡಿದರೆ ಇದನ್ನು ಸಾಧಿಸಲು ಸಾಧ್ಯವಾದೀತು. ಶ್ರೇಷ್ಠ ಸಾಹಿತ್ಯ ಜನರ ಮನಸ್ಸಿನ ಒಳಗೆ ಬೆರೆತು ಹೋಗಬೇಕು ಎನ್ನುವುದೂ ಸಮಾಜವಾದಿಯ ಕನಸು.

೧೯ ಮಾರ್ಚ್ ೨೦೦೬ ರಂದು ಮೈಸೂರಿನಲ್ಲಿ ನಡೆದ
ದೇವಸಾಹಿತ್ಯ ಪುಸ್ತಕದ ಬಿಡುಗಡೆ ಸಮಾರಂಭದಲ್ಲಿ ಓದಿದ ಲೇಖನ.

■ ಡಾ. ರಾಮಚಂದ್ರ ದೇವ : ಕಲ್ಮಡ್ಕ-೫೭೪ ೨೫೭ (ದ.ಕ.) ■

## ಎರಡು ಕವಿತೆಗಳು

– ರೋಹಿತ ಚಕ್ರತೀರ್ಥ

### ೧. ದಾರಿ

ಇತಿಹಾಸ ಬಗೆವಾಗ ಅಜ್ಜನದೆ ತಲೆಯೋಡು
ಸಿಕ್ಕಿದರೆ ಎಷ್ಟು ಖುಷಿ, ಕಸಿವಿಸಿ, ದುಃಖ
ಹಾಗೆ ಸಿಕ್ಕಿತು ಎರಡು ಹೆಜ್ಜೆ ನನ್ನೆದುರಲ್ಲಿ
ಎಲ್ಲೋ ಹೋದವರದ್ದು, ಗಮ್ಯ– ಕಾಣದ ಮುಖ.
    ಹೇಗೂ ತಪ್ಪಿದ್ದೇನೆ– ಅನುಸರಿಸಿ ಹೋಗೋಣ
    ಗವಿ, ಕೋಟೆ, ನಡುರಸ್ತೆ, ಕಾಡುಮೇಡು
    ಅಲೆದರೂ ಮುಗಿಯದ ದಾರಿ– ಸವೆಯದ ಹೆಜ್ಜೆ
    ಪ್ರಾಸವಿಲ್ಲದ ಹಾಡು; ಬಿಡದ ಜಾಡು.
ನಡೆದೆ ಹೆಜ್ಜೆಯ ಹಿಂದೆ ನರೆವವರೆಗೂ ಗಡ್ಡ
ನಡುವೆ ಸಿಕ್ಕಿದ್ದೆಷ್ಟೋ ಕವಲುದಾರಿ
ಹಿಂತಿರುಗಿ ನೋಡಿದರೆ ಇರುಳು, ಕಾಣದ ಭೂತ
ಸಿಗಬಹುದು ಮುಂದೆಲ್ಲೋ ದೀಪಧಾರಿ.
    ಎದುರು ಮಲಗಿದ ಬೆಟ್ಟ ನನ್ನ ಪೂರ್ವಿಕನಂತೆ
    ಪೇರಿಸಿದ ಕನಸುಗಳಮೂರ್ತ ಶಿಲ್ಪ
    ಒಳಗೆಷ್ಟೊ ಮುಚ್ಚಿದ ಗಣಿ, ನೀಲ-ವೈಢೂರ್ಯ ಮಣಿ
    ಯಾರು ನೀಡುವರಗೆದು ಕಾಯಕಲ್ಪ ?
ಬೆಟ್ಟದ ತುದಿ-ಬಂಡೆ. ಜಾರಿದರೆ ಪಾತಾಳ
ಮೇಲೆ ಮುತ್ತುವ ಮೋಡ, ಮುಗಿಯಿತಿಲ್ಲೆ ಎಲ್ಲೆ ?
ಹೆಜ್ಜೆ ಹೇಗಿಡಲಿ ಮುಂದೆ– ಮೇಲೋ ಕೆಳಗೋ–
ಹೇಗೆ ಇಟ್ಟರು ಅಷ್ಟೆ, ಸೇರುವುದು ಅಲ್ಲೆ.

## ೨. ರಾಣಿ

ಕೆಂಚು–ಬಿಳಿ–ಕಪ್ಪು ತುಪ್ಪಳ
ದಂಥ ರೇಶಿಮೆ ಮೈ
ಮಾಟದ ಚೆಲುವೆ– 'ರಾಣಿ',
ಮೈಯಿಡೀ ನಿದ್ದೆ ಹೊದ್ದು ಮಲಗಿದರೆ
ಅಪ್ಪಟ ಮಗು.
ಎದ್ದರೆ ಸುಡುವ ಹಸಿವು,
ಕಾಯಿಸಿದ ಹಾಲು ಇಟ್ಟರೆ ಲಚಪಚ
ಮುಕ್ಕಿ ತುಟಿ ನೆಕ್ಕಿ ಸವರುತ್ತ
ಬಾಗಿಲಿಳಿದರೆ ತುಂಬು
ಮೇನಕೆ
ರೋಡಲ್ಲಿ ತೊರಡಿಗೆ ಬಾಲ ವರ್ತುಳ ಸುತ್ತಿ
ಧ್ಯಾನಸ್ಥ ಕುಳಿತ ಮಾರ್ಜಾಲ
ರಾಯರಿಗೆಲ್ಲ ಪುಳಕ– ಇವಳ
ಕ್ಯಾಟ್‌ವಾಕ್ ಕಂಡರೆ;
ಚಮಕಿತ– ಇವಳೆಲ್ಲೊ ಆಕಾಶ ಮೂಸುತ್ತ
ನಿಂದರೆ.
ಈ ಕಾಮಿ ಕಂಡೆಬ್ಬಿಸಿದ ಕಿಚ್ಚಿಗೆ
ಬಲಿಯಾಗಿ ಧ್ಯಾನಗೆಟ್ಟ ವಿಶ್ವಾಮಿತ್ರ
ರೊಳಗೇ ಅಂತರ್ಯುದ್ಧ.
ಮೈ ಪರಚಿಕೊಂಡು ಗೆದ್ದ
ಒಂದೆರಡಕ್ಕಷ್ಟೇ ಇವಳ ಗರ್ಭದಲ್ಲಿ
ಮಲಗಿ ಮರಿಯಾಗಿ
ಹುಟ್ಟಿ ಕಣ್ಮುಚ್ಚಿ ಮೊಲೆ ತಿನ್ನುವ ಭಾಗ್ಯ

* * *

ನೂರಾರು ಬಣ್ಣದಲ್ಲಿ ಅದ್ದಿ
ತೆಗೆದ ಬ್ರಷ್ಷು ಬೇಕಾಬಿಟ್ಟಿ
ಆಡಿಸಿ ಬರೆದ ಬಿಳೀ ಕ್ಯಾನ್‌ವಸ್ಸಿನ
ಚಿತ್ರ– ಇವಳ ಸಂತಾನ;
ಮತ್ತದರ ಚೌಕಟ್ಟು–
ಇವಳು.

■ ರೋಹಿತ ಚಕ್ರತೀರ್ಥ : ಶ್ರೀ ಗಣೇಶ, #೭-೨೦೧, ಮಣೋಳಿಗುಜ್ಜಿ, ಉಡುಪಿ-೫೭೬ ೧೦೨ ■

# ತೀ. ನಂ. ಶ್ರೀಕಂಠಯ್ಯನವರ ವಿಮರ್ಶಾ ಕೃತಿಗಳು

## ಜಿ. ಆರ್. ತಿಪ್ಪೇಸ್ವಾಮಿ

ನವೋದಯ ಕಾಲಘಟ್ಟದಲ್ಲಿ ಮೂಡಿಬಂದ ವಿಮರ್ಶೆ ನಿರ್ದಿಷ್ಟವಾದ ಉದ್ದೇಶಗಳತ್ತ ಮುಖ ಮಾಡಿತ್ತು. ಆಗ ಮುಖ್ಯವಾಗಿ ಭಾರತೀಯ ಕಾವ್ಯಮೀಮಾಂಸೆ ಮತ್ತು ಪಾಶ್ಚಾತ್ಯ ವಿಮರ್ಶನ ಸಿದ್ಧಾಂತಗಳನ್ನು ರೂಪಿಸುವ ಕೆಲಸ ನಡೆಯಿತು. ಪ್ರಾಚೀನ ಕನ್ನಡ ಕಾವ್ಯಗಳನ್ನು ಮೌಲ್ಯಮಾಪನ ಮಾಡುವ ಕಾರ್ಯದ ಜೊತೆಗೆ ಸಂಸ್ಕೃತ ಸಾಹಿತ್ಯದಲ್ಲಿನ ಶ್ರೇಷ್ಠ ಕಾವ್ಯಕೃತಿಗಳ ಅನ್ವೇಷಣೆಯೂ ಜರುಗಿತು. ಪ್ರಾಚೀನ ಕೃತಿಗಳ ಸಕಾರಾತ್ಮಕ ಅಂಶಗಳ ಪ್ರಶಂಸೆಯೂ ನಡೆಯಿತು. ಪ್ರಾಸಂಗಿಕವಾಗಿ ಸಮಕಾಲೀನ ಸಾಹಿತ್ಯದ ಚರ್ಚೆಯೂ ಜರುಗಿತು. ಜಿ. ಎಸ್. ಆಮೂರರು ಹೇಳುವಂತೆ "ಇಂಗ್ಲಿಷ್ ಸಾಹಿತ್ಯ ಮತ್ತು ಸಂಸ್ಕೃತ ಸಾಹಿತ್ಯ ಇವೆರಡರ ಪಾಂಡಿತ್ಯ ಹೊಂದಿದ್ದ ನವೋದಯ ಸಾಹಿತಿಗಳು ಭಾರತೀಯ ಮತ್ತು ಪಾಶ್ಚಿಮಾತ್ಯದ ಕಾವ್ಯತತ್ತ್ವಗಳನ್ನು ಗ್ರಹಿಸಿದವರಾಗಿದ್ದರು. ಆ ಹಿನ್ನಲೆಯಲ್ಲಿ ಪ್ರಾಚೀನ ಕಾವ್ಯಗಳ ವಿಮರ್ಶೆ ಮಾಡತೊಡಗಿದ್ದರು. ಹಾಗಾಗಿ ಯಾರನ್ನೂ ನೋಯಿಸದಿರುವ ಒಳ್ಳೆಯದನ್ನು ಮಾತ್ರ ಮೆಚ್ಚಿಕೊಂಡು ಬರೆಯುವ ವಿಮರ್ಶನ ಪದ್ಧತಿಯನ್ನು ಅವರಲ್ಲಿ ಕಾಣಲು ಸಾಧ್ಯವಿದೆ!" ಬಿಎಂಶ್ರೀ, ತೀನಂಶ್ರೀ, ಎ. ಆರ್. ಕೃಷ್ಣಶಾಸ್ತ್ರೀ, ಮಾಸ್ತಿ, ಕುವೆಂಪು, ಬೇಂದ್ರೆ, ಎಸ್. ವಿ. ರಂಗಣ್ಣ ಮೊದಲಾದವರ ಬರಹಗಳಲ್ಲಿ ಸಾಹಿತಿ ಸಮಾಜವನ್ನ ಕಾಣುವ ರೀತಿ, ಅದನ್ನು ಬೆಲೆ ಕಟ್ಟುವ ಬಗೆ, ಸಾಹಿತ್ಯಕ್ಕೂ ಸಮಾಜಕ್ಕೂ ಇರುವ ಸಂಬಂಧ ಇತ್ಯಾದಿಗಳ ಬಗ್ಗೆ ಅರಿವು ಮೂಡಿಸತೊಡಗಿದ್ದನ್ನ ಕಾಣಬಹುದು. ಹಾಗೆಯೇ ಪಂಪ, ರನ್ನ, ಹರಿಹರ, ಕುಮಾರವ್ಯಾಸ, ಲಕ್ಷ್ಮೀಶ, ಮುದ್ದಣ ಮುಂತಾದ ಪ್ರಾಚೀನ ಕನ್ನಡ ಕವಿಗಳ ಕಾಲ, ದೇಶ, ಕೃತಿ ಇತ್ಯಾದಿಗಳ ಅನ್ವೇಷಣೆಯಲ್ಲಿ ಆರ್. ನರಸಿಂಹಾಚಾರ್, ಟಿ. ಎಸ್. ವೆಂಕಣ್ಣಯ್ಯ ಮುಂತಾದ ವಿದ್ವಾಂಸರು ತೊಡಗಿದರು. ಇಂಥ ಅಧ್ಯಯನದ ಮೂಲಕ ಕವಿ ಕೃತಿಗಳ ಬಗೆಗೆ ಮೌಲ್ಯಮಾಪನದ ಆಸಕ್ತಿಯನ್ನ ಕುದುರಿಸಿದರು. ಅಲ್ಲದೆ ಗತಕಾಲದ ಸಾಹಿತ್ಯ ವಿಚಾರಗಳನ್ನ ವರ್ತಮಾನದಲ್ಲಿ ಅಭ್ಯಾಸ ಮಾಡುವ ಪರಿಪಾಠವನ್ನು ಬೆಳೆಸಿದರು. ಆ ಮೂಲಕವಾಗಿಯೂ ನವೋದಯದವರು ಸಾಹಿತ್ಯ ವಿಮರ್ಶೆಗೆ ತನ್ನದೇ ಆದ ತಳಹದಿಯನ್ನು ರೂಪಿಸಿದರು. ತನ್ನ ಕಾಲದ ಸಂಗತಿಗಳನ್ನು ಕಡೆಗಣಿಸದೆ ಪ್ರಾಚೀನ ಕನ್ನಡ ಸಾಹಿತ್ಯವನ್ನು ಬಹಳ ಪ್ರೀತಿಯಿಂದ ಕಂಡದ್ದು ವಿಶೇಷ ಸಂಗತಿ.

ಅಲ್ಲದೆ ಈ ಬರಹಗಾರರು ಭಾರತೀಯ ತತ್ತ್ವಶಾಸ್ತ್ರದಿಂದಲೂ ಸಂಸ್ಕೃತ, ಪ್ರಾಕೃತ ಮತ್ತು ಹಳಗನ್ನಡ ಸಾಹಿತ್ಯದಿಂದಲೂ ಪ್ರಭಾವಿತರಾದವರು. ಹಾಗಾಗಿ ಅವರ ಅಭಿಪ್ರಾಯಗಳು-ತೀರ್ಮಾನಗಳು ಈ ವಿಷಯಕ್ಕಷ್ಟೆ ಸೀಮಿತವಾದವೆಂದು ಭಾವಿಸುವ ಅಗತ್ಯವಿಲ್ಲ. ಅವರ ವಿಮರ್ಶೆಯನ್ನ ಅನುಮಾನದಿಂದ ಪರಿಭಾವಿಸುವ ಅಗತ್ಯವೂ ಇಲ್ಲ. ಕನ್ನಡದ ಮೊದಲ ವಿಮರ್ಶಕರ ಪ್ರತಿಭೆ, ಪಾಂಡಿತ್ಯ ಜಗತ್ತಿನ ಯಾವ ವಿಮರ್ಶಕರಿಗಿಂತಲೂ ಕಡಿಮೆಯದಾಗಿರಲಿಲ್ಲ. ಅಷ್ಟರ ಮಟ್ಟಿಗೆ ಅವರು ಅಧ್ಯಯನ ಮಾಡಿದ ಕೃತಿಯ ಪ್ರಮುಖ ಅಂಶಗಳನ್ನೆಲ್ಲ ವಿಮರ್ಶೆಯ ಒರೆಗೆ ಹಚ್ಚಿ ನೋಡಿದ್ದರು. ತಮ್ಮ ಮೇಲೆ ಗಾಢ ಪ್ರಭಾವ ಬೀರಿದ, ಪ್ರೇರಣೆ ನೀಡಿದ ಕೃತಿಗಳನ್ನು ವಿಮರ್ಶಿಸಿದಂತೆ ಪ್ರಾಚೀನ ಕಾವ್ಯಗಳನ್ನ ಮೂಲ ಕಾವ್ಯಗಳೊಂದಿಗೆ

ಹೋಲಿಸಿ ನೋಡತೊಡಗಿದರು. ಅವೆರಡರಲ್ಲಿ ಸಾದೃಶ್ಯ-ವೈದೃಶ್ಯಗಳನ್ನ ಗುರುತಿಸತೊಡಗಿದರು. ಇಂಥ ಬೌದ್ಧಿಕ ಬೆಳವಣಿಗೆಗಳಿಂದಾಗಿ ಕನ್ನಡದಲ್ಲಿ 'ತೌಲನಿಕ ವಿಮರ್ಶೆ' ಹುಟ್ಟಿಕೊಳ್ಳಲು ಸಾಧ್ಯವಾಯಿತು. ಕುವೆಂಪು, ಬೇಂದ್ರೆ, ಬಿಎಂಶ್ರೀ, ತೀನಂಶ್ರೀ, ಮಾಸ್ತಿ– ಮುಂತಾದವರೆಲ್ಲ ಈ ದಿಸೆಯಲ್ಲಿ ಸಾಕಷ್ಟು ಕೆಲಸ ಮಾಡಿದರು.

ನವೋದಯ ಕಾಲಘಟ್ಟದ ಬರಹಗಾರರಿಗೆ ತಮ್ಮ ಕಾಲದ ಸಾಹಿತ್ಯ ವಿಮರ್ಶೆ ಮುಖ್ಯವಾಗಿ ಕಾಡಲಿಲ್ಲ. ಪ್ರಾಚೀನ, ಮಧ್ಯಕಾಲೀನ ಕಾವ್ಯಗಳು, ಅವುಗಳಲ್ಲಿ ಬರುವ ಪಾತ್ರಗಳು, ಪ್ರಸಂಗಗಳು ಅವರನ್ನ ಹೆಚ್ಚು ಕಾಡತೊಡಗಿದವು. ಈ ನವೋದಯ ಕಾಲಘಟ್ಟದಲ್ಲಿ ಇವರು ವಿಮರ್ಶೆಯನ್ನು ಬರೆಯುವಾಗ ಆಧುನಿಕ ಸಾಹಿತ್ಯ ವಿಪುಲವಾಗಿ ಬೆಳೆದಿರಲಿಲ್ಲ. ಹಾಗೂ ಅವರು ತಮ್ಮ ಪೂರ್ವಿಕರ ಸಾಹಿತ್ಯ ಕೃತಿಗಳನ್ನ ವಿಮರ್ಶೆಯ ಒರೆಗಲ್ಲಿಗೆ ಹಚ್ಚುವುದು ಅನಿವಾರ್ಯವಾಗಿದ್ದಿರಬಹುದು. ತಮ್ಮ ಕಾಲದ ಸಾಹಿತ್ಯವನ್ನ ವಿಮರ್ಶೆಯ ನಿಷ್ಠುರತೆಗೆ ಒಳಪಡಿಸಬೇಕೆಂಬ ಮುಜುಗರವೂ ಅವರನ್ನ ಕಾಡಿರಬೇಕು. ಹಾಗೆ ಒಳಪಡಿಸಿದಲ್ಲಿ ಆಧುನಿಕ ಸಾಹಿತ್ಯಸೃಷ್ಟಿ ಎಲ್ಲಿ ಕುಗ್ಗಬಹುದೋ ಕ್ಷೀಣವಾಗಬಹುದೋ ಎಂಬ ಆತಂಕವೂ ಅವರನ್ನ ಬಾಧಿಸಿರಬಹುದು. ಈ ಹಿನ್ನೆಲೆಯಲ್ಲಿ ತೀನಂಶ್ರೀ ಅವರ ವಿಮರ್ಶನ ಕೃತಿಗಳನ್ನ ಪರಿಭಾವಿಸಬೇಕಾಗಿದೆ.

'ಒಲುಮೆ' (೧೯೩೨) ಕವನ ಸಂಕಲನದ ಮೂಲಕ ಸಾಹಿತ್ಯಕ್ಷೇತ್ರವನ್ನ ಪ್ರವೇಶಿಸಿದ ತೀನಂಶ್ರೀ ಅವರು ಹಳಗನ್ನಡ ಮತ್ತು ಹೊಸಗನ್ನಡ ಸಾಹಿತ್ಯಗಳ ಬಗ್ಗೆ ಅಧಿಕಾರವಾಣಿಯಿಂದ ಬರೆದರು ಮತ್ತು ಮಾತನಾಡಿದರು ಎಂಬ ಕಾರಣಕ್ಕಾಗಿ ಇಂದಿಗೂ ನಮ್ಮ ನಾಡಿನ ಜನಮನದಲ್ಲಿ ಉಳಿದಿದ್ದಾರೆ.

ಕವಿಯಾಗಿ, ವಿಮರ್ಶಕರಾಗಿ, ಪ್ರಬಂಧಕಾರರಾಗಿ, ಗ್ರಂಥ ಸಂಪಾದನಾಕಾರರಾಗಿ, ಎಲ್ಲಕ್ಕಿಂತ ಮಿಗಿಲಾಗಿ ಕಾವ್ಯಮೀಮಾಂಸಕರಾಗಿ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಅಮರರಾಗಿದ್ದಾರೆ. ಪಂಪ(೧೯೩೯), ಕಾವ್ಯಸಮೀಕ್ಷೆ(೧೯೪೨), ಸಮಾಲೋಕನ(೧೯೫೮), ಕಾವ್ಯಾನುಭವ (೧೯೭೦) ಇವು ತೀನಂಶ್ರೀ ಅವರ ವಿಮರ್ಶನ ಕೃತಿಗಳು. ಈಗಾಗಲೇ ವಿಮರ್ಶಕರು ಗುರುತಿಸಿರುವಂತೆ ತೀನಂಶ್ರೀ ಅವರ ಎಲ್ಲ ಬರಹಗಳಲ್ಲಿ ಸೃಜನಶೀಲತೆ ಮತ್ತು ವಿದ್ವತ್ತು, ರಸಿಕತೆ ಮತ್ತು ಪಾಂಡಿತ್ಯ ಹದವಾಗಿ ಸಂಗಮಿಸಿರುವುದನ್ನು ಕಾಣಬಹುದು.

ತೀನಂಶ್ರೀ ಅವರಿಗೆ ಪಂಪ ಬಹಳ ಪ್ರಿಯನಾದ ಕವಿ. ೧೯೩೯ ರಲ್ಲಿ ಪ್ರಕಟವಾದ ೬೪ ಪುಟದ 'ಪಂಪ' ಕೃತಿಯಲ್ಲಿ ಪಂಪ ಕನ್ನಡದ ಕಾಳಿದಾಸ ಎಂದು ಕರೆದಿದ್ದಾರೆ. "ಪಂಪನ ಇತಿವೃತ್ತ, ಅವನ ಕಾವ್ಯಗಳ ಪ್ರಮುಖವಾದ ಹೆಜ್ಜೆ ಗುರುತುಗಳನ್ನು ಕಾಣಿಸುವುದರ ಮೂಲಕ ಅವನ ಪ್ರತಿಭೆ, ಕಾವ್ಯಶಕ್ತಿ, ಕಾವ್ಯೋದ್ದೇಶ, ಶೈಲಿ. ಅಂದಿನ ಸಮಕಾಲೀನ ಇತಿಹಾಸ ಕಾವ್ಯದಲ್ಲಿ ಸೇರ್ಪಡೆಯಾದ, ಹೀಗೆ ಪಂಪ ಸಾಹಿತ್ಯದ ಅನೇಕ ಮಗ್ಗುಲುಗಳನ್ನ, ಆಯಾಮಗಳನ್ನ ಈ ಕೃತಿಯಲ್ಲಿ ಪರಿಚಯ ಮಾಡಿಕೊಟ್ಟಿದ್ದಾರೆ" ಎಂದು ಎಂ. ವಿ. ಶ್ರೀನಿವಾಸಮೂರ್ತಿಯವರು ಹೇಳಿದ್ದಾರೆ. ವಿಕ್ರಮಾರ್ಜುನವಿಜಯ ವ್ಯಾಸಭಾರತದ ನೆರಳಲ್ಲವೆಂದೂ ಅದರಲ್ಲಿ ಕವಿಯ ಸ್ವಂತಿಕೆ ಇದೆ ಎಂದೂ ಹೇಳಿರುವ ಮಾತುಗಳು ಕವಿ ಮತ್ತು ಕೃತಿಯ ಅನನ್ಯತೆಯನ್ನ ಎತ್ತಿ ತೋರುವ ಸಂಗತಿಗಳಾಗಿವೆ. ಅರಿಕೇಸರಿ ಮತ್ತು ಪಂಪನಲ್ಲಿ ಕಾಣುವ ಆತ್ಮೀಯತೆಯನ್ನ ದುರ್ಯೋಧನ ಮತ್ತು ಕರ್ಣನ ಗೆಳೆತನದಲ್ಲಿ ಗುರುತಿಸುವುದರ ಮೂಲಕ ಕರ್ಣನ ಬಗೆಗೆ

ಪ್ರೀತಿ ತೋರುತ್ತ ಪಂಪನನ್ನ ಎತ್ತಿ ಹಿಡಿಯುತ್ತಾರೆ. ಅಂಗೈ ಅಗಲದ ಪುಸ್ತಕ ಇದಾಗಿದ್ದರೂ ಗಂಭೀರವಾದ ಆಲೋಚನೆಗೆ ತೊಡಗುವಂತೆ ಮಾಡಿಬಿಡುತ್ತದೆ. ಈ ಕೃತಿಯ ಬಗೆಗೆ ಹಾ. ಮಾ. ನಾಯಕರು 'ಇದನ್ನು ಮೀರಿಸುವ ಪಂಪನನ್ನು ಕುರಿತ ವಿಮರ್ಶೆ ಇನ್ನೂ ಬರಬೇಕಾಗಿದೆ' ಎಂದು ಪ್ರಶಂಸಿಸಿದ್ದಾರೆ. ಪಂಪನ ವಿಕ್ರಮಾರ್ಜುನವಿಜಯ ಪ್ರಕಟವಾದದ್ದು ೧೮೯೮ ರಲ್ಲಿ. ಇಲ್ಲಿಯ ತನಕ ಪಂಪ ಮತ್ತು ಅವನ ಕೃತಿಗಳ ಬಗೆಗೆ ಸಾಕಷ್ಟು ಚರ್ಚೆಗಳು ನಡೆದಿವೆ. ಈ ಬಗೆಗೆ ಹಲವಾರು ಲೇಖನಗಳೂ, ಕೃತಿಗಳೂ ಹೊರಬಂದಿವೆ. ತೀನಂಶ್ರೀ ಅವರ 'ಪಂಪ', ಮುಳಿಯ ತಿಮ್ಮಪ್ಪಯ್ಯನವರ 'ನಾಡೋಜ ಪಂಪ', ವಿ. ಸೀತಾರಾಮಯ್ಯನವರು ಸಂಪಾದಿಸಿದ 'ಪಂಪ'– ಈ ಕೃತಿಗಳು ಸಹೃದಯರ ಗಮನ ಸೆಳೆದಿರುವುದಂತೂ ನಿಜ. ಈ ಮೂರೂ ಕೃತಿಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಮಾಲೆಯಲ್ಲಿ ಪ್ರಕಟವಾಗಿರುವ ತೀನಂಶ್ರೀ ಅವರ ಕೃತಿ 'ಪಂಪ' ತೀರಾ ಚಿಕ್ಕದು. ಆದರೆ ಕಡಿಮೆ ವೇಳೆಯಲ್ಲಿ, ತಕ್ಷಣದಲ್ಲಿ ಪಂಪನ ಬಗೆಗೆ ಖಚಿತವಾದ ಮಾಹಿತಿಯನ್ನ ಪಡೆಯಬೇಕೆಂದರೆ ತೀನಂಶ್ರೀ ಅವರ ಈ ಕೃತಿಯನ್ನ ಅವಲಂಬಿಸಬೇಕಾದ ಅನಿವಾರ್ಯತೆ ಇದೆ. ಪಂಪನ ಕಾಲ ದೇಶ ವೈಚಾರಿಕತೆಯನ್ನ ತಿಳಿಯಪಡಿಸುವ ಚಾರಿತ್ರಿಕ ವಿಮರ್ಶೆಯ ಮುಖ್ಯ ಬೆಳವಣಿಗೆಗಳನ್ನ ದಾಖಲಿಸುವ ಮುಳಿಯ ತಿಮ್ಮಪ್ಪಯ್ಯ ಅವರ 'ನಾಡೋಜ ಪಂಪ', ವಿಸೀ ಅವರ 'ಪಂಪ' ಓದಿನ ನಂತರವೂ ಪಂಪನ ಸಮಗ್ರ ತಿಳಿವಳಿಕೆಗಾಗಿ ತೀನಂಶ್ರೀ ಅವರ ಈ ಕೃತಿಯನ್ನ ಗಮನಿಸಲೇಬೇಕು. ಪಂಪನ ಕಾವ್ಯಗಳು ಕನ್ನಡ ಜನತೆಗೆ ಏನಾದರೂ ಪರಿಚಯವಾಗಿದ್ದರೆ ಅದು ತೀನಂಶ್ರೀ ಅವರ ಪರಿಶ್ರಮದಿಂದ ಎಂಬ ಮಾತು ವಿದ್ವತ್‌ವಲಯದಲ್ಲಿ ಜನಜನಿತವಾಮದು. "ಈ ಪುಸ್ತಿಕೆಯಲ್ಲಿ ಪಂಪನ ವ್ಯಕ್ತಿತ್ವದ ದರ್ಶನವಾದಂತೆಯೇ ತೀನಂಶ್ರೀ ಅವರ ಮನೋಧರ್ಮ, ವ್ಯಕ್ತಿತ್ವಗಳ ದರ್ಶನವೂ ಆಗುತ್ತದೆ" ಎಂಬ ಎಚ್. ಜಿ. ಸಣ್ಣಗುಡ್ಡಯ್ಯನವರ ಮಾತು ಆ ಕೃತಿಯ ಮಹತ್ವವನ್ನ ಸಾರುವಂಥದ್ದು.

ಐದು ಲೇಖನಗಳನ್ನು ಒಳಗೊಂಡಿರುವ 'ಕಾವ್ಯಸಮೀಕ್ಷೆ' ಸಂಕಲನ ಹೊರಬಂದದ್ದು ೧೯೪೭ ರಲ್ಲಿ. ಇದು ಅವರ ಮೊದಲ ವಿಮರ್ಶಾ ಕೃತಿ. ಪುಸ್ತಕದ ಅರಿಕೆಯಲ್ಲಿ ಅವರೇ ಹೇಳಿಕೊಂಡಿರುವಂತೆ "ಈ ಪ್ರಬಂಧಗಳಲ್ಲಿ ಒಂದೊಂದು ಬೇರೆ ಬೇರೆ ಕಾಲದಲ್ಲಿ ಬಿಡಿಯಾಗಿ ರಚಿತವಾಗಿದ್ದರೂ ಇಲ್ಲಿ ಕೂಡಿಸಿ ನೋಡುವಾಗ ವಸ್ತುವಿನ ಮಟ್ಟಿಗಾದರೂ ಇವಕ್ಕೆ ಸಂಬಂಧವುಂಟೆಂದು ತೋರದಿರದು. ವಿಷಮ ಪ್ರಣಯದ ಅನೇಕಮುಖವಾದ ಗತಿ ಇವುಗಳಲ್ಲಿ ಗೋಚರಿಸುತ್ತದೆ. ಅದು ದುರಂತವಾಗಬಹುದು. ಮಂಗಳಾಂತವಾಗಬಹುದು, ನಿಂದ್ಯವಾಗ ಬಹುದು, ವಂದ್ಯವಾಗಬಹುದು. ಎಲ್ಲವೂ ಒಂದೇ ಹೆಸರಿನ ವಿಭಿನ್ನ ವೇಣಿಗಳು. ಕೊನೆಯ ಪ್ರಬಂಧದಲ್ಲಿ ಪ್ರತಿಪಾದನೆಯ ಗುರಿಯೂ, ಕ್ರಮವೂ ಮಿಕ್ಕ ಕಡೆಗಳಿಗಿಂತ ಬೇರೆಯಾಗಿದ್ದರೂ ಅಲ್ಲಿ ಕೂಡ ಈ ಸಹಸ್ರಶೀರ್ಷ ವಸ್ತು ಹೆಡೆಯೆತ್ತಿಕೊಂಡೇ ಇದೆ." ಕಾಳಿದಾಸನ ನಾಟಕಗಳಲ್ಲಿ ದುರಂತ ವಸ್ತುವಿನ್ಯಾಸ, ಶಾಕುಂತಲವನ್ನು ಕುರಿತು, ಜನ್ನನ ಕಾವ್ಯಗಳಲ್ಲಿ ಪ್ರಣಯ ನಿರೂಪಣೆ ಕನ್ನಡ ಭಾರತದಲ್ಲಿ ಶೃಂಗಾರದ ಸನ್ನಿವೇಶಗಳು, ಮಹಾದೇವಿಯಕ್ಕನ ಕೆಲವು ವಚನಗಳು– ಈ ಲೇಖನಗಳನ್ನು ಗಮನಿಸಿದರೆ ಯಾರೂ ಒಲುಮೆಯ ಹಿಡಿತದಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ, ಸಾಹಿತ್ಯವೂ ಇದರಿಂದ ಹೊರತಾಗುವುದು ಸಾಧ್ಯವಿಲ್ಲ ಎಂಬುದು ದೃಢವಾಗುತ್ತದೆ.

`ಜನ್ನನ ಕಾವ್ಯಗಳಲ್ಲಿ ಪ್ರಣಯ ನಿರೂಪಣೆ'ಯನ್ನು ಕುರಿತು ಲೇಖನದಲ್ಲಿ ತೀನಂಶ್ರೀ ತಮ್ಮ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿದ್ದಾರೆ : "ನಮ್ಮ ಹಳಗನ್ನಡ ಸಾಹಿತ್ಯವೂ ಈ ಲೋಕ ಮೋಹಕವಾದ ಶೃಂಗಾರ ರಸಕ್ಕೆ ತನ್ನ ಕಾಣಿಕೆಯನ್ನು ಸಲ್ಲಿಸದೆ ಬಿಟ್ಟಿಲ್ಲ. ಒಂದು ದೃಷ್ಟಿಯಿಂದ ತನ್ನ ಅಳವಿಗೆ ಮೀರಿಯೇ ಸಲ್ಲಿಸಿದೆಯೆಂದು ಹೇಳಬಹುದು. ಮಹಾಕಾವ್ಯವನ್ನ ರಚಿಸಿ ಕವಿ ಪಟ್ಟವನ್ನ ಗಳಿಸಿದವರೆಲ್ಲರೂ ನಾಯಕನ ವಿಲಾಸ ವಿಹಾರಗಳನ್ನ ತಕ್ಕಮಟ್ಟಿಗೆ ವರ್ಣಿಸಿರಲೇಬೇಕಾಗುತ್ತದೆ. ಆದರೆ ಹಾಗೆ ಮಾಡಿದವರೆಲ್ಲರಿಗೂ ಪ್ರಣಯ ನಿರೂಪಣೆಯಲ್ಲಿ ಚಾತುರ್ಯವುಂಟೆಂದು ಹೇಳುವುದು ಕಷ್ಟ. ಅದು ಕವಿಯ ಕರ್ತವ್ಯ. ಅದಿಲ್ಲದೆ ಮಹಾಕಾವ್ಯ ವಾಗದು ಎಂಬ ಬುದ್ಧಿಯಿಂದಲೇ ಹಲವರು ಬರೆದಂತೆ ತೋರುತ್ತಾರೆ. ಅವರು ವರ್ಣಿಸುವ ಅಂಶಗಳಲ್ಲಿ ವೈವಿಧ್ಯವಿರುವುದಿಲ್ಲ. ನಿರೂಪಿಸುವ ಸನ್ನಿವೇಶಗಳಲ್ಲಿ ಜೀವಕಳೆಯುಕ್ಕುವುದಿಲ್ಲ. ಲೋಕದಲ್ಲಿ ರತಿಭಾವವು ಸರ್ವಸಾಧಾರಣವಾದರೂ ಕಾವ್ಯದಲ್ಲಿ ಅದರ ಹೃದಯವನ್ನರಿತು ಸರಸವಾಗಿ ನುಡಿದು ವಾಚಕರನ್ನು ಮರುಳು ಮಾಡತಕ್ಕವರು ಎಲ್ಲೋ ಕೆಲವು ಮಂದಿ— ಅಂಥ ಕವಿಗಳಲ್ಲಿ ಜನ್ನನು ಒಬ್ಬನು" (ಪು. ೫೫-೫೬).

ಹೀಗೆಂದು ತೀರ್ಮಾನಿಸುವ ತೀನಂಶ್ರೀಯವರು ಜನ್ನನ ಶೃಂಗಾರಪ್ರಿಯತೆಗೆ ಹಲವು ನಿದರ್ಶನಗಳನ್ನ ನೀಡಿ, ಅವನ ಕಾವ್ಯಗಳಲ್ಲಿ ಉಳಿದ ಕವಿಕೃತಿಗಳಲ್ಲಿರುವಂತೆಯೇ ಅಲ್ಲಲ್ಲಿ ಶೃಂಗಾರ ಲಜ್ಜೆ ಮೀರಿ ಹರಿದಿರುವುದನ್ನು ಗುರುತಿಸದೆ ಬಿಟ್ಟಿಲ್ಲ. "ರತಿ ರಹಸ್ಯವನ್ನ ಬಣ್ಣಿಸುವುದಕ್ಕಿಂತಲೂ ಪ್ರಣಯ ಸಮಸ್ಯೆಯನ್ನ ಬಿಡಿಸುವುದರ ಕಡೆಗೇ ಅವನ ಆಸಕ್ತಿ ಹೆಚ್ಚು. ಅದೇ ಅವನ ವೈಶಿಷ್ಟ್ಯ, ಅವನ ಕಾವ್ಯದ ಸತ್ತ್ವ" (ಪು. ೫೮) ಎಂಬುದಾಗಿ ಜನ್ನನ ಕಾವ್ಯಗಳ ಮೌಲ್ಯಮಾಪನ ಮಾಡಿಬಿಡುತ್ತಾರೆ. 'ಶಾಕುಂತಲ'ವನ್ನ ಕುರಿತು, ಕನ್ನಡ ಭಾರತದಲ್ಲಿ ಶೃಂಗಾರದ ಸನ್ನಿವೇಶಗಳು— ಈ ಎರಡೂ ಬರಹಗಳಲ್ಲೂ ಸಂಬಂಧಿಸಿದ ವಸ್ತುವಿನ ಸ್ವಾರಸ್ಯ-ಮಹತ್ತುಗಳನ್ನ ವಿಶ್ಲೇಷಿಸುವುದರ ಜೊತೆಗೆ ಪ್ರೇಮಶೃಂಗಾರದ ಸನ್ನಿವೇಶಗಳು ವಿಸ್ತೃತವಾಗಿಯೇ ಚರ್ಚೆಗೊಳಪಟ್ಟಿದ್ದರೆ, 'ಕಾಳಿದಾಸನ ನಾಟಕಗಳಲ್ಲಿ ದುರಂತ ವಸ್ತುವಿನ್ಯಾಸ' ಬರಹದಲ್ಲಿ ಪಾಶ್ಚಾತ್ಯರ ಕಲ್ಪನೆ ಮತ್ತು ಸಂಸ್ಕೃತ ಸಾಹಿತ್ಯದಲ್ಲಿನ ಕಲ್ಪನೆ ಉದ್ದೇಶಿತ ವಸ್ತುವಿನ ವಿಮರ್ಶೆಗೆ ಬಳಕೆಗೊಂಡಿರುವುದನ್ನ ಕಾಣುತ್ತೇವೆ.

ರಾಮಾಯಣ ಮಹಾಭಾರತಗಳಲ್ಲಿರುವ ಅನೇಕ ದುರಂತ ವ್ಯಕ್ತಿಗಳು ಮತ್ತು ಸನ್ನಿವೇಶಗಳನ್ನು ಕುರಿತು ಪ್ರಸ್ತಾಪಿಸುತ್ತ ದುರಂತ ದೃಷ್ಟಿಯ ಬಗ್ಗೆ ಭಾರತೀಯರಿಗೆ ಕಲ್ಪನೆಗಳಿದ್ದಿರಬೇಕೆಂಬುದಕ್ಕೆ ಇವೆಲ್ಲ ಉದಾಹರಣೆಗಳಾಗಿವೆ ಎಂದಿದ್ದಾರೆ. ಸಂಪ್ರದಾಯದ ಚೌಕಟ್ಟಿನಲ್ಲಿ ಸಿಲುಕಿ ಮಂಗಳಾಂತವಾಗಿದ್ದರೂ ಕಾಳಿದಾಸನ ವಿಕ್ರಮೋರ್ವಶೀಯ ಮತ್ತು ಶಾಕುಂತಲ ನಾಟಕಗಳು ತಿರುಳಿನಲ್ಲಿ ದುರಂತವಾದವುಗಳೇ ಎಂಬುದನ್ನು ಸಮರ್ಥವಾಗಿ ತೋರಿಸಿದ್ದಾರೆ ತೀನಂಶ್ರೀಯವರು. "ಮೂಲತಃ ಊರ್ವಶೀ ಪುರೂರವರ ಕಥೆ ದುರಂತ ಕಥೆ. ಅದರ ಆಳದಲ್ಲಿ ಭೀಷಣವಾದ ಆದರೂ ನಿತ್ಯವಾದ ಸತ್ತ್ವವೊಂದಿದೆ. ಮಾನವನಿಗೆ ದೇವತೆಗಳ ಕೂಟವು ಬೆಂಕಿಯ ಸಂಗಡದ ಸರಸದಂತೆ, ಅದರಲ್ಲೂ ಗಣಿಕೆಯ ಸ್ನೇಹವು ಜಲಲಿಪಿಯಂತೆ" (ಪು. ೧೯) ಎಂದಿದ್ದಾರೆ. ಶಾಕುಂತಲ ನಾಟಕದ ನಾಯಕ-ನಾಯಕಿಯರಾದ ದುಷ್ಯಂತ-ಶಕುಂತಲೆಯರಲ್ಲಿ ಇಬ್ಬರೂ ದುರಂತಕ್ಕೆ ವಸ್ತುವಾಗುವುದಿಲ್ಲ ಎಂಬುದನ್ನು ಚರ್ಚೆಯ ಮೂಲಕ ಸಾಧಾರವಾಗಿ ಸ್ಪಷ್ಟಪಡಿಸುತ್ತಾರೆ. ಹಾಗೆ ಮಾಡುವ ಸಂದರ್ಭದಲ್ಲಿ ರವೀಂದ್ರನಾಥ ಠಾಕುರರ

ಅಭಿಪ್ರಾಯವನ್ನ ಸಮ್ಮತಿಸದೆ ಇದು ಮಂಗಳಾಂತವಾದದ್ದೇ ಸರಿ ಎಂದು ಬಲವಾಗಿ ಪ್ರತಿಪಾದಿಸುತ್ತಾರೆ. ಚಾಮರಸನ ಪ್ರಭುಲಿಂಗಲೀಲೆ, ಶೂನ್ಯಸಂಪಾದನೆ, ಹರಿಹರನ ಮಹಾದೇವಿಯಕ್ಕನ ರಗಳೆ– ಈ ಮುಂತಾದ ಆಕರಗಳ ಹಿನ್ನೆಲೆಯಲ್ಲಿ ಮಹಾದೇವಿಯಕ್ಕನ ಕೆಲವು ವಚನಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. "ತತ್ತ್ವ ಪ್ರಾಧಾನ್ಯದ ವಚನಗಳಿಗಿಂತ ಕಾವ್ಯಗುಣವುಳ್ಳ ವಚನಗಳ ಕಡೆಗೆ ಅದರಲ್ಲೂ ಮಹಾದೇವಿಯಕ್ಕನ ವ್ಯಕ್ತಿ ಜೀವನದ ಮೇಲೆ ಬೆಳಕು ಬೀರಬಹುದಾದ ವಚನಗಳ ಕಡೆಗೆ" (ಪು. ೧೦೪) ಮುಖ್ಯ ಗಮನ ಹರಿದಿದೆ. ತೀನಂಶ್ರೀಯವರ ವಿದ್ವತ್ತನ್ನ ಮತ್ತು ಬಹುಶ್ರುತತ್ವವನ್ನ ಮನವರಿಕೆ ಮಾಡಿಕೊಡುವ ಬರಹಗಳೇ ಇದರಲ್ಲಿ ಜಾಸ್ತಿ. ಗಂಭೀರವಾದ ಚರ್ಚೆಗೆ ಒಳಪಡಬಹುದಾದ ಸಂಗತಿಗಳು ಈ ಸಂಕಲನದ ಬರಹಗಳಲ್ಲಿ ಇವೆ.

ಹಾಗೆಯೇ ಸಹೃದಯತೆ ಮತ್ತು ವಿದ್ವತ್ತುಗಳ ಹದವಾದ ಮಿಶ್ರಣವನ್ನು ೧೯೫೪ ರಲ್ಲಿ ಹೊರಬಂದ 'ಸಮಾಲೋಕನ'ದ ಬರಹಗಳಲ್ಲೂ ಕಾಣಬಹುದು. ೨೫ ಬರಹಗಳನ್ನೊಳಗೊಂಡ ಸಂಕಲನವಿದು. ಕಾವ್ಯ ಭಾಷೆ, ವ್ಯಾಕರಣ, ಛಂದಸ್ಸು– ಈ ಎಲ್ಲವೂ ತೀನಂಶ್ರೀ ಅವರ ವಿಶ್ಲೇಷಣೆಗೆ ಒಳಪಟ್ಟಿವೆ. 'ಇಂಗ್ಲಿಷ್ ಗೀತಗಳು', 'ಅಹಲ್ಯೆ'– ಇದೇ ಹೆಸರಿನ ಕೃತಿಗಳಿಗೆ ಬರೆದ ಪ್ರಸ್ತಾವನ ಭಾಗಗಳು. ರಾಜರತ್ನಂ ಅವರ 'ಯೆಂಡ್ಕುಡ್ಕ ರತ್ನ', 'ತುತ್ತೂರಿ', 'ಕಡಲೆಪುರಿ'; ಬೇಂದ್ರೆಯವರ 'ಗರಿ', 'ಸಖೀಗೀತ'; ಗೋಕಾಕರ 'ಸಮುದ್ರದಾಚೆಯಿಂದ'– ಈ ಮುಂತಾದ ಕೃತಿಗಳನ್ನ ಕುರಿತಾದ ವಿಮರ್ಶಾ ಭಾಗಗಳು; 'ಕೆರೆಗೆ ಹಾರ' ಸಣ್ಣಕಥೆ ಮತ್ತು ಛಂದಸ್ಸನ್ನು ಕುರಿತಾದ ಬರಹಗಳೆಲ್ಲ ಒಂದೆಡೆ ಸೇರಿ ಕೃತಿಗೆ ಬಹುಮುಖತೆ ಸಾಧ್ಯವಾಗಿದೆ. ಬಿಎಂಶ್ರೀಯವರ ಸಂಕಲನದ ಬಗೆಗೆ ಬರೆಯುವಾಗ ಇಂಗ್ಲಿಷ್ ಗೀತಗಳು ಬರುವ ಮುಂಚೆ ಇದ್ದ ಕನ್ನಡ ಕವಿತೆಯ ಸ್ಥಿತಿಗತಿ, ಅನಂತರ ಕನ್ನಡ ಕಾವ್ಯ ಸಂಪತ್ತು ವೃದ್ಧಿಯಾಗುವುದರ ಜೊತೆಗೆ ಹೊಸಗನ್ನಡ ಕವಿಕುಲವನ್ನ ಬೆಳೆಸಿದ್ದು, ಬಿಎಂಶ್ರೀ ತೆರೆದ ಮಾರ್ಗದಲ್ಲಿ ಕನ್ನಡ ಕವಿತೆ ಹರಿದ ರೀತಿ– ಇವೆಲ್ಲವನ್ನ ವಿಶ್ಲೇಷಿಸಿದ್ದಾರೆ. ಭಾಷೆ, ಧ್ವನಿ, ಶಬ್ದರೂಪ– ಇವುಗಳ ಹಿನ್ನೆಲೆಯಲ್ಲಿ ಬೇಂದ್ರೆಯವರ ಗರಿ, ಸಖೀಗೀತ ಸಂಕಲನಗಳನ್ನ ಗಮನಿಸಿದ್ದಾರೆ. ಸಮಾಜ, ಕಾವ್ಯ ಮತ್ತು ಭಾಷೆಗಳ ಹಿನ್ನೆಲೆಯಲ್ಲಿ ರಾಜರತ್ನಂ ಕೃತಿಗಳ ಬೆಲೆ ಕಟ್ಟಿದ್ದಾರೆ.

"ನಮ್ಮ ದೇಶದಿಂದ ವರ್ಷವರ್ಷವೂ ಪ್ರೌಢ ಶಿಕ್ಷಣಕ್ಕಾಗಿ ಪಶ್ಚಿಮ ದೇಶಗಳಿಗೆ ಹೋಗುವವರಲ್ಲಿ ಇನ್ನೂ ಹೆಚ್ಚಾಗಿ ಕಣ್ಣು ತೆರೆಯದವರೇ ಹೆಚ್ಚು ಮಂದಿ. ಹಿಂದೂ ದೇಶವಲ್ಲೇ ಇನ್ನೂ ಕಲಿಯಲು ವಿಷಯವೂ ಅವಕಾಶವೂ ಇದ್ದರೂ ಹಿತ್ತಲ ಮದ್ದೆಂದು ಅದನ್ನ ಉಪೇಕ್ಷಿಸಿ ಪಾಶ್ಚಾತ್ಯ ಪ್ರಶಸ್ತಿಗಳ ವ್ಯಾಮೋಹದಿಂದ ದುಡ್ಡಿನ ಬರದಿಂದ ಅವರು ಸಮುದ್ರವನ್ನ ದಾಟುತ್ತಾರೆ. ಶ್ರೀಮಾನ್ ಗೋಕಾಕರು ಹೀಗೆ ಮಾಡಿದವರಲ್ಲ" (ಪು. ೬೫) ಎಂದು ಹೇಳುತ್ತ ತೀನಂಶ್ರೀ ಗೋಕಾಕರ ವೈಯಕ್ತಿಕ ವಿವರಗಳೊಂದಿಗೆ ೧೯೩೭-೩೮ ರಲ್ಲಿ ಪ್ರಕಟವಾದ 'ಸಮುದ್ರದಾಚೆಯಿಂದ' ಭಾಗ-೧, ೨ ಕೃತಿಯನ್ನು ಕುರಿತ ವಿಮರ್ಶೆಗೆ ತೊಡಗುತ್ತಾರೆ. "ಊರು ಮನೆಗಳನ್ನು ಬಿಟ್ಟು ಇಂಗ್ಲೆಂಡಿನಲ್ಲಿ ಒಂಟಿಯಾಗಿ ಕಾಲ ಕಳೆಯುವ ಭಾರತೀಯ ವಿದ್ಯಾರ್ಥಿಗಳೂ ಇತರರೂ ಎಷ್ಟು ಸುಲಭವಾಗಿ ಅಡ್ಡಹಾದಿಯನ್ನ ತುಳಿಯುತ್ತಾರೆ, ನೀತಿಯನ್ನ ಕೆಡಿಸಿಕೊಳ್ಳುತ್ತಾರೆ, ಇಂಗ್ಲಿಷ್ ಜನತೆಯ ತಿರಸ್ಕಾರಕ್ಕೆ ಗುರಿಯಾಗುತ್ತಾರೆ ಎಂಬುದನ್ನು

ನಿರ್ದೇಶಿಸುವ ಹಲವು ಸಂಗತಿಗಳನ್ನ" ಗೋಕಾಕರು ಸಂಕಟದಿಂದ ಹೇಳಿಕೊಳ್ಳುವ ಸನ್ನಿವೇಶಗಳತ್ತ ತೀನಂಶ್ರೀ ಗಮನ ಸೆಳೆಯುತ್ತಾರೆ. ಸಾಹಿತ್ಯೇತರ ಸಂಗತಿಗಳನ್ನ ಅತ್ಯಂತ ಸೂಕ್ಷ್ಮವಾಗಿ ತೀನಂಶ್ರೀ ಗಮನಿಸುತ್ತಾರೆಂಬುದಕ್ಕೆ ಗೋಕಾಕರ ಈ ಕೃತಿಯ ವಿಮರ್ಶೆ ಸಾಕ್ಷಿಯಾಗಿದೆ.

'ಅಹಲ್ಯೆ ಗೀತನಾಟಕದ ಸ್ವಾರಸ್ಯ', ಕೆರೆಗೆ ಹಾರ, ಪಂಪ ಭಾರತದಲ್ಲಿ ಕೃಷ್ಣ, ವಾಲ್ಮೀಕಿಯ ವರ್ಣನೆಗಳು, ಸಣ್ಣಕಥೆಯಲ್ಲಿ ವಾಸ್ತವಿಕತೆಯ ಸ್ಥಾನ, ದಾನಚಿಂತಾಮಣಿ ಅತ್ತಿಮಬ್ಬೆ, ಅಮರವಾಣಿ– ಮುಂತಾದ ಲೇಖನಗಳಲ್ಲೂ ತೀನಂಶ್ರೀ ಅವರ ಸೂಕ್ಷ್ಮದೃಷ್ಟಿಯ ಒಳನೋಟಗಳನ್ನ ಗುರುತಿಸಬಹುದು. ಕೆರೆಗೆ ಹಾರ ಕಥನ ಕವನದ ಸೃಷ್ಟಿಗೆ ಕಾರಣನಾದ ಹಳ್ಳಿಯ ಅಜ್ಞಾತ ವ್ಯಕ್ತಿಯನ್ನ ಒಬ್ಬ ಶ್ರೇಷ್ಠ ಕವಿ ಎನ್ನಲು ತೀನಂಶ್ರೀ ಹಿಂದೆಗೆಯುವುದಿಲ್ಲ. ಭಾರತ ಕಥೆಯಲ್ಲಿ ಬರುವ ಪ್ರಮುಖರೊಂದಿಗೆ (ದುರ್ಯೋಧನ, ಭೀಮಸೇನ, ಭೀಷ್ಮ, ಶಲ್ಯ, ಅರ್ಜುನ, ಧರ್ಮರಾಯ) ಪಂಪ ಯಾಕೆ ಕೃಷ್ಣನನ್ನು ಹೆಸರಿಸುವುದಿಲ್ಲ ಎಂಬುದಕ್ಕೆ ತೀನಂಶ್ರೀ ನೀಡುವ ಕಾರಣಗಳು ಅದ್ಭುತ. 'ಪಂಪನ ಮೌನವು ಶ್ರೀಕೃಷ್ಣನ ಲೋಕೋತ್ತರತ್ವಕ್ಕೆ ಉತ್ತಮ ಧ್ವನಿಯ ಕಾಣಿಕೆ' (ಪು. ೧೦೩) ಎನ್ನುತ್ತಾರೆ. ಭಾರತೀಯ ಕವಿ ಪರಂಪರೆಯ ಹಿನ್ನೆಲೆಯಲ್ಲಿ ವಾಲ್ಮೀಕಿಯ ವರ್ಣನಾ ಕೌಶಲವನ್ನು ಗುರುತಿಸುವ ರೀತಿ ಸಣ್ಣಕಥೆಗಳಲ್ಲಿ ವಾಸ್ತವಿಕತೆ ಇರಬೇಕೆಂಬ ಪ್ರತಿಪಾದನೆ, ಸಂಸ್ಕೃತ ಭಾಷೆಯ ಮಹತ್ವವನ್ನು ಗುರುತಿಸುವ ರೀತಿ, ಅತ್ತಿಮಬ್ಬೆಯ ವ್ಯಕ್ತಿತ್ವದ ಹಿರಿಮೆಗಳನ್ನ ವ್ಯಾಖ್ಯಾನಿಸುವ ಬಗೆ, ಇವುಗಳಲ್ಲೆಲ್ಲ ತೀನಂಶ್ರೀ ಅವರ ಗಂಭೀರವಾದ ಆಲೋಚನೆಗಳು ಹರಿದಾಡುವುದನ್ನ ಯಾರಾದರೂ ಗಮನಿಸಬಹುದು.

ಈ ಕೃತಿಯಲ್ಲಿ ಛಂದಸ್ಸಿಗೆ ಸಂಬಂಧಿಸಿದ ಬರಹಗಳದೇ ಒಂದು ತೂಕ. "ಈ ಲೇಖನಗಳಲ್ಲಿ ಹೊಸ ಕಾವ್ಯಕ್ಕೆ ಸಂಸ್ಕೃತ ಛಂದೋವೃತ್ತಗಳ ಅಳವಡಿಕೆಯಲ್ಲಿ ಉಂಟಾದ ಕೊರತೆಗಳನ್ನು ಸ್ಪಷ್ಟಪಡಿಸಿ ಅದಕ್ಕೆ ಹೊಸ ಮಟ್ಟುಗಳ ಆವಶ್ಯಕತೆ ಹೇಗೆ ಉಂಟಾಯಿತು ಎಂಬುದನ್ನು ಮನವರಿಕೆ ಮಾಡಿಕೊಟ್ಟಿದೆ. ಒಂದು ರೀತಿಯಲ್ಲಿ ಇದು ಹೊಸ ಕವಿಗಳು ಮಾಡಹೊರಟಿದ್ದ ಹೊಸ ಪ್ರಯೋಗಗಳ ಸಮರ್ಥನೆ. ಸಂಪ್ರದಾಯಸ್ಥರು ಮೂಗು ಮುರಿಯುತ್ತಿದ್ದ ಸಂದರ್ಭದಲ್ಲಿ ತೀನಂಶ್ರೀ ಅವರು ಅವುಗಳನ್ನ ಬಲವಾಗಿ ಸಮರ್ಥಿಸಿ ಅವು ನಮ್ಮ ಹಿಂದಿನ ಕಾವ್ಯದಲ್ಲೇ ಇದ್ದು ವಿರಳವಾಗಿ ತಲೆ ಎತ್ತಲು ಪ್ರಯತ್ನಿಸುತ್ತಿದ್ದ ಕನ್ನಡ ಜನಪದ ಸಾಹಿತ್ಯದಲ್ಲಿ ಪ್ರಚುರವಾಗಿದ್ದು ವಿದ್ವತ್ ಮನ್ನಣೆಯನ್ನು ಪಡೆಯದೆ ಇದ್ದ ದೇಶೀಯ ವಸ್ತುವೇ ಹೊರತು ಪರಕೀಯವಲ್ಲ ಎಂಬುದನ್ನ ಮನವರಿಕೆ ಮಾಡಿಕೊಟ್ಟರು. ಅದನ್ನ ಅವರು 'ಬಹಿಷ್ಕೃತರನ್ನು ಉದ್ಧರಿಸುವ ಕಾರ್ಯ' ಎಂದಿದ್ದಾರೆ. ಕನ್ನಡ ಛಂದಸ್ಸಿಗೆ ಈ ಸುಖ ಸಂಚಾರದ ಸೌಲಭ್ಯ ಉಂಟಾದದ್ದು ಇಂಗ್ಲಿಷ್ ಸಾಹಿತ್ಯದ ಸಂಪರ್ಕದಿಂದಲೇ ಎಂಬುದನ್ನು ಅವರು ಒಪ್ಪುತ್ತಾರೆ" (ಎಚ್. ಜಿ. ಸಣ್ಣಗುಡ್ಡಯ್ಯ).

ಅಪೂರ್ವ ಷಟ್ಪದಿಯ ಲಕ್ಷಣ, ಕುದುರೆ, ಗೊಮ್ಮಟ, ಏನಿ-ಗಟಂ-ರೀ ಮುಂತಾದ ಶಬ್ದಗಳ ನಿಷ್ಪತ್ತಿ, ಆಕ್ಸ್‌ಫರ್ಡ್ ಇಂಗ್ಲಿಷ್ ಡಿಕ್ಷನರಿಯ ಸ್ವರೂಪ ಮತ್ತು ಮಹತ್ವವನ್ನು ಗುರುತಿಸುವ ಲೇಖನಗಳೂ ಈ ಸಂಕಲನದಲ್ಲಿವೆ. ಇವೆಲ್ಲ ತೀನಂಶ್ರೀ ಅವರ ಆಳವಾದ ವಿದ್ವತ್ತು, ಸೂಕ್ಷ್ಮಗ್ರಾಹಿಗುಣ, ಪ್ರತಿಭೆಗಳಿಗೆ ಹಿಡಿದ ಕನ್ನಡಿಗಳಾಗಿವೆ. ಹಾಗೂ ಹೊಸ ಛಂದಸ್ಸಿನ ಲಯಗಳು ಮಾತ್ರೆ, ಮುಡಿ, ಪದ್ಯಗಣ, ಅಪೂರ್ವ ಷಟ್ಪದಿಯ ಲಕ್ಷಣ ಮೊದಲಾದ ಲೇಖನಗಳು ಹೊಸಗನ್ನಡ ಛಂದಸ್ಸಿಗೆ ತೀನಂಶ್ರೀ ನೀಡಿದ ಮಹತ್ವದ ಕೊಡುಗೆಗಳಾಗಿವೆ.

ಇಲ್ಲಿಯ ಎಲ್ಲ ಲೇಖನಗಳೂ ವಿಮರ್ಶೆಗೆ ಹತ್ತಿರವಾಗಿರದಿದ್ದರೂ ಶೋಧನಾತ್ಮಕವಾಗಿವೆ ಎಂಬುದನ್ನು ನಿರಾಕರಿಸುವಂತಿಲ್ಲ.

೧೯೭೦ ರಲ್ಲಿ (ತೀನಂಶ್ರೀ ಕಾಲವಾದ ನಂತರ) ಪ್ರಕಟವಾದ 'ಕಾವ್ಯಾನುಭವ' ಸಂಕಲನದಲ್ಲಿ ಉದಾರ ದೃಷ್ಟಿಯ ವರ್ಣನಾತ್ಮಕ ವಿಧಾನದ ಬರಹಗಳೇ ಹೆಚ್ಚು. ಇದರಲ್ಲಿ ಗದಾಯುದ್ಧ ಕೃತಿಯನ್ನು ಕುರಿತ ಬರಹವಂತೂ ಹೆಚ್ಚು ಉಪಯುಕ್ತವಾದುದು. ರನ್ನನು ಪಂಪಭಾರತ ಹಾಗೂ ವೇಣೀಸಂಹಾರ ನಾಟಕದಿಂದ ಭಾವಗಳನ್ನ ಸ್ವೀಕರಿಸಿದ್ದಾನೆಂದು ಹೇಳಿ, ಪ್ರತಿಭೆ ಮತ್ತು ಭಾವಸ್ವೀಕರಣ, ಪೂರ್ವಕವಿಕೃತಿಗಳನ್ನ ಬಳಸಿಕೊಳ್ಳುವ ಹಕ್ಕು ಇತ್ಯಾದಿಗಳ ಬಗೆಗೆ ತೀನಂಶ್ರೀ ತೌಲನಿಕ ದೃಷ್ಟಿಯನ್ನು ಬೀರುತ್ತಾರೆ. ಪಾತ್ರನಿರೂಪಣೆಯಲ್ಲಿ ವ್ಯಾಸರ ದೃಷ್ಟಿ, ಭಾಸರ ದೃಷ್ಟಿ, ಧನಂಜಯನ ದಶರೂಪಕ– ತೌಲನಿಕ ಅಧ್ಯಯನ ಕ್ರಮಗಳ ಬಗೆಗೆ ಚಿಂತಿಸುವಂತೆ ಮಾಡುವ ಬರಹಗಳಾಗಿವೆ. ಭಾವಗೀತ, ಚಿತ್ತಾಣ-ಬೆದಂಡೆ, ಮುನ್ನೀರು ಮುಂತಾಗಿ ಲೇಖನಗಳಂತೂ ಸಾಕಷ್ಟು ಮಾಹಿತಿ ನೀಡುತ್ತವೆ.

ಈ ಸಂಕಲನದಲ್ಲಿ ಎಲ್ಲರ ಗಮನ ಸೆಳೆಯುವ ಲೇಖನ 'ಸಂಸ್ಕೃತ-ಕನ್ನಡವಾದ ಭೂಮಿ'. ಅದರ ಒಂದು ಭಾಗ ಹೀಗಿದೆ : "ಕನ್ನಡ ಭಾಷೆ ಸಂಸ್ಕೃತದ ಛಾಯೋಪಜೀವಿಯಲ್ಲ. ಅದಕ್ಕೆ ವ್ಯಕ್ತಿತ್ವಗಳುಂಟು. ವೈಶಿಷ್ಟ್ಯ ಉಂಟು. ಕನ್ನಡದಲ್ಲಿ ಲೇಖನಶಕ್ತಿ ಕುದುರಬೇಕಾದರೆ ಭಾಷೆಯ ಮರ್ಮವನ್ನು ತಿಳಿಯಬೇಕಾದರೆ ಕನ್ನಡವನ್ನು ಪ್ರತ್ಯೇಕವಾಗಿ ವ್ಯಾಸಂಗ ಮಾಡಲೇಬೇಕು. ಭಾಷಾವಿಜ್ಞಾನವು ಪೂರ್ಣವಾಗಬೇಕಾದರೆ ಸಾಹಿತ್ಯಪರಿಚಯವೂ ಚೆನ್ನಾಗಿರಬೇಕಷ್ಟೆ. ಇದು ಸಂಸ್ಕೃತವನ್ನು ಓದಿಕೊಂಡ ಮಾತ್ರದಿಂದ ಬಂದುಬಿಡುತ್ತದೆಯೇ? ಆದ್ದರಿಂದಲೇ ವಿದ್ಯಾರ್ಥಿಗಳೆಲ್ಲರೂ ಕನ್ನಡವನ್ನೆ ಪ್ರತ್ಯೇಕವಾಗಿ ಕಲಿಯಬೇಕಾಗಿರುವುದು. ಸಂಸ್ಕೃತದ ಮಹತ್ವ ಎಷ್ಟೇ ಇರಲಿ ಅದು ಕನ್ನಡದ ಸ್ಥಾನವನ್ನು ಆಕ್ರಮಿಸುವುದು ಯುಕ್ತವಲ್ಲ. ಕನ್ನಡದ ಕೆಲಸವನ್ನು ಅದು ಮಾಡಲಾರದು" ಕನ್ನಡದ ಬಗ್ಗೆ ವಿಶೇಷ ಅಭಿಮಾನವುಳ್ಳ ಬಿಎಂಶ್ರೀಯವರು ಒಮ್ಮೆ 'ಕನ್ನಡಕ್ಕೆ ಇನ್ನು ಮುಂದೆ ಸಂಸ್ಕೃತದ ಅಗತ್ಯವಿಲ್ಲ' ಎಂದು ಹೇಳಿದರೆಂದು ಅವರ ಮೇಲೆ ವಾಗ್ಯುದ್ಧವನ್ನು ಸಾರಿದ ಸಂಸ್ಕೃತ ಪಕ್ಷಪಾತಿಗಳಿಗೆ ಸಮಾಧಾನ ಹೇಳುವ ಲೇಖನ ಇದು. ಬಿಎಂಶ್ರೀ ಅವರಿಗೆ ಇಂಗ್ಲಿಷ್ ಮತ್ತು ಸಂಸ್ಕೃತಗಳೆರಡರ ಮೇಲೂ ಇದ್ದ ಗೌರವವನ್ನು ಬಲ್ಲವರಾಗಿದ್ದು, ಅವರಿಗೆ ಕನ್ನಡದ ಮೇಲೆ ಇದ್ದ ವಿಶೇಷ ಅಭಿಮಾನ, ಪ್ರೀತ್ಯಾದರಗಳನ್ನು ಸಮರ್ಥಿಸಿಕೊಂಡಿರುವ ರೀತಿ ಹೆಚ್ಚು ಮೆಚ್ಚುಗೆಗೆ ಪಾತ್ರವಾಗುತ್ತದೆ. ಈ ಸಂಕಲನದಲ್ಲಿ ಮುನ್ನುಡಿಗಳು, ಬಿಡಿಲೇಖನಗಳದೇ ಒಂದು ಭಾಗವಿದೆ. ಭಾಷಾವಿಜ್ಞಾನಕ್ಕೆ ಕೊಡುಗೆ ನೀಡಿದವರು (ಡಿ.ಎಲ್.ಎನ್., ಎಲ್. ವಿ. ರಾಮಸ್ವಾಮಿ ಅಯ್ಯರ್); ಹಲವು ಸಾಧನೆಗಳಿಗೆ ಕಾರಣರಾದವರು (ಸರ್ ಎಂ. ವಿಶ್ವೇಶ್ವರಯ್ಯ); ಸಾಹಿತ್ಯಕ್ಷೇತ್ರದಲ್ಲಿ ಮಹತ್ತನ್ನು ಸಾಧಿಸಿದವರು (ಬಿಎಂಶ್ರೀ, ಆನಂದಕಂದ, ಅರ್ಚಕ ರಂಗಸ್ವಾಮಿ, ಕಾರಂತ ನರಸಿಂಹರಾಯ, ಎಡ್‌ಮಂಡ್ ಬರ್ಕ್) ತೀನಂಶ್ರೀ ಅವರ ಬರವಣಿಗೆಯಲ್ಲಿ ಅಮರರಾಗಿದ್ದಾರೆಂದೇ ಹೇಳಬಹುದು.

ತೀನಂಶ್ರೀ ಅವರ ವಿಮರ್ಶನ ಕೃತಿಗಳ ಯಾವುದೇ ಬರಹವನ್ನ ಗಮನಿಸಿದರೂ ವ್ಯಾಕರಣ, ಛಂದಸ್ಸು, ಅಲಂಕಾರಗಳ ಪ್ರಸ್ತಾಪವಿದ್ದೇ ಇರುತ್ತದೆ. ಹಾಗಾಗಿ ಅವರ ವಿಮರ್ಶನ ಬರಹಗಳು ಏಕಮುಖ ದೃಷ್ಟಿಯಿಂದ ಹೊರತಾಗಿವೆಯೆಂದೇ ಹೇಳಬಹುದು. ಪರಂಪರೆಯ ಕಡೆಗೆ ಬೆನ್ನು ತಿರುಗಿಸದೆ ವರ್ತಮಾನದ ಸ್ಥಿತಿಗತಿಗಳನ್ನ ಅವಲೋಕಿಸುವ ಪರಿ ಗಂಭೀರವಾದುದು. ವಿಮರ್ಶೆಯ

ಯಾವ ಪರಿಕಲ್ಪನೆಗಳೂ ಇಲ್ಲದಿದ್ದ ಕಾಲದಲ್ಲಿ ಮೂಡಿಬಂದ ತೀನಂಶ್ರೀ ಅವರ ಈ ಬರಹಗಳು ವಿವರಣಾತ್ಮಕವಾಗಿಯೋ, ವಿಶ್ಲೇಷಣಾತ್ಮಕವಾಗಿಯೋ ಇಲ್ಲವೇ ಪರಿಕಲ್ಪನಾತ್ಮಕವಾಗಿಯೋ ಕಂಡುಬಂದರೆ ಆಶ್ಚರ್ಯಪಡುವ ಅಗತ್ಯವಿಲ್ಲ. ತೀನಂಶ್ರೀಯವರ ವಿಮರ್ಶನ ಕೃತಿಗಳು ವಿಶ್ಲೇಷಣಾತ್ಮಕ ವಿಮರ್ಶೆಯ ಕಾಲಘಟ್ಟದಲ್ಲಿ ಬಂದಂಥವಾಗಿರುವುದರಿಂದ ಇವನ್ನ ತೀನಂಶ್ರೀಯವರೆ ಒಂದೆಡೆ ಹೇಳುವಂತೆ ಬಿಡಿಬಿಡಿಯಾಗಿ ನೋಡದೆ ಅಖಂಡವಾಗಿ ನೋಡಬೇಕು. ಕನ್ನಡ ಜೊತೆಜೊತೆಯಲ್ಲಿ ಸಂಸ್ಕೃತ, ಇಂಗ್ಲಿಷ್ ಭಾಷಾ ಸಾಹಿತ್ಯಗಳ ಪ್ರಸ್ತಾವನೆಯೊಂದಿಗೆ ಹಲವು ವಿನ್ಯಾಸಗಳತ್ತ ತೀನಂಶ್ರೀಯವರ ವಿಮರ್ಶನ ಬರಹಗಳು ವಾಲುವುದರಿಂದ ಕನ್ನಡ ಮನಸ್ಸಿನ ಕೇಂದ್ರಪ್ರಜ್ಞೆಯಲ್ಲಿ ಭಾರತೀಯ ಮನಸ್ಸಿನ ಅಖಂಡತೆ ಸ್ಥಾಪಿತವಾಗುವುದನ್ನ ಗುರುತಿಸಬಹುದು.

ಪ್ರೊ. ಎ. ಎನ್. ಮೂರ್ತಿರಾಯರಂಥ ಬರಹಗಾರರು 'ಪೂರ್ವಸೂರಿಭ್ಯೋ ನಮಃ' ಎಂದು ಪೂರ್ವ ಸೂರಿಗಳನ್ನ ನೆನೆಯುತ್ತ ವರ್ತಮಾನವನ್ನು ಗಟ್ಟಿಗೊಳಿಸಿದರು. ವರ್ತಮಾನದ ಕೆಲ ವಿಮರ್ಶಕರು ಹಳೆಯದನ್ನೆಲ್ಲ ಸಾರಾಸಗಟಾಗಿ ನಿರಾಕರಿಸುತ್ತ ತಮ್ಮದನ್ನ ಸ್ಥಾಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಇಂಥ ಸಂದರ್ಭದಲ್ಲಿ ತೀ. ನಂ. ಶ್ರೀಕಂಠಯ್ಯನವರ ಬರಹಗಳನ್ನ ಮರುಮೌಲ್ಯಮಾಪನಕ್ಕೆ ಒಳಪಡಿಸುವ ಪೂರ್ವಗ್ರಹಗಳಿಲ್ಲದ ಸಹೃದಯ ಮನಸ್ಸಿನ ಅಗತ್ಯತೆ ಇದೆ ಎಂದು ಭಾವಿಸಿದ್ದೇನೆ.

■ **ಡಾ. ಜಿ. ಆರ್. ತಿಪ್ಪೇಸ್ವಾಮಿ :**
ರೀಡರ್, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬ ■

## ತೆರೆಯಲು ತೋರಣದ ಬಾಗಿಲು — ಮಹಾಂತಪ್ಪ ನಂದೂರ

ಯಾರು ಎಳೆದದ್ದು ದ್ವಾರ ಬಾಗಿಲು ಸದ್ದಿಲ್ಲದೆ !?
ಹೊತ್ತ ಗಂಟಲ್ಲಿ ಹಗಲು; ಮುಖ ತಿರುಗಿದೆ; ಹಿಂದೆಲೆ,
ಕೈಬೀಸಿ ಹೆರಳು ಕಟ್ಟುವ ಯತ್ನ; ಜಾರಿ ಬೀಳುವ ಕಪ್ಪು-
ಗೂದಲ ರಾಶಿ ಆವರಿಸುತ್ತಿದೆ. ಕತ್ತೆತ್ತಿ ನೋಡು ಮೇಲೆ
ಬೆಳಕ ಬೀಜ; ಬಿತ್ತುತ್ತ ಮುಂದೇ ನಡೆದು ಮಾಯ.
ಆ ಕಡೆಯಿಂದಲೊಬ್ಬ ಬರುತಲಿದ್ದಾನೆ; ಏನೋ ಹುಡುಕು-
ವನಂತೆ ಕತ್ತಲೆ ಹಾದಿಯಲ್ಲಿ; ಕೈಯಲ್ಲೊಂದು ಲಾಂದ್ರ
ಬೆಳಕು ನದಿಯಂತೆ ಎಲ್ಲ ದಾರಿಗಳು; ಉಕ್ಕಿದ ಸಮುದ್ರ
ತಂಪಲ್ಲಿ. ಜೋಗುಳ ಹಾಡುವ ತಾಯಿ ಕರುಳು; ಮೆತ್ತನೆ
ಹಾಸಿಗೆ ಮೇಲೆ ದಣಿದ ಮಗು; ಕನಸಲ್ಲಿ ತೇಲುತಿದೆ.
ಬೆಚ್ಚಗೆ ಹೊದ್ದ ಕೌದಿ; ಅಜ್ಜಿಯ ಹೊಕ್ಕುಳಲ್ಲಿ ಕಚಗುಳಿ-
ಯಿಡುವ ಅಜ್ಜನ ಬೆರಳು. ಅರಸೊತ್ತಿಗೆಯ ನೆರಳು.

ಹರಳುಗಟ್ಟಿದ ಮಣಿ ಹಣೆಯ ಮೇಲೆ. ಸಿದ್ಧ-
ಳಾಗಿದ್ದಾಳೆ ತೆರೆಯಲು ತೋರಣದ ಬಾಗಿಲು. ಮತ್ತೆ.

■ **ಮಹಾಂತಪ್ಪ ನಂದೂರ:** 'ಬಸವ ಆಸರೆ', ೧೧, ರಣಕಪುರ ಲೇಔಟ್, ಶಾಂತಿನಗರ, ಹುಬ್ಬಳ್ಳಿ-೨೩ ■

# ಗುರುರಾಜ ಮಾರ್ಪಳ್ಳಿಯವರ 'ಅತಂತ್ರ' — ಮಾಧವಿ ಭಂಡಾರಿ

"ಹಲವು ದೋಣಿಗಳನ್ನೇರಿ ದಡ ಸೇರುವ ಪ್ರಯತ್ನ ನನ್ನದು"– ಎನ್ನುತ್ತಿದ್ದ ಗುರುರಾಜ ಮಾರ್ಪಳ್ಳಿಯವರ ಕಾದಂಬರಿ 'ಅತಂತ್ರ' ನನ್ನ ಮುಂದೆ ಸಾಹಿತ್ಯಿಕವಷ್ಟೇ ಅಲ್ಲ, ರಾಜ್ಯಶಾಸ್ತ್ರೀಯ, ಅರ್ಥಶಾಸ್ತ್ರೀಯ, ಜೀವಶಾಸ್ತ್ರೀಯ, ಕಾಮಶಾಸ್ತ್ರೀಯ ಹಾಗೂ ಸಮಾಜಶಾಸ್ತ್ರೀಯ ಪದರುಗಳನ್ನು ತೆರೆದುಕೊಳ್ಳುತ್ತ ಹೋಯಿತು. ಜತೆಗೆ ಸ್ತ್ರೀವಾದದ ಹೊಸ ಒಳನೋಟವನ್ನು ಕೊಟ್ಟಿತು.

ಕೇಂದ್ರ ಪಾತ್ರಗಳ ರೂಪದಲ್ಲಿರುವ ಸಂದೀಪ್ ದಾಸ್ ಹಾಗೂ ಮೃಣಾಲಿನಿಯ ಬದುಕಿನ ಅಂತಃಸಂಘರ್ಷದ ಕತೆಯಿದಾಗಿದ್ದರೂ ಮುಂಬೈಯ ನಕುಲ್ ತ್ರಿವೇದಿ, ದಿಲ್ಲಿಯ ಆದಿತ್ಯ ಪಾಂಡೆ, ಜರ್ಮನಿಯ ಬ್ರೂನಾ ವಿಲಿಯಂ, ಕರ್ಕಿಯ ಯಾಮಿನಿ, ಅಕಾಲದಲ್ಲಿ ದುರ್ಮರಣಕ್ಕೀಡಾದ ಯಾಮಿನಿಯ ಗಂಡ ವೈಶಂಪಾಯನ– ಇವು ಸಂದೀಪ್ ದಾಸ್‌ನ ಬದುಕಿಗೆ ಸುತ್ತಿ ಬರುವ ಪಾತ್ರಗಳು.

ಸಂದೀಪ್ ದಾಸ್‌ನ ಊರಾದ ಕರ್ಕಿ ಹೊನ್ನಾವರ ತಾಲೂಕಿನ ಕರ್ಕಿಯೇ ಆಗಿರಬೇಕು ಎಂದೇನಿಲ್ಲ. ಇದು ಆರ್. ಕೆ. ನಾರಾಯಣರ ಮಾಲ್ಗುಡಿಯಂತೆ, ಅತ್ತ ಶಹರವೂ ಅಲ್ಲದ ಇತ್ತ ಹಳ್ಳಿಯೂ ಆಗದ ಅತಂತ್ರ ಊರು.

ಸಂದೀಪ್ ದಾಸ್ ಧಾರವಾಡದಲ್ಲಿ ಎಂ.ಎ. ಮುಗಿಸಿ ಕಾಲೇಜೊಂದರಲ್ಲಿ ಅಧ್ಯಾಪಕನಾಗಿ ಸೇವೆ ಸಲ್ಲಿಸುತ್ತಿರುವವನು. ಕ್ರಿಯಾಶೀಲ ಬರಹಗಾರನಾದ ದಾಸ್ ಸಾಹಿತ್ಯದ ಜೊತೆಯಲ್ಲಿ ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಹಾಗೂ ಚಿತ್ರಕಲೆಯಲ್ಲೂ ಪ್ರೌಢಿಮೆಯನ್ನು ಸಾಧಿಸಿದವನು. ಕವಿ ಸಮ್ಮೇಳನಗಳಲ್ಲೂ ಕೇಳುಗರನ್ನು ಮಂತ್ರಮುಗ್ಧರನ್ನಾಗಿಸುವ ಕವಿತೆಗಳನ್ನು ಓದುವವನು.

ಬೆಂಗಳೂರಿನ ಮೃಣಾಲಿನಿ ಸಂದೀಪ್ ದಾಸ್‌ನ ಕೃತಿಗಳ ವಿಮರ್ಶಕಿಯಾಗಿದ್ದು, ನಿವೃತ್ತ ಸೇನಾಧಿಕಾರಿಯ ಮಗಳು. ತಂದೆ ಬದುಕಿದ್ದಾಗ ಅವಳಿಗೆ ಹೇಳುತ್ತಿದ್ದರು– ಮದುವೆ ಅನಿವಾರ್ಯವೇನಲ್ಲ, ಜ್ಞಾನ ಮುಖ್ಯ ಎಂದು. ಎಂ.ಎಸ್.ಡಬ್ಲ್ಯೂನಲ್ಲಿ ಡಿಸ್ಟಿಂಕ್ಶನ್ ಬಂದ ಮೃಣಾಲಿನಿ ದಿಟ್ಟ ಹುಡುಗಿ. ಅವಳು ಸಂಚರಿಸುವುದು ಎನ್‌ಫೀಲ್ಡ್‌ನಲ್ಲಿ. ಅಮ್ಮ ತೀವ್ರ ಕಾಯಿಲೆ ಬಿದ್ದಾಗ ಮೃಣಾಲಿನಿ ಅಮ್ಮನಿಗಾಗಿ ಮೃದುವಾಗುತ್ತಾಳೆ. ಅಮ್ಮನಿಗೆ ಗುಣವಾದರೆ, ಅವಳು ಹೇಳಿದ ಹಾಗೆ ಕೇಳಿಕೊಂಡಿರುತ್ತೇನೆ ಎಂದು ತೀರ್ಮಾನಿಸುತ್ತಾಳೆ.

ಸಂದೀಪ್ ದಾಸನ ದೃಷ್ಟಿಯಲ್ಲಿ ರಾಜಕೀಯ ಹಾಗೂ ಆರ್ಥಿಕ ಜಗತ್ತು ಅತ್ಯಂತ ಮೇಲ್ಮಟ್ಟದಲ್ಲಿ ಭದ್ರವಾಗಿ ಅಲುಗಾಡಿಸಲಾಗದ ಸ್ಥಿತಿಯಲ್ಲಿ ನಿಂತುಬಿಟ್ಟಿವೆ. ನಾವಿನ್ನೂ ದೊರೆಗಳ ಕಾಲದ ರಾಜ್ಯದ ಪರಿಕಲ್ಪನೆಯಿಂದ ಹೊರಬರಲಿಲ್ಲ. ಒಂದು ದೇಶದವರು ಇನ್ನೊಂದು ದೇಶದವರಿಗೆ ಸ್ನೇಹಿತರೇ; ಆದರೆ ಸೈನ್ಯದ ಅಗತ್ಯವಿಲ್ಲದ ಮನುಷ್ಯರನ್ನು ರೂಪಿಸುವ ಶಿಕ್ಷಣವನ್ನು ನಾವು ರೂಪಿಸುತ್ತಿಲ್ಲ. ರಾಜರಿಗಿಂತ ನಾವು ಬೇರಲ್ಲ ಅನ್ನುವುದಕ್ಕೆ ನಾವು ಗಳಿಸುವ ಮಿತಿಯಿಲ್ಲದ ಸಂಪತ್ತೇ ಕಾರಣ. ರಾಜಕೀಯ ನಿಜವಾಗಿ ಬದಲಾಗಬೇಕಾದರೆ ನಾವು ಪ್ರಕೃತಿಯ ಮೇಲೆ ಮಾಡಿಕೊಂಡು ಬಂದಿರುವ ಅಧಿಕಾರದ ದೌರ್ಜನ್ಯವನ್ನು ನಿಲ್ಲಿಸಬೇಕು. ಕೆಳಸ್ತರದಲ್ಲಿ ನಡೆಯುವ ನಾಟಕದಲ್ಲಿ ರಾಜಕೀಯ ಪ್ರತಿನಿಧಿಗಳು ಮೇಲ್ವರ್ಗದವರ, ಬರೇ ಮಿಲಿಯಾಧಿಪತಿಗಳ ಏಜೆಂಟರುಗಳು, ಕ್ರಾಂತಿಕಾರಿಗಳು, ಉಗ್ರಗಾಮಿಗಳು, ಬಂಡಾಯಗಾರರು ಯಾರೇ ಆದರೂ ತಕ್ಕೆ

ಬಂದರೂ ಅವರು ಅಂತಹ ಐಶ್ವರ್ಯದ ಏಜೆಂಟರಾಗಲೇಬೇಕಾಗುತ್ತದೆ. ಆಡಳಿತ ಯಂತ್ರವೇ ಒಂದು ಭೋಗ ಶೈಲಿ. ಹಾಗಾಗಿ ರಾಜಕೀಯದ ಆಡಳಿತ ಯಾರೇ ಮಾಡಿದರೂ ಅದು ಹೈಟೆಕ್, ಅತ್ಯಾಧುನಿಕ ಭೋಗ ವಿಲಾಸಗಳ ಶೈಲಿಯಲ್ಲಿ ಮುಚ್ಚಿಹೋಗುತ್ತದೆ. ಆದ್ದರಿಂದ ಸಾಮಾಜಿಕ ಬದಲಾವಣೆ, ಕ್ರಾಂತಿ ಒಂದು ಭ್ರಮೆ ಎಂದು ದಾಸ್ ಅಭಿಪ್ರಾಯಪಡುತ್ತಾನೆ. ತಾವೆಲ್ಲರೂ ಸ್ವತಂತ್ರರು, ಬಂಡಾಯಗಾರರು, ದಲಿತರು, ಮಾರ್ಕ್ಸ್‌ವಾದಿಗಳು ಎಂದು ಚಟುವಟಿಕೆ ನಡೆಸುವ ಎಲ್ಲರೂ ಹೈಸೊಸೈಟಿಯ ಗುಲಾಮರು, ಎಂಬ ಸಂದೀಪ್ ದಾಸ್‌ನ ವಾದ ಸಮಾಜದಲ್ಲಿ ನಾವು ಕಾಣುವ ಕಟು ವಾಸ್ತವಕ್ಕೊಂದು ಉದಾಹರಣೆಯಷ್ಟೆ.

ಈ ಹೈಸೊಸೈಟಿಯ ಮುಷ್ಟಿಯೊಳಗೆ ರಾಜಕೀಯ ಧುರೀಣರು, ಧಾರ್ಮಿಕ ಮುಖಂಡರು, ವಿಜ್ಞಾನಿಗಳು ಮುಂತಾದವರು ಬರುತ್ತಾರೆ. ಇವರಿಂದ ಜನರ ಶಿಕ್ಷಣ ನಿರ್ಧರಿಸಲ್ಪಡುತ್ತದೆ (ಇಂದು ಪಠ್ಯಪುಸ್ತಕಗಳಲ್ಲಿ ಬಳಸುವ ಪಾಠಗಳು ಕೂಡ ಜಾತಿ ಪ್ರಾಂತಗಳ ನೆಪದಲ್ಲಿ ವಿಭಜಿಸಲ್ಪಟ್ಟಿರುತ್ತದೆ.)

ಬಹುರಾಷ್ಟ್ರೀಯ ಕಂಪನಿಗಳು ನಮ್ಮ ಮಾರುಕಟ್ಟೆಗಳ ಮೇಲೆ ತಮ್ಮ ಹಿಡಿತ ಸಾಧಿಸಿವೆ. ಅದರ ಗುಲಾಮಗಿರಿಯಲ್ಲಿ ನಮ್ಮ ಅರ್ಥವ್ಯವಸ್ಥೆ, ರಾಜಕೀಯ ಹಾಗೂ ಸಾಮಾಜಿಕ ಜೀವನ ನೆಲೆನಿಂತಿದೆ. ಆಕರ್ಷಕವಾದ ಯೋಜನೆಗಳಡಿಯಲ್ಲಿ ಮಧ್ಯಮ ವರ್ಗದ ಹೆಚ್ಚಿನವರು 'ಕಂತುಪಿತ'ಗಳಾಗಿದ್ದಾರೆ. ಈ ಕಂತು ಕಟ್ಟುತ್ತ ಅವರ ಆಯುಷ್ಯ ಮುಗಿಯುತ್ತದೆ.

ಇಂದಿನ ಶಿಕ್ಷಣನೀತಿ ಹಳ್ಳಿಯಲ್ಲಿಯ ಪ್ರಾಥಮಿಕ ಶಾಲೆಗಳಲ್ಲೂ ಹಳ್ಳಿಯನ್ನು ಕಡೆಗಣಿಸುವಂತೆ ಮಾಡುತ್ತಿದೆ. ಒಂದು ಖಾನಾವಳಿಯ ಊಟದ ಬೆಲೆಯನ್ನು ದಾಸ್ ಹೈಟೆಕ್ ಹೊಟೆಲ್‌ನಲ್ಲಿ ತೆತ್ತು ಬರುವ ಬೆಲೆಯ ಜತೆ ತುಲನೆ ಮಾಡುತ್ತಾನೆ.

ಬೆಂಗಳೂರಿನಲ್ಲಿ ಅವನು ಉಳಿದುಕೊಂಡ ಹೋಟೆಲ್‌ಗೆ ಮೃಣಾಲಿನಿ ಬರುತ್ತಾಳೆ. ಅವಳು ಅವನನ್ನು ಒತ್ತಿಕೊಂಡು ಕುಳಿತಾಗಲೂ ಅವನು ಮಹಾತತ್ತ್ವಜ್ಞಾನಿಯ ಪೋಸ್ ಕೊಡುತ್ತಾನೆ. ಅವಳು ತಬ್ಬಿಕೊಂಡಾಗಲೂ ಸುಖಿಸುವುದಿಲ್ಲ, ಬದಲಾಗಿ ಹೈಟೆಕ್ ಫಿಲ್ಮ್ ಇಂಡಸ್ಟ್ರಿ ಮನೋರಂಜನೆಯ ನೆಪದಲ್ಲಿ ಜನಸಾಮಾನ್ಯರಿಗೆ ಮಹಿಳೆಯರ ಅಂಗಾಂಗಗಳನ್ನು ಪ್ರದರ್ಶಿಸುತ್ತ ಅದನ್ನೊಂದು ಕಲಾಮಾಧ್ಯಮ ಅಥವಾ ಉದ್ಯಮ ಎಂದು ಹೇಳುವುದರ ಬಗ್ಗೆ ಅವನು ಮರುಕಪಡುತ್ತಾನೆ.

ದಾಸ್ ಹೈಟೆಕ್ ಕಲ್ಚರ್‌ನ್ನು ದ್ವೇಷಿಸುವುದರ ಹಿಂದೆ ಒಂದು ಮನೋವಿಜ್ಞಾನವಿದೆ. ಅವನ ಕಾಲೇಜು ದಿನಗಳಲ್ಲಿ ಪಂಥ ಕಟ್ಟಿ ಪ್ರೀತಿಸುವ ನಾಟಕವಾಡಿದ ಮಾಲವಿಕಾ ದಾಸ್‌ನಲ್ಲಿದ್ದ ಮಧುರ ಭಾವನೆಗಳನ್ನು ಘಾಸಿಗೊಳಿಸಿದ್ದಾಳೆ. ಆ ಮನಃಸ್ಥಿತಿಯಿಂದ ಹೊರಬರದ ದಾಸ್ ಮೃಣಾಲಿನಿಯು ಮದುವೆಯ ಪ್ರಸ್ತಾಪ ಮಾಡಿದಾಗ ಅದು ಗಂಡು-ಹೆಣ್ಣಿನ ಒಂದು ಅತಿರೇಕದ ಒಪ್ಪಂದವೆಂದೂ, ಭೋಗ ಹಾಗೂ ಸಂತಾನಕ್ಕಾಗಿ ಮಾಡುವ ಸಂಭ್ರಮವೆಂದೂ ಹೇಳುತ್ತ ತನ್ನ ಈ ಸಿದ್ಧಾಂತಗಳಿಗೆ ಬದ್ಧನಾಗಿದ್ದುಕೊಂಡೆ ಅವನು ಮೃಣಾಲಿನಿಯನ್ನು ಅತ್ಯಂತ ಸರಳ ರೀತಿಯಲ್ಲಿ ಮದುವೆಯಾಗುತ್ತಾನೆ. ಹಾಗಾಗಿ ಅವನಿಗೆ ವೈಭೋಗದ ಮದುವೆಯನ್ನು ಗೇಲಿ ಮಾಡುವ ನೈತಿಕ ಹಕ್ಕು ಇದೆ. [ಕೋಟಿಗಟ್ಟಲೆ ಖರ್ಚು ಮಾಡಿ ಮಾಡುವ ಮದುವೆಯ ಉದ್ದೇಶ್ಯವೂ ತಾಳಿಭಾಗ್ಯದಲ್ಲಿ ಮದುವೆಯಾಗುವವರ ಉದ್ದೇಶ್ಯವೂ ಒಂದೇ ಆಗಿದೆ!] ಅವನ ದೃಷ್ಟಿಯಲ್ಲಿ ಮಿತಿಯಿಲ್ಲದ ಸಂಪತ್ತು ಒಂದು ಅತಿರೇಕ ಮತ್ತು ವಿಕೃತಿಗೆ ದಾರಿ ಮಾಡಿಕೊಡುತ್ತದೆ.

ಸಿನಿಮೀಯ ಶೈಲಿಯು ಸಹಜ ಭೋಗದ ಜೀವನವನ್ನು ವಿಕೃತಗೊಳಿಸುತ್ತದೆ. ಹಾಗಾಗಿ ಮೃಣಾಲಿನಿ ತಮ್ಮ ಮೊದಲ ರಾತ್ರಿಯನ್ನು ಪಂಚತಾರಾ ಹೊಟೆಲ್‌ನಲ್ಲಿ ಕಳೆಯಬೇಕೆಂದು ಬಯಸಿದರೂ ದಾಸ್ ಅದನ್ನು ಒಪ್ಪುವುದಿಲ್ಲ. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಅವನು ತನ್ನ ಸಿದ್ಧಾಂತವನ್ನು ಬಿಟ್ಟುಕೊಡುವುದಿಲ್ಲ.

ದಾಸ್‌ನ ವ್ಯಕ್ತಿತ್ವವೂ ವಿಚಿತ್ರವಾದದ್ದು– ಯಾವಾಗಲೂ ಜೀವನದ ನಶ್ವರತೆ ಕಾಡುತ್ತಿದ್ದ ಕವಿ ಆತ. ಉದ್ಯಮಿಗಳಿಗಿರುವಷ್ಟು ನೂರಕ್ಕೆ ನೂರರಷ್ಟು ಆತ್ಮವಿಶ್ವಾಸ ಅವನಿಗಿಲ್ಲ. ಅವನ ಅಂತರಂಗದಲ್ಲಿ ಅನೇಕ ಜ್ವಾಲಾಮುಖಿಗಳಿವೆ, ಅಗ್ನಿಪರ್ವತಗಳಿವೆ. ಹಾಗೆಂದು ಮಂಜುಗಡ್ಡೆಯ ಸಮುದ್ರಗಳೂ ಇವೆ, ಶಾಂತಸಾಗರವೂ ಇವೆ. ನಗರದ ಹೈಟೆಕ್ ಸಂಸ್ಕೃತಿಯನ್ನು ವಿರೋಧಿಸುವ ದಾಸ್‌ನಿಗೆ ಪ್ರಕೃತಿಯೆಂದರೆ ಇಷ್ಟ. ಹಾಗಾಗಿ ಗಾಂಧೀಜಿ ಅವನಿಗೆ ಪ್ರಿಯವಾಗುತ್ತಾರೆ.

ಆದಿತ್ಯ ಪಾಂಡೆ ಗಾಂಧಿ-ಮ್ಯಾಕ್ಸ್ ಫೌಂಡೇಶನ್‌ನ ಒಂದು ಪ್ರೊಜೆಕ್ಟ್‌ನಲ್ಲಿ ಮೃಣಾಲಿನಿಯನ್ನು ಸೇರಿಸಿಕೊಳ್ಳುತ್ತೇನೆ ಎಂದಿದ್ದ. ಅವಳು ಕಾದಳು. ಅವನು ಜರ್ಮನಿಯಿಂದ ಬರುವ ತನಕ ಇವಳದು ಇಲ್ಲಿ ಮದುವೆಯಾಗಿ ಈಗವಳು ಗರ್ಭಿಣಿ. ಮೃಣಾಲಿನಿಯನ್ನು ಬೆಂಗಳೂರಲ್ಲೆ ಬಿಟ್ಟು ದಾಸ್ ಊರಿಗೆ ಬಂದಿದ್ದಾನೆ. ಆದಿತ್ಯ ಪಾಂಡೆ ಈಗವಳ ಮುಂದೆ ಪ್ರೊಜೆಕ್ಟ್ ಕೆಲಸವನ್ನು ಇಟ್ಟಿದ್ದಾನೆ. ಗರ್ಭಿಣಿಯರಿಗೆ ಸಹಜವಾದ ವಾಂತಿಯಿಂದ ಬಳಲುತ್ತಿದ್ದ ಮೃಣಾಲಿನಿ ಕೆಲಸ ಒಪ್ಪಿಕೊಂಡಿದ್ದು, ಅದರಲ್ಲಿ ಸಂಪೂರ್ಣವಾಗಿ ತೊಡಗಿಕೊಳ್ಳುವುದಕ್ಕಾಗಿ ಗರ್ಭ ತೆಗೆಸಿಬಿಡುತ್ತಾಳೆ.

ಈ ನಡುವೆ ಕರ್ಕಿಯಲ್ಲಿ ದಾಸ್‌ನ ನೆರೆಮನೆಯ ಯಾಮಿನಿಯೆಂಬವಳ ಗಂಡ ವೈಶಂಪಾಯನ ಅಪಘಾತದಲ್ಲಿ ತೀರಿಕೊಂಡಿದ್ದಾನೆ. ಯಾಮಿನಿ ಕಂಪ್ಯೂಟರ್ ಸ್ಕೂಲ್ ನಡೆಸುತ್ತ ತನ್ನ ಗಂಡನ ನೆನಪುಗಳನ್ನು ಹೊದ್ದುಕೊಂಡು ಮಗಳು ದೀಪಿಕಾಳೊಂದಿಗೆ ಬದುಕುತ್ತಿದ್ದಾಳೆ. ದಾಸ್ ತನ್ನ ಒಂಟಿ ಬದುಕಿನ ಯಾತನೆಗಳನ್ನೆಲ್ಲ ಸಂಗ್ರಹಿಸಿ ಬರೆದ ಕವನಗಳನ್ನು ಡಿ.ಟಿ.ಪಿ ಮಾಡಲು ಯಾಮಿನಿಯಲ್ಲಿ ಕೊಡುತ್ತಾನೆ. ಈಗವನು ಮೊದಲಿನಂತೆ ಸೆಮಿನಾರ್‌ಗಳಿಗೆ ಹೋಗುತ್ತಿಲ್ಲ.

ಗಾಂಧಿ-ಮ್ಯಾಕ್ಸ್ ಫೌಂಡೇಶನ್‌ನ ಜರ್ಮನಿಯ ಮೇಲಾಧಿಕಾರಿಣಿ ಬ್ರೂನಾ ವಿಲಿಯಮ್ ದಿಲ್ಲಿಗೆ ಬಂದಿದ್ದಾಳೆ. ಮೃಣಾಲಿನಿ ಅವಳೊಂದಿಗೆ ಕೆಲಸದಲ್ಲಿ ತೊಡಗಿಕೊಂಡಿದ್ದಾಳೆ. ಭಾರತವ ಕುರಿತಾಗಿ ಬ್ರೂನಾ ಹೇಳುವುದು ಇಲ್ಲಿ ಒಂದು ಕಡೆ ಎಕ್ಸಲೆಂಟ್ಸ್ ಇದ್ದರೆ ಇನ್ನೊಂದೆಡೆ ಕಡುಬಡತನವಿದೆ. ಧರ್ಮದ ಹೆಸರಿನಲ್ಲಿ, ಜಾತಿಯ ಹೆಸರಿನಲ್ಲಿ, ಶ್ರೀಮಂತ-ಬಡವರ ಹೆಸರಿನಲ್ಲಿ ಸಮಾಜ ನುಚ್ಚುನೂರಾಗಿದೆ. ಮೇಲ್ವರ್ಗವನ್ನು ಅಲ್ಲಾಡಿಸುವಷ್ಟು ತಾಕತ್ತು ಕೆಳವರ್ಗಕ್ಕಿದೆ.... ನೂರಾರು ಪಕ್ಷಗಳು, ನೂರಾರು ನಾಯಕರು, ಪಕ್ಷದ ಕಾರ್ಯಕರ್ತರುಗಳಿಗೆ ದೇಶಕ್ಕಿಂತ ನಾಯಕರೇ ದೊಡ್ಡವರಾಗಿ ಕಾಣುತ್ತಾರೆ.

ಈ ಮಾತುಗಳು ನೂರಕ್ಕೆ ನೂರರಷ್ಟು ಸತ್ಯ. ಇಲ್ಲಿಯ ದುರಂತವೆಂದರೆ ಈ ಮಾತುಗಳನ್ನು ಹೇಳುವುದು ಭಾರತೀಯ ಪಾತ್ರವಲ್ಲ. ಜರ್ಮನ್ ಮೂಲದ ಬ್ರೂನಾಳ ಬಾಯಿಂದ ಲೇಖಕರು ಇದನ್ನು ಹೇಳಿಸಿದ್ದಾರೆ. ಅಂದರೆ, ಹೊರಗಿನಿಂದ ಬಂದವರಿಗೂ ಢಾಳಾಗಿ ಕಾಣಿಸುವಷ್ಟು ನಮ್ಮ ಬದುಕು ವೈರುಧ್ಯದಿಂದ ಕೂಡಿದೆ ಎಂಬುದಕ್ಕೆ ಇದೊಂದು ಉದಾಹರಣೆಯಷ್ಟೆ.

ಊರಲ್ಲಿ ದುರಂತಗಳಾದರೆ ಅಲ್ಲಿ ನುಡಿಯುವ ಸಾಂತ್ವನದ ಮಾತುಗಳು ಮಾನವೀಯ ಅನುಕಂಪದಿಂದ ತುಂಬಿರುವುದಿಲ್ಲ; ಓಟಿನ ರಾಜಕೀಯದ ತಕ್ಕಡಿಯಿಂದ ತೂಗಿ ಆಡುವ

ತೂಕವ ಮಾತುಗಳು ಎಂಬುದು ನಮ್ಮ ಗಮನಕ್ಕೆ ಬಾರದೆ ಇರದು. ದಾಸ್‌ನೂ ಈ ವಿಷಯದಲ್ಲಿ ನಮ್ಮನ್ನು ಚಿಂತನೆಗೆ ಹಚ್ಚುತ್ತಾನೆ. ಬ್ರೂನಾ ಗ್ರಾಮ ಸ್ವಾತಂತ್ರ್ಯದ ಕುರಿತಾಗಿ ಮಾತಾಡುತ್ತಾಳೆ. ತಳಮಟ್ಟದ ಕಾರ್ಯಕ್ರಮಗಳ ಕುರಿತಾಗಿ ಹೇಳುತ್ತಾಳೆ. ಮೃಣಾಲಿನಿಗೂ ಅನ್ನಿಸುತ್ತದೆ– ಪ್ರಗತಿವಾದ ಒಂದು ತುದಿಯಾದರೆ ಗ್ರಾಮ ಸ್ವಾತಂತ್ರ್ಯ ಇನ್ನೊಂದು ತುದಿ.

ಆದಿತ್ಯ ಪಾಂಡೆ ಮದುವೆಯಾಗಿ ಹೆಂಡತಿಯನ್ನು ಬಿಟ್ಟವನು. ತಾನು ಕೊಡಿಸುವ ಕೆಲಸ ದಿಂದಾಗಿ ಹೆಣ್ಣುಮಕ್ಕಳು ಕೃತಜ್ಞತಾಪೂರ್ವಕವಾಗಿ ದೇಹಸುಖವನ್ನು ಕೊಟ್ಟರೆ ಬಯಸುವವನು. ಮೊದಲಿನಿಂದಲೂ ಹೈಟೆಕ್ ಸಂಸ್ಕೃತಿಯಲ್ಲೇ ಬೆಳೆದ ಮೃಣಾಲಿನಿಗೆ ಪಾಂಡೆಯ ಜೀವನ ಶೈಲಿ ಉಚ್ಚ ಮಟ್ಟದ್ದೆನಿಸುತ್ತದೆ. ಈಗವಳಿಗೆ ದಾಸ್ ಹಳ್ಳಿಗುಗ್ಗುವಿನಂತೆ ಕಾಣುತ್ತಾನೆ. ಹಾಗಾಗಿ ಅವಳು ದಾಸ್‌ನಿಂದ ಆದಷ್ಟು ದೂರವಿರಬಯಸುತ್ತಾಳೆ. ಗಂಡಸಿನ ಸುಖವನ್ನು ಒಮ್ಮೆ ಅನುಭವಿಸಿ ವಂಚಿತಳಾದ ಮೃಣಾಲಿನಿ ಒಂದೆಡೆ, ಇನ್ನೊಂದೆಡೆ ಅವಕಾಶದ ಸದುಪಯೋಗ ಪಡೆದುಕೊಳ್ಳುವ ಆದಿತ್ಯ ಪಾಂಡೆ. ಹಾಗಾಗಿ ಯಾವುದೇ ರೀತಿಯ ಕೃತಕ, ಸಿನಿಮೀಯ ತಿರುವು ಕೊಡದೆ ಕಾದಂಬರಿಕಾರರು ಆದಿತ್ಯ ಪಾಂಡೆ ಹಾಗೂ ಮೃಣಾಲಿನಿಯ ಹೈಟೆಕ್ ಭೋಗದ ಚಿತ್ರಣವನ್ನು ಕೊಡುತ್ತಾರೆ.

ಪ್ರೊಜೆಕ್ಟ್‌ನ ವಿಷಯ– ಯಂತ್ರನಾಗರಿಕತೆ ಬರುವ ಮೊದಲು ಭಾರತದ ಹಳ್ಳಿಗಳಲ್ಲಿ ಪರಿಸರವನ್ನೆ ಅವಲಂಬಿಸಿ ಪರಿಸರ ಸಮತೋಲನ ಉಳಿಸಿಕೊಳ್ಳುವ ಪರಿಸರ ಸ್ನೇಹಿ ಕೃಷಿ ಜೀವನ ಹೇಗಿತ್ತೆಂಬುದರ ಕುರಿತಾದ ಸಾಕ್ಷ್ಯಚಿತ್ರ ತಯಾರಿಸುವುದು, ಅದೂ ಸಾಕ್ಷ್ಯಾಧಾರ ಸಮೇತ ಹಿಡಿದಿಡುವುದು.

ಪ್ರೊಜೆಕ್ಟ್‌ನ ನೆಪದಲ್ಲಿ ಮೃಣಾಲಿನಿ ಬ್ರೂನಾಳೊಂದಿಗೆ ದಿಲ್ಲಿ ಬಿಟ್ಟು ಹಳ್ಳಿಗೆ ಹೋಗಿ ಎರಡು ದಿನಗಳಾದ ಬಳಿಕ ದಾಸ್ ದಿಲ್ಲಿಗೆ ಬರುತ್ತಾನೆ. ಹೆಂಡತಿ ಗರ್ಭಪಾತ ಮಾಡಿಸಿಕೊಂಡ ವಿಷಯ ಅವನಿಗೆ ತಿಳಿಯದು. ಹೆಂಡತಿಯ ಬಗ್ಗೆ ಬೇರಾವದೇ ಭಾವ ಅವನಲ್ಲಿಲ್ಲ. ಆಳುವ ಗುಣಗಳುಳ್ಳ ದಿಲ್ಲಿಯ ಬಗ್ಗೆ ಅವನು ಯೋಚಿಸುತ್ತಾನೆ. ಪ್ರಶಸ್ತಿಗಳ ಹಿಂದಿರುವ ನಯಗಾರಿಕೆಗಳ ಕುರಿತಾಗಿ ಯೋಚಿಸುತ್ತಾನೆ. ಜಗತ್ತನ್ನು ಬದಲಾಯಿಸಬಲ್ಲ ಚಿಂತನೆಗಳೆಲ್ಲ ಈ ಪ್ರಶಸ್ತಿಗಳಡಿ ಯಲ್ಲಿ ಬಿದ್ದು ನೆಲಸಮವಾಗುವ ಚೋದ್ಯದ ಕುರಿತಾಗಿ ಚಿಂತಿಸುತ್ತಾನೆ.

ದಿಲ್ಲಿಯಿಂದ ನಿರಾಶನಾಗಿ ದಾಸ್ ಮುಂಬೈಯಲ್ಲಿರುವ ಆಪ್ತಮಿತ್ರ ನಕುಲ್ ತ್ರಿವೇದಿ ಯಲ್ಲಿಗೆ ಬರುತ್ತಾನೆ. ಉತ್ತರ ಭಾರತದ ತ್ರಿವೇದಿ ತನ್ನ ಹೆಂಡತಿ ಮತ್ತು ಇಬ್ಬರು ಮಕ್ಕಳನ್ನು ಊರಲ್ಲಿಯೆ ಬಿಟ್ಟು ರಂಗನಟಿ ಚಾರುಲತಾಳೊಂದಿಗೆ ಸಂಬಂಧ ಇಟ್ಟುಕೊಂಡಿದ್ದಾನೆ. ತ್ರಿವೇದಿ ದಾಸ್‌ನ ಗಾಂಧೀವಾದವನ್ನು ಗಾಳಿಗೆ ಹಿಡಿಯುವವನು ಅಥವಾ ಗೇಲಿ ಮಾಡುವವನು. ದಾಸ್ ಅವನಲ್ಲಿಗೆ ಬಂದಾಗ ಅವನು ಬ್ರೂನಾ ಹಾಗೂ ಮೃಣಾಲಿನಿ ಬರುವ ಹಳ್ಳಿಗೆ ಹೋಗಿರುತ್ತಾನೆ. ಅಂತೂ ದಾಸ್ ಕರ್ಕಿಗೆ ಹಿಂದಿರುಗಿ ತನ್ನ ಅದೇ ಪರಿಸರಕ್ಕೆ ಹೊಂದಿಕೊಳ್ಳಬೇಕೆನ್ನುವಾಗ ಮೃಣಾಲಿನಿಯ ಫೋನ್ ಬರುತ್ತದೆ– "ನಾನು ಆಯ್ದುಕೊಂಡ ವೃತ್ತಿ ಬದುಕಿನಿಂದಾಗಿ ನಿಮ್ಮೊಡನೆ ಕಳೆದ ನನ್ನ ಬದುಕು ಕನಸಿನಂತೆ ಮುಗಿದುಹೋಗಿದೆ. ನೀವು ಬಂದಾಗ ನಾನು ಅಲ್ಲಿ ಇಲ್ಲದೆ ಇದ್ದುದೇ ಒಳ್ಳೆಯದಾಯಿತು" ಎನ್ನುತ್ತ ಎಲ್ಲವನ್ನೂ..., ಅಂದರೆ ಎಲ್ಲವನ್ನೂ

ದಾಸ್‌ಗೆ ಹೇಳಿ ಬಿಡುತ್ತಾಳೆ. ಇಷ್ಟಾದರೂ ದಾಸ್ ಅವಳನ್ನು ಕ್ಷಮಿಸುವ ಹಂತದಲ್ಲಿದ್ದಾನೆ. ದಾಸ್ ಎಲ್ಲಿಯೂ ಪರಿಸ್ಥಿತಿಯ ಕೈಗೊಂಬೆಯಾಗುವುದಕ್ಕೆ ಇಷ್ಟಪಡುವುದಿಲ್ಲ. ಹಾಗಾಗಿ ಅವನು ಮೃಣಾಲಿನಿಗೆ ಯೋಗವಾಸಿಷ್ಠದ ಸಾಲುಗಳನ್ನು ಹೇಳುತ್ತಾನೆ– "ಹೆಂಡತಿಯಾದವಳು ಬೇರೆ ಯಾರನ್ನು ಕೂಡಿದರೂ ಗಂಡನಾದವ ಅದನ್ನು ಕಣ್ಣಾರೆ ನೋಡಿದಾಗಲೂ ಯಾವುದೇ ವಿಕಾರಗಳಿಲ್ಲದೆ, ವಿಚಲಿತನಾಗದೆ ಇದ್ದರೆ ಆತನೇ ಮುಕ್ತಿಗೆ ಯೋಗ್ಯ ಮನುಷ್ಯ." ಅಲ್ಲದೆ ಗರ್ಭಪಾತ ಮಹಾಪಾಪ ಎಂದು ಬಿಂಬಿಸುವುದನ್ನು ದಾಸ್ ಹೈಟೆಕ್ ಸ್ತರವೆಂದು ಹೇಳುತ್ತಾನೆ. [ಆಧುನಿಕ ಸ್ತ್ರೀವಾದವನ್ನು ಪಶ್ಚಿಮದ ಅತಿರೇಕಗಳು ಎಂದು ಬಿಂಬಿಸುವವರು ಭಾರತೀಯ ಸಿದ್ಧಾಂತಗಳಿಂದ ತಿಳಿಯಬೇಕಾದದ್ದು ಸಾಕಷ್ಟಿದೆ!]

ಈ ಹೈಟೆಕ್ ಸಂಸ್ಕೃತಿಯ ಆಕ್ರಮಣದ ಬಗ್ಗೆ ಹೇಳುವ ಮಾರ್ಪಳ್ಳಿಯವರು ಎಲ್ಲಾದರೂ ಒಂದು ಕಡೆ ದಾಸ್‌ನ ಮಾತುಗಳ ಮೂಲಕ ಎಲ್ಲಾ ಗ್ರಾಮೀಣ ಕ್ರೀಡೆಗಳನ್ನು ಮೂಲೆಗುಂಪಾ ಗಿಸಿದ ಕ್ರಿಕೆಟ್‌ನ ಕುರಿತಾಗಿ ಹೇಳುತ್ತಾರೇನೋ ಎಂಬ ಕುತೂಹಲ ನನಗಿತ್ತು. ದೇವರು, ದೇವಸ್ಥಾನಗಳ, ನಾಗಬನಗಳ ಹೆಸರಿನಲ್ಲಾಗುತ್ತಿರುವ ಅರಣ್ಯನಾಶಗಳ ಬಗ್ಗೆ ಮಾರ್ಪಳ್ಳಿ ಯವರು ಚೆನ್ನಾಗಿ ಹೇಳಿದ್ದಾರೆ. ದೇವರು ಕೂಡಾ ಇಂದು ಉದ್ಯಮವಾಗಿರುವುದರ ಕುರಿತಾಗಿ ದಾಸ್ ಹೇಳುತ್ತಾನೆ. ಭೂಮಿ ಬದುಕಬೇಕು ಎಂದಿದ್ದರೆ ನಗರಗಳು ಹಳ್ಳಿಗಳಾಗಿ ಬದಲಾಗ ಬೇಕು, ಎನ್ನುವ ಮಾರ್ಪಳ್ಳಿಯವರಿಗೆ ಗಾಂಧೀ ಮತ್ತು ಬುದ್ಧ ಪ್ರಸ್ತುತರಾಗುತ್ತಾರೆ. ಸಂಪತ್ತಿನ ವಿಕೇಂದ್ರೀಕರಣಕ್ಕೆ ಒತ್ತು ನೀಡುವ ಮಾರ್ಕ್ಸ್‌ನನ್ನು ಲೇಖಕರು ಒಪ್ಪುತ್ತಾರಾದರೂ ಪ್ರಕೃತಿಯ ಮೇಲೆ ಮನುಷ್ಯನ ಅಧಿಕಾರ ಸರಿ ಎಂಬಂತಹ ಮಾರ್ಕ್ಸ್‌ನ ಸಿದ್ಧಾಂತಕ್ಕೆ ಅವರ ಸಮ್ಮತಿಯಿಲ್ಲ.

ತನ್ನ ಕಾಯದ ನಿಗ್ರಹಕ್ಕಾಗಿ ಗಾಂಧೀಜಿ ಬೆತ್ತಲಾಗಿ ತರುಣಿಯರ ನಡುವೆ ಮಲಗಿದ ಘಟನೆ ಒಂದು ಸಂಕೇತ ಮಾತ್ರ ಎನ್ನುವ ದಾಸ್‌ಗಿಂತ ಭಿನ್ನವಾದ ವ್ಯಕ್ತಿತ್ವ ತ್ರಿವೇದಿಯದು. ಅವನ ದೃಷ್ಟಿಯಲ್ಲಿ ಉಪವಾಸ ಸತ್ಯಾಗ್ರಹ, ಚಳವಳಿ, ಸತ್ಯಾನ್ವೇಷಣೆ ಮಣ್ಣಾಂಗಟ್ಟಿ ಅಂದುಕೊಂಡು ಜೀವನದ ಸರ್ವಸುಖಗಳನ್ನು ತ್ಯಾಗ ಮಾಡಿದ ಗಾಂಧೀಜಿ ತಾನೂ ನಿದ್ದೆ ಮಾಡಲಿಲ್ಲ, ಉಳಿದವರಿಗೂ ನಿದ್ದೆ ಮಾಡಲು ಬಿಡಲಿಲ್ಲ.

ತ್ರಿವೇದಿ ಮುಂಬೈಯಲ್ಲಿ ವೈಭವದ ಜೀವನ ನಡೆಸುತ್ತಿದ್ದನಾದರೂ ಊರಲ್ಲಿರುವ ಅವನ ಹೆಂಡತಿ ಆತ್ಮಹತ್ಯೆ ಮಾಡಿಕೊಂಡಾಗ ಅವಳು ಬರೆದಿಟ್ಟ ಪತ್ರದಲ್ಲಿ ತನ್ನ ಆತ್ಮಹತ್ಯೆಗೆ ಗಂಡನ ತಿರಸ್ಕಾರವೇ ಕಾರಣವೆಂದು ಅವಳು ಬರೆದಿಟ್ಟು ಹೋಗಿದ್ದರೆ ಚೆನ್ನಾಗಿರುತ್ತಿತ್ತು, ಎಂದು ಪರಿತಪಿಸುತ್ತಾನೆ. ವಿಚಿತ್ರವೆಂದರೆ, ಬಣ್ಣದ ಬೀಸಣಿಗೆಯಿರಬಹುದೆಂದು ತಿಳಿದಿದ್ದ ಚಾರುಲತಾ ತ್ರಿವೇದಿಯ ಮಕ್ಕಳಿಗೆ ತಾಯ ಮಮತೆಯನ್ನು ನೀಡುತ್ತಾಳೆ. ಹೈಟೆಕ್ ಸಂಸ್ಕೃತಿಯಲ್ಲೂ ಹುಡುಕಿದರೆ ಮಾನವೀಯತೆ ಸಿಗಬಹುದೆಂಬುದಕ್ಕೆ ಪೂರಕವಾಗುತ್ತಾಳೆ. ಬ್ರೂನಾರಿಂದ ಚಿತ್ರಕಲಾ ಪ್ರದರ್ಶನ ಮಾಡಿಸುವುದರ ಮೂಲಕ ತ್ರಿವೇದಿ ಅಂತಾರಾಷ್ಟ್ರೀಯ ಮಟ್ಟಕ್ಕೇರಿಬಿಡುತ್ತಾನೆ.

ದಾಸ್ ಯಾಮಿನಿಯ ಜತೆ ಆತ್ಮೀಯ ಸ್ನೇಹ ಬೆಳೆಸುತ್ತಾನಾದರೂ ಅನುಚಿತವಾಗಿ ವರ್ತಿಸುವುದಿಲ್ಲ. ಆದರೆ ಕಾಲೇಜು ಆಡಳಿತ ಮಂಡಳಿ ಅವನನ್ನು ಮಾನಸಿಕವಾಗಿ ತಲ್ಲಣಗೊಳ್ಳು ವಂತೆ ಮಾಡುತ್ತದೆ. ಅವನು ಬರೆದ ಇಂಗ್ಲಿಷ್ ಲೇಖನಗಳು ವ್ಯವಸ್ಥೆಯ ವಿರುದ್ಧವಾಗಿರುವುದ

ರಿಂದ ನೇರವಾಗಿ ಅದನ್ನು ಹೇಳದೆ ಮಂಡಳಿ ಅವನ ಸಂಬಂಧವನ್ನು ಯಾಮಿನಿಯ ಜತೆ ಸೇರಿಸುತ್ತದೆ. ಯಾಮಿನಿಯ ಅಣ್ಣಂದಿರು ಅವಳನ್ನು ಮುಂಬೈಗೆ ಕರೆದುಕೊಂಡು ಹೋಗುತ್ತಾರೆ.

ತ್ರಿವೇದಿಯ ಜತೆ ಸೇರಿ ಹಳ್ಳಿಯ ಬದುಕಿನ ಕುರಿತಾಗಿ ಮಾಡಿದ ಸಾಕ್ಷ್ಯಚಿತ್ರಕ್ಕೆ ದಾಸ್ ಬರೆದು ಕೊಟ್ಟ ವಿವರಣೆಯಿಂದಾಗಿ ಬ್ರೂನಾ ಗಾಂಧಿ-ಲಿಂಕನ್ ಫೌಂಡೇಶನ್‌ನಲ್ಲಿ ತನ್ನ ಗಂಡ ವಿಲಿಯಂ ಜತೆಗೆ ಉಪನಿರ್ದೇಶಕನಾಗಿ ಕೆಲಸ ಮಾಡಲು ದಾಸ್‌ನನ್ನು ಆಹ್ವಾನಿಸಿದ್ದಳು. ಮೊದಲು ದಾಸ್ ಅದಕ್ಕೆ ಹೋಗಲು ಮನಸ್ಸು ಮಾಡಿರಲಿಲ್ಲ. ಆದರೆ ಈಗ ತಾನಿದ್ದ ಪರಿಸರ ತಾನೂ ಬೆಳೆಯದೆ ಇತರರನ್ನೂ ಬೆಳೆಯಗೊಡದೆ ಇರುವಾಗ ಅವನು ಬ್ರೂನಾಳ ಆಫರ್ ಬಗ್ಗೆ ಧನಾತ್ಮಕವಾಗಿ ಯೋಚಿಸುತ್ತಾನೆ.

ದಾಸ್ ಒಮ್ಮೆ ಮುಂಬೈಗೆ ಹೋಗಿ ಯಾಮಿನಿಯನ್ನು ಮಾತನಾಡಿಸಿ ಅವಳು ಒಪ್ಪುವುದಾದರೆ ಅವಳೊಂದಿಗೆ ಬದುಕುವ ಯೋಚನೆಯಲ್ಲಿದ್ದಾನೆ. ಬ್ರೂನಾ ಹಾಗೂ ಮೃಣಾಲಿನಿ ಕರ್ಕಿಗೆ ಬಂದು ಪ್ರೊಜೆಕ್ಟ್‌ಗಾಗಿ ದಾಸ್‌ನನ್ನು ಒತ್ತಾಯಿಸಲಿದ್ದಾರೆ. ಈ ಮಧ್ಯೆ ಯಾಮಿನಿ ಊರಿಗೆ ಬಂದು ದಾಸ್‌ಗೆ ತನ್ನನ್ನು ಸಮರ್ಪಿಸಿಕೊಳ್ಳುತ್ತಾಳಾದರೂ ತನಗೊಂದು ಬಾಳು ಕೊಡು ಎಂದು ಬೇಡುವುದಿಲ್ಲ. (ಇಲ್ಲಿಯ ವರೆಗಿನ ಎಲ್ಲ ಪುರುಷವಾದಿ ಬರಹಗಳಲ್ಲಿ ಮರವಿಲ್ಲದೆ ಬಳ್ಳಿಗೆ ಬದುಕಿಲ್ಲವೆಂದು ಚಿತ್ರಿಸಿದ್ದಾರೆ. ಮಹಿಳೆಯರೂ ಅದನ್ನೇ ಒಪ್ಪಿಕೊಂಡಿದ್ದಾರೆ.) ಬದಲಾಗಿ ದಿಲ್ಲಿಗೆ ಹೋದರೆ ಮೃಣಾಲಿನಿಯ ಸ್ನೇಹ ಸಿಗಬಹುದೆಂದು ಹಾರೈಸುತ್ತಾಳೆ. ಬೇಕೆನಿಸಿದಾಗ ಬಾ ಎಂದು ಹೇಳುತ್ತಾಳೆ.

ಕೊನೆಗೂ ತನ್ನ ಬದುಕನ್ನು ಪ್ರಭಾವಿಸುವುದು ಪ್ರಕೃತಿ ಮತ್ತು ವಿಜ್ಞಾನಿಗಳೇ ಹೊರತು ರಾಜಕೀಯ, ಧರ್ಮ, ತತ್ತ್ವಜ್ಞಾನಗಳಲ್ಲ. ನಾನೊಬ್ಬ ಅತಂತ್ರ. ಗಾಂಧಿ-ಲಿಂಕನ್ ಪ್ರೊಜೆಕ್ಟ್ ನಲ್ಲಿ ಎಷ್ಟು ದಿನ ಇರಬಲ್ಲೆ, ಎಂದು ದಾಸ್ ಹೇಳುತ್ತಾನಾದರೂ ಯಾಮಿನಿಯ ಸಾಂತ್ವನದ ಮಾತುಗಳಿಂದಾಗಿ ಅವನು ಅಲ್ಲಿ ನೆಲೆ ನಿಲ್ಲಬಹುದೆಂದು ಅನ್ನಿಸುತ್ತದೆ.

ಪಂಚತಾರಾ ಜೀವನ ಶೈಲಿಯನ್ನೂ ಭೋಗದ ಜೀವನಚಕ್ರವನ್ನೂ ತಿರಸ್ಕರಿಸುತ್ತಿದ್ದ ದಾಸ್ ಕೊನೆಗೆ ಅಲ್ಲಿಗೆ ಹೋಗುವುದಕ್ಕೆ ಒಪ್ಪಿಕೊಳ್ಳುತ್ತಾನೆ, ಎಂಬುದು ಕೇವಲ ದಾಸ್‌ನೊಬ್ಬನ ದ್ವಂದ್ವವಲ್ಲ, ಎಲ್ಲ ಬುದ್ಧಿಜೀವಿಗಳ ದ್ವಂದ್ವವೂ ಹೌದು. ಯಾಮಿನಿ ಹೇಳುವಂತೆ ಅವನು ಅಲ್ಲಿರುತ್ತಾನೆ; ಅವನ ಕವನಗಳು, ವಿಚಾರಗಳೂ ಇರುತ್ತವೆ. ಮನುಷ್ಯನ ಬದುಕೇ ವೈರುಧ್ಯ ಗಳಿಂದ ಕೂಡಿದೆ ಎಂದು ಮಾರ್ಪಳ್ಳಿಯವರು ಶರಾ ಬರೆದಂತಿದೆ.

ಇಡೀ ಕಾದಂಬರಿ ಒಂದು ಮಹಾಕಾವ್ಯದಂತಿದ್ದು ಕವಿ ಮಾರ್ಪಳ್ಳಿಯವರ ಸಂವಾದ ಶೈಲಿ, ಕಾವ್ಯಾತ್ಮಕ ನಿರೂಪಣೆ ಮತ್ತೆ ಮತ್ತೆ ಓದುವಂತೆ ಪ್ರೇರೇಪಿಸುತ್ತದೆ.

■ ಡಾ. ಮಾಧವಿ. ಎಸ್. ಭಂಡಾರಿ : ೩-೧೧೩. (ಡಿ), 'ಮಂದಾರ', ಪದ್ಮನಾಭನಗರ, ದಯಾನಾ ಟಾಕೀಜ್ ಹಿಂಭಾಗ, ಉಡುಪಿ-೫೭೬ ೧೦೧ ■

# ಸತ್ಯ ಮತ್ತು ಸೌಂದರ್ಯ : ಕೆಲವು ಟಿಪ್ಪಣಿಗಳು — ಪ್ರಕಾಶ ಹಲಗೇರಿ

"*Beauty is truth, truth beauty*" — **John Keats**

ಕಾವ್ಯ ನಿರ್ಮಿತಿಯು ಕೇವಲ ಛಂದಸ್ಸು, ಅಲಂಕಾರಗಳಿಂದ ತುಂಬಿಕೊಂಡರೆ ಅದು 'ರಚನೆ'ಯಾಗಲಾರದು. ಆನಂದಕ್ಕೆ, ತತ್‌ಕ್ಷಣದ ಉಲ್ಲಾಸಕ್ಕೆ, ಅದು ಕಾರಣವಾಗುತ್ತದೆಂಬುದೇನೋ ಸರಿಯಾದ ವಿಚಾರವೇ. ಆದರೆ ರಚನೆ (ಕಾವ್ಯ) ಬರೀ ಅಷ್ಟಕ್ಕೆ ಸೀಮಿತವಾದರೆ ಅದರ ಉದ್ದೇಶ ಧ್ಯೇಯಗಳು ಪೂರ್ಣವಾದಂತಾಗುವುದಿಲ್ಲ. ಕಾವ್ಯದ ಕೆಲಸ ಮುಖ್ಯವಾಗಿ ಸತ್ಯದಲ್ಲಿ ಸೌಂದರ್ಯವನ್ನು ಕಂಡುಕೊಳ್ಳುವುದಾಗಬೇಕು. ಸತ್ಯ ಮತ್ತು ಸೌಂದರ್ಯಗಳೆರಡೂ ಭಾರತೀಯ ಪರಂಪರೆಯಲ್ಲಿ ವಿಶಾಲಾರ್ಥದಲ್ಲಿ ಚರ್ಚೆಗೆ ಒಳಗಾಗಿವೆ. ಯಾವುದು ಸತ್ಯ? ಯಾವುದು ಅಸತ್ಯ? ಹಾಗೇನೇ ಸೌಂದರ್ಯ ಎಂದರೆ ಏನು? ಕುರೂಪತೆ ಎಂದರೆ ಎಂಥದ್ದು? ಎಂಬ ಬಗೆಗೂ ನಮ್ಮ ದಾರ್ಶನಿಕರು, ಸೌಂದರ್ಯ ಅಲಂಕಾರ ಮೀಮಾಂಸಕರು, ಪಾಶ್ಚಾತ್ಯ ತತ್ವಜ್ಞರು ಚಿಂತನೆ ಮಾಡಿದ್ದಾರೆ.

ಕಾವ್ಯದ ಆಶಯ ಏನೇ ಇದ್ದರೂ ಅದು ಓದುಗನಿಗೆ ತಟ್ಟುವುದು ತನ್ನ ಶಿಲ್ಪಬಂಧದಿಂದ ಎಂಬುದು ಸತ್ಯ. ಏಕೆಂದರೆ ಕವಿಯ ಕಲ್ಪನೆಯ ಮೂಸೆಯಲ್ಲಿ ನೂರಾರು ಯೋಚನೆಗಳಿದ್ದು, ಅವು ಕಾವ್ಯದ ಮೂಲಕ ಮೂರ್ತರೂಪಕ್ಕೆ ಬಂದಾಗ ಎಲ್ಲವೂ ಕಾಂತಾಸಮ್ಮಿತತೆಯೋಪದೇಶ-ಯುಜೆಯಾಗಿ ಇರಲಾರವು. ಇದಕ್ಕೆ ಕಾರಣ ಸ್ಪಷ್ಟ. ಒಂದಕ್ಕೆ ಕೊಟ್ಟ ಧ್ಯಾನಸ್ಥಿತಿಯನ್ನು ಕವಿ, ಇನ್ನೊಂದಕ್ಕೆ ಕೊಡಲಾಗದು. ಕೊಟ್ಟರೂ ಸಾಕಷ್ಟು ಅಂತರದಿಂದ ಅದನ್ನು ಸಾಧಿಸಿಕೊಳ್ಳಬೇಕಾಗುತ್ತದೆ

'ವಾಕ್ಯಂ ರಸಾತ್ಮಕಂ ಕಾವ್ಯಂ' ಎಂಬ ಬಹು ಪ್ರಸಿದ್ಧಿ ಪಡೆದ ವಿಶ್ವನಾಥನ ಮಾತು ಒಂದು ವಿಚಾರವನ್ನಂತೂ ಸ್ಪಷ್ಟವಾಗಿಸುತ್ತದೆ. ಯಾವ ವಸ್ತು ಸಂಯೋಜನೆಯಿಂದಲೇ ಕೂಡಿರಲಿ ರಸಾತ್ಮಕವಾದ ವಾಕ್ಯವಾಗಿದ್ದರೆ ಸಾಕು ಅದು ಕಾವ್ಯವಾಗುತ್ತದೆ. ಸರಿ ರಸಾತ್ಮಕ ಆಗಿದ್ದರೆ ಅಷ್ಟೇ ಸಾಕೆ? ಅಲ್ಲಿ ಧ್ವನಿ, ವಕ್ರೋಕ್ತಿ ಏನೂ ಇರಬೇಡವೇ ಎಂಬುದು ಪ್ರಶ್ನೆಯಾಗುತ್ತದೆ. ಏಕೆಂದರೆ ಭಾರತೀಯ ಆಲಂಕಾರಿಕರು ಕಾವ್ಯದ ಬಗೆಗೆ ವ್ಯವಸ್ಥಿತವಾಗಿ ಅಭ್ಯಸಿಸಿದ್ದರಿಂದ ಒಬ್ಬರ ನಿಲುವುಗಳು ಇನ್ನೊಬ್ಬರದಕ್ಕಿಂತ ಭಿನ್ನವಾಗಿವೆ.

ಕುಂತಕ 'ವಕ್ರೋಕ್ತಿ'ಯ ಬಗ್ಗೆ ಹೇಳಿದರೆ, ಆನಂದವರ್ಧನನು ಕಾವ್ಯದ 'ಧ್ವನಿ'ಯ ಕುರಿತು ಚಿಂತನೆ ನಡೆಸುತ್ತಾನೆ. ಹಾಗೇನೇ ದಂಡಿ, ರಾಜಶೇಖರ, ಶ್ರೀವಿಜಯ, ಭರತ, ಭಾಮಹ, ವಾಮನ, ಮಮ್ಮಟ, ಭಟ್ಟತೌತ, ಲೊಲ್ಲಟ, ರುದ್ರಭಟ್ಟ ಮುಂತಾದವರು ತಮ್ಮದೇ ಆದ ನಿಲುವುಗಳನ್ನು ಕಾವ್ಯ ಸಂದರ್ಭದಲ್ಲಿ ವ್ಯಕ್ತಪಡಿಸುತ್ತಾರೆ. ಹೀಗಿದ್ದಾಗ ರಸಾತ್ಮಕವಾದ ವಾಕ್ಯವಷ್ಟೇ ಕಾವ್ಯವೇ? –ಎಂಬ ಪ್ರಶ್ನೆಗೆ ಉತ್ತರಿಸುವುದು ಕಷ್ಟದ ಮಾತು. ಹಾಗೂ ಸುಲಭ ಕೂಡ. ಕೆಳಗಿನ ಎರಡು ತರ್ಕಗಳ ಮೂಲಕ ಪರಿಹಾರ ಕಂಡುಕೊಳ್ಳಬಹುದು.

೧) ರಸಾತ್ಮಕವಾದ ವಾಕ್ಯವಷ್ಟೇ ಕಾವ್ಯವಲ್ಲ.

೨) ರಸಾತ್ಮಕವಾದ ವಾಕ್ಯವೆಲ್ಲವೂ ಕಾವ್ಯವೇ.

ಮೇಲಿನ ಎರಡು ವಾಕ್ಯಗಳಲ್ಲಿ ಕೆಳಗಿನದು ಹೆಚ್ಚು ವೈಶಾಲ್ಯವನ್ನು ಆಪ್ತತೆಯನ್ನು ಹೊಂದಿರುವುದರಿಂದ ಬಹುಶಃ ವಿಶ್ವನಾಥನ ಹೇಳಿಕೆ, ಭಾರತೀಯ ಕಾವ್ಯಮೀಮಾಂಸೆಯಲ್ಲಿ ಹೆಚ್ಚು ನಿಖರತೆಯನ್ನು ಒಳಗೊಂಡ, ಕಾವ್ಯ ಕುರಿತಾದ ಪ್ರಸಿದ್ಧ ಪ್ರಣಾಳಿಕೆಯಾಗಿದೆ.

ಅಂದರೆ 'ರಸಾತ್ಮಕ'ವಾಗಿರುವ ವಾಕ್ಯದಲ್ಲಿ ಎಲ್ಲವೂ ಅಡಗಿದಾಗ (ಛಂದಸ್ಸು ಅಲಂಕಾರ ಇತ್ಯಾದಿ) ಅದು ಕಾವ್ಯ ಎನ್ನಿಸಿಕೊಳ್ಳುತ್ತದೆ ಎಂಬುದು ಸತ್ಯವಾದಂತಾಯಿತು.

ನಮ್ಮ ಪೂರ್ವ ಕವಿಗಳು ಕಾವ್ಯ- ಮಹಾಕಾವ್ಯಗಳನ್ನು 'ಸದ್ಯಃಪರನಿವೃತಯೆ'ಗಾಗಿಯೇ ಬರೆದರೂ, ರಾಜಾಶ್ರಯದಲ್ಲಿದ್ದುದರಿಂದ ರಾಜರನ್ನು ಸಂತೃಪ್ತಗೊಳಿಸಲು ಕಾವ್ಯ ಹೆಣೆದ ರಾದರೂ ಕೆಲವು ಐತಿಹಾಸಿಕ ವಸ್ತು ಸಂಗತಿಗಳನ್ನು ದಾಖಲಿಸುವುದುಂಟು. (ಉದಾ : ಪಂಪ, ತನ್ನ ಭಾರತದಲ್ಲಿ ಅರ್ಜುನನ್ನು ಅರಿಕೇಸರಿಗೆ ಸಮೀಕರಿಸಿರುವುದು, ರನ್ನನು ತನ್ನ ಸಾಹಸಭೀಮ ವಿಜಯದಲ್ಲಿ ಸತ್ಯಾಶ್ರಯ ಇರಿವಬೆಡಂಗನನ್ನು ಭೀಮನಿಗೆ ಹೋಲಿಸಿರುವುದು... ಇತ್ಯಾದಿ.)

ಇದರಿಂದ ಅಂದಿನ ಯುಗಧರ್ಮ ಹಾಗೂ ಕಾವ್ಯಧರ್ಮಗಳನ್ನು ಒಬ್ಬ ಪ್ರಜ್ಞಾವಂತ ಕವಿ ತನ್ನ ಕಾವ್ಯದ ಮೂಲಕ ಕಟ್ಟಿಕೊಟ್ಟಂತಾಯಿತು. ಮೇಲಾಗಿ ಆ ಕಾಲದ ಶಾಶ್ವತ-ಜನಪ್ರಿಯ ಮೌಲ್ಯಗಳನ್ನು ಪರಂಪರೆಯ ವಾರಸುದಾರಿಕೆಗೆ ಸೇರ್ಪಡೆ ಮಾಡಿದಂತಾಗುವುದು.

ಈ ವಿಚಾರದಲ್ಲಿ ಪಂಪನು ಪ್ರಾತಃಸ್ಮರಣೀಯನಾಗಿದ್ದಾನೆ. ತನ್ನ ಭಾರತದಲ್ಲಿ ಅವನು ಪ್ರತೀ ಪಾತ್ರಗಳನ್ನು ಸಾಂಕೇತಿಕವಾಗಿಸಿ, ಅವುಗಳಿಗೆ ಪ್ರತಿಯೊಂದು ಮೌಲ್ಯಗಳನ್ನು ಅನ್ವಯಿಸಿ ಶಾಶ್ವತತೆ ಹಾಗೂ ಸಾರ್ವಕಾಲಿಕತೆಗಳನ್ನು ತಂದುಕೊಟ್ಟಿದ್ದಾನೆ.

ಅವನ ಕಾವ್ಯದಿಂದ ಆಯ್ದ ಈ ಪದ್ಯ ಈಗ ಕೇವಲ ಕಂಠಪಾಠ ಮಾಡಿ ವಿಚಾರ ವೇದಿಕೆಗಳಲ್ಲಿ ಉದುರಿಸುವ ಮಂತ್ರವಾಗಿ ಅಷ್ಟೇ ಉಳಿದಿಲ್ಲ. ಅದು ಹತ್ತನೇ ಶತಮಾನದ ಧೀರೋದಾತ್ತ ಬದುಕನ್ನು, ಅಂದಿನ ಮೌಲ್ಯಗಳನ್ನು ಇತಿಹಾಸಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಸತ್ಯಸ್ಥವಾಗಿ ಬಿಂಬಿಸುತ್ತದೆ :

ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ ಗಂಡಿನೊಳ್ ಭೀಮಸೇನಂ
ಬಲದೊಳ್ ಮದ್ರೇಶನತ್ಯುನ್ನತಿಯೊಳಮರಸಿಂಧೂದ್ಭವಂ ಚಾಪವಿದ್ಯಾ
ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್ ನಿ
ರ್ಮಲಚಿತ್ತಂ ಧರ್ಮಪುತ್ರಂ ಮಿಗಿಲವರ್ಗಳಿನೀ ಭಾರತಂ ಲೋಕಪೂಜ್ಯಂ

ಎಂಬ ಈ ಅಖಂಡ ವಾಕ್ಯದ ಮೌಲ್ಯಗಳನ್ನು ಯುದ್ಧಯುಗದಲ್ಲಿ ಇದ್ದಿರಬಹುದಾದ ಗುಣಗಳನ್ನು ಪಾತ್ರಗಳ ಸಂಕೇತತೆಯೊಡನೆ ಅನಾವರಣ ಮಾಡುತ್ತಾನೆ. ಅಂದರೆ ಕಾವ್ಯ ಇಲ್ಲಿ ಕೇವಲ ಮನರಂಜನೆ ಆನಂದ, ಅಥವಾ ದೊರೆಯ ತೃಪ್ತಿಗಾಗಿ ರಚಿತವಾಗಿರದೇ ಸತ್ಯದ ಬಯಲೀಕರಣ ಮಾಡುವ, ಸಮಾಜದ ನಿಲವು ದರ್ಪಣವಾಗಿರುವುದು ಕಣ್ಣೆದುರಿಗಿನ ಸತ್ಯವಾಗಿದೆ.

ಅಂದರೆ ಸೌಂದರ್ಯ ಎಂಬುದು ಕವಿಯ ಕಲ್ಪನೆಯ ವಸ್ತು ಅಷ್ಟೇ ಅಲ್ಲ. ಅಲಂಕಾರ, ಛಂದಸ್ಸುಗಳ ಹೇರಿಕೆಯಲ್ಲ, ಅಲ್ಲಿ ಸತ್ಯದ ಕವಚವಿದೆ. ಕಾವ್ಯದ ಭಾಗದಲ್ಲಿ ಸತ್ಯದ ಹೊಳಪಿದೆ. ಕಾವ್ಯಸ್ಪರ್ಶ ಪಡೆಯದ, ಸತ್ಯವನ್ನು ಹೇಳುವ ರಚನೆಗಳೂ ಇರಬಹುದು. ಆದರೆ ಇಂಥವು ಸತ್ಯವನ್ನು ಹೇಳುವಾಗ ಸೌಂದರ್ಯಾನುಭವ ಉಂಟಾಗುತ್ತದೆಂದು ಹೇಳುವಲ್ಲಿ ವಿಫಲವಾಗಿರುತ್ತವೆ. ಅಂದರೆ ಸತ್ಯದ ಅನಾವರಣ ಸೌಂದರ್ಯದ ತೀರ್ಪು ಕೊಡುವಲ್ಲಿ ಸೋತಿರುತ್ತದೆ.

ಸತ್ಯವಾದ ವಿಷಯ ಸೌಂದರ್ಯವಾಗುವುದು ಅದು ಕಾವ್ಯಸಂಸ್ಕಾರಕ್ಕೆ ಒಳಪಟ್ಟ ಮೇಲೆಯೇ. ಸಹಜ, ಪ್ರಾಸ, ಲಯ, ಗತಿ, ನಾದ, ಸುಭಗತೆ, ಸರಳ, ಸಂಕ್ಷಿಪ್ತ, ನೇರ, ಧ್ವನ್ಯಾರ್ಥ, ವ್ಯಂಗ್ಯಾರ್ಥ, ವಾಚ್ಯಾರ್ಥ ಮುಂತಾದ ಗರಡಿಗಳಲ್ಲಿ ಕವಿ, ಒಂದಿಲ್ಲೊಂದರಲ್ಲಿ ತಾಲೀಮು

ಮಾಡಿದಾಗ ಕಾವ್ಯ ಸಹಜತೆಯಿಂದ ಮೂಡಿಬರುತ್ತದೆ. ಪು.ತಿ.ನ. ಹೇಳುವಂತೆ, “ಬಳ್ಳಿಯೊಡಲ ಕುಸುಮದಂತೆ / ಮುಗುದೆಯೊಡಲ ಪ್ರೇಮದಂತೆ.”

ಇನ್ನೂ ಕೆಲವೊಮ್ಮೆ, ಪ್ರತಿಮೆ, ಉಪಮೆ, ರೂಪಕ, ಯಮಕ, ದೃಷ್ಟಾಂತ, ಶ್ಲೇಷೆ, ಪ್ರತೀಕ ಮುಂತಾದವುಗಳಲ್ಲಿ ವಿಶೇಷವಾಗಿ ಕವಿಯು ಪಳಗಿದಾಗ ಕಾವ್ಯದ ಸುಭಗತೆ, ಗಟ್ಟಿತನ, ಬಿಗಿಬಂಧ, ಅರ್ಥವ್ಯಾಪ್ತಿಗಳು, ಅರ್ಥವೈಶಾಲ್ಯಗಳು ಹೆಚ್ಚುತ್ತಾ ಹೋಗಿ, ಅಂಥ ರಚನೆಗಳು ‘ಶಿಲ್ಪ’ವಾಗಿಯೇ ಕಣ್ಣೆದುರಿಗೆ ನಿಲ್ಲುತ್ತವೆ.

Beauty is eternity gazing at itself in a mirror – ಎಂದು ಖಲೀಲ್ ಗಿಬ್ರಾನ್ ಹೇಳುತ್ತಾನೆ. ಸೌಂದರ್ಯ ಎಂದರೆ ಸಂತೋಷ ಎಂದೂ ಅರ್ಥೈಸಬಹುದು, ಸಂತೋಷದ ಮುಂದಿನ ಹೆಚ್ಚಳಿಕೆಯಾದ ಆನಂದ ಎಂತಲೂ ತಿಳಿಸಬಹುದು. ಮನಸ್ಸಿಗೆ ಮತ್ತು ಕಣ್ಣಿಗೆ ಆಪ್ಯಾಯಮಾನವಾಗಿರುವಂಥದ್ದು ಸೌಂದರ್ಯವೆನ್ನಿಸಿಕೊಳ್ಳುತ್ತದೆ. “ಕ್ಷಣಕ್ಷಣವೂ ಯಾವುದು ನವನವತ್ವವನ್ನು, ಹೊಂದುವುದೋ ಅದೇ ಸೌಂದರ್ಯ ಅಥವಾ ರಮಣೀಯತೆ ಎಂದಿದ್ದಾನೆ ಮಾಘ ಕವಿ.”[೨] ವಿವಿಧ ನಿಘಂಟುಗಳು ನೀಡುವ ಪರ್ಯಾಯ ಪದಗಳನ್ನು ಸಂಗ್ರಹಿಸಿ ಹೇಳುವುದಾದರೆ ಸೊಬಗು, ಚೆಲುವು, ಗಾಡಿತನ, ಸೊಗಸು, ಅಂದ-ಚೆಂದ, ಲಾವಣ್ಯ, ಗಾಡಿ, ರಮ್ಯತೆ, ಸ್ವಾರಸ್ಯ, ರಮಣೀಯತೆ, ಮನೋಹರತೆ, ಮನೋಜ್ಞತೆ, ಪ್ರಕಾಶತೆಗಳು ಸೌಂದರ್ಯದ ಅನ್ಯೋನ್ಯ ಪದಗಳು.

‘ಸೌಂದರ್ಯ’ವನ್ನು ಕುರಿತಾದ ಚರ್ಚೆಯು ವೇದಗಳ ಕಾಲದಿಂದಲೇ ನಡೆದಿದೆ ಎಂಬುದಕ್ಕೆ ಆಧಾರಗಳಿವೆ. “ಋಗ್ವೇದದಲ್ಲಿ ‘ಸೌಂದರ್ಯ’ ಪದಕ್ಕೆ ಪರ್ಯಾಯವಾಗಿ ಕಾಣಸಿಕ್ಕುವ ಪದಗಳನ್ನು ಪಿ. ಎಸ್. ಶಾಸ್ತ್ರೀಯವರು ಪಟ್ಟಿಮಾಡಿಕೊಟ್ಟಿದ್ದಾರೆ. ಅವು ಹೀಗಿವೆ : ಪ್ಸರಸ್, ಪೇಶಸ್, ಅಪ್ಸಸ್, ದೃಶ್, ಶ್ರೀ, ವಪುಸ್, ವಲ್ಗು, ಶ್ರೇಯಸ್, ಭದ್ರ, ಭಾಂಡ, ಚಾರು, ಪ್ರಿಯ, ರೂಪಕಲ್ಯಾಣ, ಶುಭ, ಚಿತ್ರ, ದರ್ಶತಾ, ಸ್ವಾದು, ರಣ್ವ, ವಾಮಯಕ್ಷ, ಅದ್ಭುತ. ಅಮರಸಿಂಹನು ತನ್ನ ಅಮರಕೋಶದಲ್ಲಿ ಸುಂದರ ಶಬ್ದದ ಪರ್ಯಾಯ ಪದಗಳನ್ನು ಸೂಚಿಸಿದ್ದಾನೆ :

ಸುಂದರಂ ರುಚಿರಂ ಚಾರು ಸುಷುಮಮ್ ಸಾಧು ಶೋಭನಂ
ಕಾಂತಂ ಮನೋಹರಂ ರುಚ್ಯಂ ಮನೋಜ್ಞಂ ಮಂಜು ಮಂಜುಲಂ.”[೩]

“ಭಾರತೀಯ ಕಾವ್ಯ ಮೀಮಾಂಸಕರು ಸೌಂದರ್ಯವನ್ನು ಕುರಿತಂತೆ ಅಲ್ಲಲ್ಲಿ ಆಲೋಚನೆ ಮಾಡಿದ್ದಾರೆ. ಅವರು ವಕ್ರತಾ, ಚಾರುತ್ವ, ರಮಣೀಯತೆ, ಅಲಂಕಾರ, ಕಾಂತಿ, ಲಾಲಿತ್ಯ, ರಸ ಎಂಬಿತ್ಯಾದಿ ಪದಗಳನ್ನು ಸೌಂದರ್ಯಕ್ಕೆ ಪರ್ಯಾಯವಾಗಿ ಬಳಸಿದ್ದಾರೆ. ಅದರಲ್ಲೂ ಅಲಂಕಾರ-ರಸ ಇವೆರಡು ತತ್ವಗಳಲ್ಲಿಯೇ ಲಾಕ್ಷಣಿಕರು ಕಾವ್ಯದ ಒಟ್ಟು ಸೌಂದರ್ಯವನ್ನು ಅಡಕಗೊಳಿಸಿದ್ದಾರೆ. ಅವರ ಪ್ರಕಾರ ಕಾವ್ಯ ಸೌಂದರ್ಯವೆಂದರೆ ಅದರ ರಸವೇ ಆಗಿದೆ. ಕಾವ್ಯದ ಸಾರಸರ್ವಸ್ವವೇ ರಸ. ಲೋಕದ ರಮ್ಯ, ಜುಗುಪ್ಸೆ, ವ್ಯಗ್ರ ಮುಂತಾದ ಯಾವುದೇ ಭಾವವಿದ್ದರೂ, ಅದು ಕಾವ್ಯಲೋಕದಲ್ಲಿ ಬಂದು, ರಸವಾಗಿ, ಆನಂದವನ್ನುಂಟು ಮಾಡುತ್ತದೆಂದು ಧನಂಜಯನು ತಿಳಿಸುತ್ತಾನೆ.”[೪]

ಪಾಶ್ಚಿಮಾತ್ಯರಲ್ಲಿ ಸೌಂದರ್ಯವನ್ನು ಕುರಿತಂತೆ ಜಿಜ್ಞಾಸೆ ಆರಂಭವಾದುದು ಹದಿನಾರನೆಯ ಶತಮಾನದಿಂದ. Beauty, Grace, Loveliness, Prettiness, Sublimity ಈ ಮುಂತಾದ ಶಬ್ದಗಳನ್ನು ಅವರು ಸೌಂದರ್ಯಕ್ಕೆ ಪರ್ಯಾಯವಾಗಿ ಬಳಸಿದ್ದಾರೆ. ಒಟ್ಟಾರೆಯಾಗಿ,

೧) ಯಾವುದು ಸತ್ಯವನ್ನು, ಪ್ರಕೃತಿ ಸತ್ಯವನ್ನು, ಧ್ಯೇಯವನ್ನು, ವಿಶ್ವಸಾಮಾನ್ಯವಾದುದನ್ನು, ಆದರ್ಶವನ್ನು ಪ್ರಕಾಶಪಡಿಸುತ್ತದೆಯೋ ಅದೆಲ್ಲವೂ ಸುಂದರ.

೨) ಯಾವುದು ಹಿತವಾದ ಸಾಮಾಜಿಕ ಪರಿಣಾಮಗಳಿಗೆ ತಮ್ಮನ್ನು ಒಯ್ಯುವುದೋ ಅದೆಲ್ಲವೂ ಸುಂದರ.

೩) ಸಂತೋಷದಾಯಕವಾದುದೆಲ್ಲವೂ ಸುಂದರವೇ.

೪) ಯಾವುದು ವಸ್ತುವಿನಲ್ಲಿ ತಾದಾತ್ಮ್ಯ ಹೊಂದಿ ನಮ್ಮ ಆನಂದವನ್ನೇ ಅಲ್ಲಿ ಅನುಭವಿಸುವ ಅನುಭೂತಿ ಶಕ್ತಿಗೆ ಒಳಗಾಗುವುದೊ ಅದೆಲ್ಲವೂ (empathy) ಸುಂದರ.

೫) ಯಾವುದು ನಮಗೆ ಅಪೂರ್ವ ವ್ಯಕ್ತಿತ್ವದ ಪರಿಚಯವನ್ನು ಮಾಡಿಕೊಡುವುದೋ ಅದೆಲ್ಲವೂ ಸುಂದರ. ಭವ್ಯತೆಯು ಸೌಂದರ್ಯದ ಭೌಮಸ್ಥಿತಿ [೫] – ಎಂಬುದಾಗಿ ನಿಷ್ಕರ್ಷಿಸಿ, ಈ ಎಲ್ಲಾ ಪ್ರಕಾರದ ಸೌಂದರ್ಯವು ಸತ್ಯನಿಷ್ಠ ಕಾವ್ಯಗಳಲ್ಲಿ ಮೇಳೈಸಿರುವ ಬಗೆಯನ್ನು ಅಧ್ಯಯನ ಮಾಡಬಹುದಾಗಿದೆ.

**ಸೌಂದರ್ಯದ ಕೆಲವು ವ್ಯಾಖ್ಯೆಗಳು :** ಕನ್ನಡ ಕವಿಗಳು ಕಂಡ ಸೌಂದರ್ಯದ ಕೆಲವು ವೈವಿಧ್ಯಮಯ ಹೇಳಿಕೆಗಳು, ವ್ಯಾಖ್ಯಾನಗಳು ಇಲ್ಲಿವೆ :

೧) **ಬೇಂದ್ರೆ–** "ಸೌಂದರ್ಯವೆಂಬುದು ಕಣ್ಣಿನ ತುತ್ತಲ್ಲ / ಕಣ್ಣಿಗು ಕಣ್ಣಾಗಿ ಒಳಗಿಹುದು / ರೂಪ ಲಾವಣ್ಯಕ್ಕೆ ಅಳೆಯಲು ಬಾರದು / ಅವುಗಳೆ ಇದಕೊಂದು ಕಣವಿಹವು" [೬]

೨) **ಕುವೆಂಪು–** "ಸೌಂದರ್ಯವೆಲ್ಲ ಕಲೆ / ಕಲೆ ನಿನ್ನಿಗೊರ್ದಾರಿ; ನಿನ್ನಿ ಸೊಬಗಿಂಗೆ ನೆಲೆ / ಕಲೆಯ ಹೀರಿ / ಮೀರಿಹುದು ಸತ್ಯ-ಸೌಂದರ್ಯ ಮಂದಿರಂ ಮುಂದೆ" [೭]

೩) **ಪು.ತಿ.ನ.–** "ಕತ್ತಲೆಯೆಂಬ ತೆರೆ ಹೊದಿಸಿ, ಶಾಂತಿ ನೆಲೆಕೆಳೆಯೆ /
ತಾರೆಗಳು ಕಿರುದೆರೆಗಳುಯ್ಯಲೊಳು ನಲಿಯೆ / ಜಗದ ಚೆಲ್ವಿನ ಪುರಳ ಕಂಠಾತ್ಮ ತಣಿಯೆ /
ಗಾನವೆ ನೀ ಭುವಿಯನಾವರಿಸುವಾಗ" [೮]

೪) **ಡಿ.ವಿ.ಜಿ.–** "ವಿವಿಧ ರಸಗಳ ಭಟ್ಟಿ ಸೌಂದರ್ಯ ಕಾಮೇಷ್ಟಿ /
ಕವಿ ಜಗತ್ಸೃಷ್ಟಿಯದು, ಕಲೆಗನಾಕೃಷ್ಟಿ." [೯]
"ಸೌಂದರ್ಯವೊಂದು. ದೈವರಹಸ್ಯ. ಸೃಷ್ಟಿಪ್ರೊಲು / ಸಿಂಧುವಿರುವದಪರಾಶೆಯಲಿ ಜೀವಿತಾಶಿ /
ಅಂದುವುದು ಕಣ್ಣಿಗದು ಸಂಸ್ಕೃತಿಗೆ ತಕ್ಕಂತೆ / ಚಂದದರಿವೆ ತಪಸ್ಸೊ, ಮಂಕುತಿಮ್ಮ." [೧೦]

೫) **ವಿ.ಕೃ.ಗೋಕಾಕ–** "ಸೌಂದರ್ಯ ಮೇಲು. ಸೌಂದರ್ಯಕ್ಕೂ ಮೇಲು / ಸತ್ಯವದು." [೧೧]

೬) **ಗೋಪಾಲಕೃಷ್ಣ ಅಡಿಗ–** "ಜಗದ ಚೆಲುವು ಮೊಗ ಮೊಗೆದ ಒಲವು / ಹಾ! ತಡೆಯದಲ್ಲ ನನ್ನ / ಓ ಮುಳುಗು. ಮುಳುಗಬೇಕು. ಮುಳುಗಬೇಕು / ಆ ತಳವು ಕಾಣವನ್ನ." [೧೨]

ಸೌಂದರ್ಯಾನುಭವವು ವ್ಯಕ್ತಿಗತ. ಆದಾಗ್ಯೂ ಮನುಷ್ಯನ ದೃಷ್ಟಿ ದರ್ಶನದ ಮಿತಿಯನ್ನು ಮೀರಿ ಸಾರ್ವತ್ರಿಕ ಚೆಲುವನ್ನು ಪ್ರಕಟ ಪಡಿಸುವ ಸೂರ್ಯೋದಯ, ಚಂದ್ರೋದಯ. ಸೂರ್ಯಾಸ್ತ, ಪ್ರಕೃತಿಯ ಪ್ರಕಾಶಮಯತೆ, ಪ್ರಫುಲ್ಲತೆಗಳು ಸಮಷ್ಟಿ ಸೌಂದರ್ಯ ಪ್ರಜ್ಞೆಯನ್ನು ಆವರಿಸಿರುತ್ತವೆ. ಅರಸಿಕರು ಇದಕ್ಕೆ ಅಪವಾದ.

ಮತ್ತೆ ಕೆಲವೊಮ್ಮೆ ಸೌಂದರ್ಯ ವಸ್ತುವಿನಲ್ಲಿರದೇ ನೋಡುಗನ ನೋಟದಲ್ಲಿರುವುದೂ ಇದೆ. ಆತನ ದೃಷ್ಟಿ ಯಾ ನೋಟದ ನಿಲುವಿನ ಮೇಲೆ ಅದು ಅವಲಂಬಿತ. ಅಂದರೆ "ಆ ಏನೋ ಒಂದು ಸತ್ಯವೂ ಹೌದು, ಸೌಂದರ್ಯವೂ ಹೌದು, ಪ್ರೇಮವೂ ಹೌದು, ದೇವರೂ ಹೌದು

ಎಂದಂತಾಯಿತು. ಆದ್ದರಿಂದಲೇ 'ಸತ್ಯವೇ ಸೌಂದರ್ಯ', 'ಸೌಂದರ್ಯವೇ ಸತ್ಯ' ಎಂದು ಒಬ್ಬ ಕವಿ ಹೇಳಿದರೆ, 'ಪ್ರೇಮವೇ ದೇವರು' ಎಂದು ಇನ್ನೊಬ್ಬನೆಂದ. 'ಸತ್ಯವೇ ಶಿವ' ಎಂದು ಮತ್ತೊಬ್ಬನೆಂದ''[೧೩] ಈ ಎಲ್ಲರ ತಿಳಿವಳಿಕೆಗಳು ತಪ್ಪು ಎಂದು ಹೇಳಲಿಕ್ಕೆ ಬರುವುದಿಲ್ಲ. ಏಕೆಂದರೆ ಸತ್ಯವೇ ಸೌಂದರ್ಯ, ಶಿವ ಎಲ್ಲವೂ ಆಗುವಾಗ ಒಂದನ್ನು (ಆತ) ವ್ಯಕ್ತಿಯು ದರ್ಶಿಸಿದರೆ ಆಯಿತು ಉಳಿದವುಗಳನ್ನು ಕಂಡಂತಾಗುತ್ತದೆ. ಆದರೆ ಈ ಕಾಣುವ 'ವಿಧಾನ'ವು ಮುಖ್ಯ. ಏಕೆಂದರೆ ಎಲ್ಲರೂ ಸತ್ಯದ ಸಾಕ್ಷಾತ್ಕಾರ ಸೌಂದರ್ಯದ ರಸಾಸ್ವಾದವನ್ನು ಮಾಡಿಕೊಳ್ಳಲು 'ಆತ್ಮ ಸಂಸ್ಕಾರ'ದಂತಹ ಮತ್ತೊಂದು ಅಮೂರ್ತ ಸಂಸ್ಕೃತಿಗೆ ಮೊರೆ ಹೋಗಬೇಕಾಗುತ್ತದೆ. ಸಂಸ್ಕಾರವಿಲ್ಲದೇ ವ್ಯಕ್ತಿಗೆ ಯಾವ 'ವಸ್ತು'ವೂ ತನ್ನ ಸತ್ಯತೆ-ಸೌಂದರ್ಯತೆಗಳನ್ನು ಬಿಟ್ಟುಕೊಡಲಾರದು. 'ವಿಷಯಾಸಕ್ತ'ನಿಗೂ ಸುಸಂಸ್ಕೃತನಿಗೂ ಸಾಕಷ್ಟು ವ್ಯತ್ಯಾಸಗಳುಂಟು. ಅವರು ಪರಸ್ಪರ ಒಂದು ವಸ್ತುವಿನ ಬಗೆಗೆ ತಾಳುವ ನಿಲುವುಗಳು ವಿರೋಧ ನೆಲೆಯಲ್ಲಿ ಸಾಗುತ್ತಿರುತ್ತವೆ. ಉದಾಹರಣಗೆ,

''ಹೂವನ್ನು ಹಣವಾಗಿ ನೋಡುವುದು, ಮೃಗ ಪಕ್ಷಿಗಳನ್ನು ಮಾಂಸವಾಗಿ ನೋಡುವುದು, ಹೆಣ್ಣನ್ನು ಅಥವಾ ಗಂಡನ್ನು ಭೋಗವಸ್ತುವಾಗಿ ನೋಡುವುದು ಕಾಮ. ಕಾಮದ ಕಣ್ಣಿಗೆ ವಸ್ತುವು ವಸ್ತುವಾಗಿಯೇ ಕಾಣುತ್ತದೆ. 'ಶಿವ' ಸಹ ಕೇವಲ ವಿಗ್ರಹವಾಗಿಯೇ ಕಾಣಿಸುತ್ತದೆ. ಕಾಮಾಸಕ್ತಿಯ ಸೆಳೆತಕ್ಕೊಳಗಾಗದಿದ್ದರೆ ಮಾತ್ರವೇ ಅಮೂರ್ತವಾದ ಸೌಂದರ್ಯವನ್ನು ಗ್ರಹಿಸಲು ಸಾಧ್ಯ.''[೧೪] ಹೀಗೆ ಆ ಸೌಂದರ್ಯವನ್ನು ಗ್ರಹಿಸುವವನು ಪ್ರೇಮಿ. ಇವನು ಸೌಂದರ್ಯಾರಾಧಕ, ಹೂವನ್ನು ಕಿತ್ತರೆ, ನೋವಾಗಬಹುದು ಅದಕ್ಕೆ ಎಂಬಷ್ಟು ಸಂಸ್ಕಾರಕ್ಕೆ ಒಳಪಟ್ಟವನು. ಇದಕ್ಕೆ ವಿರುದ್ಧವಾದವನು ಅಸಂಸ್ಕೃತನು. (ಅವನು ಲೋಭಿತ ಮಾತ್ರ, ಬಳಸಿ ಬೀಸಾಡುವವನು.)

''ಆತ್ಮದೃಷ್ಟಿಗೆ ಬ್ರಹ್ಮ ಸೃಷ್ಟಿಯು ತೆರೆದುದೇ ಸತ್ಯ, ತೋರಿದುದೇ ಚೆಲುವು. ಸತ್ಯ ಸೌಂದರ್ಯಗಳು ಎರಡಲ್ಲ, ಒಂದೇ. ದೃಷ್ಟಿಗೆ ವಿಷಯವಾದಾಗ ಸೌಂದರ್ಯವೆನಿಸುವುದು. ಶ್ರುತಿಗೆ ವಿಷಯವಾದಾಗ ಸತ್ಯವೆನಿಸುವುದು. ಇದ್ದುದೆಲ್ಲವೂ ಸತ್ಯ ಇದ್ದುದಿದ್ದಂತೆ ಕೂಡಿದುದೇ ಸೌಂದರ್ಯ. ಸತ್ಯ ಸೌಂದರ್ಯಗಳು ಇರುವಿಕೆಯಲ್ಲಿವೆ. ತೋರಿಕೆಯುಲ್ಲಿಲ್ಲ, ಇರುವಿಕೆಯ ಅರಿವು ಆತ್ಮಕ್ಕಿದೆ; ಮನಸ್ಸಿಗಿರುವುದು ತೋರಿಕೆಯ ತಿಳಿವಳಿಕೆ.''[೧೫] ಈ ಸೂಕ್ಷ್ಮತೆಗಳನ್ನು ಗುರುತಿಸಬಾರದವನು 'ಅರಸಿಕ'ನಾಗುತ್ತಾನೆ, ಲಂಪಟನಾಗುತ್ತಾನೆ, ಸಹಜವಾದ ಪ್ರಕೃತಿಯ ಚಿತ್ರಗಳನ್ನು ನೋಡಿ, ಆಸ್ವಾದಿಸದಷ್ಟು 'ಅರಸಿಕ'ತನವಿರುವ ವ್ಯಕ್ತಿಗಳು ಕಲೆ, ಸಾಹಿತ್ಯ, ಸಂಗೀತ ಮುಂತಾದವುಗಳನ್ನು ಗ್ರಹಿಸುವುದು ಕಷ್ಟವಾಗಿ ತೋರುತ್ತದೆ. ಸರಳತೆಯಿಂದಲೆ ನಾವು ಸಂಕೀರ್ಣತೆಯತ್ತ ಸಾಗಬೇಕು, ಹಾಗಾದಾಗ ಇರುವಿಕೆಯ ಅರಿವು ತೋರುವಿಕೆಯ ತಿಳಿವಳಿಕೆಗಳು ನಮ್ಮದಾಗುತ್ತವೆ.

ಬೇಂದ್ರೆಯವರು ಹೇಳುವುದು ಇದನ್ನೇ— ''ಚೆಲುವಿಕೆಯು ಕಣ್ಣಿನ ಬದುಕು, ಮರ-ಬಳ್ಳಿ, ಹಸು ಹಕ್ಕಿ, ಹೊಳೆಹಳ್ಳ, ಮಳೆಬೆಳೆ ಇವೇ ಮೊದಲಾದ ಸೃಷ್ಟಿಯ ಸಂತೆಯೆಲ್ಲವೂ ಚೆಲುವಿನ ಪೇಟೆಯೇ. ಆದರೆ ಕಣ್ಣಿಗೆ ಸಹ್ಯವಾದುದಷ್ಟೇ ಚೆಲುವೆಂದೂ, ಅಸಹ್ಯಾಳವೆಂದೂ ನಾವು ಸಾಮಾನ್ಯವಾಗಿ ತಿಳಿಯುವೆವು. ನಮ್ಮ ನಮ್ಮ ಕಣ್ಣಿನ ಅಳವಿನಂತೆ ಚೆಲುವನ್ನು ಕಾಣುವ ನಮ್ಮ ನಮ್ಮ ಶಕ್ತಿಯಿರುವುದು.''[೧೬]

ಆ ಶಕ್ತಿಗೆ ಅನುಗುಣವಾಗಿ ನಾವು ಸತ್ಯ-ಸೌಂದರ್ಯಗಳನ್ನು ಗ್ರಹಿಸಲು ಸಾಧ್ಯ. ನಾವು ಗ್ರಹಿಸಿದ್ದೇ ಪೂರ್ಣವಲ್ಲ. ಏಕೆಂದರೆ ಹಲವಾರು ಮಿತಿಗಳನ್ನು ಹೊತ್ತುಕೊಂಡ ಮನಸ್ಸು

ಸಂಪೂರ್ಣವಾಗಿ ತನ್ನನ್ನು ತೆರೆದಿಡಲು ಕೆಲವೊಮ್ಮೆ ಆಗುವುದಿಲ್ಲ. ಬುದ್ಧಿಪ್ರಧಾನವಾದ ತಿಳಿವಳಿಕೆಯು ಈ ವಿಚಾರದಲ್ಲಿ ಅಷ್ಟು ಸಹಕಾರಿಯಾಗುವುದಿಲ್ಲ. ಶಾಸ್ತ್ರ, ಗಣಿತ, ವ್ಯಾಕರಣ ಮುಂತಾದ ಕ್ಲಿಷ್ಟಕರ ವಿಷಯಗಳಲ್ಲಿ ಸಕ್ರಿಯ ಪಾತ್ರವಹಿಸಬಹುದು. ಸೌಂದರ್ಯದ ವಿಷಯಕ್ಕೆ ಬಂದರೆ ಭಾವನೆಯೇ ಪ್ರಧಾನ ಮತ್ತು ಸತ್ಯದ ವಿಷಯಕ್ಕೆ ಬಂದರೆ ಆತ್ಮವೇ ಪ್ರಧಾನ.

ಹಾಗೆಂದು ಭಾವನೆ ಮತ್ತು ಆತ್ಮಗಳಲ್ಲಿ 'ಬುದ್ಧಿ'ಯ ಅಂಶವಿಲ್ಲ ಎಂದು ಹೇಳಲಾಗದು. ಆದರೆ 'ಬುದ್ಧಿ'ಯಲ್ಲಿ 'ಭಾವನೆ' ಮತ್ತು 'ಆತ್ಮ'ಗಳ ಅಂಶ ಕಡಿಮೆ. (ಆ ಕಾರಣಕ್ಕಾಗಿಯೇ) "ಆತ್ಮವು ಕಣ್ಣು ತೆರೆಯುತ್ತಲೇ ಮನದ ಕಣ್ಣು ತಿಳಿಯಾಗುವುದು. ಮೈಯ ಕಣ್ಣು ತಿದ್ದಿಕೊಳ್ಳುವುದು. ಈ ಮೂರು ಕಣ್ಣು ಪಡೆದವರೆ ಮೂರು ಲೋಕ ಪಡೆದಂತೆ. ತೆರೆಮುಸುಕಿಲ್ಲದ ಚೆಲುವು ಆಗ ಮೆರೆಯುವುದು. ಅಲ್ಲಿಯ ವರೆಗೆ ಎಲ್ಲವೂ ಮುಸುಕು, ಮುಸುಕು; ಮುಸುಕು, ಮುಸುಕು. ಮನಸ್ಸಿನಿಂದ ಚೆಲುವನ್ನು ಕಂಡು ಹಿಡಿಯುವುದಾದರೆ ಕೊಡವು ಕಡಲನ್ನು ಕುಡಿಯ ಹೊರಟಂತೆ."[೧೭]

ಆ ಕಾರಣ ಆತ್ಮ, ಮನ ಮತ್ತು ಮೈ ಮೂರು ಜಾಗೃತ ಸ್ಥಿತಿಯಲ್ಲಿ ಔಚಿತ್ಯ ಮೀರದಂತೆ 'ಇರುವಿಕೆ'ಗೆ ಸ್ಪಂದಿಸಿದರೆ ಸತ್ಯ ದರ್ಶನ ಆ ಮೂಲಕ ಸೌಂದರ್ಯಾನುಭವವಾಗುತ್ತದೆ. ಹೀಗೆ ತಮಗಾದ ಅನುಭವವನ್ನು "ಪುರಂದರದಾಸರು 'ಕಲ್ಲುಸಕ್ಕರೆ' ಎಂದು ಕರೆದಿದ್ದಾರೆ. ಎಂಥ ಕಲ್ಲುಸಕ್ಕರೆ? ಅಮೂರ್ತವಾದ ಕಲ್ಲುಸಕ್ಕರೆ ಎಂದು ಹಾಡೇ ಹೇಳುತ್ತಾರೆ. ಅದು ಏನು ಎಂಬ ಪ್ರಶ್ನೆ ಹಾಕಿಕೊಂಡು, ಇದಲ್ಲ ಎಂದು ಹೇಳುತ್ತಾ ಹೋಗುತ್ತಾರೆ ಪುರಂದರದಾಸರು. ವಾಸ್ತವದಲ್ಲಿ ಅವರು ಸಕ್ಕರೆಯ ಭೌತಿಕ ಸ್ವರೂಪವನ್ನು ಸಕ್ಕರೆ ಎನ್ನುತ್ತಿಲ್ಲ. ಸಕ್ಕರೆಯ ಸವಿಯನ್ನು 'ಸಕ್ಕರೆ' ಎನ್ನುತ್ತಿದ್ದಾರೆ. ಸತ್ಯವೆಂಬ ಸವಿಯನ್ನು ತೋರಿಸಲು ಸಕ್ಕರೆಯನ್ನು ಪ್ರತಿಮೆಯಾಗಿ ಬಳಸಿಕೊಳ್ಳುತ್ತಾರೆ."[೧೮] ಇದನ್ನೇ ಬಸವಣ್ಣನವರು ಬೇರೊಂದು ರೂಪದಲ್ಲಿ ಬಳಸುತ್ತಾರೆ. 'ಹಾಲ ತೊರೆಗೆ ಬೆಲ್ಲದ ಕೆಸರು', 'ಸಕ್ಕರೆಯ ಮಳಲು' ಎಂಬ ಅವರ ವಚನವು ಪುರಂದರದಾಸರು ಬಳಸಿದ ಶ್ಲೇಷೆಯಂತೇ ಕಂಡುಬರುತ್ತದೆ. ಇಲ್ಲಿ ಅವರು ಹಾಲ ತೊರೆ, ಬೆಲ್ಲದ ಕೆಸರು, ಸಕ್ಕರೆಯ ಮಳಲು ಮುಂತಾದ ಉಪಮೆಗಳನ್ನು ಶಕ್ತಿಯುತವಾಗಿ ದಾಖಲಿಸುತ್ತಾರೆ. ಆ ಮೂಲಕ ಸತ್ಯದ ಸೌಂದರ್ಯದ ಅನಾವರಣ ಮಾಡುತ್ತಾರೆ.

ನೈಸರ್ಗಿಕವಾದ, ಸಹಜವಾದ, ಸುಭಗವಾದ ತೊರೆ, ಕೆಸರು, ಮಳಲುಗಳು ಒಂದು ನಿಟ್ಟಿನ ನೋಟ. ಆ ನೈಸರ್ಗಿಕವಾದ ಪ್ರಕೃತಿಯಲ್ಲಿನ ಈ ತೊರೆಯು ಹಾಲಿನ ತೊರೆಯಾಗಿ, ಕೆಸರು ಬೆಲ್ಲದ ಕೆಸರಾಗಿ, ಮಳಲು ಸಕ್ಕರೆಯ ಮಳಲಾಗಿ ಕಂಡುಬರುವುದು ಮತ್ತೊಂದು ದೃಷ್ಟಿಕೋನ. ಈ ಎರಡರ ಸಮ್ಮಿಲನದಂತಿರುವ 'ಆದ್ಯರ ವಚನ ಕಾವ್ಯಗಳು' ಅಂತಿಮತೆಯ, ಇರುವಿಕೆಯ ಅರಿವು. ಇದು ಸತ್ಯದ ದರ್ಶನ ಸೌಂದರ್ಯದ ಅನುಭೂತಿ. (ಇದರ ಆವಾಹನೆ ಯಾಗುವುದು ಅನುಭಾವಿಕ ನಿಲುವಿನ ಮೇಲೆ ಮಾತ್ರ.) "ಆದರೆ ಈ ಭಾವನೆ ವಸ್ತುನಿಷ್ಠವಾದು ದಲ್ಲ. ಇದು ವ್ಯಕ್ತಿನಿಷ್ಠವಾದುದು. ಒಬ್ಬನಿಗೆ ಕಾಣಿಸುವ ಸೌಂದರ್ಯ ಇನ್ನೊಬ್ಬನಿಗೆ ಕಾಣಿಸದಿರಬಹುದು. ಒಬ್ಬನಿಗೆ ಸತ್ಯವೆನಿಸಿದ್ದು ಇನ್ನೊಬ್ಬನಿಗೆ ಸತ್ಯವೆನಿಸದಿರಬಹುದು. ಯಾವುದೂ ಎಲ್ಲರಿಗೂ ಒಂದೇ ರೀತಿ ಕಾಣಿಸುವುದಿಲ್ಲ. ಇದೇ ಬಹುಶಃ ಮನುಷ್ಯನ ಗ್ರಹಣ ಶಕ್ತಿಯ ಮಿತಿ."[೧೯] ಇದು ಸತ್ಯ; ಇದನ್ನು ಒಪ್ಪಿಕೊಳ್ಳುವುದು ಸೌಂದರ್ಯ.

**ಟಿಪ್ಪಣಿಗಳು :**

೧. ಪಂಪಭಾರತ : ಆಶ್ವಾಸ ೧೪, ಪದ್ಯ ೬೪
೨. ವಿಜಯ ಕರ್ನಾಟಕ. ಕಲಾವಿಜಯ -ಪು. ೧೦, ೧೫ ಮೇ ೨೦೦೧
೩. ಆಧುನಿಕ ಕನ್ನಡ ಕಾವ್ಯಮೀಮಾಂಸೆ : ಡಾ. ಎಸ್. ಎಂ. ಹಿರೇಮಠ -ಪು. ೩೬೫
೪. ದಶರೂಪಕ -ಪು. ೮೫
೫. ಆಧುನಿಕ ಕನ್ನಡ ಕಾವ್ಯ ಮೀಮಾಂಸೆ : ಡಾ. ಎಸ್. ಎಂ. ಹಿರೇಮಠ -ಪು. ೩೬೮
೬. ಒಲವೆ ನಮ್ಮ ಬದುಕು -ಪು. ೧೪೬ ೭. ಕೃತ್ತಿಕೆ -ಪು. ೨೪
೮. ರಸ ಸರಸ್ವತಿ -ಪು. ೨೮ ೯. ಮಂಕುತಿಮ್ಮನ ಕಗ್ಗ -ಪು. ೧೧೧
೧೦. ಅದೇ ೧೧. ನವೋದಯ ಕಾವ್ಯಭಾಗ-೧ -ಪು. ೧೯ ೧೨. ಭಾವತರಂಗ -ಪು. ೫೬
೧೩. ನಮ್ಮ ಬದುಕಿನ ಪುಟಗಳು : ಕೆ.ಟಿ.ಗಟ್ಟಿ -ಪು.೬೯ ೧೪. ಅದೇ -ಪು. ೭೧
೧೫. ಸಾಹಿತ್ಯದ ವಿರಾಟ್ ಸ್ವರೂಪ : ಡಾ. ದ. ರಾ. ಬೇಂದ್ರೆ -ಪು. ೧೭೨ ೧೬. ಅದೇ ೧೭. ಅದೇ
೧೮. ನಮ್ಮ ಬದುಕಿನ ಪುಟಗಳು : ಕೆ. ಟಿ. ಗಟ್ಟಿ -ಪು. ೬೯ ೧೯. ಅದೇ -ಪು. ೭೦-೭೧

■ ಪ್ರಕಾಶ ಹಲಗೇರಿ : ಗೆಸ್ಟ್ ಲೆಕ್ಚರರ್ ಆ್ಯಂಡ್ ರಿಸರ್ಚ್ ಸ್ಕಾಲರ್,
ಡಿಪಾರ್ಟ್‌ಮೆಂಟ್ ಆಫ್ ಕನ್ನಡ, ಎಂ. ಕೆ. ಯುನಿವರ್ಸಿಟಿ, ಮದುರೈ-೬೨೫ ೦೨೧ (ತಮಿಳುನಾಡು) ■

## ಮೀನುಗಾರಿಕೆ ಕವನಗಳು

— ಎಸ್. ಎಂ. ಶಿವಪ್ರಕಾಶ್

### ೧. ಹಿಡಿದೇವಾದರೆ ಮೀನು ಮರಿ ಮಾಡೋ ವೇಳೆಗೆ

ಸಮುದ್ರದಲಿ ಮೀನುಗಳು ಹಲವಾರು ಬಗೆ
ಪ್ರಮುಖವಾದವು ಮಾತ್ರ ಐವತ್ತು ಬಗೆ
ಇವುಗಳಿಂದಲೇ ಭದ್ರತೆ ಮೀನುಗಾರರ ಬಾಳಿಗೆ
ರಕ್ಷಿಸಲು ಬೇಡವೇ ಇವುಗಳನು ನಾಳೆಗೆ ?
ಏರುತಿದೆ ಬೇಡಿಕೆ ಬಂಗುಡೆ, ಭೂತಾಯಿಗೆ
ಮುಗಿಬೀಳುವವರೇ ಎಲ್ಲರೂ ಆಂಜಾಲು ಮಾಂಜಿಗೆ
ಹಿಡಿದೇವಾದರೆ ಮೀನು ಮರಿ ಮಾಡೋ ವೇಳೆಗೆ
ಮರೆಯಬೇಕಾದೀತು ಈ ಮೀನುಗಳ ನಾಳೆಗೆ !!

### ೨. ಹೊನ್ನ ಮೊಟ್ಟೆಯ ಒಡಲು

ವರ್ಷದುದ್ದಕೂ ಮೀನು ಹಿಡಿಯುವೆವು ನಾವು
ರಾತ್ರಿ ಹಗಲು ಎನ್ನದೆ ಜಾಲಾಡಿ ಕಡಲು
ಬಗೆಯುವುದು ಸರಿಯೇ ಹೊನ್ನ ಮೊಟ್ಟೆಯ ಒಡಲು
ಎಲ್ಲದಕೂ ಮಿತಿ ಇಹುದು ಗಳಿಸಲೂ ಬಳಸಲೂ
ಈ ಮಾತು ಅನ್ವಯ ಮೀನುಗಾರಿಕೆಯಲ್ಲೂ
ಇದನರಿತು ಬಾಳಿದರೆ ಮೀನುಗಾರರೆಲ್ಲರೂ
ಪಡೆದೇವು ಅನಂತರ ನಿರಂತರ ಮೀನು ಫಸಲು

೩. **ಮತ್ಸ್ಯ ಮಡಿಲಿನ ಹೊನ್ನು**

ದೊಡ್ಡ ಕಣ್ಣಿನ ಬಲೆಯು ಬಳಸಿದರೆ ಎಲ್ಲರೂ
ಬದುಕುಳಿದು ಬೆಳೆದಾವು ಮೀನು ಮರಿಗಳೆಲ್ಲವೂ
ಮರಿಗಳನು ಹಿಡಿದರೆ ಲಾಭವಾದರೂ ಏನು ?
ಚಟ್ನಿಗೆ ಗೊಬ್ಬರಕೆ ಬಳಸುವುದು ಸರಿಯೇನು ?
ಇದು ಸರಿಯೇ ಉಚಿತವೇ ಯೋಚಿಸಿರಿ ಇನ್ನು
ಸಣ್ಣಕಣ್ಣಿನ ಬಲೆಯು ಬಳಸದಿರಿ ಇನ್ನು
ಇದನರಿತು ನಡೆಸಿದರೆ ಮೀನುಗಾರಿಕೆಯನ್ನು
ಬಲೆತುಂಬಾ ಪಡೆದೇವು ಮತ್ಸ್ಯಮಡಿಲಿನ ಹೊನ್ನು !

೪. **ಸ್ವಚ್ಛತೆ ಶುಭ್ರತೆ**

ಮಳೆಗಾಲದಲ್ಲಿ ಮೀನುಗಾರಿಕೆ ನಡೆಸದಂತೆ
ಯಾಂತ್ರೀಕೃತ ಮೀನುಗಾರಿಕೆಗೆ ನಿರ್ಬಂಧ-ರಜೆ
ಡೈನಾಮೈಟ್ ಸಿಡಿಸಿ ಮೀನು ಹಿಡಿದೆವಾದರೆ
ಕಾದಿದೆ ನಮಗೆ ಮೂರು ತಿಂಗಳ ಜೈಲುವಾಸ-ಸಜೆ
ಬ್ಯಾಂಕಿನ ಸಾಲ ತೀರಿಸದೇ ಹೋದರೆ
ಮುಟ್ಟುಗೋಲು ಹಾಕಿಕೊಳ್ಳುವರು
ಇದ್ದ ಒಂದೇ ಒಂದು ದೋಣಿ, ಬಲೆ
ಅಂತೆಯೇ,
ಇಲ್ಲವಾದರೆ ಮೀನು ಮಾರುಕಟ್ಟೆಯಲ್ಲಿ
ಸ್ವಚ್ಛತೆ-ಶುಭ್ರತೆ
ನೀಡುವುದಾದರೂ ಯಾರಿಗೆ
ಕಠಿಣ ಶಿಕ್ಷೆ-ಸಜೆ ?

೫. **ತಾಜಾ ಮೀನು**

ಆಗ ತಾನೇ ಹಿಡಿದ ತಾಜಾ ಮೀನಿಗೆ
ಇರುವುದಿಲ್ಲ ಯಾವುದೇ ವಾಸನೆ
ಆದರೂ ಮೀನು ಮಾರುಕಟ್ಟೆ ಮಾತ್ರ
ಅದೇಕೋ ದುರ್ಗಂಧ-ದುರ್ವಾಸನೆ ?

ಉತ್ತರ ಇದಕೆ ಬಹು ಸುಲಭ
ಇಲ್ಲ ಅಲ್ಲಿ ಮೀನಿನ ನಿರ್ವಹಣೆ
ದುಡಿಮೆಗೆ ತಕ್ಕ ಫಲ ದೊರಕಬೇಕಾದರೆ
ತರಲೇಬೇಕಿದೆ ಮೀನುಗಾರರಲ್ಲಿ ಬದಲಾವಣೆ
ಉಳಿಸಿಕೊಂಡೆವಾದರೆ ಅಲ್ಲಿ ತಾಜಾ ಗುಣ-ಸ್ವಚ್ಛತೆ
ದೊರಕೀತು ಮೀನಿಗೆ ಉತ್ತಮ ಬೆಲೆ ಧಾರಣೆ

■ ಡಾ. ಎಸ್. ಎಂ. ಶಿವಪ್ರಕಾಶ್ : ಸಹಪ್ರಾಧ್ಯಾಪಕ, ಮೀನುಗಾರಿಕಾ ಕಾಲೇಜು,
ಕಂಕನಾಡಿ, ಮಂಗಳೂರು-೫೭೫ ೦೦೨ (ದ.ಕ) ■

# ಹೇಮಾ ಪಟ್ಟಣಶೆಟ್ಟಿಯವರ 'ಕನ್ನಡ ನಾಟಕಗಳಲ್ಲಿ ಸ್ತ್ರೀಲೋಕ'

## ಸಿ. ಎನ್. ರಾಮಚಂದ್ರನ್

ಸರಿ ಸುಮಾರು ಎರಡು ದಶಕಗಳ ಹಿಂದೆ ಸ್ತ್ರೀವಾದಿ ವಿಮರ್ಶೆ ಕನ್ನಡ ವಾಙ್ಮಯವನ್ನು ಪ್ರವೇಶಿಸಿತೆಂದು ಹೇಳಬಹುದು. ಪ್ರಾರಂಭದಲ್ಲಿ ಭಾರತೀಯ ಹಾಗೂ ಪಾಶ್ಚಿಮಾತ್ಯ ಸ್ತ್ರೀವಾದಿ ವಿಮರ್ಶೆಯ ತಾತ್ವಿಕ ನೆಲೆಗಳ ಪರಿಚಯ ಮತ್ತು ವ್ಯಾಖ್ಯಾನ ಕಾರ್ಯವನ್ನು ಸುಮಿತ್ರಾಬಾಯಿ, ನಿರಂಜನ ಸಹೋದರಿಯರು, ಎನ್. ಗಾಯತ್ರಿ, ರೋಹಿಣಿ ಮುಂತಾದವರು ಸಮರ್ಥವಾಗಿ ಕೈಗೊಂಡರು. ಅನಂತರ, ಸುಮಾರು ಒಂದು ದಶಕದ ಹಿಂದೆ ಸ್ತ್ರೀವಾದದ ಎರಡನೆಯ ಘಟ್ಟವಾದ ಅನ್ವಯಿಕ ವಿಮರ್ಶೆಯನ್ನು ವಿಜಯಾ ದಬ್ಬೆ, ಕಮಲಾ ಹಂಪನಾ, ಎಸ್. ವಿ. ಪ್ರಭಾವತಿ, ಗಾಯತ್ರಿ ನಾವಡ, ವಿಜಯಾ ಸುಬ್ಬರಾಜ್, ಸಬೀಹಾ ಭೂಮಿಗೌಡ ಇತ್ಯಾದಿ ಅನೇಕ ಸ್ತ್ರೀವಾದಿ ಚಿಂತಕರು ಸಮರ್ಥವಾಗಿ ನಿರ್ವಹಿಸಿದರು. ಅನ್ವಯಿಕ ಸ್ತ್ರೀವಾದದ ನೆಲೆಯಲ್ಲಿ ಇತ್ತೀಚೆಗೆ ಬಂದ ಎರಡು ಗಮನೀಯ ಕೃತಿಗಳೆಂದರೆ ಗಾಯತ್ರಿ ನಾವಡ ಅವರ **ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು (೧೯೯೯)** ಮತ್ತು ಎಲ್. ಜಿ. ಮೀರಾ ಅವರ **ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ (೨೦೦೪)**. ಈ ಸಾಲಿಗೆ ಈಗ ಬಂದಿರುವ ಹೇಮಾ ಪಟ್ಟಣಶೆಟ್ಟಿಯವರ **ಕನ್ನಡ ನಾಟಕಗಳಲ್ಲಿ ಸ್ತ್ರೀಲೋಕ (೨೦೦೬)** ಸೇರುತ್ತದೆ.

೨೦೮ ಪುಟಗಳ ಈ ಸಂಕಲನದಲ್ಲಿ ಒಟ್ಟು ೧೩ ಲೇಖನಗಳಿವೆ. ಮೊದಲನೆಯ ಲೇಖನ ಇಡೀ ಸಂಕಲನದ ಹಿನ್ನೆಲೆಯಲ್ಲಿ ಕ್ರಿಯಾಶೀಲವಾಗಿರುವ ಸ್ತ್ರೀವಾದೀ ಚಿಂತನೆಯನ್ನು ಪರಿಚಯಿಸಿದರೆ, ಉಳಿದ ಹನ್ನೆರಡು ಲೇಖನಗಳು ಕನ್ನಡದ ಮೊದಲ ನಾಟಕದಿಂದ ಪ್ರಾರಂಭಿಸಿ ಕಂಬಾರರ ನಾಟಕದ ಚರ್ಚೆಯೊಂದಿಗೆ ಮುಗಿಯುತ್ತವೆ. ಅರ್ಥಾತ್, ಸರಿ ಸುಮಾರು ಒಂದು ನೂರು ವರ್ಷಗಳ ಕನ್ನಡ ನಾಟಕದ ಇತಿಹಾಸವನ್ನು ಈ ಸಂಕಲನ ಕಟ್ಟಿಕೊಡುತ್ತದೆ ಮತ್ತು ಆ ಇತಿಹಾಸದ ಪ್ರಮುಖ ಘಟ್ಟಗಳನ್ನು / ನಾಟಕಕಾರರನ್ನು ಈ ಸಂಕಲನದ ಲೇಖನಗಳು ವಿಮರ್ಶಾತ್ಮಕವಾಗಿ ಪರಿಶೀಲಿಸುತ್ತದೆ.

ಸಂಕಲನದ ಮೊದಲ ಅಧ್ಯಾಯ ಸಂಕ್ಷಿಪ್ತವಾಗಿ ಆದರೆ ಸಮರ್ಥವಾಗಿ ಸ್ತ್ರೀವಾದದ ಪ್ರಮುಖ ಪರಿಕಲ್ಪನೆಗಳನ್ನು ಹಾಗೂ ಗೃಹೀತಗಳನ್ನು ಮಂಡಿಸುತ್ತದೆ; ಮತ್ತು ಕನ್ನಡದ ಪ್ರಮುಖ ಸ್ತ್ರೀವಾದಿ ವಿಮರ್ಶಕರನ್ನು ಗುರುತಿಸುತ್ತದೆ. ಈ ಅಧ್ಯಾಯದಲ್ಲಿ ಕಂಡುಬರುವ ತಾತ್ವಿಕ ಚರ್ಚೆ ಪರಿಚಿತವೇ ಆಗಿದ್ದರೂ ಆ ಚರ್ಚೆಯ ಮೂಲಕ ಲೇಖಕಿ ತಲುಪುವ ತೀರ್ಮಾನಗಳು ಅರ್ಥಪೂರ್ಣವಾಗಿವೆ : "ಸ್ತ್ರೀವಾದವನ್ನು ಲಿಂಗಾಧಾರಿತ ಮೌಲ್ಯ ವ್ಯವಸ್ಥೆಯ ವಿರುದ್ಧದ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಹೋರಾಟದ ಸೈದ್ಧಾಂತಿಕ ರೂಪ ಎಂದು ನಿರ್ವಚಿಸಬಹುದು. ... ಸ್ತ್ರೀವಾದವು ಕೇವಲ ಬುದ್ಧಿಜೀವಿಗಳ ಅಕಾಡೆಮಿಕ್ ಶಿಸ್ತಲ್ಲ. ಅದೊಂದು ಜೀವನ ವಿಧಾನ" (ಪು. ೨೩). ಈ ನಿಲುವಿನಿಂದಾಗಿ, ಹೆಚ್ಚಿನ ಸಂದರ್ಭಗಳಲ್ಲಿ, ಬದ್ಧ ವಿಮರ್ಶೆ ಯಾಂತ್ರಿಕವಾಗುವ ಸಾಧ್ಯತೆಯಿಂದ ಲೇಖಕಿ ಪಾರಾಗುತ್ತಾರೆ.

ಕನ್ನಡದ ಮೊದಲ ನಾಟಕಗಳನ್ನು ವ್ಯಾಖ್ಯಾನಿಸುವ ಮೂರು ಲೇಖನಗಳು ಅನೇಕ ಕಾರಣಗಳಿಂದ ಮೌಲಿಕವಾಗಿವೆ. ಈ ನಾಟಕಗಳೆಂದರೆ, ವೆಂಕಟರಮಣ ಶಾಸ್ತ್ರೀ ಸೂರಿಯವರ

ಕನ್ಯಾವಿಕ್ರಯ ಅಥವಾ ಇಗ್ಗಪ್ಪ ಹೆಗ್ಗಡೇ ವಿವಾಹ ಪ್ರಹಸನ, (೧೮೮೭); ಶಿವರಾಮ ಧಾರೇಶ್ವರರ ಕನ್ಯಾವಿಕ್ರಯ (೧೮೮೭); ಮತ್ತು ಶೇಷ ದಾಸಾಚಾರ್ಯ ಅದ್ಯರ ಸುವದನಾ ಭಾಸ್ಕರ (೧೯೦೭). ಇವುಗಳಲ್ಲಿ ಮೊದಲ ನಾಟಕದ ಪರಿಚಯ ಸಾಕಷ್ಟು ಜನರಿಗಿದೆ ಮತ್ತು ಇತ್ತೀಚೆಗೆ ಈ ನಾಟಕವನ್ನು ನ್ಯೂಯಾರ್ಕ್‌ನಲ್ಲಿರುವ ನಾರಾಯಣ ಹೆಗಡೆಯವರು ಇಂಗ್ಲೀಷ್‌ಗೂ ಅನುವಾದಿಸಿದ್ದಾರೆ. ಆದರೆ ಉಳಿದ ಮೂರು ನಾಟಕಗಳು ಇಲ್ಲಿಯ ವರೆಗೆ ಹೆಚ್ಚಿನ ಕನ್ನಡ ಓದುಗರಿಗೆ ಅಜ್ಞಾತವಾಗಿಯೇ ಉಳಿದಿದ್ದುವು. ನನಗಂತೂ ಈ ನಾಟಕಗಳ ಪರಿಚಯವಾದುದು (ಮತ್ತು ಒಂದೇ ಕಥಾವಸ್ತುವನ್ನುಳ್ಳ ಸೂರಿಯವರ ಹಾಗೂ ಧಾರೇಶ್ವರರ ನಾಟಕಗಳು ಕೇವಲ ಹದಿನೇಳು ದಿನಗಳ ಅಂತರದಲ್ಲಿ ಪ್ರಕಟಗೊಂಡ ಸಂಗತಿ ಗೊತ್ತಾದದ್ದು) ಈ ಲೇಖನಗಳಿಂದಲೇ. ಪ್ರಪ್ರಥಮವಾಗಿ ಈ ನಾಟಕಗಳನ್ನು ಕನ್ನಡ ಓದುಗರಿಗೆ ಪರಿಚಯಿಸಿದ ಶ್ರೇಯಸ್ಸು ಹೇಮಾ ಅವರದ್ದು.

ಹಾಗೆಯೇ, ಹೇಮಾ ಅವರು ವಿಶ್ಲೇಷಿಸುವಂತೆ, ಈ ನಾಟಕಗಳ ಕಾಳಜಿ ಸುಧಾರಣಾವಾದದಿಂದ ಪ್ರಭಾವಿತವಾಗಿರುವುದು ಗಮನೀಯ. ಪರಂಪರಾಗತ ಬ್ರಾಹ್ಮಣ ಸಮಾಜದಲ್ಲಿ ಧಾರ್ಮಿಕ-ಸಾಮಾಜಿಕ ನೆಲೆಗಳಲ್ಲಿ ಶೋಷಣೆಗೊಳಗಾಗಿದ್ದ ಸ್ತ್ರೀಯರ ದಾರುಣ ಪರಿಸ್ಥಿತಿಯನ್ನು ಈ ನಾಟಕಗಳು ಮನ ಮುಟ್ಟುವಂತೆ ಚಿತ್ರಿಸುತ್ತವೆ. ಕನ್ನಡದ ಮೊದಲ ಕಾದಂಬರಿಗಳಲ್ಲೂ ನಾವು ಇದೇ ಬಗೆಯ ಸ್ತ್ರೀಪರ ಕಾಳಜಿಗಳನ್ನು ಕಾಣುತ್ತೇವೆ (ಇಂದಿರಾಬಾಯಿ, ವಾಗ್ದೇವಿ, ಭಾಗೀರಥಿ ಇತ್ಯಾದಿ). ಈ ನಾಟಕಗಳಲ್ಲಿ ಮತ್ತು ಕಾದಂಬರಿಗಳಲ್ಲಿ ಸ್ತ್ರೀಪರ ಹಾಗೂ ಪ್ರಗತಿಪರ ಪಾತ್ರಗಳೆಲ್ಲವೂ ಆಧುನಿಕ (ಇಂಗ್ಲೀಷ್) ಶಿಕ್ಷಣವನ್ನು ಪಡೆದಿರುವುದು ಯಾವ ಕಾರಣಗಳಿಗಾಗಿ ಒಂದು ಕಾಲಘಟ್ಟದಲ್ಲಿ ಭಾರತೀಯರು ಬ್ರಿಟಿಷರ ಆಳ್ವಿಕೆಯನ್ನು ಮತ್ತು ಇಂಗ್ಲೀಷ್ ಶಿಕ್ಷಣವನ್ನೂ ಮುಕ್ತವಾಗಿ ಸ್ವಾಗತಿಸಿದರು ಎಂಬ ಬಹು ಸಂಕೀರ್ಣ ಸಂಗತಿಯನ್ನು ನಮ್ಮ ಅರಿವಿಗೆ ತರುತ್ತವೆ. ಈ ನಾಟಕಗಳು ದಾಖಲಿಸುವ ಮತ್ತೂ ಒಂದು ಮೋಜಿನ (ಅಥವಾ ಖೇದದ) ಸಂಗತಿಯೆಂದರೆ, ೧೮೮೭ ರಲ್ಲಿ ಬಂದ ಸೂರಿಯವರ ನಾಟಕ ಕನ್ಯಾಶುಲ್ಕದ ಪದ್ಧತಿಯಿಂದ ಆಗುವ ಸ್ತ್ರೀಶೋಷಣೆಯನ್ನು ಚಿತ್ರಿಸಿದರೆ, ೧೯೦೭ ರಲ್ಲಿ (ಎಂದರೆ ಕೇವಲ ಎರಡು ದಶಕಗಳ ನಂತರ) ಬಂದ ನಾಟಕ ವರದಕ್ಷಿಣೆಯ ಕಾರಣದಿಂದಾಗುವ ಸ್ತ್ರೀಶೋಷಣೆಯನ್ನು ಚಿತ್ರಿಸುತ್ತದೆ. ಪ್ರಾಯಃ, ಆಂಗ್ಲ ಶಿಕ್ಷಣದಿಂದ ಸರಕಾರಿ ನೌಕರಿ ವ್ಯಾಪಕವಾಗಿ ದೊರೆಯಲು ಪ್ರಾರಂಭವಾದದ್ದು ಇಂದಿಗೂ ಅಲ್ಲಲ್ಲಿ ಉಳಿದಿರುವ ವರದಕ್ಷಿಣೆಯ ಪಿಡುಗಿಗೆ ಕಾರಣವಾಗಿರಬೇಕು.

ಸಂಕಲನದ ಇತರ ಎಂಟು ಲೇಖನಗಳು ಪ್ರಮುಖ ಆಧುನಿಕ ನಾಟಕಕಾರರಾದ ಸಂಸ, ಕೈಲಾಸಂ, ಶ್ರೀರಂಗ ಮುಂತಾದವರ ನಾಟಕಗಳ ವಸ್ತು ಮತ್ತು ಆ ನಾಟಕಗಳಲ್ಲಿ ಧ್ವನಿತವಾಗಿರುವ ಸ್ತ್ರೀಯನ್ನು ಕುರಿತ ನಿಲುವು ಇವುಗಳನ್ನು ಚರ್ಚಿಸುತ್ತವೆ. (ಕುತೂಹಲದ ಅಂಶವೆಂದರೆ, ಹೇಮಾ ಅನಕೃ ಅವರನ್ನೂ ನಾಟಕಕಾರರೆಂದು ಚರ್ಚಿಸುವುದು. ನನಗೆ ತಿಳಿದಂತೆ, ತರಾಸು ನಂತರ ಅನಕೃ ನಾಟಕಗಳನ್ನು ಗಂಭೀರವಾಗಿ ಚರ್ಚೆಗೆ ಒಳಪಡಿಸಿದವರು ಹೇಮಾ ಎಂದು ಕಾಣುತ್ತದೆ.) ವಿಮರ್ಶಕಿಯಾಗಿ ಹೇಮಾ ಅವರ ಒಂದು ಶ್ಲಾಘನೀಯ ಗುಣವೆಂದರೆ ಅವರು ಚರ್ಚೆಗೆ ತೊಡಗುವ ಮೊದಲು ಆ ವಿಷಯದ ಬಗ್ಗೆ ಇತರ ವಿಮರ್ಶಕರು ಏನು

ಹೇಳಿದ್ದಾರೆಂಬುದನ್ನು ಗಮನಿಸಿ, ಅವುಗಳಲ್ಲಿ ಸ್ವೀಕಾರಾರ್ಹವೆಂದು ಕಂಡ ಅಂಶಗಳನ್ನು ಸ್ವೀಕರಿಸಿ, ತಾವು ಒಪ್ಪದ ಅಂಶಗಳನ್ನು ಸಕಾರಣವಾಗಿ ಖಂಡಿಸಿ, ಅನಂತರ ತಮ್ಮ ವಾದವನ್ನು ಮುಂದುವರಿಸುವುದು.

ಈ ಸಂಕಲನದ ದೀರ್ಘ ಹಾಗೂ ಪ್ರಮುಖ ಲೇಖನಗಳೆಂದರೆ ಕೈಲಾಸಂ, ಶ್ರೀರಂಗ ಮತ್ತು ಕಾರ್ನಾಡರ ನಾಟಕಗಳನ್ನು ಚರ್ಚಿಸುವ ಲೇಖನಗಳು. ಈ ಲೇಖನಗಳು ಸರಿಸುಮಾರು ಈ ಮೂವರು ನಾಟಕಕಾರರ ಎಲ್ಲಾ ಕೃತಿಗಳನ್ನೂ ದೀರ್ಘವಾಗಿ ವಿಶ್ಲೇಷಿಸುತ್ತವೆ; ಈ ಕಾರಣದಿಂದಾಗಿ ಆಯಾಯಾ ನಾಟಕಕಾರರ ಅಧ್ಯಯನಕ್ಕೆ ಯೋಗ್ಯ ಪ್ರವೇಶವನ್ನು ಕಲ್ಪಿಸುತ್ತವೆ. ವ್ಯಾಪಕ ಚರ್ಚೆಯ ನಂತರ ಹೇಮಾ ಕೊಡುವ ಬಹುತೇಕ ನಿರ್ಣಯಗಳು ಸಾಧಾರವಾಗಿದ್ದು, ವಿಶ್ವಸನೀಯವಾಗುತ್ತವೆ. ಉದಾಹರಣೆಗೆ ಕೈಲಾಸಂ ಮತ್ತು ಶ್ರೀರಂಗರ ನಾಟಕಗಳ ಬಗ್ಗೆ, ಸ್ತ್ರೀದೃಷ್ಟಿಕೋನದಿಂದ ಅವರು ಕೊಡುವ ಈ ಬಗೆಯ ಕೆಲವು ತೀರ್ಮಾನಗಳು "(ಆಧುನಿಕತೆಯ ಬಗ್ಗೆ ಮತ್ತು ಸ್ತ್ರೀಶಿಕ್ಷಣದ ಬಗ್ಗೆ ಸಂಶಯಗಳಿದ್ದರೂ) ಕನ್ನಡ ನಾಟಕಗಳಲ್ಲಿ ಮೊಟ್ಟ ಮೊದಲು ವಾಸ್ತವವಾದೀ ನೆಲೆಯಲ್ಲಿ ಸ್ತ್ರೀಪಾತ್ರಗಳನ್ನು ಸೃಷ್ಟಿಸಿದ ಶ್ರೇಯಸ್ಸು ಕೈಲಾಸಂ ಅವರಿಗೆ ಸಲ್ಲುತ್ತದೆ" (ಪು. ೬೩); "ಶ್ರೀರಂಗರ ನಾಟಕದಲ್ಲಿ ಸಾಮಾನ್ಯವಾಗಿ ಅವರ ವ್ಯಕ್ತಿತ್ವದಲ್ಲಿಯ ಸೃಜನಶೀಲ ಮತ್ತು ಚಿಂತಕ ವ್ಯಕ್ತಿತ್ವಗಳ ನಡುವೆ ಸಂಘರ್ಷ ಕಂಡುಬರುತ್ತದೆ. (ಅವರ ನಾಟಕಗಳಲ್ಲಿ ವೈವಿಧ್ಯಪೂರ್ಣ ಸ್ತ್ರೀಪಾತ್ರಗಳಿದ್ದರೂ) ... ಗಂಡು-ಹೆಣ್ಣಿನ ಸಂಬಂಧವನ್ನು ಅವರ ಮೂಲ ಪ್ರವೃತ್ತಿ ಹಾಗೂ ಸಾಮಾಜಿಕ ಮೌಲ್ಯಗಳ ಜೊತೆಗೆ ಪರಿಶೀಲಿಸದೆ ತಮ್ಮ ತಲೆಯಲ್ಲಿರುವ ವಿಚಾರಗಳಿಗೆ ಮಾಧ್ಯಮವಾಗಿ ಮಾತ್ರ ಬಳಸಿಕೊಳ್ಳುತ್ತಾರೆ" (ಪು. ೧೩೬-೧೩೭); ಇತ್ಯಾದಿ.

ಆದರೆ, ಕೆಲ ಸಂದರ್ಭಗಳಲ್ಲಿ, ಹೇಮಾ ಅವರ ತೀರ್ಮಾನಗಳು (ಪ್ರಾಯಃ, ಸ್ತ್ರೀವಾದದ ಒತ್ತಡದಿಂದ) ದುಡುಕಿನದಾಗಿರುತ್ತವೆ ಎಂಬುದಕ್ಕೂ ಈ ಸಂಕಲನದಲ್ಲಿಯೇ ನಿದರ್ಶನಗಳು ದೊರೆಯುತ್ತವೆ. ಕಂಬಾರರ ನಾಟಕಗಳನ್ನು ಕುರಿತು ವಿಸ್ತೃತ ಚರ್ಚೆಯ ನಂತರ ಹೇಮಾ ಈ ತೀರ್ಮಾನಕ್ಕೆ ಬರುತ್ತಾರೆ : "ಹೆಚ್ಚೂ ಕಡಿಮೆ ಕಂಬಾರರ ಎಲ್ಲ ನಾಟಕಗಳಲ್ಲಿ ಪುರುಷ ಪಾರಮ್ಯ ಪ್ರಖರವಾಗಿ ಮೆರೆಯುತ್ತದೆ. ... ಪುರುಷರ ಲೈಂಗಿಕ ಸಾಮರ್ಥ್ಯವೇ ಪೌರುಷ ಎಂದು ಕಂಬಾರರ ಹೆಚ್ಚಿನ ನಾಟಕಗಳಲ್ಲಿ ಚಿತ್ರಿಸಲಾಗಿದೆ. ...(ಕಂಬಾರರು) ಊಳಿಗಮಾನ್ಯ ಪದ್ಧತಿಯನ್ನು ವಿರೋಧಿಸುತ್ತಾರೆ ಅನ್ನಿಸುವುದಿಲ್ಲ" (ಪು. ೨೦೧-೨೦೨); ಇತ್ಯಾದಿ. ಕಂಬಾರರ ನಾಟಕಗಳಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ, ಇಡೀ ನಾಟಕದ ಗತಿಯನ್ನು, ಅವರ ಆದ್ಯಂತಗಳನ್ನು ನಿರ್ಧರಿಸುವ 'ದೃಷ್ಟಿಕೋನ' ಯಾವುದು ಎಂಬ ಪ್ರಶ್ನೆ. ಸ್ತ್ರೀಯನ್ನು ಭೋಗವಸ್ತುವನ್ನಾಗಿ ಕಾಣುವ, ಲೈಂಗಿಕ ಸಾಮರ್ಥ್ಯವನ್ನು ಪೌರುಷದಂತೆ ಕಾಣುವ 'ಗೌಡ'ರು ಊಳಿಗಮಾನ್ಯ ವ್ಯವಸ್ಥೆಯ ಪ್ರತಿನಿಧಿಗಳು; ಮತ್ತು ಅವರು / ಅವರಂತಹ ಇತರ ಪಾತ್ರಗಳು ಎಲ್ಲಾ ನಾಟಕಗಳಲ್ಲಿಯೂ (ಮುಖ್ಯವಾಗಿ ಜೋಕುಮಾರಸ್ವಾಮಿ, ನಾಯೀಕಥೆ ನಾಟಕಗಳಲ್ಲಿ) ಸೋಲುತ್ತಾರೆ. ಈ ಸೋಲು ನಾಟಕಕಾರರಿಗೆ ಆ ವ್ಯವಸ್ಥೆಯ ಬಗ್ಗೆ ಇರುವ ಅಸಹನೆ ಮತ್ತು ತಿರಸ್ಕಾರಗಳನ್ನು ತೋರಿಸುತ್ತದೆ. ಆದ್ದರಿಂದ, (ಸುಮಿತ್ರಾಬಾಯಿಯವರು ಹೇಳುವಂತೆ) ಅವರ ಕಾವ್ಯದಲ್ಲಿಯಾಗಲೀ ಅಥವಾ ಹೇಮಾ ಅವರು ಹೇಳುವಂತೆ ಅವರ ನಾಟಕಗಳಲ್ಲಿಯಾಗಲೀ

ಕಂಬಾರರು ಊಳಿಗಮಾನ್ಯ ವ್ಯವಸ್ಥೆಯನ್ನು ವೈಭವೀಕರಿಸುತ್ತಾರೆಂದು ಹೇಳುವುದು ಅತ್ಯಂತ ಸರಳೀಕೃತ ಅಭಿಪ್ರಾಯವೆಂದು ನನಗೆ ತೋರುತ್ತದೆ.

ಇದೇ ನೆಲೆಯಲ್ಲಿ, ಪ್ರೀತಿ-ಮೆಚ್ಚುಗೆಗಳಿಂದ ಗಿರೀಶ ಕಾರ್ನಾಡರ ಎಲ್ಲಾ ನಾಟಕಗಳನ್ನೂ ಚರ್ಚಿಸುವ ಮತ್ತು ಆ ನಾಟಕಗಳಲ್ಲಿ ಕಂಡುಬರುವ ಸ್ತ್ರೀಪ್ರತಿಭಟನೆಯನ್ನು ಮತ್ತು ಸ್ತ್ರೀಪರ ಕಾಳಜಿಯನ್ನು ಗುರುತಿಸುವ ಹೇಮಾ ಕೊನೆಯಲ್ಲಿ "ಆದಾಗ್ಯೂ ಅವರು (ಕಾರ್ನಾಡರು) ನಮ್ಮ ಪಿತೃಪ್ರಧಾನ ಸಮಾಜದಲ್ಲಿಯ ಲಿಂಗ ತಾರತಮ್ಯವನ್ನು ಲಕ್ಷಿಸದಿರುವುದನ್ನು ಅಲಕ್ಷಿಸಲಾಗದು" (ಪು. ೧೮೫) ಎಂಬ ತೀರ್ಮಾನಕ್ಕೆ ಹೇಗೆ ಬರುತ್ತಾರೆ ಎಂಬುದೇ ಅರ್ಥವಾಗುವುದಿಲ್ಲ.

ಒಟ್ಟಾರೆಯಾಗಿ ಹೇಳುವುದಾದರೆ, ಅನೇಕ ಅಜ್ಞಾತ ಅಥವಾ ಅಲಕ್ಷಿತ ನಾಟಕಗಳನ್ನು ಗಂಭೀರವಾಗಿ ಪರಿಶೀಲಿಸುವ, ಸ್ತ್ರೀವಾದದ ಹಿನ್ನೆಲೆಯಲ್ಲಿ ಕನ್ನಡದ ಪ್ರಮುಖ ನಾಟಕಗಳನ್ನು ಆಳವಾಗಿ ವಿಶ್ಲೇಷಿಸುವ, ಕೆಲವು ಅಪವಾದಗಳನ್ನು ಹೊರತುಪಡಿಸಿದರೆ ತಮ್ಮ ವಿಮರ್ಶೆ-ತೀರ್ಮಾನಗಳಲ್ಲಿ ಸಾಧಾರಣವಾಗಿ ವಸ್ತುನಿಷ್ಠವಾಗಿರುವ, ಹೇಮಾ ಪಟ್ಟಣಶೆಟ್ಟಿಯವರ ಈ ವಿಮರ್ಶಾ ಸಂಕಲನ ಆಧುನಿಕ ಕನ್ನಡ ನಾಟಕಗಳ ಅಧ್ಯಯನಕ್ಕೆ ಒಂದು ಸೂಕ್ತ ಪ್ರವೇಶವನ್ನು ಕಲ್ಪಿಸುತ್ತದೆ ಎಂಬುದು ನಿಸ್ಸಂಶಯ.

■ ಡಾ. ಸಿ. ಎನ್. ರಾಮಚಂದ್ರನ್ : ೪೯, ೩ನೇ ಮೇನ್, ಡಾಲರ್ಸ್ ಕಾಲನಿ,
ಜೆ.ಪಿ.ನಗರ ೪ನೇ ಹಂತ, ಬೆಂಗಳೂರು-೫೬೦ ೦೭೮ ■

---

## *ಎರಡು ಕವಿತೆಗಳು* — ಸುಶೀಲಾ ಆರ್. ರಾವ್

---

### ೧. ಸಾಸಿವೆ ಹಾಡು

ಜಗದ್ವಂದ್ಯ
ಗೌತಮನ ಗಮನ
ಸೆಳೆದ ಸೆಳೆಮಿಂಚು
ಜಗದಗಲ
ಸಾವು ನೋವುಗಳೆಲ್ಲದರ
ಚಿರ ಸಂಕೇತ
ದುಂಡು ಚೆಲುವೆ

ಪುಟಾಣಿ ಧ್ಯಾನಲೀನೆ
ಅಡುಗೆ ಮನೆಯಲ್ಲಿ
ತಣ್ಣಗೆ ಮಿಣ್ಣಗಿನ
ಬೆಕ್ಕಿನಂತೆ
ಸೊಕ್ಕಿಲ್ಲದ
ಅನನ್ಯ ಸ್ಥಿತಿಗತಿ

ಒಂದೊಮ್ಮೆ ಕಾವೇರಿದಾಗ
ಕಮ್ಮನೆ ನುಲಿನುಲಿದು
ಮೇಲ್ಮುಖ ಸಿಡಿವ
ಮೇಲು ಬಂಡಾಯಗಾರ್ತಿ
ನಸುದನಿಯ ಕ್ರಾಂತಿಕಾರಿ
ನವ ಸಹಸ್ರಮಾನದ
ಹೊರಳಲ್ಲೂ
ಅನಿವಾರ್ಯ ಸೋಲಿಗೆ
ಕೊರಳೊಡ್ಡುವ ಅಬಲೆಯರ
ವಿಫಲಕ್ರಾಂತಿಗೆ
ನವ ಸಂಕೇತ ಹೇತು
ಮೆಚ್ಚು ಪಡಿಮೂಡಿಸಿದೆ
ಅದಕ್ಕೀ ಕವನ
ಸಂಮಾನ.

## ೨. ಕಾಲದ ಎರಡು ಚಿತ್ರಗಳು

೧

ಕಣ್ಣಾಮುಚ್ಚೆ ಕಾಡೆಗೂಡೆ
ಕೇಳಿ ಗುಟ್ಟಾದವರನ್ನು
ಮುಟ್ಟಲು ಕಣ್ಣುಬಿಟ್ಟಾಗ
ಸುತ್ತೆಲ್ಲಾ
ಇಲ್ಲದವರೇ ಎಲ್ಲ
ಸೋಜಿಗ
ಈ ಜಗ
ಗೊಂದಲಿಸಿ ಕೈಗಡಿಯಾರದತ್ತ
ಕಣ್ಣಾಡಿಸಿದಾಗ
ಠಾಕೋರೀಕಾಗಿ ಹತ್ತು
ಕಛೇರಿಯಲ್ಲಿ
ಹಾಜರಿ ಹೊತ್ತು!

೨

ಇತ್ತೀಚೆಗೆ ಮನೆಯ
ಧೂಳಿಡಿದ ಅಟ್ಟ
ಸರಸರನೆ ಮೇಲೇರಿ
ಸಹಜ ವಸ್ತು
ಸಂಗ್ರಹಾಲಯ
ಕೆದಕುತ್ತಿದ್ದವಳು
ಕಂಡದ್ದೊಂದು
ಮುರುಕು ಹಳೆಯ ಕೊಡೆ
ಅಪೂರ್ವ ಸ್ವರೂಪದ್ದನ್ನು.
ಕೈಗೆತ್ತಿಕೊಂಡೆ
ತಟ್ಟನೆ
ಕರಿ ಬಟ್ಟೆ ಕಡ್ಡಿಗಳು
ಕುಸಿದು
ನಡುವಿನ ಕೋಲಷ್ಟೇ
ಕೈಗೆ ಅಮರಿದಾಗ
ಆಧರಿಸಿ
ಮೆಲ್ಲ ಮೆಲ್ಲನೆ ಕೆಳಗಿಳಿದೆ.

■ **ಸುಶೀಲಾ ಆರ್. ರಾವ್ :**
'ದೇವಿಶ್ರೀ', ಬೈಲೂರು ಮಹಿಷಮರ್ದಿನಿ ದೇವಸ್ಥಾನದ ಬಳಿ, ಉಡುಪಿ-೫೭೬ ೧೦೧ ■

---

## *ಬದ್ಧತೆ*

— ಅಶೋಕ ನರೋಡೆ

---

ನನ್ನ ಕಾವ್ಯದ ಬದ್ಧತೆ
ಕೆದಕುವ ಸಂಗಾತಿಗಳೆ
ನನ್ನ ಕಾವ್ಯದ ಕುರಿತು ಖುದ್ದಾಗಿ
ನಾನೇ ಹೇಳುವುದೇನಿದೆ?
ಬರೆವ ಮುಂಚೆ ನನ್ನದು
ಬರೆದಾದ ಮೇಲೆ ನಿಮ್ಮದು ತಾನೆ?

ಜೀವನ ಪ್ರೀತಿಗೆ
ಬದುಕಿನ ಶ್ರದ್ಧೆಗೆ
ಭೂಮಂಡಲದ ಚಲನವಲನಕ್ಕೆ
ಬದ್ಧ ನನ್ನ ಕಾವ್ಯ

ಮೂಡಿ ಮುಳುಗುವ ಸೂರ್ಯ
ತೊಳಗಿ ಬೆಳಗುವ ಚುಕ್ಕಿ-ಚಂದ್ರಾಮ
ಬೀಸುವ ಗಾಳಿ ಸುರಿವ ಮಳೆ
ಹರಿವ ನದಿ ತೂರಿ ಬರುವ ಬೆಳಕು
ಪ್ರಕೃತಿ ವ್ಯಾಪಾರ ನಿಸರ್ಗ ನಿಯಮಕ್ಕೆ
ಪ್ರೀತಿ-ವಾತ್ಸಲ್ಯ ಶಾಂತಿ-ಸೌಹಾರ್ದತೆ
ಪರಸ್ಪರ ವ್ಯಕ್ತಿಗೌರವ ಬಂಧು-ಬಾಂಧವ್ಯಕ್ಕೆ
ಬದ್ಧ ನನ್ನ ಕಾವ್ಯ.

ಭಾರತೀಯ ಸಂವಿಧಾನಕ್ಕೆ ದೇಶದ
ಸಾರ್ವಭೌಮತ್ವಕ್ಕೆ
ಮನುಜಮತ ವಿಶ್ವಪಥಕೆ
ಬುದ್ಧ ಬಸವ ಬಾಪೂವಿನ ಆದರ್ಶಕ್ಕೆ
'ಮಾನವ ಕುಲಂ ತಾನೊಂದೆ ವಲಂ' ಕವಿವಾಣಿಗೆ
ಬದ್ಧ ನನ್ನ ಕಾವ್ಯ.

■ **ಡಾ. ಅಶೋಕ ನರೋಡೆ :**
'ಅಪೂರ್ವ', ೧೭, ಬಸವನಗರ ಬಡಾವಣೆ
ಮಹಾಲಿಂಗಪುರ-೫೮೭ ೨೧೩, ತಾ. ಮುಧೋಳ ■

## ರಾಮನವಮಿಯ ದಿನ

– ರಾಮಗಿರಿ ರವೀಂದ್ರ

ಶ್ರೀ ರಾಮಚಂದ್ರರು ಪರಾಶರದಲಿ
ಚಿರನಿದ್ರೆ ಮಲಗಿಯೇ ಬಿಟ್ಟರು; ಅಂದು ರಾಮನವಮಿ
ಸದಾ ಎಚ್ಚರದ ಘಳಿಗೆಯ ಕಿರಣಗಳನ್ನ
ಚರಣಗಳನ್ನ ಜೊತೆಗೊಯ್ದರು ಅಲ್ಲಿಯೂ ಬೆಳಕೆ.
    ಬೆಳಕ ಕಿಡಿ ಕಣ್ಣುಗಳು ಕಂಚಿನ ಕಂಠ
    ಜಟಾಪಟಿ ಸತ್ಯ ಜಿಗುಟು; ಎಂದೂ ಸೋಲದ
    ಜೀವ, ಹಿಮ್ಮೆಟ್ಟದ ಬದುಕಲ್ಲಿ
    ನಡೆದದ್ದು ಬಹು ದೂರ ಏಕಮುಖಿ ಒಬ್ಬಂಟಿ.
ಕತ್ತಿ ಚೂಪಿನ ಮೊನಚು ವಿಚಾರ
ಮೇಧಾವಿ ಮಹಾಚತುರ ಬುದ್ಧಿವಿಹಾರಿ;
ಕಾವ್ಯ ಒಗಟಲ್ಲ ಭಾವಗೀತೆಯು ಸಲ್ಲದು–
ಸತ್ಯ ನಿಲ್ಲುವ ಬಗೆಗೆ ಬದುಕು ಬರೀ ಹಾಡಲ್ಲ.
    ಯುದ್ಧ ಸದಾ ಬಯಲು ರಣರಂಗ
    ಬಿಟ್ಟ ಬಾಣವ ತೊಡದ ವೀರ ಗಂಭೀರ;
    ಈಗಲೂ ನಿಮ್ಮ ಹೆಜ್ಜೆ ಗುರುತುಗಳಿವೆ ಎದೆಯಲ್ಲಿ
    ಬಹು ಎತ್ತರಕೆ ಕೈಚಾಚಿ ಹಿಡಿದ ನಕ್ಷತ್ರಗಳೂ ಇವೆ ಬಾನಲ್ಲಿ.
ಶರ್ಮರೆ ರಾಮಚಂದ್ರರೆ ಇಗೋ ನಿಮಗೆ
ಕೊನೆಯ ನಮನ, ವಿದಾಯವು ಬರೀ ದೇಹಾಂತ್ಯಕ್ಕೆ;
ಪರಾಶರದಲಿ ನೀವಿದ್ದೀರಿ ಸದಾ ಆತ್ಮ-
ಸ್ವರೂಪಿ ಚಿತ್ತ ಸಹಜ ನಮ್ಮೊಳಗೆ.

■ ರಾಮಗಿರಿ ರವೀಂದ್ರ : 'ನಿರ್ಮಿತಿ', # ೧೧ ಎ (ಮಹಡಿ), ೪ ನೇ ಮಾಡೆಲ್ ಹೌಸ್ ಸ್ಟ್ರೀಟ್, ೧ ನೇ ಬ್ಲಾಕ್, ತ್ಯಾಗರಾಜನಗರ, ನರಸಿಂಹರಾಜ ಕಾಲೊನಿ, ಬೆಂಗಳೂರು - ೫೬೦ ೦೨೮ ■

---

## *ಜೇಬು + ಕೊಸರೊಂದು*

– ಆರ್. ನಿರ್ಮಲ

ಜೇಬು

ನಮ್ಮ ಅಂಗಿಗಳಿಗಾಗ ಜೇಬುಗಳೆ ಇರಲಿಲ್ಲ
ಮಾಡರ್ನ್ ಹುಡುಗಿಯರ ಅಂಗಿಯಲಿ
ಹತ್ತಾರು ಜೇಬು ಚಂದ.
    ಆ ಕಾಲದ ಬದುಕಲ್ಲಿ
    ಜೇಬುಗಳೆ ಇರಲಿಲ್ಲ.
    ಸತ್ತ ಹೆಣ ನಾವು
    ಸಮಾಜ ಜಾಣ ಕುರುಡಾಗಿತ್ತು
    ಜಾಣ ನೋಟದಲಿ
    ಬಿರಿಬಿಸಿಲ ಅಂದದಲಿ
    ನೋಡುತ್ತಲೇ ಇತ್ತು.
ಸೀರೆಗೆ ರವಿಕೆಗೆ ಲಂಗಕ್ಕೆ
ಬೇರೆ ಬೇರೆ ಕೆಲಸಗಳೂ ಇತ್ತು.
    ಹೆಣ್ತನವ ಮೀರಿ ಮನುಷ್ಯರಾಗಲು
    ಬಿಡಲೇ ಇಲ್ಲ,
    ಇನ್ನು ನಮಗೇಕೆ ಜೇಬು
    ಹಾಡಬನ್ನಿ ಮರಣಗೀತೆ.

**ಕೊಸರೊಂದು**

ಗಂಡನ ಕಾಟವಿಲ್ಲದ ತಾಯ್ತನ ಬೇಕು,
ವಿದ್ಯೆಯ ಹಂಗಿಲ್ಲದ ವೃತ್ತಿ ಬೇಕು,
ಇಬ್ಬರ ಹೊಟ್ಟೆ ತುಂಬಿಸಬೇಕು,
ಸಮಾಜಕ್ಕೆ ಸೆಡ್ಡು ಹೊಡೆದು ಬಾಳಬೇಕು,
ಲೋಹಿಯಾ ಕಿಷನ್ ಹೇಳಿದ್ದು ಇದನ್ನೇ.
ಮಾಡುವ ನಿಲ್ಲುವ ಛಾತಿ ಬೇಕು; ಬರಲಿ
ಬೇಗ.

■ ಆರ್. ನಿರ್ಮಲ :
# ೯೮೬, ಚಾರ್ವಾಕ, ಪಂಚಮಂತ್ರ ರಸ್ತೆ,
ಕುವೆಂಪುನಗರ, ಮೈಸೂರು-೨೩ ■

---

## *ಕಥಾನಗರ - ೧*

---

ಉರ್ದೂ : **ಜೋಗಿಂದರ್ ಪಾಲ್** ಕನ್ನಡ : **ಅಬ್ದುಲ್ ಮಜೀದ್ ಖಾನ್**

---

### ೧. ನೆಲೆಸಿದವರು

ನನ್ನ ಕಾದಂಬರಿಯ ನಾಯಕ-ನಾಯಕಿ ನನ್ನ ಮೇಲೆ ಕೋಪಿಸಿಕೊಂಡಿದ್ದರು. ಏಕೆಂದರೆ. ಅವರ ವಿವಾಹದ ವಿದ್ಯಮಾನಗಳು ಸಹಜ ರೀತಿಯಲ್ಲಿ ಪರಿಣಾಮಕಾರಿಯಾಗುವುದರಲ್ಲಿದ್ದಾಗ. ಅವರು ಕಷ್ಟಪಟ್ಟು ಸಫಲಗೊಳಿಸಲಿದ್ದ ಕಾರ್ಯವನ್ನು ನಾನು ಕೆಡಿಸಿಬಿಟ್ಟಿದ್ದೆ, ಮತ್ತು ನನ್ನ ಆದ್ಯತೆಗಳನ್ನು ಕಾದಂಬರಿಯ ಮೇಲೆ ಹೇರಿ, ಇಬ್ಬರನ್ನೂ ಕೊನೆಯ ಪುಟದ ವರೆಗೂ ಪರಸ್ಪರ ದೂರವಿಡಲು ಪಟ್ಟುಹಿಡಿದೆ.

ಆದರೆ ಅವರಿಬ್ಬರೂ ಸುಸಮಯದ ನಿರೀಕ್ಷೆಯಲ್ಲಿದ್ದರು. ಒಂದು ದಿನ ನನ್ನ ಕಣ್ಣು ತಪ್ಪಿಸಿ ಅವರೆಲ್ಲೋ ಮಾಯವಾದರು. ನಾನು ಕಾದಂಬರಿಯ ಹಸ್ತಪ್ರತಿಯ ಒಂದೊಂದು ಪಂಕ್ತಿಯಲ್ಲೂ ಹುಡುಕಾಡಿದೆ. ಪ್ರತಿಯೊಂದು ಹಂತದಲ್ಲೂ ಅವರ ಹೆಸರುಗಳ ಮರೆಯಲ್ಲಿ ಅವರನ್ನು ಹುಡುಕಿದೆ. ಅವರು ಅಲ್ಲಿದ್ದರೆ ತಾನೆ, ಸಿಗುವುದು ?

ನನಗೆ ತುಂಬ ಪಶ್ಚಾತ್ತಾಪ ಆಗತೊಡಗಿತು.

ಒಂದು ವೇಳೆ ಅವರೆಲ್ಲಾದರೂ ನನಗೆ ಸಿಗುತ್ತಿದ್ದರೆ ನಾನು ಕೂಡಲೇ ಅವರ ವಿವಾಹ ಮಾಡಿಸಿಬಿಡುತ್ತಿದ್ದೆ. ಆದರೆ ಈಗೇನೂ ಮಾಡುವಂತಿರಲಿಲ್ಲ... ನಾನು ತಲೆ ಮುಖ ಮುಚ್ಚಿಕೊಂಡು ಮಲಗಿಬಿಟ್ಟೆ.

ನಿಮಗೆ ಸೋಜಿಗವಾಗಬಹುದು. ಏಕೆಂದರೆ, ಹಲವು ವರ್ಷಗಳ ನಂತರ. ಒಂದು ದಿನ ಅಕಸ್ಮಾತ್ ಅವರು ನನಗೆ ನನ್ನ ನಗರದಲ್ಲೇ ಸಿಕ್ಕರು.

ಇಲ್ಲ..., ಅವರು ತುಂಬ ಆದರದಿಂದ ನನ್ನನ್ನು ಭೇಟಿಯಾದರು. ಮತ್ತು ನನ್ನನ್ನು ತಮ್ಮ ಮನೆಗೆ ಕರೆದೊಯ್ದರು.

ನನ್ನ ಕಾದಂಬರಿಯ ಹಾಳೆಗಳಿಂದ ಹೊರಬಿದ್ದ ಕೂಡಲೇ ಅವರು ಮದುವೆಯಾಗುವ ನಿರ್ಧಾರ ಕೈಗೊಂಡಿದ್ದರು. ಇಷ್ಟು ವರ್ಷಗಳ ನಂತರ ಮೂರು ಹೂವಿನಂತಹ ಮಕ್ಕಳ ತಂದೆತಾಯಿಯಾಗಿದ್ದರು. ಅವರ ಮನೆಮಾರು ಚಂದದ ನೆಲೆಯಾಗಿತ್ತು.

ಇಲ್ಲ..., ತಮ್ಮ ದಾಂಪತ್ಯದಲ್ಲಿ ಅವರು ಅಷ್ಟೊಂದು ಸಫಲರಾದುದನ್ನು ಕಂಡು. 'ಮತ್ತೆ ನನ್ನ ಕಾದಂಬರಿಯೊಳಗೆ ಮರಳಿ ಬನ್ನಿ'. ಎಂದು ಅವರಿಗೆ ಹೇಳುವ ಧೈರ್ಯ ನನಗಾಗಲಿಲ್ಲ.

## ೨. ಗ್ರೀನ್‌ಹೌಸ್ ಇಫೆಕ್ಟ್

ಪರಿಸರ ಮಾಲಿನ್ಯ ಕುರಿತ ತನ್ನ ಭಾಷಣವನ್ನು ಸಾಮಾನ್ಯ ಜನರೂ ಅರ್ಥಮಾಡಿಕೊಳ್ಳಬೇಕೆಂಬ ಉದ್ದೇಶದಿಂದ, ವಿಜ್ಞಾನಿ ಪದೇ ಪದೇ ದೇವರು ಮತ್ತು ಧರ್ಮದ ನೆರವು ಪಡೆಯುತ್ತಿದ್ದ. ಕೊನೆಗೆ ಅಂತಹದೇ ಒಂದು ವಿಷಯ ತಲೆ ಎತ್ತಿದಾಗ, ಅವನು ಸಭಿಕರಿಗೆ ತಿಳಿಸತೊಡಗಿದ– "ಪಾಪ ಮತ್ತು ಮಲಿನತೆಯಿಂದ ಉಂಟಾಗುವ ಯಾತನೆ ಮಾನವನ ಹತೋಟಿಗೆ ಬಾರದಿರುವಾಗ, ದೇವರು ಖುದ್ದಾಗಿ ಆಕಾಶದಿಂದ ನಮ್ಮ ಪ್ರಪಂಚಕ್ಕೆ ಇಳಿದುಬರುತ್ತಾನೆ..."

ಅದನ್ನು ಸಹಿಸಲಾರದೇ ಯಾರೋ ಒಬ್ಬ ದನಿ ಎತ್ತಿದ. "ನಾನೂ ಭಗವದ್ಗೀತೆಯಲ್ಲಿ ಇದನ್ನೇ ಓದಿದ್ದೇನೆ. ಆದರೆ ಇದು ನಿಜಕ್ಕೂ ಸರಿಯಾಗಿದ್ದರೆ, ಈಗ ಅವನೇಕೆ ಇಳಿದು ಬರುವುದಿಲ್ಲ ?"

ವಿಜ್ಞಾನಿ ಮುಗುಳ್ನಗುತ್ತಾ ನುಡಿದ. "ಅವನು ಹಲವು ಬಾರಿ ಅವತರಿಸಿದ್ದನೆಂದು ನಾನು ಕೇಳಿದ್ದೇನೆ. ಆದರೆ ಈಗ ಅವನೇನು ಮಾಡಬಲ್ಲ ? ನವಮಾನವ ಅವನ ದಾರಿ ಅಡ್ಡಗಟ್ಟಿದ್ದಾನೆ. ಈ ಮನುಷ್ಯ ಪ್ರಪಂಚದ ಸುತ್ತ ಅತಿ ಎತ್ತರದ ವರೆಗೆ ಮಲಿನತೆಯ ಎಂತಹ ದಪ್ಪನೆಯ ಮತ್ತು ಪಕ್ಕಾ ಛಾವಣಿ ಕಟ್ಟಿಕೊಂಡಿದ್ದಾನೆಂದರೆ, ದೇವರು ಪ್ರತಿ ಸಲವೂ ಅಸಹಾಯಕನಾಗಿ ಅಲ್ಲಿಂದಲೇ ಹಿಂದಿರುಗಿಬಿಡುತ್ತಾನೆ.

## ೩. ಮಾತು ಗೀತು

ನಾನು ಮನೆ ಮಂದಿಯೊಡನೆ ಜಗಳಾಡಿ ನನ್ನ ಫ್ಲ್ಯಾಟಿನ ಛಾವಣಿಯ ಮೇಲೆ ಬಂದೆ. ಮತ್ತು ಅಲ್ಲೇ ಒಂದು ಆರಾಮಕುರ್ಚಿಯಲ್ಲಿ ಕುಳಿತು, ಕಾಲು ಚಾಚಿ, ನನ್ನ ಮತ್ತು ಅವರುಗಳ ವಾಕ್ಯಗಳನ್ನು ಕೋಪದ ಬೀಸುಗಲ್ಲಿನಲ್ಲಿ ಬೀಸುತ್ತಾ ಇರುವಾಗ ನನಗೆ ಮಂಪರು ಹತ್ತಿತು.

ಇನ್ನೂ ನನ್ನ ಕಣ್ಣು ಸಂಪೂರ್ಣ ತೆರೆದಿರಲಿಲ್ಲ. ಅಷ್ಟರಲ್ಲೇ... ಎದುರು ಪಾರ್ಕಿನಲ್ಲಿರುವ ನನ್ನ ಪ್ರೀತಿಪಾತ್ರ ಅರಳಿಯ ಮರ ತನ್ನ ಮೀಸೆ ಗಡ್ಡಗಳಿಂದ ನಗುತ್ತಾ ತನ್ನ ಮೇಲೆ ಬಾಗಿ ಬರತೊಡಗಿದೆ ಎಂದು ನನಗನ್ನಿಸಿತು.

"ನೀನು ವಿಪರೀತ ಮಾತಾಡುತ್ತೀಯೆ.", ಅದು ನನಗೆ ಹೇಳತೊಡಗಿತು. "ಇತ್ತ ನೋಡು. ನಾನೆಂದಾದರೂ ಮಾತಾಡುತ್ತಿದ್ದುದನ್ನು ನೀನು ಕೇಳಿರುವೆಯಾ ?"

"ಆದರೆ...!"

"ಮಾತಾಡಿ ಮಾತಾಡಿ ನೀವು ಮಾನವ ಜನರು ಒಬ್ಬರಿನ್ನೊಬ್ಬರಿಗೆ ಅಪರಿಚಿತರಾಗುತ್ತೀರಿ."

## ೪. ತರ್ಕ

ನಾನು ಯಾರನ್ನಾದರೂ ಭೇಟಿ ಮಾಡಿದಾಗ, ಒಂದೊಮ್ಮೆ ಆತನನ್ನು ಖಂಡಿತವಾಗಿಯೂ ಎಲ್ಲೋ ಭೇಟಿಯಾಗಿದ್ದೆ ಎನಿಸುತ್ತದೆ– ಎಲ್ಲಿ ?– ನಾನವನನ್ನು ಭೇಟಿ ಮಾಡಿಯೇ ಇಲ್ಲ, ಎಂದ ಮೇಲೆ 'ಎಲ್ಲಿ' ಎಂಬುದನ್ನು ಹೇಗೆ ಹೇಳಲಿ ?–

ವಾಸ್ತವವೇನೆಂದರೆ, ಯಾವತ್ತು ನಾನು ಪ್ರಪಂಚದ ಪ್ರತಿಯೊಬ್ಬ ಮನುಷ್ಯನನ್ನೂ ಪ್ರೀತಿಸುವೆನೆಂದು ನಿರ್ಧರಿಸಿದೆನೋ, ಅಂದಿನಿಂದ ಪ್ರತಿಯೊಬ್ಬನೂ ಪರಿಚಿತನಂತೆ ಕಾಣತೊಡಗಿದ್ದಾನೆ. ಆದರೆ ಸ್ವಲ್ಪವೇ ಪರಿಚಿತ, ನಾನವನನ್ನು ಸ್ವಲ್ಪ ಸ್ವಲ್ಪ ಗುರುತಿಸುತ್ತೇನೆ, ಎನ್ನುವಷ್ಟು.

ಏನು ? ತನ್ನವರು ?... ಅದೇ ಒಂದು ದೊಡ್ಡ ತೊಂದರೆ, ಎಂದಿನಿಂದ ನಾನು ಎಲ್ಲರನ್ನೂ ಪ್ರೀತಿಸಲು ಪ್ರಾರಂಭಿಸಿದೆನೋ, ಅಂದಿನಿಂದ ನಾನು ನನ್ನವರನ್ನು ಸಹ ಸ್ವಲ್ಪವೇ ಗುರುತಿಸುತ್ತೇನೆ– ಹೌದು, ತಮ್ಮಾ, ಎಷ್ಟೆಂದರೆ– ಪರಕೀಯರನ್ನು ಗುರುತಿಸುವಷ್ಟು...

ಮತ್ತೆ ?– ಮತ್ತೇನೆಂದರೆ, ನನ್ನವರು ನನಗೆ ಅನ್ಯರಾಗಿ ಕಾಣತೊಡಗಿದ್ದಾರೆ.

## ೫. ಪ್ರಸಾದ

ನಾವು ಮೊದಲು ದೇವರ ಎದುರು ಸಾಷ್ಟಾಂಗ ಬಿದ್ದೆವು. ನಂತರ ಅವನ ಆರತಿ ಎತ್ತಿದೆವು. ಅರ್ಚಕ ಮಹಾಶಯರು ನಮ್ಮನ್ನು ಭೋಜನಕ್ಕೆ ಕೂರಿಸಿ, ಎಲ್ಲರಿಗೂ ಪ್ರಸಾದ ಹಂಚತೊಡಗಿದರು. ನಾವು ಅದನ್ನು ವಿಧೇಯತೆಯಿಂದ ಸ್ವೀಕರಿಸಿದೆವು. ಆದರೆ ಅದೆಷ್ಟು ಸ್ವಲ್ಪ ಇತ್ತೆಂದರೆ, ಒಂದು ತುತ್ತಿನಷ್ಟೂ ಆಗಲಿಲ್ಲ.

ನಮ್ಮ ಕಾರ್ಖಾನೆಯ ಒಬ್ಬ ಸಹೋದ್ಯೋಗಿ ನನ್ನ ಸಮೀಪ ಸರಿದು, ಬಲು ಖಾರವಾಗಿ ಹೇಳತೊಡಗಿದ, "ಯಾವಾಗಲೂ ಹೀಗೇ ಆಗುವುದು. ಮಾಲೀಕ ನಮ್ಮ ಕಾರ್ಖಾನೆಯವನಾಗಿರಲಿ ಅಥವಾ ಇಡೀ ವಿಶ್ವದ ಒಡೆಯನಾಗಿರಲಿ, ಪೂರ್ಣ ಸಂಬಳದ ಬದಲು ನಮಗೆ ಪ್ರಸಾದವನ್ನೇ ನೀಡಿ, ಏನಾದರೂ ಸಬೂಬು ಹೇಳುತ್ತಾನೆ."

## ೬. ಮಾನ್ಯತೆ

ಭಗವಾನ್ ಶ್ರೀರಾಮ ಬಾಲ್ಯದಲ್ಲಿ ಆಕಾಶದಷ್ಟು ಚಂದ್ರನಿಗಾಗಿ, ಮತ್ತು ದೊಡ್ಡವರಾದ ಮೇಲೆ ಕೇವಲ ಮನೆಯಷ್ಟು ನೆಲ*ಕ್ಕಾಗಿ ರೋದಿಸುತ್ತಿದ್ದರು.

(*ಸೀತಾಮಾತೆಯನ್ನು ನೆಲದ ಮಗಳೆಂದು ನಂಬಲಾಗಿದೆ.)

ತಮ್ಮ ಎರಡೂ ಅಭಿಲಾಷೆಗಳಲ್ಲಿ ಶ್ರೀರಾಮ ವಿಫಲರಾದುದನ್ನು ಕಂಡು ಕಿರುಕುಳ ನೀಡುವ ಜನರು ಅವರನ್ನು ದೇವರೆಂದು ಗೌರವಿಸಿದರು.

## ೭. ದೃಷ್ಟಿಕೋನ

ನಾನು ಕುರುಡನಿದ್ದೆ. ಆದರೆ ಒಂದು ಬ್ರಿಟಿಷ್ 'ನೇತ್ರನಿಧಿ'ಯಿಂದ ಪಡೆದುಕೊಂಡ ಕಣ್ಣುಗಳನ್ನು ನನ್ನ ಕಣ್ಣುಗೂಡುಗಳಲ್ಲಿ ಜೋಡಿಸಿದಾಗ ನನಗೆ ಎಲ್ಲವೂ ಸ್ಪಷ್ಟವಾಗಿ ಕಾಣಿಸತೊಡಗಿತು.

ಆಗ ನನಗೆ ಅನಿಸಿತು : ಇನ್ನೊಬ್ಬನ ದೃಷ್ಟಿಕೋನವನ್ನು ತನ್ನದಾಗಿಸಿಕೊಂಡಾಗಲೂ ಕುರುಡುತನ ದೂರವಾಗುತ್ತದೆ.

## ೮. ಎಲ್ಲಿ ?

ನಾನು ನನ್ನ ಮಾರ್ಗದರ್ಶಿಯ ಜೊತೆ ಮಂಗಳ ಗ್ರಹದ ಆಡಳಿತ ಕೇಂದ್ರದಲ್ಲಿ ವಿಹರಿಸುತ್ತಿದ್ದೆ.

"ಇದು ನಮ್ಮ ಪ್ರಾರ್ಥನಾ ಮಂದಿರ."

ನಾವಿಬ್ಬರೂ ಆ ಮಂದಿರದೊಳಗೆ ಹೋದೆವು. ಅಲ್ಲಿ ಬಹುಜನರು ಭೂಮಿಯ ಕಡೆ ಕೈಚಾಚಿ ತಮ್ಮ ಸಣ್ಣಪುಟ್ಟ ಸಂತಸಗಳ ಈಡೇರಿಕೆಗಾಗಿ ದೇವರನ್ನು ಪ್ರಾರ್ಥಿಸುತ್ತಿದ್ದರು.

"ಅಲ್ಲಿ ನಮ್ಮ ದೇವರಿದ್ದಾನೆ," ಮಾರ್ಗದರ್ಶಿ ಭೂಗ್ರಹದ ಕಡೆ ಸನ್ನೆ ಮಾಡುತ್ತ ಗೌರವದಿಂದ ತನ್ನ ತಲೆ ತಗ್ಗಿಸಿದ.

ನಾನು ಯೋಚಿಸತೊಡಗಿದೆ, 'ಆದರೆ, ಅದು ನಾವು ವಾಸಿಸುವ ಜಾಗ. ಭೂಮಿಯ ಮೇಲೆ ಇದೇ ವೇಳೆಯಲ್ಲಿ ನನ್ನ ಸೋದರರು ಮಂಗಳ ಗ್ರಹದ ಕಡೆ ತಮ್ಮ ಕೈಗಳನ್ನೆತ್ತಿ ಸೌಖ್ಯಕ್ಕಾಗಿ ದೇವರನ್ನು ಪ್ರಾರ್ಥಿಸುತ್ತಿರಬಹುದು.'

■ ಪ್ರೊ. ಅ. ಮ. ಖಾನ್ :
# ೮/೧, ಆರ್.ಪಿ. ಲೇಔಟ್, ಕುಮಾರ ಪಾರ್ಕ್ ವೆಸ್ಟ್, ಬೆಂಗಳೂರು-೫೬೦ ೦೨೦ ■

'ನನ್ನ ಶಾಲಾ ಗುರುಗಳು' ಮಾಲಿಕೆ: ಗೌರವ-೧೧

## ನನ್ನ ವಿದ್ಯಾ ಗುರುಗಳು

— ಎಲ್. ವಿ. ಶಾಂತಕುಮಾರಿ

ನನ್ನ ವಿದ್ಯಾಗುರುಗಳ ಬಗೆಗೆ ಹೇಳುವ ಮೊದಲಿಗೆ ನನ್ನ ವಿದ್ಯಾಭ್ಯಾಸದ ರೀತಿಯನ್ನು ಒಂದೆರಡು ಮಾತಿನಲ್ಲಿ ಹೇಳಿಬಿಡುತ್ತೇನೆ. ನಾವು ಓದುವ ಕಾಲಕ್ಕೆ ಮೊದಲನೇ ಇಯತ್ತೆಗೆ ಸೇರಿಸಲು ಮಕ್ಕಳಿಗೆ ಐದು ವರ್ಷ ಹತ್ತು ತಿಂಗಳಾಗಬೇಕೆಂಬ ನಿಯಮವಿರಲಿಲ್ಲ. ಮಕ್ಕಳು ಮೂರು ವರ್ಷ ತುಂಬಿದ ಕೂಡಲೇ ಮೊದಲನೆ ಇಯತ್ತೆಗೆ ಸೇರಿ, ನೇರವಾಗಿ 'ಆಟ, ಊಟ, ಪಾಠ' ಎಂದು ಕಲಿಯತೊಡಗುತ್ತಿದ್ದರು. ಹಾಗೆಯೇ ನಾನೂ ಕೂಡ, ತುಮಕೂರಿನಲ್ಲಿ ಆಗ ತಾನೇ ಆರಂಭವಾಗಿದ್ದ 'ಹಿಂದೂ ಗುರುಕುಲ' ಎಂಬ ಶಾಲೆಗೆ ಸೇರಿದೆ.

ನನ್ನ ತಂದೆ ಲಕ್ಕೇನಹಳ್ಳಿ ವೆಂಕಟರಾಮಯ್ಯನವರು ತುಮಕೂರಿನಲ್ಲಿ ಹಲವಾರು ವರ್ಷ ವಕೀಲಿ ವೃತ್ತಿ ನಡೆಸುತ್ತಿದ್ದರು. ಎರಡು ಎರಡೂವರೆ ವರ್ಷದ ನನಗೆ ಆ ಕರಿಯ ಸ್ಲೇಟು, ಬಣ್ಣದ ಬಳಪಗಳೆಂದರೆ ಅದೆಂಥಹದೋ ಆಕರ್ಷಣೆ. ನಮ್ಮ ತಂದೆ ಆ ಕರಿಯ ಹಲಗೆಗಳ ಮೇಲೆ ಅಕ್ಷರಗಳನ್ನು ಬರೆದು ತಿದ್ದಲು ಕೊಡುತ್ತಿದ್ದರು. ತಿದ್ದುವುದು, ಅಳಿಸುವುದು ಮತ್ತೆ ಬರೆಯುವುದು ನನಗೆ ಅದೊಂದು ಅತ್ಯಂತ ಪ್ರೀತಿಯ ಆಟವೆನಿಸುತ್ತಿತ್ತು. ತಂದೆಯ ಆಫೀಸಿನಲ್ಲಿ ಎಷ್ಟು ಜನ ಕಕ್ಷಿಗಾರರಿದ್ದರೂ ನಾನು ಪುಟ್ಟ ಕರುವಿನಂತೆ ನುಗ್ಗಿ ಹೊಸ ಹೊಸ ಅಕ್ಷರ ಬರೆಸಿಕೊಂಡು ಬರುತ್ತಿದ್ದೆ. ದೊಡ್ಡ ಅವಿಭಕ್ತ ಕುಟುಂಬದಲ್ಲಿ ಅಮ್ಮನಿಗೆ, ಅಡಿಗೆಮನೆ, ಮಡಿ ಹುಡಿ ಎಂದು, ಬೇರೆ ಯಾವುದಕ್ಕೂ ಬಿಡುವು ಸಿಗುತ್ತಿರಲಿಲ್ಲ. ಸಿಕ್ಕರೂ ನನಗೆ ಅಮ್ಮನ ಕೈಲಿ ಹೇಳಿಸಿಕೊಳ್ಳುವುದು ಬೇಕಿರಲಿಲ್ಲವೇನೋ. ಅಂತೂ, ಆರು ತಿಂಗಳಲ್ಲಿ ಅದು ಹೇಗೋ, ನಾನೇ ಕಲಿತೆನೋ, ಅಪ್ಪ ಕಲಿಸಿದ ರೀತಿಯೇ ಹಾಗಿರುತ್ತಿತ್ತೋ, ಕನ್ನಡ, ಇಂಗ್ಲಿಷ್, ಹಿಂದೀ ಅಕ್ಷರಗಳನ್ನು ಕಲಿತುಬಿಟ್ಟಿದ್ದೆ ಎಂದು ಹೇಳಿದರೆ ಈಗ ಯಾರೂ ನಂಬುವುದಿಲ್ಲ.

ಭಾನುವಾರಗಳಂದು ಕೋರ್ಟಿಗೆ ರಜ ಇದ್ದಾಗ ಎಲ್ಲ ಮಕ್ಕಳನ್ನೂ ಕೂಡಿಸಿಕೊಂಡು ಮೊದಲಿಗೆ ಕಲಿಸಿಕೊಡುತ್ತಿದ್ದುದು ಎಂದರೆ ಸೊನ್ನೆ ಬರೆಯುವುದು. ಅಪ್ಪ ಇದನ್ನು ಕುಂಬಳಕಾಯಿ ಬರೆಯಿರಿ ಎಂದು ಹೇಳಿ ಸೊನ್ನೆ ಬರೆಸುತ್ತಿದ್ದರು. ಆ ಸೊನ್ನೆಗೆ ಮೇಲೊಂದು ಗೆರೆ, ಅಂದರೆ ಅದರ ಬಾಯಿಗೆ ಬರೆ ಎಳೆಯಿರಿ ಎನ್ನುತ್ತಿದ್ದರು. ನೋಡಿ ಈಗ 'ರ' ಆಯಿತು, 'ರ' ಕ್ಕೆ ಮಧ್ಯೆ ಹೊಟ್ಟೆಗೊಂದು ಚುಕ್ಕೆ ಇಡಿ, 'ಠ' ಆಯಿತು ಎನ್ನುತ್ತಿದ್ದರು. ಒಂದು ಸೊನ್ನೆಯಿಂದ ಅದೆಷ್ಟು ಸುಲಭವಾಗಿ ಅದೆಷ್ಟೊಂದು ಅಕ್ಷರಗಳನ್ನು ಕಲಿಸುತ್ತಿದ್ದರು ಎಂದು ನೆನಪಿಸಿಕೊಂಡರೆ ಎಷ್ಟೋ ದಿನ ನನಗೆ ಆಶ್ಚರ್ಯವಾಗುತ್ತಿತ್ತು. ಇಂಗ್ಲಿಷ್ ಅಕ್ಷರಗಳನ್ನಂತೂ ಇನ್ನೂ ಸುಲಭವಾಗಿ ಕಲಿಸಿಬಿಡುತ್ತಿದ್ದರು. ಅಪ್ಪ ಲಾಯರ್ ಆಗುವ ಬದಲು ಮೇಷ್ಟ್ರಾಗಿದ್ದಿದ್ದರೆ ಚೆನ್ನಾಗಿತ್ತು ಎನಿಸುತ್ತಿತ್ತು. ಪ್ರತಿ ಭಾನುವಾರ, ಎಲ್ಲ ಲಾಯರ್ ಮಕ್ಕಳಿಗೂ ಉಕ್ತಲೇಖನ, ಸ್ಪೆಲ್ಲಿಂಗ್, ಅಲ್ಪ ಸ್ವಲ್ಪ ವ್ಯಾಕರಣ (ಕ್ಯಾ ಕರ್‌ನಾ? ಎನ್ನುತ್ತಿದ್ದರು) ತಮಾಷೆಯಾಗಿ ಕಲಿಸುತ್ತಿದ್ದರು. ಮೂರನೆ ವರ್ಷ ಕಳೆದ ನಂತರ ನನ್ನನ್ನು 'ಹಿಂದೂ ಗುರುಕುಲ' ಶಾಲೆಗೇನೋ ಸೇರಿಸಿದರು, ಅಲ್ಲಿ ನನಗೆ ನೆನಪಿರುವಂತೆ ಮೊದಲು ನಾವು ಮೂರು, ನಾಲ್ಕು ಜನ ಹೆಣ್ಣುಮಕ್ಕಳು

ಮಾತ್ರ ಸೇರಿಕೊಂಡಿದ್ದವರು. ಆರು ತಿಂಗಳು ಕಳೆಯುವುದರಲ್ಲಿ, ಆಗ ನಿಗದಿ ಪಡಿಸಿದ್ದ ಒಂದನೆಯ ಪುಸ್ತಕವನ್ನು ಓದುವುದು, ಬರೆಯುವುದು, ಪ್ರಶ್ನೆ ಉತ್ತರ ಎಲ್ಲ ಮುಗಿಸಿಬಿಟ್ಟಿದ್ದರಿಂದ ಡಬಲ್ ಪ್ರಮೋಷನ್ ಎಂದು ಎರಡನೆಯ ತರಗತಿಗೆ ಕಳಿಸಿದರು ನನ್ನನ್ನು. ನಂತರ ಮೈಸೂರಿನಲ್ಲಿದ್ದ ನನ್ನ ಅಜ್ಜಿಗೆ (ತಾಯಿಯ ತಾಯಿ) ತೀರಾ ಆರೋಗ್ಯ ಸರಿಯಿಲ್ಲದಿದ್ದ ಕಾರಣ, ಅಮ್ಮ ಮೈಸೂರಿಗೆ ಬರಬೇಕಾಯಿತು. ಅವರ ಮೈಸೂರು, ತುಮಕೂರಿನ ಓಡಾಟದಲ್ಲಿ, ನನ್ನ ಪ್ರೈಮರಿ ಶಾಲೆಯ ವಿದ್ಯಾಭ್ಯಾಸ ಸಂಪೂರ್ಣ ಮೂಲೆಗುಂಪಾಯಿತು. 'ಹಿಂದೂ ಗುರುಕುಲ'ದ ನೆನಪಾಗಿ ಈಗಲೂ ಬೆಳ್ಳಿಯ ಮಡಲೊಂದು ನನ್ನ ಬಳಿ ಇದೆ.

ನನ್ನ ಬಾಲ್ಯದ ಆ ದಿನಗಳಲ್ಲಿ ನನ್ನ ತಂದೆಯೇ ನನಗೆ ಅಕ್ಷರ ಕಲಿಸಿದ ಮೊದಲ ಗುರು. ನಾನು ಮಾಧ್ಯಮಿಕ ತರಗತಿಗಳಿಗೂ ಹೋಗಲಿಲ್ಲ. ನೇರವಾಗಿ ಲೋವರ್ ಸೆಕೆಂಡರಿ ಪರೀಕ್ಷೆಗೆ (ಮನೆಯಲ್ಲಿಯೇ ಪಾಠ ಹೇಳಿಸಿಕೊಂಡು) ಕಟ್ಟಿದ್ದಾಯಿತು. ಒಬ್ಬರು ಮೇಷ್ಟ್ರು ಮನೆಗೆ ಪಾಠಕ್ಕೆ ಬರುತ್ತಿದ್ದರು. ಪರೀಕ್ಷೆಗೆ ಎಷ್ಟು ಬೇಕೋ ಅಷ್ಟೇ ಚರಿತ್ರೆ, ಭೂಗೋಳ, ಲೆಕ್ಕ ಎಲ್ಲ ಕಲಿಸುತ್ತಿದ್ದರು. ಚರಿತ್ರೆ, ಭೂಗೋಳ ಎಲ್ಲ ನಾನೇ ಓದಿಕೋಬಹುದಾಗಿತ್ತು. ಆದರೆ ಅದೇನೋ ಲೆಕ್ಕ ಎಂದರೆ ನನಗೆ ತಲೆನೋವು. ಅವರಿಗೆ ಹೇಳಿಕೊಡಲೇ ಬರುತ್ತಿರಲಿಲ್ಲವೋ, ನನ್ನ ಮೊದ್ದು ತಲೆಗೆ ಅದು ಅರ್ಥವಾಗುತ್ತಿರಲಿಲ್ಲವೋ ದೇವರಿಗೇ ಗೊತ್ತು.

ಈ ವೇಳೆಗೆ ತುಮಕೂರನ್ನು ಬಿಟ್ಟು, ನಮ್ಮ ತಂದೆ ತಿಪಟೂರಿಗೆ ವಾಸಸ್ಥಳ ಬದಲಾಯಿಸಿದ್ದರು. ಲೋವರ್ ಸೆಕೆಂಡರಿಯ ಇಂಗ್ಲಿಷ್ ಪಠ್ಯದ ಬಹುಭಾಗವನ್ನು ಅಪ್ಪನೇ ಹೇಳಿಕೊಡುತ್ತಿದ್ದರು. ಅದರಲ್ಲಿಯೂ, ವ್ಯಾಕರಣದಲ್ಲಿನ, ಡಿಗ್ರಿ ಆಫ್ ಕಂಪ್ಯಾರಿಸನ್, ವಾಕ್ಯಗಳನ್ನು ಬೇರೆ ಬೇರೆ ರೀತಿಗೆ ಬದಲಾಯಿಸುವುದು, ಭಾನುವಾರಗಳಲ್ಲಿ ಅವರು ಒಂದು ಹತ್ತು ನಿಮಿಷ ಕಲಿಸಿದರೂ ಬೇರೆಯವರು ಗಂಟೆಗಟ್ಟಳೆ ಕಲಿಸುವುದಕ್ಕಿಂತ ಚೆನ್ನಾಗಿ ಅರ್ಥವಾಗುತ್ತಿತ್ತು. ಹೈಸ್ಕೂಲಿನಲ್ಲಿದ್ದಾಗ ಕೂಡ ಹಲವಾರು ವಿಷಯಗಳನ್ನು ಹೇಳುವುದರ ಜೊತೆಗೇ, ಸ್ವಾತಂತ್ರ್ಯ ಸಂಗ್ರಾಮದ ಬಗೆಗೆ ಅನೇಕ ಘಟನೆಗಳನ್ನು ಹೇಳುತ್ತಿದ್ದರು. ಹಲವು ವಿಷಯಗಳಲ್ಲಿ ಗುರುವಿನಂತೆ ಕಲಿಸುತ್ತಿದ್ದ ನನ್ನ ತಂದೆ, ಓದಿದರೆ ಷೇಕ್ಸಪಿಯರ್ ಓದಬೇಕು, ಕಾಳಿದಾಸನನ್ನು ಓದಬೇಕು, ಇವೆಲ್ಲ ಏನು ಓದು ಎಂದು ಬಿಡುತ್ತಿದ್ದರು. ಪದೇ ಪದೇ ಅವರು ಹಾಗೆ ಹೇಳುತ್ತಿದ್ದುದರಿಂದ ನನಗೆ ಷೇಕ್ಸ್‌ಪಿಯರ್‌ನಲ್ಲಿ ಆಸಕ್ತಿ ಹುಟ್ಟಿತ್ತು. ಎಷ್ಟೋ ವರ್ಷಗಳ ನಂತರ ಓದಿಯೂ ಓದಿದೆ. ಕಾಳಿದಾಸನನ್ನು ಮಾತ್ರ ಮೂಲದಲ್ಲಿ ಓದಲಾಗಲಿಲ್ಲವೆಂಬುದು ಈಗಲೂ ಮನಸ್ಸಿನಲ್ಲಿ ಕೊರೆಯುತ್ತದೆ. ನನ್ನ ತಂದೆಯೇ ನನ್ನ ಮೊದಲ ಗುರುವಾಗಿದ್ದು ಹೀಗೆ.

ತಿಪಟೂರಿನಲ್ಲಿ ಹೈಸ್ಕೂಲಿನ ಮೊದಲನೆಯ ತರಗತಿಗೆ ಸೇರಿದಾಗ ನನಗೆ ಹತ್ತು ವರ್ಷ ತುಂಬಿತ್ತು. ಒಂದು ತಿಂಗಳು ಸಹ-ವಿದ್ಯಾಭ್ಯಾಸವಿದ್ದ ಶಾಲೆಗೆ ಹೋದ ನಂತರ, ಮೊದಲ ಬಾರಿಗೆ ತಿಪಟೂರಿನಲ್ಲಿ ಬಾಲಕಿಯರ ಪ್ರೌಢಶಾಲೆ– 'ಸರ್ಕಾರಿ ಬಾಲಕಿಯರ ಪ್ರೌಢಶಾಲೆ' ಆರಂಭವಾಯಿತು, ಅದೂ, ಒಂದು ಸಣ್ಣ ಮನೆಯಲ್ಲಿ. ಅಲ್ಲಿ ದಾಖಲಾಗಿದ್ದ ಹುಡುಗಿಯರ ಸಂಖ್ಯೆ ಕೇವಲ ಹದಿನಾರು. ಎಲ್ಲರಿಗಿಂತ ಚಿಕ್ಕವಳು ನಾನು. ಶಾಲೆಗೆ ಹೋಗಿ ಅಭ್ಯಾಸವಾಗಲೀ,

ಶಾಲೆಗಳಲ್ಲಿ ನಡೆದುಕೊಳ್ಳಬೇಕಾದ ರೀತಿ ನಿಯಮಗಳಾಗಲೀ, ಸಹಪಾಠಿಗಳೊಡನೆ ಬೆರೆತು ಮಾತನಾಡುವ ವಿಧಾನವಾಗಲೀ ತಿಳಿಯದೆ, ಅಮ್ಮ ಉಡಿಸಿದ್ದ ಹದಿನೆಂಟು ಮೊಳದ ಸೀರೆಯಲ್ಲಿ ಅಮ್ಮನೇ ತಲೆಬಾಚಿ, ಕುಂಕುಮವಿಟ್ಟು ಕಳಿಸಿದ್ದ ಮಹಾ ಮೊದ್ದು ಹುಡುಗಿಯಾಗಿ ಶಾಲೆಗೆ ಹೋಗುತ್ತಿದ್ದೆ. ಉಳಿದ ಹುಡುಗಿಯರ ದೃಷ್ಟಿಯಲ್ಲಿ ನಾನೊಂದು ಸ್ಪೆಸಿಮನ್ ಆಗಿದ್ದೆ. ಏನು ಮಾತನಾಡಬೇಕೆಂಬುದಾಗಲೀ, ಯಾರನ್ನು ಹೇಗೆ ಮಾತನಾಡಿಸಬೇಕೆಂದಾಗಲೀ ತಿಳಿಯದೆ ಬೆಳಗಿನಿಂದ ಸಂಜೆವರೆಗೂ ನಾನು ಮೂಕಿಯಾಗಿ ಕುಳಿತಿರುತ್ತಿದ್ದೆ.

ಇಂತಹ ವಾತಾವರಣದಲ್ಲಿ, ನನ್ನ ಮನಸ್ಸನ್ನು, ನನ್ನ ವ್ಯಕ್ತಿತ್ವವನ್ನು ತಿದ್ದಿ, ವಿಕಸನಗೊಳಿಸಿದ ಕೀರ್ತಿ ನಮ್ಮ ಹೈಸ್ಕೂಲಿನ ಇಬ್ಬರು ಮೇಡಮ್‌ಗಳಿಗೆ ಸಲ್ಲುತ್ತದೆ. ಅವರ ನೆನಪು ನನ್ನ ಮನಸ್ಸಿನಲ್ಲಿ ಸದಾ ಹಸಿರು. ಒಬ್ಬರು ಮಿಸ್ ನಂಜಪ್ಪ. ಅವರು ನಮ್ಮ ಶಾಲೆಯ ಮುಖ್ಯೋಪಾಧ್ಯಾಯಿನಿ. ಕೂರ್ಗಿಗಳು, ಬಹಳ ಮೃದು ಸ್ವಭಾವದವರು. ಅವರುಡುತ್ತಿದ್ದ ಕೂರ್ಗಿ ಮಾದರಿಯ ಸೀರೆ ನನಗಂತೂ ವಿಚಿತ್ರ ಆಕರ್ಷಣೆಯೆನಿಸುತ್ತಿತ್ತು. ರೇಖಾಗಣಿತ, ಇಂಗ್ಲಿಷ್ ವ್ಯಾಕರಣಗಳನ್ನು ಕಲಿಸುತ್ತಿದ್ದರು. ಇಂಗ್ಲಿಷ್ ವ್ಯಾಕರಣದ subject, verb, agreement, conjugation ಕಲಿಸಿ, ಕಲಿಸಿ, ನಾವು ಯಾರಾದರೂ ಸರಿಯಾಗಿ ಹೇಳದಿದ್ದರೆ, ಅವರಂತೂ ಒಂದು ದಿನವೂ ನಮ್ಮನ್ನು ಬಯ್ಯುತ್ತಿರಲಿಲ್ಲ. "ಏಕೆ ಹುಡುಗೀರಾ? ಹೀಗೇಕೆ ತಪ್ಪು ಹೇಳುತ್ತೀರಿ? ಇನ್ನಾವ ರೀತಿಯಲ್ಲಿ ನಿಮಗೆ ಕಲಿಸಲಿ ಹೇಳಿ" ಎಂದು ತಾವೇ ಅತ್ತುಬಿಡುತ್ತಿದ್ದರು. ಶಾಲೆಯ ಮುಖ್ಯೋಪಾಧ್ಯಾಯಿನಿಯಾಗಿ ಅವರು ಹಾಗೆ ಅಳುತ್ತಿದ್ದುದು ನಮಗೆ ಒಂದು ರೀತಿಯ ಮುಜುಗರವನ್ನುಂಟುಮಾಡುತ್ತಿತ್ತು, ಹಾಗೂ ನಮ್ಮ ಮೇಡಂ ಅನ್ನು ಅಳಿಸಬಾರದೆಂದು ಸ್ವಲ್ಪ ಪ್ರಯತ್ನಪಟ್ಟು ಆ ಇಂಗ್ಲಿಷ್ ಭಾಷೆಯ ವ್ಯಾಕರಣವನ್ನು ಒಂದಿಷ್ಟು ಮನಸ್ಸು ಕೊಟ್ಟು ಕಲಿಯುತ್ತಿದ್ದೆವು.

ರೇಖಾಗಣಿತದ ತರಗತಿಯಲ್ಲಿ ಪ್ರಮೇಯಗಳನ್ನು ಕಲಿಸುವಾಗಲೂ ಇದೇ ಹಾಡು. ನಮ್ಮದು ಕನ್ನಡ ಮೀಡಿಯಂ ತರಗತಿ. ಆಗಿನ್ನೂ ಕನ್ನಡದಲ್ಲಿ ವಿಜ್ಞಾನ, ಗಣಿತಗಳ ಪುಸ್ತಕಗಳು ಈಗಿನಷ್ಟು ಹೆಚ್ಚಿನ ಸಂಖ್ಯೆಯಲ್ಲಿರದಿದ್ದರೂ ಇದ್ದ ಕೆಲವು ಬಹಳ ಮೌಲಿಕವಾಗಿರುತ್ತಿದ್ದವು. ನನ್ನ ಮಟ್ಟಿಗಂತೂ ಗಣಿತದ ಪ್ರಶ್ನೆಪತ್ರಿಕೆಯೆಂದರೆ, ತಿಮಿಂಗಿಲ, ಮೊಸಳೆ, ಷಾರ್ಕ್‌ಗಳಿರುವಂತಹ ಮಹಾಸಮುದ್ರವನ್ನು ದಾಟುವಷ್ಟೇ ಕಠಿನ ಎಂಬ ಅಭಿಪ್ರಾಯ ಮತ್ತು ಅನುಭವ. ಇಂಗ್ಲಿಷ್, ಕನ್ನಡ ಭಾಷಾ ಪತ್ರಿಕೆಗಳು, ಕೆಂದಾವರೆ, ಬೆಳ್ದಾವರೆ, ನೈದಿಲೆಗಳಿಂದ ತುಂಬಿದ ಸರೋವರಗಳಂತೆ ಆಹ್ಲಾದಕರ. ಸಮಾಜಶಾಸ್ತ್ರ, ಚರಿತ್ರೆ, ಭೂಗೋಳಗಳು ಸಿಹಿನೀರಿನ ತಿಳಿಗೊಳಗಳಂತೆ, ಅರಿವಿನ ದಾಹವನ್ನು ತಣಿಸುವಂತಹವು. ನಮ್ಮ ಮಿಸ್ ನಂಜಪ್ಪ ಕಲಿಸುವುದರಲ್ಲಿ ನಿಷ್ಣಾತರು. ಆದರೆ ನನಗೆ ರೇಖಾಗಣಿತವನ್ನು ಏಕೆ ಕಲಿಯಬೇಕೆಂಬುದು ಯಕ್ಷಪ್ರಶ್ನೆ. ತ್ರಿಕೋನ, ಸಮಬಾಹು, ತ್ರಿಭುಜ, ಸಮಕೋಣ, ಲಂಬ, ಪರಿಧಿ, ತ್ರಿಜ್ಯ, ವೃತ್ತ, ಸರಳರೇಖೆ... ಎಲ್ಲ ನೆನಪಿಸಿಕೊಂಡರೇ ತಲೆ ಗಿರ್ರೆನ್ನುತ್ತಿತ್ತು. ಇಂಥ ಮೊದ್ದು ತಲೆಗೆ ರೇಖಾಗಣಿತದ ಮಹಾ ರಹಸ್ಯಗಳನ್ನು ಹೇಗೆ ತಾನೇ ಕಲಿಸಿಯಾರು. ಆದರೂ ಅವರದು ತ್ರಿವಿಕ್ರಮನ ಸಾಹಸ.

ಒಂದು ದಿನ ತಮ್ಮ ಆಫೀಸಿಗೆ ಕರೆಸಿದರು ನನ್ನನ್ನು. ನನಗೋ ಮಹಾ ಭಯ, ಗಡಗಡ ನಡುಗುತ್ತಿದ್ದಿರಬೇಕು. ಆಗಿನ್ನೂ ನನಗೆ ಹನ್ನೆರಡು ವರ್ಷ. ಹೈಸ್ಕೂಲಿನ ಮೊದಲ ವರ್ಷದ ಪರೀಕ್ಷೆಗಳು ಮುಗಿದು, ಎರಡನೆಯ ವರ್ಷಾರಂಭವಾಗಿತ್ತು. ಮೇಡಂ ಹೇಳಿದರು, "ಶಾಂತಕುಮಾರಿ, ನಿನ್ನ ಪರೀಕ್ಷೆಯ ಉತ್ತರ ಪತ್ರಿಕೆಗಳು ಇಲ್ಲಿವೆ. ಎಷ್ಟೆಷ್ಟು ನಂಬರು ಬಂದಿವೆ ಗೊತ್ತಾ?" ನಾನು ಸುಮ್ಮನೆ ನಿಂತಿದ್ದೆ. ಮತ್ತೆ ಅವರೇ ಮಾತನಾಡುತ್ತಾ ಒಂದೊಂದೇ ಉತ್ತರ ಪತ್ರಿಕೆ ತೆಗೆದು ತೋರಿಸತೊಡಗಿದರು. "ನೋಡು, ಇದು ಇಂಗ್ಲಿಷ್ ಭಾಷಾ ಪತ್ರಿಕೆಯದು. ಇಡೀ ತರಗತಿಯಲ್ಲಿ ನೀನು ಚಿಕ್ಕವಳಾದರೂ, ಎಲ್ಲರಿಗಿಂತ ಹೆಚ್ಚು ಅಂಕಗಳು ಬಂದಿವೆ. ಎಪ್ಪತ್ತು ಅಂಕಗಳು. ಕನ್ನಡದಲ್ಲಿಯೂ ನೀನೇ ಮೊದಲಿದ್ದೀ, ಅರವತ್ತಾರು ಅಂಕಗಳು. ವಿಜ್ಞಾನದಲ್ಲಿ ಅರವತ್ತು, ನೀನು ಮೂರನೆಯವಳು. ಚರಿತ್ರೆ, ಭೂಗೋಳದಲ್ಲಿ ನೀನೇ ಮೊದಲಿದ್ದೀ, ಅರವತ್ತೆಂಟು ಅಂಕಗಳು– ಆದರೆ, ನೋಡು ಇದು ಗಣಿತದ ಉತ್ತರ ಪತ್ರಿಕೆ, ಇದರಲ್ಲಿ ನಿನಗೆ ನಂಬರ್ ಎಷ್ಟು ಬಂದಿದೆ ಗೊತ್ತಾ? ನೋಡಿಲ್ಲಿ– ಬರೀ ಹತ್ತು ನಂಬರ್ ಬಂದಿದೆ. ನಿನಗ್ಯಾಕೆ ಗಣಿತ ಅಷ್ಟು ಕಷ್ಟ ಆಗುತ್ತೆ? ರೇಖಾಗಣಿತವೋ, ಅಂಕಗಣಿತವೋ, ಬೀಜಗಣಿತವೋ ಯಾವುದು ಕಷ್ಟ? ಬೇರೆ ವಿಷಯಗಳಲ್ಲಿ, ಅದೂ ನೀನು ಕ್ರಮವಾಗಿ ಶಾಲೆಗೇ ಹೋಗದೇ ಇಷ್ಟು ನಂಬರ್‌ಗಳನ್ನು ತೆಗೆದುಕೊಂಡಿದ್ದೀ, ಗಣಿತವೊಂದರಲ್ಲಿ ಸ್ವಲ್ಪ ಗಮನ ಕೊಟ್ಟರೆ ಮೊದಲನೇ ವರ್ಗದಲ್ಲಿ ನೀನು ಪಾಸು ಮಾಡಬಹುದು. ನೀನು ಈ ಗಣಿತದಿಂದಾಗಿ ಫೇಲ್ ಆದರೆ, ನನಗೆ ತುಂಬ ದುಃಖವಾಗುತ್ತೆ ಮಗು, ತಿಳಿಯದಿದ್ದರೆ ಮತ್ತೆ ಮತ್ತೆ ಕೇಳು. ಬರದಿದ್ದ ಲೆಕ್ಕ, ಪ್ರಮೇಯಗಳನ್ನು ಮತ್ತೆ ಮತ್ತೆ ಮಾಡು..." ಅವರು ಇಷ್ಟೆಲ್ಲಾ ಹೇಳುತ್ತಿರುವಾಗ ನನ್ನ ಕಣ್ಣಲ್ಲಿ ಗಂಗೆ ಯಮುನೆಯರು ಹರಿಯುತ್ತಿದ್ದರು. ನಮ್ಮ H.M. ಎದ್ದು ಬಂದು ಭುಜ ತಟ್ಟಿ, "ಛೀ, ಇಷ್ಟಕ್ಕೆಲ್ಲಾ ಅಳ್ತಾರಾ? you can improve. ನಡಿ" ಎಂದು ಕ್ಲಾಸಿಗೆ ಕಳಿಸಿದರು.

ನಂತರದ ತರಗತಿಗಳಲ್ಲಿ, ನನಗಾಗಿಯೇ ಏನೋ ಎಂಬಂತೆ, ಪ್ರತಿಯೊಂದು ವಿಷಯವನ್ನೂ ಎರಡೆರಡು ಬಾರಿ ವಿವರಿಸಿ, ಪ್ರಮೇಯಗಳ ಪ್ರತಿಯೊಂದು ಹಂತವನ್ನೂ ಅತ್ಯಂತ ಸರಳಗೊಳಿಸಿ ಬೋಧಿಸುತ್ತಿದ್ದರು. ತ್ರಿಭುಜಗಳಿಗೆ ಉಪಯೋಗಿಸುವ A.B.C., X.Y.Z. ಮುಂತಾದ ಅಕ್ಷರಗಳು ಒಂದೇ ಊಹಾಸಾಮ್ರಾಜ್ಯದವೆಂದೂ, ರೇಖಾಗಣಿತದ ಅನುಕೂಲಕ್ಕೆ ಉಪಯೋಗಿಸುವುದೆಂದೂ ತಿಳಿಸಿ, basis ಅನ್ನು ತಿಳಿಹೇಳಿದ ಮೇಲೆ, ಮೊದ್ದು ತಲೆಯಲ್ಲಿ ಏನೋ ಸ್ವಲ್ಪ ಹೊಳೆದಂತಾಯಿತು. ಹಾಗೆಯೇ ಬೀಜಗಣಿತ ಕೂಡ. ಅಂಥ ಚೆನ್ನಾಗಿ ಅಂಕಿಗಳು ಇರುವಾಗ A. B., X. Y., ಅದೂ ಇದೂ ಅಂತೆಲ್ಲಾ ಏಕೆ ಬೇಕು ಎನ್ನುವುದು ನನ್ನ ಮೂಲ ಸಮಸ್ಯೆ. ಆ ಸಮಸ್ಯೆ ಬಿಡಿಸದ ಹೊರತೂ ನನಗೆ ಬೀಜಗಣಿತದ ಸಮಸ್ಯೆ ಅರ್ಥವಾಗುತ್ತಿರಲಿಲ್ಲ. ಒಂದೆರಡು ದಿನಗಳು ಕೂಡಿಸಿಕೊಂಡು ಬೀಜಗಣಿತದ basis ಅನ್ನು ನನ್ನ ಮೊದ್ದು ತಲೆಗೂ ಒಂದಿಷ್ಟಾದರೂ ಅರ್ಥವಾಗುವಂತೆ ವಿವರಿಸಿದರು. ಅವರು ಒಬ್ಬರೇ ಇರುತ್ತಿದ್ದರು. ಹಾಗಾಗಿ ಅನೇಕ ಬಾರಿ ನಮ್ಮ ಮನೆಗೆ ಬರುತ್ತಿದ್ದರು. ನನ್ನ ಬಗೆಗೆ, ಆತಂಕ ಪಡಬಾರದೆಂದು ಅಮ್ಮನಿಗೆ ತಿಳಿಸುತ್ತಿದ್ದರು. ಶಾಲೆಯಲ್ಲಿ ತಡವಾದರೆ ಯಾರದಾದರೂ ಜೊತೆಯಲ್ಲಿ ಬಂದು ಮನೆಗೆ

ಬಿಡುತ್ತಾರೆ ಎಂದು ಹೇಳಿದ್ದರಿಂದ ನನಗೂ ಒಂದಿಷ್ಟು ಆರಾಮವಾಯಿತು. ಮನೆಯಿಂದ ಅರ್ಧ ಕಿಲೋಮೀಟರ್ ದೂರವಿದ್ದ ಶಾಲೆಯಿಂದ, ಸಂಜೆ ಐದು ಗಂಟೆಯ ಒಳಗೆ ಬರದಿದ್ದರೆ ಯಾರಾದರೂ ಮನೆಯಿಂದ ಹುಡುಕಿಕೊಂಡು ಬರುತ್ತಿದ್ದರು. ಹಾಗಾಗಿ ನಾನು ಶಾಲೆಯ ಯಾವುದೇ ಆಟಗಳಲ್ಲಿ ಭಾಗವಹಿಸುವಂತಿರಲಿಲ್ಲ. H.M. ಬಂದು ಹೇಳಿ ಹೋದ ಮೇಲೆ ಎಂದಾದರೂ ಒಮ್ಮೊಮ್ಮೆ ಟೆನ್ನಿಕಾಯ್ಟ್ ಆಟದಲ್ಲಿ ಭಾಗವಹಿಸುತ್ತಿದ್ದೆ. S.S.L.C. ಪರೀಕ್ಷೆಯಲ್ಲಿ ಗಣಿತದ ಪತ್ರಿಕೆಯಲ್ಲಿ ಐವತ್ನಾಲ್ಕು ಅಂಕಗಳನ್ನು ಪಡೆದು, ಒಟ್ಟು ಮೊದಲನೇ ದರ್ಜೆಯಲ್ಲಿ ಪಾಸಾಗಲು ನನ್ನ ಈ ಮಿಸ್ ನಂಜಪ್ಪ ಅವರೇ ಕಾರಣ ಎಂದು ಇಂದಿಗೂ ಅವರನ್ನು ಸ್ಮರಿಸುತ್ತೇನೆ. ಎಷ್ಟೋ ವರ್ಷಗಳ ನಂತರ ನಾನು ಕಾಲೇಜಿನಲ್ಲಿ ಉಪನ್ಯಾಸಕಿಯಾದಾಗ ನನ್ನ ಈ ಮೇಡಂ ನನ್ನಂತಹ ದೊಡ್ಡ ಹುಡುಗಿಯ ಬಗೆಗೆ ತೋರಿಸುತ್ತಿದ್ದ ಅಕ್ಕರೆ, ತಾಳ್ಮೆಗಳು ನೆನಪಿಗೆ ಬಂದು, ಹಳ್ಳಿಗಳಿಂದ ಬಂದ ಮಕ್ಕಳು ಇಂಗ್ಲಿಷ್ ಭಾಷೆ ಕಲಿಯಲು ಪರದಾಡುವುದನ್ನು ಕಂಡಾಗ, ಅವರಿಗೆ ತಾಳ್ಮೆಯಿಂದ ಕಲಿಸಬೇಕೆನ್ನುವುದು ಅರಿವಾಯಿತು. ನನ್ನ ಕಲಿಕೆಯನ್ನೂ, ಜೀವನ ಧ್ಯೇಯವನ್ನೂ ರೂಪಿಸಿದ ಮೊದಲ ಶಾಲಾ ಗುರು ಇವರು.

ನನ್ನ ಇಡಿಯ ವ್ಯಕ್ತಿತ್ವವನ್ನು ರೂಪಿಸಿದವರು ಮತ್ತೊಬ್ಬರು, ಅವರೇ ಮಿಸ್ ಕಣ್ಣಮ್ಮ. ಮಿಸ್ ಕಣ್ಣಮ್ಮ ಆ ಕಾಲದಲ್ಲಿ ಅಂದರೆ ೧೯೫೦ ರಲ್ಲಿಯೇ, M.A.B.T., ಹಿಂದಿಯಲ್ಲಿ ವಿಶಾರದ, ಸಂಗೀತದಲ್ಲಿ ವಿದ್ವತ್ ಪರೀಕ್ಷೆಗಳನ್ನು ಪಾಸು ಮಾಡಿದ್ದವರು. ಗಾಂಧೀವಾದದಿಂದ ಪ್ರಭಾವಿತರಾಗಿ, ಯಾವಾಗಲೂ, ಆಗ ಬರುತ್ತಿದ್ದ ಒರಟು ಖಾದಿ ಸೀರೆ ರವಿಕೆಗಳನ್ನು ಧರಿಸಿ, ಅತ್ಯಂತ ಸರಳ ಜೀವನ ನಡೆಸುತ್ತಿದ್ದರು. ಗಣಿತವೆಂದರೆ ತಲೆನೋವಿದ್ದ ನಾನು ಎಸ್.ಎಸ್.ಎಲ್.ಸಿ.ಯಲ್ಲಿ ಸಾಮಾನ್ಯ ಗಣಿತವನ್ನು ಮಾತ್ರ ಕಡ್ಡಾಯವಾಗಿ ಓದಬೇಕಾಗಿದ್ದುದ ರಿಂದ– optional subjects ಆಗಿ ಹಿಂದೀ ಮತ್ತು ಭೂಗೋಳವನ್ನು ಆರಿಸಿಕೊಂಡೆ. ಹಾಗಾಗಿ, ಮಿಸ್ ಕಣ್ಣಮ್ಮ ಅವರ ಸಾಮೀಪ್ಯ ಹೆಚ್ಚು ಕಾಲ ಸಿಗತೊಡಗಿ ಅವರ ವಿಚಾರಧಾರೆ ಗಳಿಂದ ನನ್ನ ಮನಸ್ಸು ಬಹಳ ಪ್ರಭಾವಿತವಾಯಿತು.

ಹೊರಗಿನ ಪ್ರಪಂಚದ ಗಂಧಗಾಳಿಗಳಿಲ್ಲದೆ ಬೆಳೆದಿದ್ದ ನನ್ನಲ್ಲಿ ಮೊಟ್ಟಮೊದಲಿಗೆ ವೈಚಾರಿಕತೆಯನ್ನು ಜಾಗ್ರತಗೊಳಿಸಿದವರು ಕಣ್ಣಮ್ಮ. ಬ್ರಿಟನ್‌ನಲ್ಲಿ ನಡೆದ ಕೈಗಾರಿಕಾ ಕ್ರಾಂತಿ, ರಷ್ಯದಲ್ಲಿನ ಮಹಾಕ್ರಾಂತಿ, ಭಾರತದಲ್ಲಿನ ಸ್ವಾತಂತ್ರ್ಯ ಸಂಗ್ರಾಮ ಹೀಗೆ ಚರಿತ್ರೆಯ ವಿವಿಧ ಹಂತಗಳನ್ನು ನಮ್ಮ ಮನಸ್ಸು ಮುಟ್ಟುವಂತೆ ರಸವತ್ತಾಗಿ ವಿವರಿಸುತ್ತಾ, ಕ್ಯಾಥೊಲಿಕ್‌ರಿಗೂ ಪ್ರಾಟೆಸ್ಟೆಂಟ್‌ಗಳಿಗೂ ನಡೆದ ಧರ್ಮಯುದ್ಧದ ಸಂಗತಿಯನ್ನು ಕಥೆಯಂತೆ ವಿವರಿಸಿ ಇಂತಹ ಧರ್ಮಾಂಧತೆ ಇರಬೇಕೆ ಬೇಡವೇ ಎಂದು ತರಗತಿಗಳಲ್ಲಿ ನಮ್ಮಲ್ಲಿ ಚರ್ಚೆಗಳನ್ನು ಪ್ರೋತ್ಸಾಹಿಸುತ್ತಿದ್ದರು. ಬಹಳ ದಿನಗಳ ವರೆಗೆ ನಾನು ಮೂಕ ಪ್ರೇಕ್ಷಕಿಯಾಗಿದ್ದೆ. ಮೇಡಂ ಏನಾದರೂ ಕೇಳಿದರೂ, ಹೆದರಿ ಹೆದರಿ ಉತ್ತರಿಸುತ್ತಿದ್ದ ನನ್ನನ್ನು "ಅದೇಕೆ ಹಾಗೆ ಹೆದರಿಕೊಳ್ಳುತ್ತೀ? ನಾನೇನು ಹುಲಿಯಾ ಕರಡಿಯಾ? ತಪ್ಪು ಉತ್ತರ ಹೇಳಿದರೆ ನಿನ್ನನ್ನು ನುಂಗಿಬಿಡುತ್ತೇನಾ? ತಪ್ಪು ಹೇಳಿದರೂ ಧೈರ್ಯದಿಂದ, ಗಟ್ಟಿಯಾಗಿ, ಸ್ಪಷ್ಟವಾಗಿ ಹೇಳುವುದನ್ನು ಕಲಿ" ಎಂದರು.

ಒಂದು ದಿವಸ ತರಗತಿಯಲ್ಲಿ ಚರಿತ್ರೆಯ ಬಗೆಗೆ ದಿಢೀರ್ ಪ್ರಬಂಧ ಬರೆಯಲು ಕೊಟ್ಟರು. ಪ್ರಬಂಧದ ವಿಷಯ ಕೂಡ ನನ್ನ ಮನಸ್ಸಿನಲ್ಲಿ ಈಗಲೂ ಸ್ಥಿರವಾಗಿದೆ. "Ideas rule the world" ಎಂಬುದು ವಿಷಯ. ವಿಷಯದ ನಾವೀನ್ಯತೆಯಿಂದಲೋ, ಸಾರ್ವಕಾಲಿಕತೆಯಿಂದಲೋ, ಆ ವಿಷಯ ನನಗೆ ಈಗಲೂ ಪ್ರಸ್ತುತವೆನ್ನಿಸುತ್ತದೆ. (ಈ ವಿಷಯವನ್ನು ನಾನು ಕಣ್ಣಮ್ಮನವರ ಬಗೆಗೆ ಬರೆದಿರುವ ಲೇಖನವೊಂದರಲ್ಲಿಯೂ ಕಾಣಿಸಿದ್ದೇನೆ.) "ರೈಲು ಪ್ರಯಾಣ", "ಯಾತ್ರಾಸ್ಥಳದ ವರ್ಣನೆ", "ರೇಡಿಯೋ" ಮುಂತಾದ ವಿಷಯಗಳ ಬಗೆಗೇ ಪ್ರಬಂಧ ಬರೆಯುತ್ತಿದ್ದ ನಮಗೆ ಈ ವಿಷಯ ಹೊಸ ಲೋಕವೊಂದನ್ನು ತೆರೆದು, ಹೊಸ ರೀತಿಯಲ್ಲಿ ಆಲೋಚಿಸುವಂತೆ ಪ್ರೇರೇಪಿಸಿತು. ಪ್ರಬಂಧವನ್ನು ಆಗಲೇ, ಅಲ್ಲಿಯೇ ಕುಳಿತು ಬರೆದು ಮುಗಿಸಬೇಕಾಗಿದ್ದಿತು. ಯಾರು ಏನು ಬರೆದರೋ ಏನೋ, ಮಾತಿನ ಮೂಲಕ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸಂಕೋಚ, ಭಯಗಳಿದ್ದ ನಾನು ಆ ಪ್ರಬಂಧದಲ್ಲಿ ಆಲೋಚನೆಗಳಿಂದಾಗಿಯೇ, ಪ್ರಪಂಚದಲ್ಲಿ ಹೇಗೆ ಬದಲಾವಣೆಗಳು ಕಾಣಿಸಿಕೊಳ್ಳಲು ಸಾಧ್ಯವಾಯಿತೆಂಬುದನ್ನು ಕಣ್ಣಮ್ಮ ಅವರೇ ಹೇಳಿದ್ದ ಕೈಗಾರಿಕಾ ಕ್ರಾಂತಿ, ರಷ್ಯದ ಮಹಾಕ್ರಾಂತಿ, ಭಾರತ ಸ್ವಾತಂತ್ರ್ಯ ಸಂಗ್ರಾಮ, ರಾಜಾ ರಾಮಮನೋಹರ್ ಅವರು ಪ್ರಾರಂಭಿಸಿದ ಸುಧಾರಣೆಗಳು, ಎಂದು ನನಗೆ ತಿಳಿದದ್ದನ್ನೆಲ್ಲಾ ಬರೆದು ಅಭಿಪ್ರಾಯವನ್ನು ಸಮರ್ಥಿಸಿದ್ದೆ. ಕಣ್ಣಮ್ಮ ಸುಪ್ರೀತರಾಗಿಬಿಟ್ಟಿದ್ದರು. ತರಗತಿಯಲ್ಲಿ ಆ ಪ್ರಬಂಧವನ್ನು ತಾವೇ ಓದಿದರು. ಅಂದಿನಿಂದ ನನ್ನನ್ನು ಪ್ರಶ್ನೆ ಕೇಳುವುದು ಹೆಚ್ಚಾಯಿತು. ತರಗತಿಯಲ್ಲಲ್ಲದೆ, ಅವರು ನಮ್ಮ ಮನೆಗೆ ಬಂದಾಗಲೂ, ಏನಾದರೂ ವಿಶೇಷ ವಿಷಯಗಳು, ಅಥವಾ ಹಲವು ಉತ್ತಮವಾದ ಕೀರ್ತನೆಗಳನ್ನೂ ಕಲಿಸುತ್ತಿದ್ದರು.

ಹಿಂದೀ ತರಗತಿಯಲ್ಲಿ, ಮಹಾದೇವೀ ವರ್ಮಾ, ಜಯಶಂಕರ್ ಪ್ರಸಾದ್, ನಿರಾಲಾ ಇಂತಹವರ ಕವಿತೆಗಳನ್ನೂ, ಅದರ ಹಿಂದಿರುವ ಸನ್ನಿವೇಶಗಳನ್ನೂ ಅದೆಷ್ಟು ಚೆನ್ನಾಗಿ ವಿವರಿಸುತ್ತಿದ್ದರೆಂದರೆ ಮೈಥಿಲೀಶರಣ್ ಗುಪ್ತ ಅವರ "ಅಬಲಾ ಜೀವನ್ ಹಾಯ್ ತುಮ್ಹಾರೀ ಯಹೀ ಕಹಾನೀ / ಆಂಚಲ್ ಮ್ನೇ ಹೈ ದೂಧ್ ಔರ್ ಆಂಖ್ಯೋಂ ಮ್ನೇ ಪಾನೀ" ಎನ್ನುವ ಸಾಲುಗಳು ಮರೆತೇ ಇಲ್ಲ. ಅದೇ ಗುಪ್ತರ 'ಯಶೋಧರಾ' ಕಾವ್ಯದ ಪಾಠ ಮಾಡುವಾಗ, ಬುದ್ಧನಾಗಲಿದ್ದ ಸಿದ್ಧಾರ್ಥ ಯಶೋಧರೆಯನ್ನೂ, ಮಗು ರಾಹುಲನನ್ನೂ ಹಾಗೆ ತ್ಯಜಿಸಿ ಹೊರಟು ಹೋದದ್ದು ಸರಿಯೇ? ಎಂದು ಪ್ರಶ್ನಿಸುತ್ತಿದ್ದರು. ಬುದ್ಧನ ಆದರ್ಶ ದೊಡ್ಡದು, ಮನೆಯವರಿಗೆ ಅಷ್ಟೊಂದು ದುಃಖ ಕೊಡಬಹುದೇ? ಎಂದು ಕೇಳಿದರೆ, "ಕೂಡದು" ಎನ್ನುತ್ತಿದ್ದೆವು. ಬೇರೆ ಉತ್ತರ ನಮಗೆ ತಿಳಿಯುತ್ತಿರಲಿಲ್ಲ.

ನಾವು ಓದುತ್ತಿದ್ದ ಕಾಲದಲ್ಲಿ ಯಾವುದೇ ವಿಷಯಗಳಿಗೆ ಈಗಿನಂತೆ ಗೈಡ್ ಎಂಬ ಹೆಸರಿನ ಪುಸ್ತಕಗಳಾಗಲೀ, ಟ್ಯೂಷನ್‌ಗಳಾಗಲೀ ಇರುತ್ತಿರಲಿಲ್ಲ. ಟ್ಯೂಷನ್‌ಗೆ ಹೋಗುವುದು ಗೈಡ್‌ಗಳನ್ನಿಟ್ಟುಕೊಂಡು ಓದುವುದು ಅವಮಾನಕರವಾದ ಸಂಗತಿ ಎನ್ನುತ್ತಿದ್ದ ಕಾಲ. ನಮ್ಮ ಕಣ್ಣಮ್ಮ ಇಂಗ್ಲಿಷ್ ಕಲಿಸುತ್ತಿದ್ದ ವೈಖರಿಯೇ ಬೇರೆ. ನಾವೆಲ್ಲ ಕನ್ನಡ ಮೀಡಿಯಂನಲ್ಲಿ ಓದುತ್ತಿದ್ದವರು. ಇಂಗ್ಲಿಷ್ ಪಠ್ಯಪುಸ್ತಕಗಳಲ್ಲಿ ಕಠಿನ ಪದಗಳ ಅರ್ಥವನ್ನಾಗಲೀ, ಇನ್ನಿತರ

ವಿವರಗಳನ್ನಾಗಲೀ ಒದಗಿಸುತ್ತಿರಲಿಲ್ಲ. ಮೇಡಂ ಹೊಸ ಪಾಠ ಆರಂಭ ಮಾಡುವುದಕ್ಕೆ ಮುನ್ನ, ಪ್ರತಿಯೊಬ್ಬರೂ ಆ ಪಾಠದಲ್ಲಿರುವ ಕಠಿನ ಪದಗಳನ್ನು ಗುರುತು ಹಾಕಿಕೊಂಡು, ಅವಕ್ಕೆಲ್ಲಾ ಅರ್ಥವನ್ನು ನೋಡಿ, ಬರೆದುಕೊಂಡು ಹೋಗಬೇಕಾಗಿತ್ತು. ಎಲ್ಲರೂ ಹಾಗೆ ಬರೆದುಕೊಂಡು ಹೋದರೆ ಅಂದಿನ ಪಾಠ, ಇಲ್ಲದಿದ್ದರೆ ಪಾಠವಿಲ್ಲ. ಶಾಲೆಯಲ್ಲಿದ್ದ ಡಿಕ್ಷನರಿಯನ್ನು ತಂದು ಅರ್ಥ ಹುಡುಕಿ ಬರೆಯಬೇಕಾಗಿತ್ತು. ಪ್ರಶ್ನೆ ಉತ್ತರಗಳನ್ನು ನಾವೇ ಬರೆದು, ಅವರ ಕೈಲಿ ತಿದ್ದಿಸಿಕೊಳ್ಳಬೇಕಾಗಿತ್ತು. ನಮಗೆಲ್ಲಾ ಈ ವಿಧಾನ ಬಹಳ ಕಷ್ಟವೆನಿಸಿತ್ತು. ಎಷ್ಟೋ ಬಾರಿ ಮೇಡಂ ಬಗೆಗೆ ಬಯ್ದುಕೊಳ್ಳುತ್ತಿದ್ದೆವು.

ಮಿಸ್ ನಂಜಪ್ಪ, ಕಣ್ಣಮ್ಮ ಇಬ್ಬರೂ ಮದುವೆಯಾಗಿರಲಿಲ್ಲವಾಗಿ ಮದುವೆಯಾಗದಿರುವುದು ಒಂದು ಆದರ್ಶ ಎಂಬ ಭಾವನೆ ಕೂಡ ನಮ್ಮಲ್ಲಿ ಕೆಲವರಲ್ಲಿ ಮೂಡಿತ್ತು. ಕಣ್ಣಮ್ಮ ಮೇಡಂ ಎಲ್ಲ ರೀತಿಯ ಫ್ಯಾಷನ್‌ಗಳ ಕಟ್ಟಾ ವಿರೋಧಿ. ಕೆಲವು ಹುಡುಗಿಯರು ಎರಡೂ ಕಿವಿಗಳು ಪೂರ್ತಿ ಮುಚ್ಚಿಕೊಳ್ಳುವಂತೆ ಕೂದಲನ್ನು ಕಿವಿಯ ಮೇಲೆ ಹರಡಿ ಜಡೆ ಹೆಣೆದುಕೊಂಡು ಬರುತ್ತಿದ್ದರು. ಅಂಥವರನ್ನು "ದೇವರು, ತೆರೆದುಕೊಂಡಿರಲಿ ಎಂದೇ ಕೊಟ್ಟಿರುವ ಅಂಗಗಳನ್ನು ಮುಚ್ಚಿಕೊಂಡು, ಮುಚ್ಚಿಕೊಂಡಿರಲಿ ಎಂದು ಕೊಟ್ಟಿರುವ ಅಂಗಗಳನ್ನು ತೆರೆದುಕೊಳ್ಳಬೇಕೆನ್ನುವ ಈ ಕೆಟ್ಟ ಫ್ಯಾಷನ್‌ಗಳ ಚಟ ನಿಮಗೇಕೆ?" ಎನ್ನುತ್ತಿದ್ದರು. ಆ ನಮ್ಮ ಮೇಡಂ ಈಗ ಇದ್ದಿದ್ದರೆ ಏನು ಹೇಳುತ್ತಿದ್ದರೋ ಏನೋ. ಕಟ್ಟಾ ವಿಚಾರಶೀಲೆಯಾಗಿದ್ದ ಇಂತಹ ನಮ್ಮ ಕಣ್ಣಮ್ಮ ಮೇಡಂ ಕರಡಿ ಗವಿಯ ಸಾಧುಗಳಾದ ಅಜ್ಜಯ್ಯ ಸ್ವಾಮಿಯವರ ಪರಿಚಯವಾದ ಮೇಲೆ, ಸಾಧುಗಳನ್ನು ಪರೀಕ್ಷೆ ಮಾಡುತ್ತೇನೆಂದು ಅವರೊಡನೆ ವಾದಿಸುತ್ತಾ, ಚರ್ಚಿಸುತ್ತಾ, ಕಡೆಗೆ ಕೆಲಸವನ್ನು ಬಿಟ್ಟುಬಿಟ್ಟು ಸ್ವಾಮಿಗಳ ಜೊತೆಗೇ ಹೊರಟುಹೋಗಿ ಸಂನ್ಯಾಸಿನಿಯಾಗಿ ಬಿಟ್ಟರು. ಈ ಪ್ರಕರಣವೆಲ್ಲಾ ನನ್ನ ತಂದೆಯ ಮನೆಯಲ್ಲಿಯೇ, ತಿಪಟೂರಿನಲ್ಲಿ ನಡೆದದ್ದು. ನಮಗೆಲ್ಲಾ ಮನಸ್ಸಿಗೆ ಬಹಳ ನೋವಾಯಿತು.

ಅವರಿಗಿದ್ದಿದ್ದಿರಬಹುದಾದ ಆಧ್ಯಾತ್ಮಿಕ ಸೆಳೆತಗಳ ಬಗ್ಗೆ ನನಗೆ ಆಗ ಅರಿವಿರಲಿಲ್ಲ. ಅರಿವಿದ್ದರೂ ಅರ್ಥ ಮಾಡಿಕೊಳ್ಳುವ ಪ್ರಬುದ್ಧತೆಯೂ ಹದಿಮೂರು ಹದಿನಾಲ್ಕರ ಹುಡುಗಿಗೆ ಇರಲು ಸಾಧ್ಯವಿರಲಿಲ್ಲ. ಸಂನ್ಯಾಸಿನಿಯಾದ ಮೇಲೆ ಒಮ್ಮೆ ರೈಲ್ವೆ ಸ್ಟೇಷನ್‌ನಲ್ಲಿ ಸಿಕ್ಕಿದ್ದರು. ನನ್ನ ಮೇಲೆ ಅಷ್ಟೊಂದು ಪ್ರಭಾವ ಬೀರಿ, ಮೊದಲ ಬಾರಿಗೆ ನನ್ನ ಹಸಿಮನಸ್ಸಿನಲ್ಲಿ ವೈಚಾರಿಕತೆಯ ಬೀಜಗಳನ್ನು ಬಿತ್ತಿದ ಕಣ್ಣಮ್ಮ ಮೇಡಂನ ಮಾತುಗಳು ನನ್ನ ಮನಸ್ಸಿನಲ್ಲಿ ಎಂದೂ ಹಸಿರಾಗಿರುತ್ತವೆ. ಅವರು ಹೇಳುತ್ತಿದ್ದರು, "ಶಾಂತಕುಮಾರಿ, ಯಾವುದನ್ನೂ ಯಾರನ್ನೂ, ಕಡೆಗೆ ಗುರುಗಳನ್ನೂ, ಸಾಧುಗಳನ್ನೂ ಪರೀಕ್ಷೆ ಮಾಡದೆ ಒಪ್ಪಿಕೊಳ್ಳಬೇಡ. ನಿನಗೇನೂ ತಿಳಿಯುವುದಿಲ್ಲ, ನೀನು ತಿಳಿದುಕೊಳ್ಳುವುದು ಬಹಳ ಇದೆ..." ನನ್ನ ತಂದೆ ತಾಯಿ ನನಗೆ ಹದಿಮೂರು, ಹದಿನಾಲ್ಕಕ್ಕೇ ಮದುವೆ ಮಾಡಿದಾಗ, "ಆ ಹುಡುಗಿಗೆ ಏನು ತಿಳಿಯುತ್ತದೆಂದು ಇಷ್ಟು ಬೇಗ ಮದುವೆ ಮಾಡುತ್ತಿದ್ದೀರಿ?" ಎಂದು ಪ್ರಶ್ನಿಸಿದ್ದವರು ಅವರೊಬ್ಬರೇ. ಹೀಗೆ ಎಲ್ಲವನ್ನೂ ಬಿಟ್ಟು, ವೃದ್ಧಾಪ್ಯದಿಂದ ನಡುಗುತ್ತಿದ್ದ ಅಜ್ಜಯ್ಯನವರ ಜೊತೆ ಹೋದ ನಮ್ಮ ಮೇಡಂ ಏನಾದರು ಕಡೆಗೆ ಎಂಬ ಚಿಂತೆ ಕೊರೆಯುತ್ತಿತ್ತು. ಅವರಿವರಿಂದ

ಕೆಲವು ಸಂಗತಿಗಳು ತಿಳಿದರೂ ಅಧಿಕೃತವಾಗಿ ಏನೂ ತಿಳಿದಿರಲಿಲ್ಲ. ತೀರಾ ಈಚೆಗೆ, ಒಂದೂವರೆ ವರ್ಷದ ಹಿಂದೆ, ಬೆಳಗೆರೆ ಕೃಷ್ಣಶಾಸ್ತ್ರಿಗಳು, 'ಮರೆಯಲಾದೀತೇ' ಎಂಬ ಗ್ರಂಥದಲ್ಲಿ ಕಣ್ಣಮ್ಮನವರ ಬಗೆಗೆ (ಶರಣಮ್ಮ) ಬರೆದಿರುವ ಲೇಖನದಲ್ಲಿ ನಮ್ಮ ಮೇಡಂ ಅವರು ಶರಣಮ್ಮನಾದ, ಹಾಗೂ ಇವರ ಜೀವನದ ಹಲವು ಪದರುಗಳ ಪರಿಚಯವಾಯಿತಲ್ಲದೆ, ಅವರು ನಿಧನರಾದದ್ದು, ಮತ್ತು ಕೃಷ್ಣಶಾಸ್ತ್ರಿಗಳು ಅವರ ಬಳಿಯಿದ್ದು ಕೊನೆಗಾಲದಲ್ಲಿ ಅವರನ್ನು ನೋಡಿಕೊಂಡಿದ್ದು ತಿಳಿಯಿತು. ಅಷ್ಟು ಪ್ರೀತಿಯಿಂದ, ಅಷ್ಟೇ ಶಿಸ್ತಿನಿಂದ ಕಲಿಸಿ ವಿದ್ಯಾರ್ಥಿಗಳ ಮನಸ್ಸನ್ನು ಸರಿಯಾದ ಮಾರ್ಗದಲ್ಲಿ ರೂಪಿಸುತ್ತಿದ್ದ ಕಣ್ಣಮ್ಮ ಮೇಡಂನಂತಹವರು ತೀರಾ ಅಪರೂಪ.

ಹೈಸ್ಕೂಲಿನಲ್ಲಿ ನನ್ನ ಕನ್ನಡ ಬರವಣಿಗೆಯನ್ನು ತಿದ್ದಿ, ಅದಕ್ಕೊಂದು ರೂಪ ಬರುವಂತೆ ಮಾಡಿ, ಕನ್ನಡ ಸಾಹಿತ್ಯದ ಬಗೆಗೆ ಆಸಕ್ತಿ ಮೂಡಿಸಿದವರು, ನಮ್ಮ ಕನ್ನಡ ಮೇಷ್ಟ್ರು ಡಿ. ಗಂಗರಾಜು ಅವರು. ಯಾವುದೇ ಶಾಲೆಗೆ ಹೋಗದೇ, ಯಾವುದೇ ಶಿಸ್ತಿಗೆ ಒಳಪಟ್ಟಿರದಿದ್ದರಿಂದ ನನ್ನ ಕೈಬರಹ ತೀರಾ ಹೊಲಸಾಗಿತ್ತು. ನಮ್ಮ ಮೇಷ್ಟ್ರು ಒಮ್ಮೆ ಪ್ರಬಂಧ ಬರೆಯಲು ಕೊಟ್ಟರು, 'ರೈಲು ಪ್ರಯಾಣ' ಎಂದು. ಎಲ್ಲರೂ ಬರೆದು ಕೊಟ್ಟೆವು. ಮರುದಿನ ತರಗತಿಯಲ್ಲಿ, ಎಲ್ಲರ ಪುಸ್ತಕಗಳನ್ನೂ ತಂದು ಮೇಷ್ಟ್ರು ಪ್ರಬಂಧದ ಗುಣಾವಗುಣಗಳನ್ನು ಹೇಳಿ, ಮತ್ತೂ ಚೆನ್ನಾಗಿ ಹೇಗೆ ಬರೆಯಬಹುದೆಂದು ವಿವರಿಸಿದರು. ನನ್ನ ಪುಸ್ತಕ ಕಡೆಯಲ್ಲಿ ತೆಗೆದುಕೊಂಡರು. ತಮ್ಮ ಗಡಸು ಧ್ವನಿಯಲ್ಲಿ, ''ಶಾಂತಕುಮಾರಿ, ಏನಿದು, ಹಾಳೆಗಳ ಮೇಲೆ ಬರೆದಿದ್ದೀಯೋ ಇಲ್ಲವೆ ಹೊಲಸು ತಂದು ಎರಚಿದ್ದೀಯೋ, ತಗೋ ಇದನ್ನು ದುಂಡಗೆ ಬೇರೆ ಬರೆದುಕೊಂಡು ಬಂದರೆ ಓದಿ ನೋಡುತ್ತೇನೆ, ಇಲ್ಲದಿದ್ದರೆ ಇಲ್ಲ. ಯಾರು ನಿನಗೆ ಅಕ್ಷರ ಕಲಿಸಿದ್ದು?'' ಎನ್ನುತ್ತಾ ಪುಸ್ತಕವನ್ನು ರೊಯ್ಯನೆ ಎಸೆದರು. ಅಲ್ಲದೇ ಆ ಪ್ರಬಂಧವನ್ನು ನೆಟ್ಟಗೆ ಬರೆದುಕೊಂಡು ಬರವಣಿಗೆಯನ್ನು ಸುಧಾರಿಸಿಕೊಳ್ಳುವ ತನಕ ತಮ್ಮ ಪಾಠಗಳಿಗೆ ಬರುವ ಆವಶ್ಯಕತೆಯಿಲ್ಲವೆಂದೂ ತಿಳಿಸಿಬಿಟ್ಟರು. ನನಗೆ ಕೋಪ, ದುಃಖ ಎರಡೂ ಒತ್ತರಿಸಿಕೊಂಡು ಬಂದವು. ಮೂರು ದಿನ ಕುಳಿತು, ನಮ್ಮ ದೊಡ್ಡಪ್ಪನ ಮಗನಿಂದ ಅಕ್ಷರಗಳನ್ನು ದುಂಡಗೆ ಬರೆಯುವುದು ಹೇಗೆಂದು ಕೇಳಿ, ಪ್ರಬಂಧವನ್ನು ಮತ್ತೆ ಬರೆದು ತೆಗೆದುಕೊಂಡು ಹೋದಾಗ, ಅಷ್ಟೇ ಸಂತೋಷದಿಂದ ಮುಕ್ತವಾಗಿ ಪ್ರಶಂಸಿದರು ಕೂಡ.

ನಮ್ಮ ಹುಡುಗಿಯರ ಇಂಗ್ಲಿಷ್ ಮೋಹವನ್ನು ಅವರು ನಿರ್ದಾಕ್ಷಿಣ್ಯವಾಗಿ ಮೊಟಕು ತ್ತಿದ್ದರು. ತರಗತಿಯಲ್ಲಿ ಪಠ್ಯಪುಸ್ತಕಗಳನ್ನು, ಪದ್ಯಗಳನ್ನು, ಎಲ್ಲರ ಕೈಲೂ ಓದಿಸಿ ನಂತರ ಪಾಠ ಮಾಡುತ್ತಿದ್ದರು. ಇದರಿಂದ ಓದುವುದರಲ್ಲಿ ನಮ್ಮ ತಪ್ಪುಗಳು ಅರಿವಾಗುತ್ತಿದ್ದು, ಉಚ್ಚಾರ ಸರಿಯಾಗುತ್ತಿತ್ತು. ಕುಮಾರವ್ಯಾಸ, ರನ್ನ, ಹರಿಹರ ಮುಂತಾದವರ ಹಲವು ಪದ್ಯಗಳನ್ನು ಪಠ್ಯವಾಗಿರಿಸುತ್ತಿದ್ದುದರಿಂದ, ಈ ಓದಿಸುವ ಕ್ರಮ ಬಹಳ ಉಪಯೋಗವಾಗುತ್ತಿತ್ತು. ಅಲ್ಪಪ್ರಾಣ, ಮಹಾಪ್ರಾಣಗಳ ಉಚ್ಚಾರದ ಬಗೆಗೆ ಅವರು ಬಹಳವೇ ಮಹತ್ವ ಕೊಡುತ್ತಿದ್ದುದಲ್ಲದೇ, ನಾವೆಲ್ಲ ಓದಿಯಾದ ಮೇಲೆ, ಅವೇ ಷಟ್ಪದಿ ಅಥವಾ ಬೇರೆ ಪದ್ಯಗಳನ್ನು

ಪದವಿಭಾಗ ಮಾಡುತ್ತಾ ಓದುತ್ತಿದ್ದರು. ಆಗ ಹೆಚ್ಚು ವಿವರಿಸದೆಯೇ ನಮಗೆ ಆ ಪದ್ಯದ ಅರ್ಥ ಹೊಳೆಯುತ್ತಿತ್ತು. ಇಂಗ್ಲಿಷ್ ಭಾಷೆಯ ಪದಗಳನ್ನು ಉಪಯೋಗಿಸುವುದರ ಬಗೆಗೆ ನಮಗಿದ್ದ ಮೋಹದ ಬಗೆಗೆ ಅವರಿಗೆ ಕೋಪವಿತ್ತೇ ಹೊರತು ಇಂಗ್ಲಿಷ್ ಭಾಷೆಯ ಬಗೆಗಲ್ಲ. ಗಾಂಧೀಜಿಯ ಬಗೆಗಿದ್ದ ಪಠ್ಯ ಪುಸ್ತಕಗಳಲ್ಲಿ "ಕಸ್ತೂರಬಾ ಅವರು ಕಕ್ಕಸುಗಳನ್ನು ಸ್ವಚ್ಛಗೊಳಿಸಬೇಕಾಗಿತ್ತು" ಎಂಬ ವಾಕ್ಯವೊಂದಿತ್ತು. ನಮ್ಮ ತರಗತಿಯ ಹುಡುಗಿಯೊಬ್ಬಳು ಆ ವಾಕ್ಯವನ್ನು ಓದುವಾಗ, "ಕಸ್ತೂರಬಾ ಅವರು ಲೆಟ್ರೀನ್‌ಗಳನ್ನು ಕ್ಲೀನ್ ಮಾಡುತ್ತಿದ್ದರು" ಎಂದು ಓದಿದಳು. ಮೇಷ್ಟ್ರು ಮತ್ತೆ ಓದು ಎಂದಾಗ ಅವಳು ಮತ್ತೆ ಅದೇ ರೀತಿ ಓದಿದಳು. ಗಂಗರಾಜು ಮಾಸ್ತರು ಕ್ರೋಧರಾಜರಾಗಿ ಗುಡುಗಿದರು, "ಇಂಗ್ಲಿಷಿನಲ್ಲಿ ಲೆಟ್ರೀನ್ ಎಂದರೆ, ಅಡಿಗೆ ಮನೆಯಾ? ದೇವರ ಮನೆಯಾ? ಪದದ ಅರ್ಥ ಅದೇ ಇರುವಾಗ ಯಾವ ಭಾಷೆಯಲ್ಲಿ ಓದಿದರೂ ಒಂದೇ ಅಲ್ಲವಾ, ನಿನಗ್ಯಾಕೆ ಈ ಕೀಳರಿಮೆ ಕನ್ನಡ ಪದಗಳ ಬಗೆಗೆ? ಪುಸ್ತಕದಲ್ಲಿ ಹೇಗೆ ಬರೆದಿದೆಯೋ ಹಾಗೇ ಓದು". ಆ ಕೋಪದ ಧ್ವನಿ ಕೇಳಿ 'ನೀರೊಳಗಿರ್ದು ಬೆವರಿದ ಉರಗಪತಾಕ'ನಂತೆ ಆ ಡಿಸೆಂಬರ್ ಛಳಿಯಲ್ಲಿಯೂ ಇಡೀ ತರಗತಿ ಬೆವರಿತ್ತು. ಆ ಹುಡುಗಿ ವಾಕ್ಯವನ್ನು ಪೂರ್ತಿಯಾಗಿ ಕನ್ನಡದಲ್ಲಿ ಓದಿದ ಮೇಲೆ, ಅಂದು ನಮಗೆ, ಇಂಗ್ಲಿಷ್ ಸಾಹಿತ್ಯ, ಅಲ್ಲಿನ ಬರಹಗಾರರು, ಕವಿಗಳು ಎಂದು ಮುಖ್ಯವಾದವರನ್ನು ಪರಿಚಯಿಸಿ, ಶೇಕ್ಸ್‌ಪಿಯರಿನಷ್ಟೇ, ಕಾಳಿದಾಸನೂ ಮುಖ್ಯ, ಪ್ರಪಂಚದ ಪ್ರತಿಯೊಂದು ಭಾಷೆಯೂ ಆಯಾ ಜನಾಂಗ ಬೆಳೆದುಬಂದ ರೀತಿನೀತಿಗಳ ಸಾಕ್ಷಿಯಾಗಿದ್ದು, ಆ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ನೀವು ಭಾಷೆಯಲ್ಲಿ ರೂಢಿಯಾಗಿರುವ ಪದಗಳನ್ನು ಉಪಯೋಗಿಸದೇ ಇದ್ದುಬಿಟ್ಟರೆ ನಿಧಾನವಾಗಿ ಭಾಷೆ ನಶಿಸುತ್ತದೆ ಎಂದೆಲ್ಲಾ ಹೇಳಿದ್ದರು.

ಅವರ ಮಾತುಗಳ ಮಹತ್ವ ಅಂದು ನಮಗೆ ಸರಿಯಾಗಿ ಅರ್ಥವಾಗಿರಲಿಲ್ಲ. ಒಂದು ಜನಾಂಗವನ್ನು ನಾಶಪಡಿಸಬೇಕಾದರೆ, ಮೊದಲು ಅವರ ಭಾಷೆಯನ್ನು ನಾಶ ಮಾಡಬೇಕು ಎನ್ನುವ 'ತತ್ವ' ಈಗ ಮನದಟ್ಟಾಗುತ್ತಿದೆ. ಈಗ ಯೋಚಿಸಿದರೆ ನಮ್ಮ ಮೇಷ್ಟ್ರು ಎಷ್ಟು ದೂರದರ್ಶಿಗಳಾಗಿದ್ದರು ಎಂದು ಆಶ್ಚರ್ಯವಾಗುತ್ತದೆ. ನಾನು ಕನ್ನಡದಲ್ಲಿ ಒಂದೆರಡು ವಾಕ್ಯ ಬರೆಯಲು ಕಲಿತಿದ್ದರೆ ಅದು ನಮ್ಮ ಡಿ. ಗಂಗರಾಜು ಅವರಿಂದ.

■ ಎಲ್. ವಿ. ಶಾಂತಕುಮಾರಿ, ೧೫೮, ರಾಮರಕ್ಷಾ, ೫ನೇ ಮೇನ್, ೫ನೇ ಕ್ರಾಸ್
ಪೂರ್ಣಪ್ರಜ್ಞ ಲೇಔಟ್, ಬನಶಂಕರಿ, ಬೆಂಗಳೂರು-೫೬೦ ೦೮೫ ■

# ಆಯ್ದ ಕವಿತೆಗಳು

– ವಸುಂಧರಾ ದೇಸಾಯಿ

## ೧. ತುಂಬು ತಿಂಗಳು

ತುಂಬು ತಿಂಗಳನ ಕಂಡು
ಉಕ್ಕದ ಸಾಗರ ಒಂದಿಹುದೆ?
ನೆನಪಿನಾಗಸದಿ ನಿನ್ನ
ನಸು ನಗೆಯ ಮೊಗ ಮೂಡಿ
ಮನದಾಳದಿ ಭಾವದಲೆ ನರ್ತಿಸಲು
ಸಂ
ಭ್ರಮದಿ ಮತ್ತೆ ಕವನಿಸಿದೆ.

## ೨. ಬಾಡಿಗೆ

ನಿನ್ನ ವಿಶಾಲ ಮನಸಿನ ಮೂಲ್ಯಾಗ ನಂಗ
ಒಂದ್‌ಎ ಅಂಗುಲ ಜಾಗ ಕೊಡು ಹುಡುಗ
ನಿನ್ನುಪಕಾರ ಕಾಪಿಟ್ಕೋತೇನಿ
ಕಣ್ರೆಪ್ಪಿಯೊಳಗ ಕಾಡಿಗೆಯಾಗಿ
ಆಗಾಗ ನಿನ್ನ ಮ್ಯಾಲ ಹಾಡು ಬರ್ದು
ಕಳಸ್ತೇನಿ ಬಾಡಿಗೆಯಾಗಿ.

## ೩. ಸುದ್ದಿ

ದುಃಖದಲಿ ಬಿಕ್ಕುತಿರುವಾಗ ಸಿಕ್ಕು
ಅಕ್ಕರೆಯ ತೋರಿದೆಯಲ್ಲ ಹುಡುಗ,
ಇಲ್ಲಿ ಕೇಳು ತುಸು ಅದರ ಮುಂದಿನ ಸುದ್ದಿ
ಕಣ್ತುಂಬಿ ತುಳುಕಿದ ಕಂಬನಿ
ಉರುಳುರುಳುತ್ತ ತುಟಿ ಸೇರಿದ್ದು
ಉಪ್ಪುಪ್ಪಾಗುವ ಬದಲು
ಸವಿ ಸವಿ ಸಕ್ಕರೆಯಾಗಬೇಕೆ?

## ೪. ತಣಿಯೋಣ ಬಾ

ಚೆದುರಿದ ನನ್ನ ಭಾವಗಳೆಲ್ಲ
ನಿನ್ನೆದುರು ಒಂದಾಗಿ
ಕಾವ್ಯದ ಬಿರಿ ಹೂವು ಉದುರ್‍ಯಾವೋ.
ಒಂದೊಂದಾಗಿ ಆಯ್ದು
ದಂಡೆ ಮಾಡಿರಿಸಿರುವೆ
ಮೂಸೋಣು ಮುಡಿಯೋಣು
ತಣಿಯೋಣು ಬಾರಾ ತಣಿಯೋಣ ಬಾ...

## ೫. ನನ್ನಪ್ಪ

ಬಾಗದ ತಲೆಗೆ ಕೊಕ್ಕರೆ ಗರಿ ಟೊಪ್ಪಿಗೆ
ಕುಗ್ಗದ ಎದೆಗೆ ಖಾದಿ ಜುಬ್ಬ
ದಣಿವರಿಯದ ನಡಿಗೆ
ಗುಡುಗು ನಾಚಿತ್ತು ನುಡಿಗೆ

ಮಲಗಿದ್ದಾನೆ ಕಾಲನ ತುಳಿತಕ್ಕೆ ಸಿಕ್ಕಿ
ಮುಲುಗಿದ್ದಾನೆ
ಮನೋಬುದ್ಧಿ ನಲುಗಿಲ್ಲ
ಕಂಠದರ್ಬುದದ ಕಗ್ಗಂಟು ಹೊತ್ತರೂ
ತುಸುವೂ ಎಗ್ಗಿಲ್ಲದ ನಿರ್ಭೀತ ವಿಷಕಂಠ

ವಿಧಿ ಎಸೆದ ಘೋರ ಸವಾಲುಗಳ
ಛಲದಿ ಎದುರಿಸಿ ಗೆದ್ದ ಬಲವಂತ
ಕಾಲಕೂಟದ ಕಟು ನಂಜನುಂಡುಂಡು
ನಗುತಲೇ ಬಾಳಿ ನಗುತಲೇ ನಡೆದ
ಮಹಾಪುರುಷ ಶಿವಭಕ್ತ ನಂಜುಂಡ.

■ ವಸುಂಧರಾ ದೇಸಾಯಿ : ಅವನಿ ಇಂಗ್ಲಿಶ್ ಕ್ಲಾಸಿಸ್, ೫ನೇ ಕ್ರಾಸ್
ರವೀಂದ್ರ ನಗರ, ಶಿವಮೊಗ್ಗ - ೫೭೭ ೨೦೨ ■

## ಅಮ್ಮನ ಪ್ರಭಾವ — ಆರ್. ಮೋಹನ್‌ಕುಮಾರ್

'ಮಕ್ಕಳ ಸ್ಕೂಲ್ಮನೇಲಲ್ವೆ?' ಎಂದು ಹೇಳಿದ ತ್ಯಾಗರಾಜ ಪರಮಶಿವ ಕೈಲಾಸಂರವರ ಕನ್ನಡದ ಮೊತ್ತ ಮೊದಲ ಸಾಮಾಜಿಕ ನಾಟಕದ ಶೀರ್ಷಿಕೆ ಎಲ್ಲ ಕಾಲಕ್ಕೂ ಅನ್ವಯಿಸುತ್ತದೆ. ಮನೆಯೇ ಪಾಠಶಾಲೆ. ಇಲ್ಲಿ ದೊರೆಯುವ ಗೃಹಶಿಕ್ಷಣ, ಭಾವಶಿಕ್ಷಣ ವ್ಯಕ್ತಿತ್ವ ರೂಪಿಸಲು ಮೂಲ ಕಾರಣವಾಗುತ್ತದೆ. ಮಕ್ಕಳಿಗೆ ತಾಯಿಯೇ ಮೊದಲ ಗುರು. ಶಿಕ್ಷಿತ ತಾಯಿ ಮಕ್ಕಳನ್ನು ಸುಸಂಸ್ಕೃತರನ್ನಾಗಿ ಬೆಳೆಸಲು ಕಾರಣವಾಗುವುದು. ಮಕ್ಕಳು ತಾಯಿಂದ ಪ್ರಭಾವಿತರಾಗಿಯೇ ಇರುತ್ತಾರೆ. ಮಕ್ಕಳ ಗುಣಾವಗುಣಗಳಿಗೆ ತಾಯಿ ಆದರ್ಶವಾಗುತ್ತಾಳೆ. ನಾನೂ ನನ್ನ ತಾಯಿ ರುಕ್ಮಿಣಿಬಾಯಿ ಕದಂ ಇವರಿಂದ ಅತೀವ ಪ್ರಭಾವಕ್ಕೆ ಒಳಗಾಗಿದ್ದೇನೆ. ನನ್ನ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ನನ್ನ ಅಮ್ಮನ ಪಾತ್ರ ಅಪಾರವಾಗಿದೆ.

ನನ್ನ ಅಮ್ಮ ಬೆಂಗಳೂರಿನಲ್ಲಿಯೇ ಜನಿಸಿ, ಬೆಳೆದವರು. ನನ್ನ ಅಜ್ಜ (ನನ್ನ ತಾಯ ತಂದೆ) ಬೆಂಗಳೂರಿನ ಹೆಸರಾಂತ ವ್ಯಾಪಾರಿಗಳೂ ಶ್ರೀಮಂತರೂ ಮಹಾದಾನಿಗಳೂ ಆಗಿದ್ದ ರಾಮಚಂದ್ರರಾವ್ ಶಿಂಧ್ಯೆಯವರು. ಇವರ ಹತ್ತು ಮಕ್ಕಳಲ್ಲಿ ನನ್ನ ಅಮ್ಮನೂ ಒಬ್ಬರು. ನನ್ನ ಅಮ್ಮ ಶ್ರೀಮಂತ ಕುಟುಂಬದಿಂದ ಬಂದವರಾದರೂ ಸಜ್ಜನಿಕೆ, ಸರಳತೆ, ಸುಸಂಸ್ಕಾರವನ್ನು ಅವರ ತಂದೆ ತಾಯಿಗಳಿಂದ ಕಲಿತಿದ್ದರು. ಶಾಲೆಗೆ ಹೋಗದೇ ಮನೆಯಲ್ಲಿಯೇ ಏಳನೆಯ ತರಗತಿಯ ವರೆಗೂ ಕಲಿತಿದ್ದರು. ಅಂದಿನ ಸಂಪ್ರದಾಯದಂತೆ ಹದಿಮೂರು ವರ್ಷಕ್ಕೆ ಮದುವೆಯಾಗಿದ್ದರು. ನನ್ನ ತಂದೆ ಎಸ್. ವಿ. ರಂಗರಾವ್ ಕದಂರವರು ಕೋಲಾರ ಜಿಲ್ಲೆಯ ಚಿಕ್ಕಶಿವಾರದ ಜೋಡಿದಾರರೂ ಶೇಕ್‌ದಾರರೂ ಆಗಿದ್ದ ವೆಂಕಟರಾವ್ ಕದಂರವರ ಕಿರಿಯ ಪುತ್ರ. ನನ್ನ ತಂದೆಯವರು ಸೆಶನ್ ಹಾಗೂ ಡಿಸ್ಟ್ರಿಕ್ಟ್ ಜಡ್ಜ್ ಆಗಿದ್ದರು. (ನಿಟ್ಟೂರು ಶ್ರೀನಿವಾಸರಾವ್‌ರವರ ಸಮಕಾಲೀನರು.)

ನಮ್ಮ ತಾಯಿ ತಂದೆಯರಿಗೆ ನಾವು ಹನ್ನೆರಡು ಮಕ್ಕಳು. ನನಗೆ ಆರು ಮಂದಿ ಅಕ್ಕಂದಿರು, ಇಬ್ಬರು ಅಣ್ಣಂದಿರು, ಇಬ್ಬರು ತಮ್ಮಂದಿರು, ನಾನು ಹತ್ತನೆಯ ಮಗ.

ನನ್ನ ತಾಯಿಯವರು ಮದುವೆಯ ನಂತರ ಮೆಟ್ರಿಕ್ಯುಲೇಶನ್ ಉತ್ತೀರ್ಣರಾದರು.

ಕನ್ನಡ, ಇಂಗ್ಲಿಷ್, ಹಿಂದೀ, ಮರಾಠೀ, ತೆಲುಗು, ಸಂಸ್ಕೃತವನ್ನು ಓದುತ್ತಿದ್ದರು. ಸಂಸ್ಕೃತ ಭಾಷೆಯನ್ನು ಹೊರತುಪಡಿಸಿ ಮೇಲೆ ಉಲ್ಲೇಖಿಸಿರುವ ಭಾಷೆಗಳನ್ನು ಮಾತಾಡುತ್ತಿದ್ದರು, ಬರೆಯುತ್ತಿದ್ದರು.

ಹೆಣ್ಣುಮಕ್ಕಳಿಗೆ ಶಾಲೆಗೆ ಕಳುಹಿಸದಿದ್ದ ಕಾಲದಲ್ಲಿ ಆರು ಹೆಣ್ಣುಮಕ್ಕಳಿಗೂ ಮೆಟ್ರಿಕ್ಯುಲೇಶನ್ ಮಾಡಿಸಿದರು. ನನ್ನ ಮೂವರು ಅಕ್ಕಂದಿರು ಪದವೀಧರರಾಗಿದ್ದಾರೆ. ಗಂಡು ಮಕ್ಕಳಿಗೂ ಉನ್ನತ ಶಿಕ್ಷಣವನ್ನು ಕೊಡಿಸಿದರು.

ನಾನು ಹೈಸ್ಕೂಲಿಗೆ ಬರುವ ವರೆಗೂ ಕನ್ನಡ ಹಾಗೂ ಇಂಗ್ಲಿಷ್ ಪಾಠವನ್ನು ನನ್ನ ಅಮ್ಮನೇ ಕಲಿಸಿದರು. ನನ್ನ ಅಮ್ಮ ಗಾಂಧೀವಾದಿಯಾಗಿದ್ದರು. ಅವರಿಗೆ ದೇಶಾಭಿಮಾನ ಅಪಾರ

ವಾಗಿತ್ತು. ನನ್ನ ಅಕ್ಕಂದಿರಿಬ್ಬರು 'ಭಾರತ ಬಿಟ್ಟು ತೊಲಗಿರಿ' ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಸೆರೆಮನೆಗೂ ಹೋಗಿ ಬಂದಿದ್ದಾರೆ. ಚಳುವಳಿಗೆ ನನ್ನ ಅಮ್ಮನ ಪ್ರೋತ್ಸಾಹ ವಿತ್ತು. ಬೆಂಗಳೂರಿನ ವಿಶ್ವೇಶ್ವರಪುರಂನಲ್ಲಿರುವ ನನ್ನ ಮೌಸಿ (ದೊಡ್ಡಮ್ಮ) ಇವರ ಮನೆ ಚಳುವಳಿಗಾರರ ಕೇಂದ್ರವಾಗಿತ್ತು. ಅವರ ಹದಿನಾಲ್ಕು ಮಕ್ಕಳಲ್ಲಿ ಆರು ಹೆಣ್ಣುಮಕ್ಕಳು ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಸ್ವಾತಂತ್ರ್ಯ ದಿನಾಚರಣೆಯನ್ನು, ಗಾಂಧೀ ಜಯಂತಿಯನ್ನು ಒಂದು ಹಬ್ಬದಂತೆ ಆಚರಿಸಲಾಗುತ್ತಿತ್ತು. ಮನೆಯಲ್ಲಿ ಭಾರತ ಧ್ವಜವಿತ್ತು. ನನ್ನ ಅಣ್ಣಂದಿರ ನಂತರ ನಾನು ನಮ್ಮ ಮನೆಯ ಮೇಲಿನ ಧ್ವಜಕಂಬದಲ್ಲಿ ಬಾವುಟ ಹಾರಿಸಿದ ನೆನಪು ಈಗಲೂ ಇದೆ. 'ವಂದೇ ಮಾತರಂ', 'ರಘುಪತಿ ರಾಘವ ರಾಜಾರಾಂ', 'ವೈಷ್ಣವ ಜನತೋ ತೇನೇ ಕಹಿಯೆ' ನಮ್ಮೆಲ್ಲರಿಗೂ ಹೇಳಿಕೊಟ್ಟಿದ್ದರು.

ವರ್ಧಾ ಆಶ್ರಮದ ಸೇವಾ ಕಾರ್ಯದಲ್ಲಿ ತರಬೇತಿ ಪಡೆದು, ಖಾದೀ, ಮಹಿಳಾ ಮಂಡಲಿ, ಅನಾಥಾಶ್ರಮಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಮನೆಯ ಕೆಲಸದವ ರೊಂದಿಗೂ ಒಲವಿನಿಂದ ವರ್ತಿಸಬೇಕು, ದರ್ಪವನ್ನು ತೋರಿಸಬಾರದು ಎಂದು ಹೇಳುತ್ತಿದ್ದರು. ಅವರಿಗೆ ತಾವೇ ಬರೆಯುವುದು ಓದುವುದನ್ನು ಕಲಿಸುತ್ತಿದ್ದರು.

ನನ್ನ ತಂದೆಗೆ ನಾಲ್ಕು ವರ್ಷಗಳಿಗೊಮ್ಮೆ ಬೇರೆ ಬೇರೆ ಜಿಲ್ಲೆಗಳಿಗೆ ವರ್ಗವಾಗುತ್ತಿತ್ತು. ಆಗಿನ ಸಮಾಜದಲ್ಲಿ ವಾರದ ಊಟಕ್ಕೆ ಕೆಲವು ವಿದ್ಯಾರ್ಥಿಗಳು ನಮ್ಮ ಮನೆಗೆ ಬರುತ್ತಿದ್ದರು. ಅಮ್ಮ ಅವರನ್ನು ವಾತ್ಸಲ್ಯದಿಂದ ಕಾಣುತ್ತಿದ್ದರು. ಅವರ ವಿದ್ಯಾಭ್ಯಾಸಕ್ಕೆ ಧನಸಹಾಯ ಮಾಡುತ್ತಿದ್ದರು. ನಮಗೆ ಕಲಿಸುವಾಗ ಆ ವಿದ್ಯಾರ್ಥಿಗಳ ಉಲ್ಲೇಖ ಕೊಡುತ್ತಿದ್ದರು.

'ಸ್ಕೌಟ್' ಬಗ್ಗೆ ಅವರಿಗೆ ವಿಶೇಷ ಅಭಿಮಾನವಿತ್ತು. ನನಗೂ ನನ್ನ ತಮ್ಮಂದಿರಿಗೂ 'ಸ್ಕೌಟ್'ಗೆ ಸೇರಿ ಇತರರ ಸಹಾಯಕ್ಕೆ ಸದಾ ಸಿದ್ಧರಾಗಿರಬೇಕೆಂದು ಹೇಳುತ್ತಿದ್ದರು.

ಕೊಳೆಗೇರಿಗಳಿಗೆ, ಹರಿಜನರ ಕೇರಿಗಳಿಗೆ ನಮ್ಮನ್ನು ಕರೆದುಕೊಂಡು ಹೋಗುತ್ತಿದ್ದರು. ಅಸ್ಪೃಶ್ಯತಾ ಭಾವನೆ ಪಾತಕವೆಂದು ಭಾವಿಸುತ್ತಿದ್ದರು. ಮನೆಗೆ ಶೌಚಾಲಯ ಶುದ್ಧಿಗೆ ಬರುತ್ತಿದ್ದವರೊಂದಿಗೆ ಸೌಜನ್ಯದಿಂದ ವರ್ತಿಸುತ್ತಿದ್ದರು.

ಎಲ್ಲ ಜಾತಿ, ಧರ್ಮದವರೊಂದಿಗೂ ಆತ್ಮೀಯವಾಗಿ ವರ್ತಿಸುವುದನ್ನು ಕಲಿಸಿದರು. ಮಾರಥಮ್ಮ ಹೆಸರಿನ ಕ್ರಿಸ್ತಾನ ಮಹಿಳೆಯೊಬ್ಬರು ನಮ್ಮ ಮನೆಯಲ್ಲಿ ಅನೇಕ ವರ್ಷಗಳಿದ್ದರು. ನಮ್ಮ ಕಾರಿನ ಡ್ರೈವರ್ ಸಯ್ಯದ್ ಹದಿನೈದು ವರ್ಷಗಳು ನಮ್ಮ ಮನೆಯಲ್ಲಿ ಇದ್ದ ವಿಷಯ ನನಗೆ ಚೆನ್ನಾಗಿ ನೆನಪಿದೆ.

ವಾರಕ್ಕೆ ಒಮ್ಮೆ ನಮಗೆ ಚರಕದಲ್ಲಿ ನೂಲುವುದನ್ನು ಕಲಿಸುತ್ತಿದ್ದರು. ಅವರು ಸಂದರ್ಭೋಚಿತವಾಗಿ ಖಾದಿಯನ್ನು ಉಡುತ್ತಿದ್ದರು. ನಮಗೂ ಖಾದಿ ಬಟ್ಟೆಗಳ ಮಹತ್ವವನ್ನು ಹೇಳುತ್ತಿದ್ದರು. ಹೊಲಿಗೆಯಂತ್ರ ನಮ್ಮ ಮನೆಯಲ್ಲಿ ಈಗಲೂ ಇದೆ. ನನ್ನ ಸಮವಸ್ತ್ರ ನಾನು ಹೈಸ್ಕೂಲಿಗೆ ಬರುವ ವರೆಗೂ ನನ್ನ ತಾಯಿಯೇ ಹೊಲಿದು ಕೊಟ್ಟಿದ್ದಾರೆ.

ನನ್ನ ಅಮ್ಮ ಸದ್ಗೃಹಿಣಿ. ನಮ್ಮ ಮನೆಯಲ್ಲಿ ಮೂವತ್ತು ಮಂದಿ ಇದ್ದರು. ಎಲ್ಲರೊಂದಿಗೂ ವಾತ್ಸಲ್ಯದಿಂದ ಇರುತ್ತಿದ್ದರು. ಅಡಿಗೆ ಮಾಡುವವರಿದ್ದರೂ ಮಕ್ಕಳಿಗೆಲ್ಲ ಕೆಲಸ ಕಲಿಯಲು ಹೇಳಿ ಯಾವುದಾದರೂ ಕೆಲಸದಲ್ಲಿ ತೊಡಗಿಸುತ್ತಿದ್ದರು.

ಮನೆಯ ವಹಿವಾಟಿಕೆ ನನ್ನ ತಾಯಿಯದೇ ಆಗಿತ್ತು. ಪ್ರತಿಯೊಂದು ವ್ಯವಹಾರವನ್ನು ಬರೆದಿಡುತ್ತಿದ್ದರು. ನನಗೆ ಕ್ಷೌರಕ್ಕೆ ಕೊಟ್ಟ ಹಣದ ಲೆಕ್ಕವನ್ನೂ ಬರೆದಿಟ್ಟಿದ್ದಾರೆ.

ಸ್ತ್ರೀ ಶಿಕ್ಷಣ, ಸ್ತ್ರೀ ಸಮಾನತೆ, ಸ್ತ್ರೀ ಸ್ವಾವಲಂಬನೆ, ಸ್ತ್ರೀಯರ ಸರ್ವತೋಮುಖ ಏಳಿಗೆಯ ಗುರಿ ಅವರದಾಗಿತ್ತು. ಅಶಿಕ್ಷಿತರಿಗೆ ಕಲಿಸುವುದು, ವಯಸ್ಕರಿಗೆ ಕಲಿಸುವುದು ಅವರಿಗೆ ಬಹಳ ಇಷ್ಟವಾದ ಕೆಲಸವಾಗಿತ್ತು. ಕರಕುಶಲತೆಯಲ್ಲಿ ಅತೀವ ಅಭಿರುಚಿ ಇತ್ತು. ಸಮಯ ದೊರೆತಾಗಲೆಲ್ಲ ಸೂಜಿ ದಾರವನ್ನು ಕೈಗೆ ತೆಗೆದುಕೊಳ್ಳುತ್ತಿದ್ದರು. ಕಾಗದದ ಹೂ, ಪ್ಲಾಸ್ಟಿಕ್ ವೈರ್‌ಗಳಿಂದ ವಾಸ್, ಬ್ಯಾಗ್ ಹೆಣೆಯುವುದು, ಪ್ಲಾಸ್ಟರ್ ಆಫ್ ಪ್ಯಾರಿಸ್ ಗೊಂಬೆ ಮಾಡುವುದು; ರದ್ದಿ ಕಾಗದಗಳಿಂದ ಕಲಾತ್ಮಕವಾಗಿ ರಚನೆ, ಚಿತ್ರ ಬಿಡಿಸುವುದು, ಕಪ್ಪೆಚಿಪ್ಪುಗಳಲ್ಲಿ ಗೊಂಬೆ ತಯಾರಿಕೆ; ಅಲ್ಲದೆ, ಮದ್ರಾಸಿನಿಂದ ಮುಖಗಳನ್ನು ತರಿಸಿ ಗೊಂಬೆಗಳನ್ನು ತಯಾರಿಸುತ್ತಿದ್ದರು. ಅನೇಕರಿಗೆ ಹೇಳಿಕೊಟ್ಟು ಅವರಲ್ಲಿ ಅಭಿರುಚಿಯನ್ನೂ ಸ್ವಾವಲಂಬನೆಯನ್ನೂ ಬೆಳೆಸುತ್ತಿದ್ದರು.

ನನ್ನ ಅಕ್ಕಂದಿರ ಮೇಲೆ ನನ್ನ ಅಮ್ಮನ ಪ್ರಭಾವ ಬಹಳವಾಗಿ ಅವರು ಕಲೆಯಲ್ಲಿ ಬಹಳ ಎತ್ತರದಲ್ಲಿ ಬೆಳೆದಿದ್ದಾರೆ. ನನ್ನ ತಾಯಿ ಚಿತ್ರಗಳನ್ನು ಸೊಗಸಾಗಿ ಬಿಡಿಸುತ್ತಿದ್ದರು. ನಮಗೆ ಅಂದಿನ ಕಾಲದಲ್ಲಿ ಹೈಸ್ಕೂಲಿಗೆ ಬರುವ ಪ್ರಾರಂಭದಲ್ಲಿಯೇ ಎ. ಎಸ್. ಮೂರ್ತಿಯವರ ತಂದೆ ಅ. ನ. ಸುಬ್ಬರಾವ್ ಅವರ ಕಲಾಮಂದಿರಕ್ಕೆ ಕಳುಹಿಸುತ್ತಿದ್ದರು. ನಾನು ಆ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲಿಲ್ಲ. ಆದರೆ ನನ್ನ ಒಡಹುಟ್ಟಿದವರೆಲ್ಲರೂ ಕಲಾವಿದರಾಗಿದ್ದಾರೆ.

ನನ್ನ ತಾಯಿ ಸಂಗೀತಪ್ರೇಮಿ. ಎಂ. ಎಸ್. ಸುಬ್ಬುಲಕ್ಷ್ಮಿಯವರ ಅಭಿಮಾನಿ. ಸುಂದರಾಂಬಾಳ್ ಸಂಗೀತವೆಂದರೂ ಅಭಿಮಾನ. ಆರು ಹೆಣ್ಣುಮಕ್ಕಳಲ್ಲಿ ಒಬ್ಬೊಬ್ಬರಿಗೆ ಒಂದೊಂದು ವಾದ್ಯಗಳನ್ನು ಕಲಿಸಿದ್ದಾರೆ.

ನಾಟಕಗಳನ್ನು ನೋಡುವುದರಲ್ಲಿ ಅವರಿಗೆ ಅಭಿರುಚಿ ಇತ್ತು. ನಾಟಕ ಬರೆಯುವುದು, ನಾಟಕದಲ್ಲಿ ಅಭಿನಯಿಸುವುದು ನನಗೆ ನನ್ನ ತಾಯಿಯ ತುಂಬು ಹೃದಯದ ಪ್ರೋತ್ಸಾಹದಿಂದಲೆ ಅಂಬುವುದನ್ನು ಅಭಿಮಾನದಿಂದ ಹೇಳುತ್ತೇನೆ. ಅಂದಿನ ಸಮಯದಲ್ಲಿ ಚಿತ್ರಗಳಿಗಿಂತಲೂ ನಾಟಕಗಳಿಗೆ ಪ್ರಾಶಸ್ತ್ಯವಿತ್ತು. ಗುಬ್ಬಿ ಕಂಪನಿ, ರಾಜರಾಜೇಶ್ವರಿ ಕಂಪನಿ, ಹಿರಣ್ಣಯ್ಯ ಮಿತ್ರಮಂಡಲಿಗಳಲ್ಲಿ ನಡೆದ ಪ್ರತಿ ನಾಟಕಗಳಿಗೂ ನಮಗೆ ಕರೆದುಕೊಂಡು ಹೋಗುತ್ತಿದ್ದರು. ಅವರಿಗೆ ಅಂದಿನ ಕಲಾವಿದರ ಪರಿಚಯವಿತ್ತು. ಅವರ ಬಗ್ಗೆ ಅಭಿಮಾನವಿತ್ತು. ಗುಬ್ಬಿ ವೀರಣ್ಣನವರ ಧರ್ಮಪತ್ನಿ ಬಿ. ಜಯಮ್ಮ, ಸುಭದ್ರಾ ಪಾತ್ರಧಾರಿ ಮಳವಳ್ಳಿ ಸುಂದರಮ್ಮ ನಮ್ಮ ಮನೆಗೆ ಅನೇಕ ಸಲ ಬಂದಿದ್ದಾರೆ. ಮಳವಳ್ಳಿ ಸುಂದರಮ್ಮ ಟಿಕೇಟ್ ಬುಕ್ಕನ್ನು ತಂದು ಕೊಟ್ಟರೆ ನನ್ನ ಅಮ್ಮ ಅದನ್ನು ಮಾರಿ ಹಣ ಕೊಡುತ್ತಿದ್ದರು.

೧೯೬೭ ರಲ್ಲಿ ಉಲ್ಲಾಳ್ ಶೀಲ್ಡ್ ಸ್ಪರ್ಧೆಯಲ್ಲಿ ನಮ್ಮ ನಾಟಕ ತಂಡ ನಾಟಕವನ್ನು ಮಾಡಿದಾಗ ನಾನು 'ಜಹ್ನಾನಾರಾ' ಪಾತ್ರ ವಹಿಸಿದ್ದೆ. ಆ ಪಾತ್ರದ ಉಡುಗೆಯನ್ನು ಸ್ವತಃ ನನ್ನ ತಾಯಿಯವರೇ ತಯಾರಿಸಿಕೊಟ್ಟರು. ೧೯೬೮ ರಲ್ಲಿ ಕಲಾಕ್ಷೇತ್ರದಲ್ಲಿ 'ಪದ್ಮಾವತಿ ಪರಿಣಯ' ನಾಟಕ ಮಾಡಿದಾಗ ಪದ್ಮಾವತಿಗೆ ಕೇಶಶೃಂಗಾರ ಮಾಡಿದರು, ಆ ಪಾತ್ರವನ್ನು ನಾನೇ ಅಭಿನಯಿಸಿದ್ದೆ. ಅನೇಕ ನಾಟಕಗಳ ತಾಲೀಮು ನಮ್ಮ ಮನೆಯಲ್ಲೇ ನಡೆದಿದೆ. ನನ್ನ ತಾಯಿ

ಕಲಾವಿದರಿಗೆ ಕಾಫಿ, ತಿಂಡಿ ಕೊಟ್ಟು ಉಪಚರಿಸಿದ್ದಾರೆ. ಉತ್ತೇಜನ ಕೊಟ್ಟಿದ್ದಾರೆ. ನಾನು ಎಲ್ಲಿಯೇ ನಾಟಕವನ್ನು ಅಭಿನಯಿಸಲಿ, ಅಲ್ಲಿ ನನ್ನ ಅಮ್ಮ ಬರುತ್ತಿದ್ದರು. ತಪ್ಪು ಮಾಡಿದ್ದರೆ ಹೀಗೆಂದು ತಿದ್ದುತ್ತಿದ್ದರು. ಬಾಲ್ಯದಲ್ಲಿ ತುಂಟತನ, ಉದ್ಧಟತನ, ಇದಿರು ಉತ್ತರ ಕೊಟ್ಟರೆ ಹಂಟರ್‌ನಲ್ಲಿ ಹೊಡೆಯುತ್ತಿದ್ದದ್ದೂ ಉಂಟು. ವಾತ್ಸಲ್ಯ ತೋರಿಸಿದುದೂ ಉಂಟು. ಮಕ್ಕಳು ವಿದ್ಯಾವಂತರಾಗಬೇಕೆಂಬ ಮಹಾದಾಕಾಂಕ್ಷೆ ಅವರದಾಗಿತ್ತು.

ಅಧ್ಯಾತ್ಮದಲ್ಲಿಯೂ ನಮಗೆ ಆಸಕ್ತಿ ಮೂಡಿಸಿದ್ದರು. ನನ್ನ ತಾಯಿ ಹಾಗೂ ತಂದೆ ಇಬ್ಬರೂ ಬ್ರಹ್ಮಾನಂದ ಸ್ವಾಮಿಯವರಿಂದ ದೀಕ್ಷೆ ಪಡೆದಿದ್ದರು. ಇಬ್ಬರೂ ಥಿಯೋಸಾಫಿಕಲ್ ಸೊಸೈಟಿಯ ಆಜೀವ ಸದಸ್ಯರಾಗಿದ್ದರು. ಯೋಗ, ಧ್ಯಾನ, ಜಪ ಮಾಡುತ್ತಿದ್ದರು.

ಆರ್ಯ ಸಮಾಜದ ತತ್ವವನ್ನೂ ಪರಿಪಾಲಿಸುತ್ತಿದ್ದರು. ಅವರೇ ನಮಗೆ ಸಂಧ್ಯಾವಂದನೆಯನ್ನು ಹೇಳಿಕೊಡುತ್ತಿದ್ದರು. ಸಂಧ್ಯಾವಂದನೆ ಮಾಡಿದರಷ್ಟೇ ನಮಗೆ ತಿಂಡಿಯನ್ನು ಕೊಡುತ್ತಿದ್ದರು. ಅನಂತಾಶ್ರಮ, ಗೋಸಾಯಿ ಮಠ, ಬ್ರಹ್ಮಾನಂದಾಶ್ರಮ, ಸಿದ್ಧಾರೂಢಾಶ್ರಮಗಳಿಗೆ ಹೋಗುತ್ತಿದ್ದರು. ಬಾಲ್ಯದಲ್ಲಿ ನಮ್ಮನ್ನೂ ಕರೆದುಕೊಂಡು ಹೋಗುತ್ತಿದ್ದರು.

ಮರಾಠೀ ಹಾಗೂ ಕನ್ನಡದಲ್ಲಿ ಕೀರ್ತನೆಗಳನ್ನು ಹಾಡುತ್ತಿದ್ದರು. ಪ್ರತಿನಿತ್ಯ ಸಂಜೆ ಊಟದ ಮೊದಲು ಭಜನೆ ಮಾಡಿಸುತ್ತಿದ್ದರು.

ಕೀರ್ತಿಶನಿಯ ಬೆನ್ನು ಹತ್ತಬಾರದೆಂದು ಹೇಳುತ್ತಿದ್ದರು. ಎಷ್ಟೇ ಸಂಪತ್ತಿರಲಿ, ವಿನಯ, ಸಂಸ್ಕಾರ, ಸರಳತೆ ಇರಬೇಕೆಂಬುದು ನನ್ನ ಅಮ್ಮ ಕಲಿಸಿದ ಪಾಠ. ನನ್ನ ತಾಯಿ ವಿದ್ಯೆ ಕಲಿಯಲು ವಯಸ್ಸಿಲ್ಲ ಎಂದು ಹೇಳುತ್ತಿದ್ದರು. ಅವರು ೭೦ ನೇ ವಯಸ್ಸಿನಲ್ಲಿ ಶೂಟಿಂಗ್ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದಿದ್ದರು.

ಕರಕುಶಲತೆಯಲ್ಲಿ ಅನೇಕ ಪದಕಗಳನ್ನು ಪಡೆದಿದ್ದರು. ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಪ್ರತಿವರ್ಷ ಪುಷ್ಪಪ್ರದರ್ಶನ ನಡೆಯುತ್ತದೆ. ಇಪ್ಪತ್ತು ವರ್ಷಗಳ ಹಿಂದೆ ಆ ಸಂದರ್ಭದಲ್ಲಿ ಮೊಗ್ಗಿನ ಜಡೆ ಸ್ಪರ್ಧೆ ನಡೆಯುತ್ತಿತ್ತು. ನನ್ನ ತಾಯಿ ಇಳಿವಯಸ್ಸಿನಲ್ಲಿ ಮೊಗ್ಗಿನ ಜಡೆ ಹೆಣೆದು ಮೊದಲ ಬಹುಮಾನ ಪಡೆದಿದ್ದಾರೆ.

ಕೊನೆಯ ವರೆಗೂ ಕಲಿಕೆಯಲ್ಲಿ ಅವರಿಗೆ ಆಸಕ್ತಿ ಇತ್ತು. ಹೊಸಹೊಸತನ್ನು ಕಲಿಯುತ್ತಿದ್ದರು. ಪ್ರತಿನಿತ್ಯ ಹನ್ನೊಂದು ಗಂಟೆಗೆ ಮಲಗುವ ಅಭ್ಯಾಸ ಅವರಿಗೆ. ನಿದ್ರೆ ಬರುವ ವರೆಗೂ ಓದುತ್ತಿದ್ದರು. ಅವರಿಗೆ ೮೪ ದಾಟಿದ್ದರೂ ಕಣ್ಣು ಚೆನ್ನಾಗಿ ಕಾಣಿಸುತ್ತಿತ್ತು. ನೆನಪಿನ ಶಕ್ತಿ ಚೆನ್ನಾಗಿತ್ತು.

ಅವರು ನಮಗೆ ಕೊಟ್ಟ ಶಿಕ್ಷಣ 'ಸಮಾಜಸೇವೆ ಮಾಡುವುದು.' ಅವರು ಜೀವಂತವಾಗಿರುವ ವರೆಗೂ ಹಾಗೇ ನಡೆದುಕೊಂಡರು. ಬಡವರ ಮದುವೆಯಾದರೆ ಊಟದ ಚಾಪೆ, ಲೋಟ, ಪಾತ್ರೆ, ಪರಟೆಗಳನ್ನು ಉಚಿತವಾಗಿ ಕೊಡುತ್ತಿದ್ದರು. ನಮ್ಮ ಜನಾಂಗದವರ ಲಗ್ನಗಳಾದರೆ ಕಳಶ, ಕಠಾರಿ, ಮಂಡೋಲಿ (ಬಾಸಿಂಗ), ಗಂಡಿನ ಪೇಟ ಇವುಗಳನ್ನೂ ಕೊಡುತ್ತಿದ್ದರು. ತಮ್ಮ ಬಂಗಾರದ ಆಭರಣಗಳನ್ನು –ಡಾಬು, ಕಾಸಿನ ಸರ, ಮೋಹನಮಾಲಾ, ಝುಮಕಿ, ಇಡಪು, ಬೈತಲೆಬೊಟ್ಟು, ನಾಗರಬಿಲ್ಲೆ, ಜಡೆಬಿಲ್ಲೆಗಳನ್ನು– ತೊಡಿಸಿ ಖುದ್ದಾಗಿ ಅಲಂಕಾರ ಮಾಡುತ್ತಿದ್ದರು. ಮನೆಯ ಬೆಳ್ಳಿಯ ಸಾಮಾನುಗಳನ್ನೂ ಮದುವೆಗೆ ಕೊಡುತ್ತಿದ್ದರು. ಅನೇಕ ಬಡವರ ಮದುವೆಗೆ ಧನಸಹಾಯವನ್ನೂ ಮಾಡಿದ್ದಾರೆ.

ನನ್ನ ಅಜ್ಜ ಹೆಣ್ಣುಮಕ್ಕಳಿಗೆ ಆಸ್ತಿಯಲ್ಲಿ ಸಮಾನ ಹಕ್ಕನ್ನು ಕೊಟ್ಟವರು. ನನ್ನ ತಾಯಿಯವರೂ ಆ ತತ್ವವನ್ನೇ ತಮ್ಮ ಜೀವನದಲ್ಲಿ ಸಾಧಿಸಿ ತೋರಿಸಿದರು.

ಬೇರೆ ಬೇರೆ ಜಿಲ್ಲೆಗಳಿಗೆ ಹೋದಾಗ ಮಹಿಳಾ ಸಮಾಜಗಳನ್ನೂ ಸ್ಥಾಪಿಸಿ ಮಹಿಳಾ ಜಾಗೃತಿ ಮೂಡಿಸಿದ್ದಾರೆ. ಶ್ರೀಮಂತ ಮನೆತನದಿಂದ ಬಂದರೂ ಒಂದು ದಿನದ ಮದುವೆಯನ್ನು ಮಾಡಿ ಬಡವರಿಗೆ ಆದರ್ಶವಾದರು. ೧೯೪೯ ರಲ್ಲಿ ೬೬ ನೇ ವಯಸ್ಸಿನಲ್ಲಿ ತೀರಿಕೊಂಡರು.

ನನ್ನ ತಾಯಿ ನಮಗೆ ಹೇಳಿಕೊಟ್ಟ ಮಂತ್ರ 'ಯತ್ಪರಾರ್ಥಂ ಈ ಶರೀರಂ'. ಇತರರ ಸೇವೆಗಾಗಿಯೇ ಈ ದೇಹಾ ಅಂಬುದಾಗಿ...

ನಾವು ಮಕ್ಕಳು ನಮ್ಮಿಂದಾದ ಅಳಿಲಸೇವೆಯನ್ನು ಮಾಡುವ ಸಂಕಲ್ಪ ತೊಟ್ಟಿದ್ದೇವೆ...

ನನ್ನ ಅಮ್ಮ ಅಂತಿಂಥ ಅಮ್ಮ ಅಲ್ಲ. ಅಂಥ ಅಮ್ಮನ ಪುತ್ರ ಎನಿಸಿಕೊಳ್ಳಲು ನಾನು ಅಭಿಮಾನಪಡುತ್ತೇನೆ. 'ಮಾತೃದೇವೋ ಭವ'. ನನ್ನ ತಾಯಿಯೇ ನನ್ನ ದೇವತೆ.

■ ಡಾ. ಆರ್. ಮೋಹನ್ ಕುಮಾರ್ : ೫೯೭, 'ಸ್ಮೃತಿ', ವಿಶ್ವೇಶ್ವರಪುರಂ,
ಸುಬ್ರಹ್ಮಣ್ಯಸ್ವಾಮಿ ದೇವಾಲಯದ ರಸ್ತೆ, ಬೆಂಗಳೂರು-೫೬೦ ೦೦೪ ■

---

## ಮೂರು ಚಿಂತನ

– ಸಿದ್ಧಲಿಂಗ ಪಟ್ಟಣಶೆಟ್ಟಿ

### ೧. ಹೊಸಬರಾಗೋಣ

ಪ್ರಕೃತಿ ಮಹಾ ಕರುಣಾಳು, ಉದಾರಿ, ಮಹಾದಾನಿ. ಅದು ನಮ್ಮ ಬದುಕಿನೊಳಗ ಪ್ರತಿ ನಿತ್ಯ ಹೊಸ ಹಗಲಿನ ಬೆಳಕ ತೋರಸತಯ್ತಿ, ನಮ್ಮ ಮುಂದ ಹೊಸ ದಿವಸದ ಹಾದಿಯನ್ನ ಹಾಸತಯ್ತಿ, ಹೊಸ ರಾತ್ರಿಯನ್ನ ನೀಡಿ ನಮ್ಮ ದೇಹ ಮತ್ತು ಮನಸ್ಸಿಗೆ ವಿಶ್ರಾಂತಿ ಸಿಗೂಹಂಗ ಮಾಡತಯ್ತಿ. ಹಿಂಗ ಪ್ರತಿ ದಿವಸ, ಪ್ರತಿ ಕ್ಷಣ ಹೊಸ ಉತ್ಸಾಹ, ಹೊಸ ಭಾವ, ಸ್ವರೂಪಗಳನ್ನ ನಮಗ ಕೊಡತಯ್ತಿ; ಪ್ರತಿ ನಿತ್ಯ ಹೊಸ ವ್ಯಕ್ತಿಗಳಾಗಿರಿ, ಹೊಸ ಶಕ್ತಿಗಳಾಗಿರಿ ಅಂತ ಪರೋಕ್ಷ ಸಂದೇಶ ಕೊಡತಯ್ತಿ.

ಪ್ರತಿ ದಿನ, ಪ್ರತಿ ಸಲ ಹೊಸಬರಾಗಬೇಕು, ಹೊಸದನ್ನ ನೋಡಬೇಕು, ಬಯಸಬೇಕು, ವಿಚಾರ ಮಾಡಬೇಕು ಅನ್ನುವುದೇ ಪ್ರಕೃತಿಯ ಈ ಸಂದೇಶದ ಅರ್ಥ. ಸ್ವತಃ ಪ್ರಕೃತಿ ನಿರಂತರ ಹೊಸಾದ ಆಗಿರತಯ್ತಿ. ನಮ್ಮೊಳಗುನೂ ತನ್ನ ಅಂಥದೇ ಪ್ರತಿಕೃತಿಯನ್ನ ನೋಡಬೇಕು ಅಂತಿರತಯ್ತಿ.

ನೀರಾಗ ನೆಲದಾಗ ಗಾಳ್ಯಾಗ ಇರುವ ಪ್ರತಿಯೊಂದು ಜೀವಕ್ಕ ಪ್ರಕೃತಿ ಯಾವಾಗಲೂ ಹೊಸ ಹೊಸ ಭಾವಗಳನ್ನ, ಪ್ರೇರಣೆಗಳನ್ನ ನೀಡತಿರತಯ್ತಿ. ದೇಹ, ಮನಸ್ಸು, ಬುದ್ಧಿ, ವಿವೇಕಗಳನ್ನ ಪೋಷಣೆ ಮಾಡಿಕೊಳ್ಳಲಿಕ್ಕೆ ಪಂಚಭೂತಗಳು ನಮ್ಮ ಸುತ್ತಲೂ ಹರಡ್ಯಾವು. ನೀರು, ನೆಲ, ಗಾಳಿ, ಬೆಂಕಿ, ಇವುಗಳ ಮ್ಯಾಲ ಹಂದರದ್ಹಂಗ ಹರಡಿರುವ ಆಕಾಶ– ಈ ಐಯ್ದೂ ತತ್ವಗಳು ಅನಾದಿ ಕಾಲದಿಂದ ಸಮಸ್ತ ಮನುಕುಲಕ್ಕ ಹೊಸ ಪ್ರಾಣ, ಹೊಸ ವ್ಯಕ್ತಿತ್ವ ಕೊಟಗೊಂತ ಬಂದಿರುವ ಮಹಾಶಕ್ತಿಗಳು.

ಇವು ಯಾವೂ ಒಂದೇ ಒಂದು ಕ್ಷಣಾನೂ ಒಮ್ಮೆ ಇದ್ದಂಗ ಇನ್ನೊಮ್ಮೆ ಇರೂದಿಲ್ಲ. ಕ್ಷಣ ಕ್ಷಣಕ್ಕೂ ಬದಲ ಆಗತಿರತಾವು, ಬೇರೆ ಬೇರೆ ರೂಪ ತಳೆಯತಾವು. ಈ ರೀತಿ

ಹೊಸದಾಗುವುದೇ ಅವುಗಳ ಧರ್ಮ. ಈ ಪಂಚಭೂತಗಳ ಏಕತ್ರ ರೂಪವಾಗಿರುವ ಮನುಷ್ಯನೂ ಇದಕ್ಕ ಹೊರತಾಗಿಲ್ಲ. ಅವನು ಇತಿಹಾಸದುದ್ದಕ್ಕೂ ಹೊಸ ವ್ಯಕ್ತಿ, ಹೊಸ ಮನುಷ್ಯ ಆಗುವ ಪ್ರಯತ್ನ ಮಾಡಿಕೊಂತ ಬಂದಾನ. ಇಂಥ ಪ್ರಯತ್ನದ ಹಾದಿಯೊಳಗ ಒಮ್ಮೊಮ್ಮೆ ಎಡವಿರಬಹುದು, ಆದರ ಅವನು ಎಂದೂ ಸ್ಥಿರವಾಗಿ ನಿಂತಿಲ್ಲ, ಕಲ್ಲಾಗಿ ಕುಂತಿಲ್ಲ. ಅವನು ಹೊಸ ಮನುಷ್ಯನಾಗಿ, ಹೊಸ ಮನಸ್ಸಿನವನಾಗಿ ಮುಂದೆ ಮುಂದೆ, ಸಾಗಿದ್ದರಿಂದ ಅಸಂಖ್ಯಾತ ವೈಜ್ಞಾನಿಕ ಪ್ರಯೋಗಗಳು ಬೆಳಕು ಕಂಡಾವು; ಭೂಮಿ ಮತ್ತು ಆಕಾಶಗಳ ನಡುವಿನ ಗ್ರಹಗಳನ್ನ ಹುಡುಕಿ, ಅವುಗಳ ರಹಸ್ಯಗಳನ್ನ ತಿಳಕೊಂಡು ಅವನ್ನೂ ತನ್ನ ಅಧಿಕಾರದ ಕಕ್ಷೆಯೊಳಗ ತರುವ ಹೊಸ ಹೊಸ ಪ್ರಯತ್ನಗಳನ್ನ ಅವನು ನಡೆಸೇ ಅದಾನು. ನೃತ್ಯ, ಸಂಗೀತ, ಸಾಹಿತ್ಯ, ನಾಟಕ, ಸಿನೆಮಾ ಪ್ರತಿಯೊಂದು ಪ್ರಕಾರದೊಳಗೂ ವಿನೂತನ ಪ್ರಯೋಗಗಳು ನಡದಾವು. ತಾನು ಹೊಸ ಹೊಸದನ್ನ ಸಾಧಿಸುವ ಪ್ರಯತ್ನದೊಳಗ ಮನುಷ್ಯ ಎಂದೂ ಸೋತಿಲ್ಲ ಮತ್ತು ಸೋಲುವುದಿಲ್ಲ.

ಗಿಡ ಮರಗಳಿಗೆ ಪ್ರತಿವರ್ಷ ಹೊಸ ಚಿಗುರು ಹೊಸ ಎಲೆ, ಹೊಸ ಬಣ್ಣ ಹೊಸ ಹಣ್ಣು ಬರತಾವು, ಇಡೀ ಪ್ರಕೃತಿಗೆ ಹೊಸ ಕಣ್ಣು ಮೂಡತಾವು. ಹರಿಯುವ ನೀರು, ಸರೋವರದ ತೆರೆ, ಸಮುದ್ರದ ಅಲೆ, ಗಾಳಿಯ ಕಂಪನ, ಧ್ವನಿಯ ಆವರ್ತನ ಇತ್ಯಾದಿ ಪ್ರತಿಯೊಂದರೊಳಗೂ ಹೊಸತನ, ನಾವೀನ್ಯದ ತುಡಿತ ತುಂಬಿರತಯ್ತಿ. ಹಿಂಗಾಗಿ ಋತುಗಳು ಬರತಾವು, ಬದಲಾಗತಾವು, ಮತ್ತ ಹೊಸದಾಗಿ ಬರತಾವು. ವರ್ಷಗಳು, ಹರ್ಷಗಳು, ವಿಷಾದಗಳು ಹೊಸ ಹೊಸ ರೂಪ ತಳೆದು ಬರತಾವು, ನೀವೂ ಹೊಸಬರಾಗಿರಿ ಅಂತ ಹೇಳತಾವು. ಈ ಹೊಸತನವೇ ಮನುಷ್ಯತ್ವದ ಉಸಿರು ಮತ್ತು ಉದ್ದೇಶ್ಯ. ನಮ್ಮ ಮಕ್ಕಳು, ಅವರ ಆಟ-ಪಾಠ, ನಗೆ-ನಲಿವು, ಏಳು-ಬೀಳು ಇತ್ಯಾದಿ ಪ್ರತಿಯೊಂದರೊಳಗೂ ನಾವು ನಮ್ಮನ್ನೇ ಹೊಸ ಆಕಾರ, ಹೊಸ ಸ್ವರೂಪ, ಹೊಸ ಭಾವಲೋಕದೊಳಗ ಕಾಣುವ ಕನ್ನಡಿಗಳಾಗಿರತೇವು, ಹೊಸ ಮನುಷ್ಯರೇ ಆಗಿರತೇವು.

ನಾವು ಎಂದೆಂದಿಗೂ ಹಳಬರಾಗುವುದಿಲ್ಲ. ನಮ್ಮ ಬದುಕಿನ ಒಂದೊಂದು ಅನುಭವ, ಸಫಲತೆ, ವಿಫಲತೆಗಳೆಲ್ಲ ಹೊಸ ಗಳಿಕೆಗಳೇ. ಇವು ಬದುಕಿನ ಮುಂದುವರಿಕೆಗೆ ಹೊಸ ಆಸ್ತಿ ಇದ್ದಂಗ. ಇವೆಲ್ಲ ನಮ್ಮ ನಂತರ ಬರುವ ಹೊಸ ಪೀಳಿಗೆಗೆ ಹೊಸ ದಾರಿ ತುಳಿಯುವ ಹೆಜ್ಜೆಗಳಾಗಿ, ಮೆಟ್ಟಿಲುಗಳಾಗಿ ನೆರವಾಗತಾವು. ಪ್ರತಿಯೊಂದು ಹೊಸತನ ಮುಂಬರುವ ಹೊಸತನಕ್ಕ ಆಧಾರಸ್ತಂಭವಾಗಿ ಅದರ ಪಕ್ಕಕ್ಕೇ ನಿಂತಿರತಯ್ತಿ.

ನಮ್ಮ ಪ್ರತಿಯೊಬ್ಬರ ಬದುಕಿನೊಳಗ ವರ್ತಮಾನಕಾಲವಾಗಿ ಬರುವ 'ಇಂದು' ಅನ್ನೂದು ಭವಿಷತ್‌ಕಾಲದ 'ನಾಳೆ' ಅನ್ನೂದು ಬರುವ ಹೊತ್ತಿಗೆ ಭೂತಕಾಲದ 'ನಿನ್ನೆ' ಆಗಾಕ ಹತ್ತಿರತಯ್ತಿ. ಈ ಪ್ರತಿಯೊಂದು ಕಾಲಕ್ಕೂ ಅವುಗಳ ಭವಿಷ್ಯತ್ತು ಗೊತ್ತಿದ್ದೇ ಇರತಯ್ತಿ. ಆದರ ಹಂಗಂತ ತಿಳಕೊಂಡು ಅವು ಬರೂದನ್ನ ಬಿಡುವುದಿಲ್ಲ. ಇವತ್ತಿನ ಮಟ್ಟಿಗೆರ ತಾನು ಹೊಸದಾಗಿರತೇನಿ ಅನ್ನುವ ನಂಬಿಕೆ, ಆತ್ಮವಿಶ್ವಾಸ ಅವುಗಳ ಕೈ ಹಿಡಿದಿರತಯ್ತಿ. 'ನಿದ್ದೆಗೊಮ್ಮೆ ನಿತ್ಯ ಮರಣ, ಎದ್ದ ಸಲ ನವೀನ ಜನನ' ಅನ್ನುವ ಕವಿವಾಣಿ ಕಾಲಪುರುಷನ ಪ್ರತಿಯೊಂದು ಹೆಜ್ಜೆಯೊಳಗ ಗೆಜ್ಜೆ ಆಡಿಸತಿರತಯ್ತಿ. ಈ ಕಾಲಪುರುಷ ಹೊಸ ಯುಗಾದಿ, ಹೊಸ ದೀಪಾವಳಿ, ಹೊಸ ಹಬ್ಬ, ಹೊಸ ಉತ್ಸಾಹಗಳನ್ನ ನೀಡತಾನ.

ನಾವು ಹೊಸಬರಾಗಬೇಕು ಅನ್ನುವ ಅಪೇಕ್ಷೆ ಪ್ರಕೃತಿಯ ಉಸಿರಾಗಿರತಯ್ತಿ. ಆದ್ದರಿಂದ ನಾವು ಸದಾಕಾಲ ಹೊಸತನ್ನು ಬಯಸೋಣ. ಈ ಕ್ಷಣವೇ ಹೊಸ ವರ್ಷದ ಹೊಸ್ತಿಲ ಮ್ಯಾಲ ನಿಂತು, ಹೊಸ ಹರುಷ ಬೀರೋಣ, ಹೊಸ ಮನಸು ತಳೆಯೋಣ, ಹೊಸಬರಾಗೋಣ.

ಪ್ರಸಾರ : ೧-೧-೨೦೦೬

### ೨. ಸಾವಿಗಂಜದ ಬದುಕು

ಗುಡ್ಡ ಬೆಟ್ಟ ಬಯಲು ತಪ್ಪಲು ಪ್ರದೇಶಗಳಲ್ಲಿ ಹರಿಯುತ್ತ ಅಸಂಖ್ಯಾತ ಗ್ರಾಮಗಳಿಗೆ, ನಗರಗಳಿಗೆ, ನಾಗರಿಕರಿಗೆ, ಪ್ರಾಣಿಗಳಿಗೆ, ಪ್ರಾಣದಾನ ಮಾಡುತ್ತ ಜೀವನ ಸಂಜೀವಿನಿಯಾಗಿ ಹರಿಯುವ ನದಿ ಚಿಮ್ಮುತ್ತ ಪುಟಿಯುತ್ತ ನಲಿಯುತ್ತ ಹೋಗಿ ಸಮುದ್ರದಲ್ಲಿ ವಿಲೀನವಾಗುತ್ತದೆ. ಹೀಗೆ ವಿಲೀನವಾಗುವುದು ನದಿಯ ನಿಲುಗಡೆಯಲ್ಲ, ನದಿಯ ಸಾವಲ್ಲ. ಅದು ಸಮುದ್ರದಲ್ಲಿ ಸೇರುತ್ತದೆ, ಒಂದಾಗುತ್ತದೆ, ಅವುಗಳ ಸಂಗಮವಾಗುತ್ತದೆ. ಈ ಮಿಲನದಿಂದ ನದಿ ಹೊಸ ಆಯಾಮ ಪಡೆಯುತ್ತದೆ, ಸಮುದ್ರ ನವೀನ ವಿಸ್ತಾರ ಹೊಂದುತ್ತದೆ. ಒಂದರ ಇಲ್ಲದಾಗುವಿಕೆಯಲ್ಲಿ ಅದರ ಇನ್ನೊಂದಾಗುವಿಕೆಯ ಆರಂಭವಿರುತ್ತದೆ.

ನದಿ ನಮ್ಮ ಬದುಕಿಗೆ ಒಂದು ಪ್ರತೀಕ. ಜೀವನ ಮತ್ತು ಮರಣಗಳ ಎರಡು ದಂಡೆಗಳ ನಡುವೆ ನಮ್ಮ ಅಸ್ತಿತ್ವದ, ನಮ್ಮ ಇರುವಿಕೆಯ ಬದುಕಿನ ಪ್ರವಾಹ ಅನಂತತೆಯ ಕಡೆಗೆ ಮುಖ ಮಾಡಿ ನಿರಂತರ ಸಾಗಿರುತ್ತದೆ. ಎಡ ಬಲ, ಉತ್ತರ ದಕ್ಷಿಣ, ಆರಂಭ ಅಂತ್ಯ, ಕತ್ತಲೆ ಬೆಳಕು, ಜಯ ಅಪಜಯ, ಜೀವನ ಮರಣಗಳು ಮನುಷ್ಯನ ಸಮಸ್ತ ಚಿಂತನೆಗಳಿಗೆ ದಾರಿ ತೋರಿಸುವ ದಾರ್ಶನಿಕ ಚೈತನ್ಯಗಳು, ಪ್ರೇರಣೆಗಳು. ಸೃಷ್ಟಿಯ ಆರಂಭದಿಂದ, ಜೀವ ಸಂಕುಲದ ಪ್ರಾರಂಭದಿಂದ ಇವು ಒಂದನ್ನೊಂದು ತಬ್ಬಿಕೊಂಡು, ಒಂದಕ್ಕೊಂದು ಹೊಂದಿಕೊಂಡು ಕಾಣದ ಲೋಕಗಳನ್ನು ಹುಡುಕಲು, ತಿಳಿಯದ ಅರ್ಥಗಳನ್ನು ಅರಿಯಲು, ಇಲ್ಲದ ಬಣ್ಣಗಳನ್ನು ಮೂಡಿಸಲು ಸತತವಾಗಿ ಪ್ರಯಾಣ ಮಾಡುತ್ತಿವೆ. ಈ ಸಾತತ್ಯದ ಸತ್ಯವೇ ಜೀವನ, ಪ್ರಗತಿ, ಬದುಕು.

ಇಂಥ ಬದುಕಿಗೆ ಕೊನೆ ಇಲ್ಲ, ಇರುವುದಿಲ್ಲ, ಇರಬಾರದು. ಕೊನೆ ಅಂದರೆ ನಿಲುಗಡೆ, ಸ್ಥಗಿತತೆ, ಸಾವು, ಇಲ್ಲದಾಗುವಿಕೆ. ಬದುಕು ತರಲವಾದದ್ದು, ಪ್ರಿಯವಾದದ್ದು, ಆಪ್ತವಾದದ್ದು. ಹಿಂದಿನ ಕತ್ತಲೆಯ ಕುದುರೆಯ ಮೇಲೆ ಕುಳಿತು, ಮುಂದಿನ ಬೆಳಕಿನ ಭಾವಲೋಕದ ಕಡೆಗೆ ಸಾಗುವುದು ಮಾತ್ರ ಅದಕ್ಕೆ ಗೊತ್ತು. ಅಂಥ ಬದುಕಿಗೆ ಸಾವಿಲ್ಲ. ಆ ಬದುಕು ಸಾವಿಗೆ ಅಂಜುವುದೂ ಇಲ್ಲ. ಸಾವು ಅಂಜಿಸುವಂಥ ಭಾವವೂ ಅಲ್ಲ.

ನದಿ ತನ್ನ ಮೂಲದ ಅಸ್ತಿತ್ವವನ್ನು ಕಳೆದುಕೊಂಡು ಸಮುದ್ರದಲ್ಲಿ ಸೇರಿದಂತೆ, ಬದುಕಿನ ಪ್ರವಾಹ ಸಾವಿನಲ್ಲಿ ಸಂಗಮಗೊಂಡಂತೆ, ಲೌಕಿಕ ಪ್ರಪಂಚದಿಂದ ದೂರವಾಗುವ ಜೀವಾತ್ಮ ಪಾರಲೌಕಿಕವಾಗಿ ಪರಮಾತ್ಮನಲ್ಲಿ ಐಕ್ಯಹೊಂದುತ್ತದೆ. ಇಂಥ ಪರ-ಕಾಯ, ಪರ-ಸ್ವರೂಪ, ಪರ-ಲೋಕ ಪ್ರವೇಶಗಳು ಸಾವಿಗೆ ಅಂಜದೇ, ಸಾವನ್ನು ಗೆಲ್ಲುವ, ಸಾವಿಗೇ ಇನ್ನೊಂದು ಅರ್ಥವನ್ನು ಆಯಾಮವನ್ನು, ಸ್ವರೂಪವನ್ನು ನೀಡುವ ಬದುಕಿನ ಛಲಗಾರಿಕೆಯನ್ನು ವ್ಯಕ್ತಪಡಿಸುತ್ತವೆ.

ಸಾವಿಗಂಜದ ಬದುಕಿನ, ಅರ್ಥಪೂರ್ಣ ಜೀವನದ ಅನೇಕ ಉದಾಹರಣೆಗಳನ್ನು ಇತಿಹಾಸದುದ್ದಕ್ಕೂ ನಮಗೆ ಅನೇಕ ಮಹಾಪುರುಷರು ನೀಡುತ್ತ ಬಂದಿದ್ದಾರೆ. ನಮ್ಮ ಸಾಹಿತ್ಯ ಕೃತಿಗಳು, ಮಹಾಕಾವ್ಯಗಳು, ಶಿಲ್ಪ ಕಲಾಕೃತಿಗಳು, ಗುಹಾಲಯ ಚಿತ್ರಗಳು, ವಿವಿಧ ಕಲೆಗಳು, ಜಾನಪದ ಹಾಡುಗಳು ಸಾವಿಗೆ ಅಂಜದೇ, ಸಾವನ್ನು ಹಿಡಿದು ನಿಲ್ಲಿಸುವ, ಅದಕ್ಕೆ ಜೀವನದ ಪ್ರಾಣಸ್ಪರ್ಶವನ್ನು ನೀಡುವ ಪ್ರಯತ್ನಗಳೇ ಆಗಿವೆ. ರಾಮ, ಕೃಷ್ಣ, ಏಸುಕ್ರಿಸ್ತ, ಮುಹಮ್ಮದ್ ಪೈಗಂಬರ್, ಮಹಾವೀರ, ಬುದ್ಧ, ಬಸವಣ್ಣ, ಗಾಂಧೀಜಿ ಮುಂತಾದ ಅಸಂಖ್ಯಾತ ಮಹಾವ್ಯಕ್ತಿಗಳು ತಮ್ಮ ಬದುಕಿನುದ್ದಕ್ಕೂ ಸಾವಿಗೆ ಅಂಜದೇ, ತಮ್ಮ ನಿರ್ಭೀತ ಹೋರಾಟ, ಸಂಘರ್ಷ, ತ್ಯಾಗ, ಬಲಿದಾನಗಳ ಮೂಲಕ ನಮಗೆ ಆತ್ಮವಿಶ್ವಾಸ, ಶಾಂತಿ, ಸಹನೆ, ಅಹಿಂಸೆ, ಪ್ರೇಮ, ಸದ್ಭಾವಗಳ ಸಂದೇಶ ನೀಡಿದ್ದಾರೆ. ಸಾವು ಒಂದು ರೀತಿಯ ದೀರ್ಘ ವಿಶ್ರಾಂತಿ. ನಮ್ಮ ಸತ್ಕಾರ್ಯಗಳ ಮೂಲಕ ನಾವು ಈ ಸಾವನ್ನು ಗೆಲ್ಲಬೇಕು, ಸಾವಿಗೂ ಬದುಕಿನ ಜೀವಂತಿಕೆಯ ಬಣ್ಣವನ್ನು ಲೇಪಿಸಬೇಕು ಎಂಬುದೇ ಎಲ್ಲ ಮಹಾಪುರುಷರ ಸಂದೇಶದ ಅರ್ಥ. ಸಾವಿಗಂಜದ ಬದುಕು ಲೋಕೋತ್ತರವಾಗುತ್ತದೆ. ಸಾವು ಜೀವನಕ್ಕೆ, ನಿತ್ಯದ ಬದುಕಿಗೆ ಮಾರ್ಗದರ್ಶನ ಮಾಡುತ್ತದೆ; ಸಂಯಮವನ್ನು ಬೋಧಿಸುತ್ತದೆ; ಪ್ರತಿ ಕ್ಷಣ ಅಸೀಮದ ಕಡೆಗೆ ಸಾಗುವ ಪ್ರೇರಣೆ ನೀಡುತ್ತದೆ. ಸಾವು ನಮ್ಮ ನಿಜವಾದ ನಿತ್ಯ ಸಂಗಾತಿ, ಸ್ನೇಹಿತ.

ಪ್ರಸಾರ : ೧೧-೧-೨೦೦೬

## ೩. ವ್ಯಕ್ತಿ ಅಭಿವ್ಯಕ್ತಿ

ಕತ್ತಲೆಯಿಂದ ಬೆಳಕಿನ ಕಡೆಗೆ, ಒಳಗಿನಿಂದ ಹೊರಗಡೆಗೆ, ಶಿಲೆಯಿಂದ ಶಿಲ್ಪದ ಕಡೆಗೆ, ಭಾವದಿಂದ ಭಾಷೆಯ ನಡೆಗೆ, ಸೀಮದಿಂದ ಅಸೀಮದ ಕಡೆಗೆ, ವ್ಯಕ್ತಿಯಿಂದ ಮಹಾವ್ಯಕ್ತಿಯಾಗುವ ದಿಕ್ಕಿನೆಡೆಗೆ ಸಾಗುವ ಭಾವಪ್ರಕಾಶನವೇ ಅಭಿವ್ಯಕ್ತಿ. ಏಕದಿಂದ ಅನೇಕವಾಗುವುದು, ಅಲ್ಪದಿಂದ ಅಪಾರವಾಗುವುದು, ಪದದಿಂದ ಪದಾರ್ಥವಾಗುವುದು, ವ್ಯಕ್ತಿಯಿಂದ ವ್ಯಕ್ತ್ಯಾತೀತವಾಗುವುದು ಅಭಿವ್ಯಕ್ತಿಯ ನೆರವಿನಿಂದಲೇ.

ಅನೇಕ ಮುಖಗಳಿಂದ ವ್ಯಕ್ತಗೊಳ್ಳುವ, ಬೆಳಕಿಗೆ ಬರುವ, ಹೊರಹೊಮ್ಮುವ ಸ್ವಭಾವದಿಂದಾಗಿಯೇ, ಅಂಥ ಶಕ್ತಿಯಿಂದಾಗಿಯೇ ಮನುಷ್ಯ ವ್ಯಕ್ತಿ ಅನಿಸಿಕೊಳ್ಳುತ್ತಾನೆ. ಭಾವನೆಗಳು, ವಿಚಾರಗಳು, ಕಲ್ಪನೆಗಳು, ಶಬ್ದ ಅರ್ಥಗಳ ಸಂಗಮಗಳೇ ಆಗಿರುವ ಭಾಷೆಗಳು ವ್ಯಕ್ತಿಯನ್ನು ಅಭಿವ್ಯಕ್ತಿಯ ಚಿಲುಮೆಯನ್ನಾಗಿಸುತ್ತವೆ.

ವ್ಯಕ್ತಿ ಮತ್ತು ಅಭಿವ್ಯಕ್ತಿ ಎರಡೂ ಸಂಸ್ಕೃತ ಪದಗಳೇ. ಭಾವಗಳನ್ನು ಪ್ರಕಟಗೊಳಿಸುವ ಮನುಷ್ಯನನ್ನು ಲಕ್ಷ್ಯದಲ್ಲಿರಿಸಿಕೊಂಡರೆ ಇದು ಪುರುಷವಾಚಕ ಪದ. ಸ್ತ್ರೀವಾಚಕವೂ ಆಗಬಹುದು. ಇಂಗ್ಲಿಶ್‌ನ a person ಎಂಬುದಕ್ಕೆ ಸಂವಾದಿಯಾಗುತ್ತದೆ. ಭಾವಗಳು ಪ್ರಕಟಗೊಳ್ಳುವಿಕೆ ಅಥವಾ ಪ್ರಕಟಗೊಳ್ಳುವ ಕ್ರಿಯೆ ಎಂದಾದರೆ ಇದು ನಪುಂಸಕ ಪದವಾಗುತ್ತದೆ. ಭಾವಗಳ ಸ್ಪಷ್ಟತೆ, ವಾಸ್ತವಿಕ ಪ್ರಕೃತಿ ಎಂಬ ಅರ್ಥಗಳೂ ಸ್ಫುರಿಸುತ್ತವೆ. ಆದರೆ ಭಾಷೆಯ ವ್ಯಾವಹಾರಿಕ ಬಳಕೆಯಲ್ಲಿ ಅಥವಾ ಸಾಹಿತ್ಯಿಕ ಪದಪ್ರಯೋಗಗಳ ಸಂದರ್ಭದಲ್ಲಿ ವ್ಯಕ್ತಿ ಎಂಬ ಪದವನ್ನು ಭಾವಗಳನ್ನು ದ್ಯೋತಿಸುವ, ಭಾಷೆಯ ಪದಗಳನ್ನು ಪ್ರಯೋಗಿಸುವ,

ಚಿಂತನೆಯ ಕ್ರಮಗಳಿಂದ ಬದುಕನ್ನು, ಸಮಾಜವನ್ನು, ಸಂಸ್ಕೃತಿಯನ್ನು ನಿರ್ಮಿಸುವ ಮಾನವ ಜೀವಿ, ಮನುಷ್ಯ ಎಂಬ ಅರ್ಥದಲ್ಲಿ ಬಳಸುತ್ತೇವೆ.

ಈ 'ವ್ಯಕ್ತಿ' ಎಂಬ ಪದಕ್ಕೆ 'ಅಭಿ' ಎಂಬ ಉಪಸರ್ಗವನ್ನು ಪೂರ್ವದಲ್ಲಿ ಜೋಡಿಸಿದರೆ ಸಿದ್ಧವಾಗುವ 'ಅಭಿವ್ಯಕ್ತಿ'ಯ ಅಭಿವ್ಯಕ್ತಿಯೇ ಅಪೂರ್ವದ್ದಾಗುತ್ತದೆ. ಅಭಿ ಆಗತ = ಅಭ್ಯಾಗತ ವಾಗಿ ಎದುರು ಬಂದವ ಎಂದಾಗುತ್ತದೆ. ಅಭಿ ಸಾರವಾದಾಗ ಸಮೀಪ, ಹತ್ತಿರ ಎಂದಾಗುತ್ತದೆ. ಅಭಿಷೇಕವಾಗಿ ಮೇಲೆ, ಮೇಲಿನಿಂದ ಎಂಬ ಅರ್ಥ ಧ್ವನಿತವಾಗುತ್ತದೆ. ಅಭಿಧರ್ಮವಾದರೆ ಉತ್ತಮ, ಶ್ರೇಷ್ಠ ಎಂದಾಗುತ್ತದೆ. ಅಭಿನವ ಮುಂತಾದವುಗಳಲ್ಲಿ ಹೆಚ್ಚಿನ ಎಂದು ಅರ್ಥ. ಮತ್ತೆ ಮತ್ತೆ ಎಂಬ ಅರ್ಥ ಸೂಚಿಸುವಾಗ ಇದು 'ಅಭ್ಯಾಸ'ವಾಗುತ್ತದೆ. ಹೀಗೆ ಭಾಷೆಗೆ, ಭಾವಗಳ ಅಧಿಕಾಧಿಕ ಸಮರ್ಥ, ಉಚಿತ ಅಭಿವ್ಯಕ್ತಿಗೆ ಈ ಉಪಸರ್ಗ ಬಹಳ ನೆರವಾಗುತ್ತದೆ. ಒಟ್ಟಾರೆಯಾಗಿ ಅಭಿವ್ಯಕ್ತಿಯಲ್ಲಿ ಪ್ರಕಟಗೊಳ್ಳುವಿಕೆ, ಕಾರ್ಯ ಕಾರಣಗಳ ಸಂಬಂಧ ವಿವರಣೆ ಮುಂತಾದ ಅರ್ಥಗಳು ಮೈದಳೆಯುತ್ತವೆ.

ಅಭಿವ್ಯಕ್ತಿ ಮನುಷ್ಯನಿಗೆ ಸಿಕ್ಕಿರುವ ಮಹಾಶಕ್ತಿ. ಮಾನವ ಮನಸ್ಸಿನ ಎಲ್ಲ ರೀತಿಯ ಭಾವಗಳು, ಕ್ರಿಯಾ ಕಲಾಪಗಳು; ಅವನ ಮಾನಸಿಕ ಹಾಗೂ ಭೌತಿಕ ಭಾವಗಳು ವಿಚಾರಗಳು ಅಭಿವ್ಯಕ್ತಗೊಳ್ಳುವುದರಿಂದಲೇ ಮನುಷ್ಯ ಮಾನವನಾಗಿ ಉಳಿದಿದ್ದಾನೆ; ದಿನದಿಂದ ದಿನಕ್ಕೆ ಒಳ್ಳೆಯವನಾಗಲು, ಉನ್ನತನಾಗಲು ಯತ್ನಿಸುತ್ತಿದ್ದಾನೆ. ನಾಗರಿಕತೆಗಳ, ಸಂಸ್ಕೃತಿಗಳ ವಿಕಾಸ ಈ ಅಭಿವ್ಯಕ್ತಿಯಿಂದಾಗಿಯೇ ಸಾಧ್ಯವಾಗಿದೆ. ಸಂಗೀತ, ಶಿಲ್ಪ, ನೃತ್ಯ, ಚಿತ್ರಕಲೆ ಮುಂತಾದ ವೈವಿಧ್ಯಪೂರ್ಣ ಕಲೆಗಳು ಹಾಗೂ ಗೇಯ ಗೀತಗಳು, ಕಾವ್ಯ-ಮಹಾಕಾವ್ಯಗಳು, ನಾಟಕ ರಂಗಭೂಮಿ, ಕಥೆ ಕಾದಂಬರಿ, ವೈಚಾರಿಕ ನಿಲುವುಗಳು, ವಿಶ್ಲೇಷಣಾತ್ಮಕ ಲೇಖನಗಳು, ದಾರ್ಶನಿಕ ಚಿಂತನಗಳು ಮುಂತಾದುವೆಲ್ಲ ಅಭಿವ್ಯಕ್ತಿಯ ಪ್ರಸಾದಗಳೇ.

ಓದು-ಬರಹ, ಶಿಕ್ಷಣ, ವೈಜ್ಞಾನಿಕ ಪ್ರಗತಿ, ನಾಗರಿಕ ಬದುಕು ಎಲ್ಲದಕ್ಕೂ ಅಭಿವ್ಯಕ್ತಿಯೇ ಕಾರಣವಾಗಿರುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ಪ್ರತಿಯೊಂದು ರೀತಿಯ ಅಭಿವ್ಯಕ್ತಿ ಅವನ ಸಂಪರ್ಕಕ್ಕೆ ಬರುವ ಇನ್ನೊಬ್ಬ ವ್ಯಕ್ತಿಯ ಮತ್ತೊಂದು ರೀತಿಯ ಅಭಿವ್ಯಕ್ತಿಗೆ ಅನುವು ಮಾಡಿಕೊಡುತ್ತದೆ. ಹೀಗೆ ವ್ಯಕ್ತಿಯನ್ನು ಅವನ ಎಲ್ಲ ರೀತಿಯ ಆಯಾಮಗಳಿಂದ ಆವರಿಸಿರುವ ಅಭಿವ್ಯಕ್ತಿ ಸಮಸ್ತ ಭಾವ ಪ್ರಪಂಚವನ್ನು ಸಂಯಮಿಸಿರುವ, ಸಂಚಾಲಿಸುತ್ತಿರುವ, ಮುನ್ನಡೆಸುತ್ತಿರುವ ಅದ್ಭುತ ಶಕ್ತಿ. ಅಭಿವ್ಯಕ್ತಿಯ ಈ ಶಕ್ತಿ ಪ್ರಕೃತಿಯನ್ನು ಆವರಿಸಿರುವ ನೆಲ, ನೀರು, ಗಾಳಿ, ಬೆಂಕಿ-ಬೆಳಕು, ಆಕಾಶಗಳ ಪಂಚಭೂತಗಳ ವೈವಿಧ್ಯಪೂರ್ಣವಾದ ಅಭಿವ್ಯಕ್ತಿಗೂ ಕಾರಣವಾದದ್ದು ಮನುಷ್ಯನಿಗೆ ವರದಾನವೇ ಆಗಿದೆ.

ಪ್ರಸಾರ : ೨೧-೧-೨೦೦೬
ಆಕಾಶವಾಣಿ, ಧಾರವಾಡ

■ ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ :

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪ ■

## ಪುಸ್ತಕ ಪರಿಶೀಲನೆ

### *೧. ಕಲ್ಲಚ್ಚಿನ ಕನ್ನಡ ಹೊತ್ತಗೆಗಳ ವಿವರಣ ಸೂಚಿ :* ಸಂ. ಗೌ. ಮ. ಉಮಾಪತಿ ಶಾಸ್ತ್ರಿ

ಶ್ರೀ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ, ಉಜಿರೆ-೫೭೪ ೨೪೦, ಪ್ರಮು. ೨೦೦೪, ಪು. ೧೧೨, ರೂ. ೫೦/-

ಲಿಥೋ(ಕಲ್ಲು)ಗ್ರಫಿ(ಲೇಖನ)ಯ ಬಳಕೆ ಕೆಲವು ಕಲಾಕಾರರಿಗೆ ಮಾತ್ರ ಸೀಮಿತಗೊಂಡಿರುವ ಈ ಕಾಲದಲ್ಲಿ ಕಲ್ಲಚ್ಚು(ಶಿಲಾಮುದ್ರಣ) ಎಂದರೇನು ಎಂಬುದನ್ನು ತಿಳಿಸಿಕೊಳ್ಳುವ ಅವಶ್ಯಕತೆ ಇದೆ. ಈ ಕಲ್ಲಚ್ಚು ಪ್ರಕಟನೆಗಳು ಏತಕ್ಕೆ ಮತ್ತು ಎಂದು ಬೆಳಕು ಕಂಡವು, ಎಷ್ಟು ಕಾಲ ಪ್ರಚಾರದಲ್ಲಿದ್ದು ಎಂದು ಅಂತಿಮಗೊಂಡವು ಎಂಬುದನ್ನೂ ನಾವು ತಿಳಿದುಕೊಳ್ಳಬೇಕಾಗಿದೆ. ಇಂತಹ ಒಂದು ಪ್ರಯತ್ನವನ್ನು ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನದ ಗೌ. ನಿರ್ದೇಶಕರಾದ ಪ್ರೊ. ಗೌ. ಮ. ಉಮಾಪತಿ ಶಾಸ್ತ್ರಿಗಳು ಮಾಡಿರುವುದು ಸ್ತುತ್ಯಾರ್ಹ. ಈ ಪ್ರತಿಷ್ಠಾನದ ಸಂಗ್ರಹದಲ್ಲಿರುವ ೪೯ ಕೃತಿಗಳನ್ನು ಪರಿಚಯಿಸುವುದು ಈ ಸಂಪಾದಕರ ಮೂಲ ಉದ್ದೇಶ. ಸುಮಾರು ೫,೦೦೦ ಹಸ್ತಪ್ರತಿಗಳನ್ನು ಹೊಂದಿರುವ ಈ ಸಂಸ್ಥೆಯಿಂದ ಈಗಾಗಲೇ ಯಕ್ಷಗಾನ ಹಸ್ತಪ್ರತಿ ಸೂಚಿ, ಕನ್ನಡ ಹಸ್ತಪ್ರತಿಗಳ ಸೂಚಿ, ತುಳು ಹಸ್ತಪ್ರತಿಗಳ ಸೂಚಿಗಳು ಹೊರಬಂದಿದ್ದು ಈ ಮಾಲಿಕೆಯಲ್ಲಿ ಇದು ನಾಲ್ಕನೆಯದಾಗಿದೆ.

ಯುರೋಪಿನಲ್ಲಿ ಹದಿನೆಂಟನೆಯ ಶತಮಾನದ ಕೊನೆಯ ದಶಕದಲ್ಲಿ ಪ್ರಚಾರಕ್ಕೆ ಬಂದ ಕಲ್ಲಚ್ಚು ಮುದ್ರಣವು ಭಾರತವನ್ನು ಪ್ರವೇಶಿಸಿದ್ದು ಸು. ೧೮೩೬ ರಲ್ಲಿ. ಇದಕ್ಕೆ ಮೊದಲು ಬಳಸಿದ್ದು ಕರ್ನೂಲಿನ ಶಿಲಾಫಲಕವನ್ನು. ಈ ಸಾಹಸಕ್ಕೆ ಕೈ ಹಾಕಿದವರಲ್ಲಿ ಮೊದಲಿಗನು ಮುಂಬಯಿ ಸರಕಾರದ ಶಿಕ್ಷಣಾಧಿಕಾರಿಯಾಗಿದ್ದ ಬಾಳಶಾಸ್ತ್ರೀ ಜಾಂಭೇಕರ್. ಈ ತಂತ್ರವನ್ನು ಬಳಸಿ ಬೆಳಕಿಗೆ ತಂದ ಮೊಟ್ಟ ಮೊದಲ ಗ್ರಂಥ, 'ಸಂಣ ಹಿತೋಪದೇಶ'. ಇಂತಹವುಗಳನ್ನೆಲ್ಲಾ ಪರಿಚಯಿಸಬಲ್ಲವರು ಡಾ. ಶ್ರೀನಿವಾಸ ಹಾವನೂರ ಅವರನ್ನು ಬಿಟ್ಟು ಮತ್ತಿನ್ನಾರಾಗಿರಲು ಸಾಧ್ಯ? ಈ ಪುಸ್ತಿಕೆಗೆ ಅವರು ಬರೆದ ಮುನ್ನುಡಿಯಲ್ಲಿ ಇವು ಮತ್ತು ಇನ್ನಿತರ ವಿವರಗಳಿವೆ. ಈ ಚಿತ್ರವನ್ನು ಉಮಾಪತಿ ಶಾಸ್ತ್ರಿಗಳು ಮತ್ತಷ್ಟೂ ವಿಸ್ತರಿಸಿರುವರು. 'ಆಮುಖ' ಶೀರ್ಷಿಕೆಯಡಿ ಬರೆದ ಸಂಪಾದಕರ ಮುನ್ನುಡಿಯಲ್ಲಿ, ಕಲ್ಲಚ್ಚು ಮುದ್ರಣದ ಆರಂಭಿಕ ಕಾಲದಲ್ಲಿ ಹೆಸರು ಮಾಡಿದ ದಕ್ಷಿಣ ಕನ್ನಡ ಜಿಲ್ಲೆಯ ಅತ್ತಾವರದ ಅನಂತಾಚಾರ್ಯರೆಂಬ ವಿಶ್ವಕರ್ಮಿಯನ್ನು(ಸುವರ್ಣಕಾರ) ಅವರು ಪರಿಚಯಿಸಿರುವರು; ಅಲ್ಲದೆ ಅವರು ಮುಂದೆ ಮುದ್ರಣ ಕ್ಷೇತ್ರವನ್ನು ಪ್ರವೇಶಿಸಿ ಮುಂಬಯಿಯಲ್ಲಿ ಹೇಗೆ ಹೆಸರಾಂತರಾದರೆಂಬುದನ್ನೂ ತಿಳಿಸಿರುವರು. ಹೀಗೆ ಅಕ್ಷರ ಮೂಡಿಸುವವನನ್ನು ಅಮರಸಿಂಹನು 'ಲಿಪಿಕರ', 'ಅಕ್ಷರಚಣ', 'ಅಕ್ಷರಚಂಚು' ಎಂಬ ಪದಗಳಿಂದ ಗುರುತಿಸಿದ ಬಗ್ಗೆ ಶಾಸ್ತ್ರಿಗಳು ನಮ್ಮ ಗಮನ ಸೆಳೆದಿರುವರು.

ನನಗೆ ತಿಳಿದಂತೆ, ನಮ್ಮ ದೇಶದ ಅತಿಪೂರ್ವಕಾಲದ ಶಾಸನಿತ ಲಿಪಿಕಾರನೆಂದರೆ (ಕ್ರಿ.ಪೂ. ೩ ನೆಯ ಶತಕ) ಅಶೋಕನ ಲಘುಶಾಸನಗಳನ್ನು ಚಿತ್ರದುರ್ಗ ಜಿಲ್ಲೆಯ ಬಂಡೆಗಲ್ಲಿನ ಮೇಲೆ ಮಾಡಿಸಿದ 'ಚಪಡ'. ಇವನ ಜನ್ಮಭೂಮಿ ಇಂದಿನ ಅಫಘಾನಿಸ್ಥಾನದಲ್ಲಿತ್ತು. ಅವನ ತಾಯ್ನುಡಿ ಖರೋಷ್ಠೀಯಾಗಿತ್ತು. ಆದರೆ ಅವನು ಬ್ರಹ್ಮಗಿರಿಯಲ್ಲಿ ಕೊರೆದ ಲಿಪಿ ಬ್ರಾಹ್ಮೀ ಮತ್ತು ಬಳಸಿದ ಭಾಷೆ ಪ್ರಾಕೃತವಾಗಿದ್ದವು. ಅವನು ತನ್ನ ವೃತ್ತಿಯನ್ನೂ ತನ್ನನ್ನೂ ಗುರುತಿಸಿಕೊಳ್ಳಲು ಬಳಸಿದ ಪದ 'ಲಿಪಿಕರೇಣ' ಎಂಬುದು. ಹೊರದೇಶದವನಾದರೂ ಇವನು ತನ್ನ ಕಲೆಯನ್ನು ಮೊಟ್ಟಮೊದಲು ಮೆರೆದದ್ದು ಕನ್ನಡ ನಾಡಿನಲ್ಲಿ.

ಕನ್ನಡ ನಾಡಿನಲ್ಲಿ ಕಲ್ಲಚ್ಚು ಪ್ರತಿಗಳನ್ನು ಹೊರತಂದ ಮೊಟ್ಟಮೊದಲ ಸಂಸ್ಥೆ, ಮಂಗಳೂರಿನ ಬಾಸೆಲ್ ಮಿಶನ್. ಮೊದಮೊದಲು ಇದರ ಉದ್ದೇಶವು ಬೈಬಲ್ಲಿನ ಕನ್ನಡ ಭಾಷಾಂತರಗಳನ್ನು ಪ್ರಕಟಿಸಿ, ಕ್ರೈಸ್ತ ಧರ್ಮವನ್ನು ಪ್ರಸಾರ ಮಾಡುವುದಾಗಿದ್ದರೂ ಅದು ಕೂಡಲೇ ದೇಸೀ ಕೃತಿಗಳ ಪ್ರಕಟನೆಯೆಡೆ ತನ್ನ ಗಮವನ್ನು ಹರಿಸಿತು.

ಧರ್ಮಸ್ಥಳದ ಶ್ರೀಪ್ರತಿಷ್ಠಾನದಲ್ಲಿ ರಕ್ಷಿಸಲ್ಪಟ್ಟಿರುವ ಇಂತಹ ಕಲ್ಲಚ್ಚು ಕೃತಿಗಳನ್ನು ಎಂಟು ವಿಭಾಗಗಳಲ್ಲಿ ವಿಂಗಡಿಸಬಹುದು. ಅವು ಕಾವ್ಯ, ಸ್ತೋತ್ರ, ಸ್ಮೃತಿ. ಶಬ್ದಕೋಶ, ಗೆಜೆಟ್ಟು, ವ್ಯವಹಾರ ಬೋಧಕ, ಪಂಚಾಂಗ ಮತ್ತು ವೃತ್ತಪತ್ರಿಕೆ. ೧೯ ನೆಯ ಶತಮಾನದಲ್ಲಿ ಕಲ್ಲಚ್ಚಿಗೆ ಕೀರ್ತಿ ಪಡೆದ ಕೇಂದ್ರಗಳು, ಮಂಗಳೂರು, ಧಾರವಾಡ, ಮೈಸೂರು ಮತ್ತು ಮುಂಬಯಿ; ಇವಲ್ಲದೆ ಬೆಳಗಾವಿ ಮತ್ತು ಸವಣೂರಿಗೂ ಇದರಲ್ಲಿ ಸ್ಥಾನ ಉಂಟು. ಈ 'ವಿವರಣ ಸೂಚಿ'ಯಲ್ಲಿರುವ ಹೆಚ್ಚಿನ ಕೃತಿಗಳು ಕನ್ನಡದಲ್ಲಿವೆ. ಇವುಗಳಲ್ಲಿಯೇ ಹೆಚ್ಚು ಪುಟಗಳನ್ನೊಳಗೊಂಡ ಗ್ರಂಥಗಳಲ್ಲಿ ಭೀಮಕವಿಯ(ಪು. ೬೭೦) ಮತ್ತು ವಿರೂಪಾಕ್ಷಪಂಡಿತನ ಬಸವಪುರಾಣ(ಪು. ೫೪೯)ಗಳು ಗಮನಾರ್ಹ. ಪ್ರತಿ ಗ್ರಂಥದ ಬಗ್ಗೆ ದೊರೆಯುವ ವಿವರಗಳನ್ನು (ಕೃತಿ, ಕಾಲ, ಪುಟ, ಪ್ರಕಾಶಕ. ಮುದ್ರಕ. ಲಿಪಿಕಾರ, ಮುಂ.) ಕೊಟ್ಟು, ಆಯ್ದ ಭಾಗಗಳನ್ನು ನಿದರ್ಶಿಸಿರುವುದಲ್ಲದೆ ಅರ್ಥಪೂರ್ಣವಾದ ಮುನ್ನುಡಿಯನ್ನೂ, ಮುದ್ರಣಕ್ಕೆ ಸಂಬಂಧಿಸಿದ ವಿವರಗಳನ್ನೊಳಗೊಂಡ ನಾಲ್ಕು ಅನುಬಂಧಗಳನ್ನೂ ಸಂಪಾದಕರು ಒದಗಿಸಿ ಈ ಪುಸ್ತಕೆಯ ಹಿರಿಮೆಯನ್ನು ಹೆಚ್ಚಿಸಿದ್ದಾರೆ. ಕಲ್ಲಚ್ಚು ತಂತ್ರದ ಬಗ್ಗೆ, ಆರಂಭ ಕಾಲದ ಮುದ್ರಣ ಇತಿಹಾಸದ ಬಗ್ಗೆ, ಮಿಶನರಿಗಳ ಕಾರ್ಯಾಸಕ್ತಿಯ ಬಗ್ಗೆ, ಕನ್ನಡ ಸಾಹಿತ್ಯವನ್ನು ಪರಿಚಯಿಸಲು ಶ್ರಮಿಸಿದ ಆರಂಭ ಕಾಲದ ಸಂಸ್ಥೆ, ಸ್ಥಳ ಮತ್ತು ವ್ಯಕ್ತಿಗಳ ಬಗ್ಗೆ ಕುತೂಹಲವಿರುವವರೆಲ್ಲರೂ ಈ ಸೂಚಿಯನ್ನು ಉತ್ಸಾಹದಿಂದ ಆಹ್ವಾನಿಸಲೇಬೇಕು.

– **ಡಾ. ಷ. ಶೆಟ್ಟರ್** : ಗೌರವ ನಿರ್ದೇಶಕರು, ಇಂದಿರಾ ಗಾಂಧಿ ರಾಷ್ಟ್ರೀಯ ಕಲಾಕೇಂದ್ರ,
ದಕ್ಷಿಣ ಪ್ರಾದೇಶಿಕ ಕೇಂದ್ರ, ನಂ. ೧೯೯, ಜೆ. ಸಿ. ರಸ್ತೆ, ಬೆಂಗಳೂರು-೫೬೦ ೦೦೨

## ೨. *ಡೊಳ್ಳಿನ ಹಾಡುಗಳು : ಸಮೀಕ್ಷೆ : ಜ್ಯೋತಿ ಹೊಸೂರ*

ಕಾಲಗತಿ ಪ್ರಕಾಶನ, ರಾಯಬಾಗ, ಜಿ. ಬೆಳಗಾವಿ, ಪ್ರಮು. ೨೦೦೩, ಪು.೬೦, ರೂ.೪೦/-

ಈ ಚಿಕ್ಕ ಗ್ರಂಥದಲ್ಲಿ ಪ್ರೊ. ಜ್ಯೋತಿ ಹೊಸೂರ ಅವರು ೨೦೦೩ ರ ವರೆಗೆ ಪ್ರಕಟವಾಗಿರುವ ಡೊಳ್ಳಿನ ಹಾಡುಗಳ ಸಂಕಲನಗಳನ್ನು ಹಾಗೂ ಹಾಡುಗಳನ್ನು ಕುರಿತ ಬರಹಗಳನ್ನು ಪರಿಚಯಿಸಿದ್ದಾರೆ. ಅಧ್ಯಯನದ ಅನುಕೂಲಕ್ಕಾಗಿ ಇದರಲ್ಲಿ ಐದು ಭಾಗಗಳನ್ನು ಮಾಡಿಕೊಳ್ಳಲಾಗಿದೆ. ಡೊಳ್ಳಿನ ಹಾಡಿಗೆ ಬಳಸುವ ಪರಿಕರಗಳು ಹಾಗೂ ಸ್ವರೂಪವನ್ನು ಕುರಿತಂತೆ ಹಾಗೂ ಡೊಳ್ಳಿನ ಹಾಡುಗಳ ಸ್ವರೂಪ-ಬಳಕೆಯ ಸಂದರ್ಭ ಇತ್ಯಾದಿಗಳ ವಿವರಗಳನ್ನು, ಸಾಂಸ್ಕೃತಿಕ ಹಿನ್ನೆಲೆಯನ್ನು ಮೊದಲನೇ ಭಾಗದಲ್ಲಿ ನೀಡಲಾಗಿದೆ. ದೇವ ಮತ್ತು ಭಕ್ತರ ನಡುವಿನ ಒಡೆಯ-ಆಳುಮಕ್ಕಳ ಪದಗಳನ್ನು ಪರಿಚಯಿಸಲಾಗಿದೆ. ಡೊಳ್ಳಿನ ಹಾಡುಗಳನ್ನು ಬಳಸಲು ನಿರ್ದಿಷ್ಟ ಸಂದರ್ಭಗಳಿವೆ, ನಿರ್ದಿಷ್ಟ ದಿನಗಳಿವೆ. ಆದರೆ ಜಾತಿ ಭೇದವಿಲ್ಲ. ಕುರುಬರು / ಹಾಲುಮತಸ್ಥರ ಮೂಲ ಕಸುಬಿಗೆ ಅನುವಾಗುವ ಕುರಿಯನ್ನು ಕುರಿತ ವಿವರ ದೇವರನ್ನು ಹೊರತುಪಡಿಸಿ ಇತರ ಪುರಾಣ ವಿಷಯವನ್ನು ಕುರಿತು ಹಾಡುಗಳಿರಬಹುದು– ಇವು ಮಾರ್ಗೇತರ ಹಾಡುಗಳು. ನಂತರದ ಅಧ್ಯಾಯದಲ್ಲಿ ಜಾನಪದ(folklore)ವನ್ನು ಕುರಿತಂತೆ ಈ ವರೆಗಿನ ಅಧ್ಯಯನಗಳನ್ನು ಕುರಿತು ಚರ್ಚಿಸಲಾಗಿದೆ. ಜನಪದ ವರ್ಗೀಕರಣದಲ್ಲಿ ಐದು ಬಗೆ ಪ್ರೊ. ಹೊಸೂರ ಅವರು ಕಾಣಬಯಸಿದ್ದಾರೆ. ಇಂತಹ ಜಾನಪದ ಹಾಡುಗಳ ಜೊತೆಗೆ ಡೊಳ್ಳಿನ ಹಾಡುಗಳನ್ನು ಬಳಸಿಕೊಂಡಿರುವ ಜನಪದ ಸಂಗ್ರಹಗಳ ಸಮೀಕ್ಷೆಯನ್ನು ಮುಂದಿನ ಅಧ್ಯಯನದಲ್ಲಿ ಮಾಡಲಾಗಿದೆ. ಈ ಭಾಗಗಳಲ್ಲಿ ೧೯೫೩ ರಲ್ಲಿ ಪ್ರಕಟವಾದ ಆರ್. ಎಸ್. ಪಂಚಮುಖಿ ಅವರ 'ಕರ್ನಾಟಕದ ಜಾನಪದ ಗೀತೆಗಳು' ಎಂಬ ಗ್ರಂಥದಿಂದ ೧೯೭೯ ರಲ್ಲಿ ಪ್ರಕಟವಾದ ನೀಲಗಾರರ 'ಜಾನಪದ ಜೇನು' ಎಂಬ ಗ್ರಂಥಗಳ ವರೆಗೆ ೧೪ ಪ್ರಕಟಣೆಗಳನ್ನು ಪರಿಚಯಿಸಲಾಗಿದೆ. ಸಂಪೂರ್ಣ ಡೊಳ್ಳಿನ ಹಾಡುಗಳನ್ನು ಒಳಗೊಂಡ ಪ್ರಕಟಣೆಯ ಪರಿಚಯ ನಂತರದ ಅಧ್ಯಯನದ ಉದ್ದೇಶ. ೧೯೭೬ ರಲ್ಲಿ ಕರ್ನಾಟಕ

ವಿಶ್ವವಿದ್ಯಾಲಯದಿಂದ ಪ್ರಕಟವಾದ ಜೀವನ ಜೋಕಾಲಿ ಭಾಗ-೬ ಸಂಪೂರ್ಣ ಡೊಳ್ಳಿನ ಹಾಡುಗಳನ್ನು ಒಳಗೊಂಡ ಪ್ರಥಮ ಸಂಕಲನವೆಂದು ಹೊಸೂರರು ದಾಖಲಿಸಿದ್ದಾರೆ. ನಂತರದಲ್ಲಿ ೧೯೮೧ ರ ವರೆಗೆ ನಾಲ್ಕು ಸಂಗ್ರಹಗಳು ಮಾತ್ರ ಹೊರಬಂದಿವೆ. ಪ್ರಸ್ತುತ ಅಧ್ಯಾಯದಲ್ಲಿ ಸಂಗ್ರಹಗಳಲ್ಲಿನ ಪರಿವಿಡಿ, ವಿಶೇಷತೆ, ವಿಭಾಗೀಕರಣ, ಪ್ರಾದೇಶಿಕತೆ ಇತ್ಯಾದಿ ವಿವರಗಳನ್ನು ನೀಡಲಾಗಿದೆ.

ಡೊಳ್ಳಿನ ಹಾಡುಗಳನ್ನು ಕುರಿತ ಲೇಖನಗಳನ್ನು ಅಂತಿಮವಾಗಿ ಪರಿಶೀಲಿಸಲಾಗಿದೆ. ಹಲಸಂಗಿ ಗೆಳೆಯರ ಸಂಕಲನದಿಂದ ಆರಂಭವಾಗಿ ಸುಮಾರು ೨೦ ಲೇಖನಗಳನ್ನು ಇದರಲ್ಲಿ ಪರಿಚಯಿಸಲಾಗಿದೆ. ಈ ಲೇಖನಗಳಿಂದ ತಿಳಿದುಬರುವ ಹೆಚ್ಚಿನ ವಿವರಗಳು ಹಾಗೂ ನ್ಯೂನತೆಗಳನ್ನು ಕುರಿತು ಚರ್ಚಿಸಲಾಗಿದೆ. ನೇರ, ಸರಳ ನಿರೂಪಣೆಯ ಮುಖಾಂತರ ಓದುಗರನ್ನು ತಲುಪಬಹುದಾದ ಈ ಗ್ರಂಥ ಡೊಳ್ಳಿನ ಹಾಡು ಹಾಗೂ ಪರಿಸರವನ್ನು, ಅಂತೆಯೇ ಅದಕ್ಕೆ ಸಂಬಂಧಿಸಿದ ಆಕರ ಗ್ರಂಥಗಳನ್ನು ಸೂಕ್ತವಾಗಿ ತೆರೆದಿಟ್ಟಿದೆ.

**– ಡಾ. ಎ. ಮುರಿಗೆಪ್ಪ, ಡಿ-೧೮, ಕ. ವಿ. ವಿ. ವಸತಿ ನಿಲಯ, ಕವಿವಿ ಆವರಣ, ಧಾರವಾಡ-೫೮೦ ೦೦೩**

### ೩. *ಹೊಚ್ಚ ಹೊಸತು ಹವೆ:* ಎಂ. ಎಸ್. ವೆಂಕಟರಾಮಯ್ಯ

ಬಿಜ್‌ಬಜ್ ೨, ೧ನೇ ಕ್ರಾಸ್, ಕಾಳಿದಾಸ ಲೇಔಟ್, ಶ್ರೀನಗರ, ಬೆಂಗಳೂರು-೫೦, ಪ್ರಮು.೨೦೦೫, ಪು.೫೬, ರೂ.೪೦/-

'ಹೊಚ್ಚ ಹೊಸತು ಹವೆ' ಎಂ. ಎಸ್. ವೆಂಕಟರಾಮಯ್ಯ ಅವರ ಎರಡನೆಯ ಕವನ ಸಂಕಲನ. ಈ ಸಂಕಲನದಲ್ಲಿ ಮುವ್ವತ್ತಾರು ಪದ್ಯಗಳಿವೆ. ಈ ಎಲ್ಲ ಪದ್ಯಗಳು ಕಾವ್ಯದ ಮೇಲಣ ಅದಮ್ಯ ಪ್ರೀತಿ ಹಾಗೂ ಉತ್ಸಾಹದಿಂದ ಬರೆದವುಗಳಾಗಿರುವುದರಿಂದ ವಿಷಯ, ವಸ್ತು, ಆಶಯಗಳಲ್ಲಿ ವೈವಿಧ್ಯತೆ ಹರಡಿಕೊಂಡಿದೆ. ವೆಂಕಟರಾಮಯ್ಯನವರು ಯಾವುದೇ ಸಾಹಿತ್ಯಕ ಚಳುವಳಿ, ಪಂಥ, ಪಂಗಡಗಳ ಅಂಗಳದಲ್ಲಿ ಕುಸ್ತಿ ಆಡಿ ಪದ್ಯ ಕಟ್ಟುವ ಪಟ್ಟುಗಳನ್ನ ಕಲಿತವರಲ್ಲವಾದ್ದರಿಂದ ಸಾಹಿತ್ಯ ಕುರಿತು, ಸಾಹಿತ್ಯ ಪ್ರಯೋಜನ ಕುರಿತು ಅವರದೇ ಆದ ನಂಬಿಕೆಗಳು, ನಿಲುವುಗಳು ಇವೆ. ಅವುಗಳೆಲ್ಲಾ ಈ ಸಂಕಲನದಲ್ಲಿ ಯಥೇಚ್ಛವಾಗಿ ಅಭಿವ್ಯಕ್ತಗೊಂಡಿವೆ.

'ಮೋಹಕ್ಕಿಲ್ಲ / ಹೊರ ವಿಶ್ವದ ಚಿಂತೆ / ಕೇಳಿಲ್ಲವೆ ಯಾರೇನಂದರೇನಂತೆ' (ಮೋಹ). ಇಂಥ ಮೋಹವನ್ನು ಕೂಡ ವೆಂಕಟರಾಮಯ್ಯನವರು ಪದ್ಯದ ಬಗ್ಗೆ ಇಟ್ಟುಕೊಂಡಿದ್ದಾರೆ. ಇಲ್ಲಿನ 'ಹೊಚ್ಚ ಹೊಸತು ಹವೆ', 'ಚಿಗುರು ತಂಪೆರವ ಯುಗಾದಿ', 'ಪ್ರಶ್ನೆಗಳು', 'ಅನುಭಾವ', 'ಹಾಡದ ಹಕ್ಕಿ', 'ಏಕೋ ಕಾಣೆ', 'ಉತ್ಖನನ', 'ಬದುಕಿನಾಚೆ' ಮೊದಲಾದ ಪದ್ಯಗಳನ್ನು ಓದಬಹುದಾಗಿದೆ.

ಈ ಹಿರಿಯ ಸಜ್ಜನರ ಕಾವ್ಯ ಕುರಿತು ಸಜ್ಜನಿಕೆಯ ಮುನ್ನುಡಿಯನ್ನು ಜಿ. ಕೆ. ರವೀಂದ್ರಕುಮಾರ್ ಹಾಗೂ ಇಂಥದ್ದೆ ಸಜ್ಜನಿಕೆಯ ಹಿನ್ನುಡಿಯನ್ನು ಡಾ. ಸಂತೋಷ ಚೊಕ್ಕಾಡಿ ಬರೆದಿದ್ದಾರೆ. ಮುಜುಗರ ಮತ್ತು ಸಂಕೋಚಗಳ ನಡುವೆ ವೆಂಕಟರಾಮಯ್ಯನವರ ಕಾವ್ಯ ಕುರಿತು ಕೆಲ ಸೂಕ್ಷ್ಮ ಪ್ರಶ್ನೆಗಳನ್ನ ಎತ್ತಿದ್ದಾರೆ. ವೆಂಕಟರಾಮಯ್ಯನವರು ಆ ಕಡೆ ಕೊಂಚ ಚಿಂತಿಸಿದರೆ ಅವರ ಕಾವ್ಯಕ್ಕೆ 'ಹೊಸ ಹವೆ' ಹಾಯಬಹುದು.

**– ಡಾ. ಪ್ರಹ್ಲಾದ ಅಗಸನಕಟ್ಟೆ, ಸಾರ್ವಜನಿಕ ಸಂಪರ್ಕಾಧಿಕಾರಿ, ಕಿಮ್ಸ್, ಹುಬ್ಬಳ್ಳಿ-೫೮೦ ೦೩೧**

### ೪. *ಅಮ್ಮಣಗಿ: ಒಂದು ಅಧ್ಯಯನ:* ಸಂ. ಪ್ರೊ. ಎಲ್. ವ್ಹಿ. ಪಾಟೀಲ, ಡಾ, ಗುರುಪಾದ ಮರಿಗುದ್ದಿ,

ಪ್ರ. ಕನ್ನಡ ವಿಭಾಗ, ಶ್ರೀ ಶಿವಯೋಗೀಶ್ವರ ಕಲಾ, ಪಟ್ಟಣ ಪಂಚಾಯತ ವಿಜ್ಞಾನ ಮಹಾವಿದ್ಯಾಲಯ, ಸಂಕೇಶ್ವರ, ಜಿ. ಬೆಳಗಾವಿ, ಪ್ರಮು. ೨೦೦೫. ಪು. ೧೩೨, ರೂ. ೬೦/-

ವಿಶ್ವವಿದ್ಯಾಲಯಗಳ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲೇ ಸಂಶೋಧನೆ ಬಡವಾಗುತ್ತಿರುವ ಸಂದರ್ಭವಿದು. ಪದವಿ ಅಧ್ಯಯನವಂತೂ ಒಂದು ನಿರ್ದಿಷ್ಟ ಪಠ್ಯ– ಅದರ ಅವಸರದ ಬೋಧನೆ

ಹಾಗೂ ಮೂರು ತಾಸಿನ ಪರೀಕ್ಷೆಗಳ ಸೀಮಿತ ವರ್ತುಲವಲ್ಲಿ ಜಡಗೊಂಡುಬಿಟ್ಟಿದೆ. ಮಹಿಳೆಯರ ಮೇಲಿನ ಅತ್ಯಾಚಾರವ ಸುದ್ದಿ ಸಮಾಜಶಾಸ್ತ್ರಕ್ಕೂ ರೈತರ ಆತ್ಮಹತ್ಯೆ ಅರ್ಥಶಾಸ್ತ್ರಕ್ಕೂ ಸಂಬಂಧಪಟ್ಟಿರಬಹುದೆಂಬ ಕಲ್ಪನೆಯೂ ಬಾರದಂಥ ಸಂವೇದನಾರಹಿತ ಯಾಂತ್ರಿಕ ಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳು-ಪ್ರಾಧ್ಯಾಪಕರು ಹಾಗೂ ಶಿಕ್ಷಣ ಸಂಸ್ಥೆಗಳು ಹುಗಿದು ಹೋಗುತ್ತಿರುವಂತೆ ಭಾಸವಾಗುತ್ತಿದೆ. ಬೋಧಿಸುತ್ತಿರುವ ತತ್ವಗಳಿಗೂ ಬದುಕಿರುವ ಸಮಾಜಕ್ಕೂ ಇರುವ ಸಂಬಂಧವನ್ನು ಕುರಿತು ಪ್ರಾಯೋಗಿಕವಾಗಿ ಅನುಸಂಧಾನವನ್ನೇರ್ಪಡಿಸಿಕೊಳ್ಳುವ ಪ್ರಮೇಯವೇ ಬರುತ್ತಿಲ್ಲ. ಪಾಂಡಿತ್ಯ ಮತ್ತು ವೈಚಾರಿಕತೆಗಳನ್ನು ರೂಪಿಸಿಕೊಳ್ಳುವ ಮಹತ್ವಾಕಾಂಕ್ಷೆ ಮಾಯವಾಗುತ್ತಿದೆ. ಇಂಥ ಸಂದರ್ಭದಲ್ಲಿ ಪ್ರೊ. ಎಲ್. ವಿ. ಪಾಟೀಲ ಹಾಗೂ ಡಾ. ಗುರುಪಾದ ಮರಿಗುದ್ದಿಯವರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ `ಅಮ್ಮಣಗಿ – ಒಂದು ಅಧ್ಯಯನ` ಕೃತಿ ಒಂದು ವಿಶಿಷ್ಟ ಪ್ರಯತ್ನವಾಗಿದೆ. ೧೧ ಜನ ವಿದ್ಯಾರ್ಥಿಗಳು ಹಾಗೂ ಐವ್ವ ಸಹಾಯಕ ಸಂಶೋಧಕರು ಅಮ್ಮಣಗಿ ಗ್ರಾಮವನ್ನು ಕುರಿತಾಗಿ ನಡೆಸಿದ ಸಾಂಘಿಕ ಅಧ್ಯಯನವನ್ನು ಅಕ್ಷರದಲ್ಲಿ ದಾಖಲಿಸುವ ಪ್ರಯತ್ನವಿದು. ಶ್ರೀ ಶಿವರುದ್ರೇಶ್ವರ ಕಲಾ ಕಾಲೇಜಿನ ಕನ್ನಡ ವಿಭಾಗ ಪದವಿ ಹಂತದಲ್ಲಿಯೇ ವಿದ್ಯಾರ್ಥಿಗಳನ್ನು ಸಂಶೋಧಕರನ್ನಾಗಿ ರೂಪಿಸುತ್ತಿರುವುದು ಸ್ತುತ್ಯಾರ್ಹ ಕೆಲಸ.

ನಮ್ಮ ವೈಚಾರಿಕ ವಲಯದಲ್ಲಿ ನಡೆಯುತ್ತಿರುವ ಗ್ರಾಮ ಅಧ್ಯಯನಗಳು, ಬುಡಕಟ್ಟು ಅಧ್ಯಯನಗಳು ಹಾಗೂ ಜನಾಂಗೀಯ ಅಧ್ಯಯನಗಳು ಹಾಗೂ ಅವು ಕಟ್ಟುತ್ತಿರುವ ಹೊಸ ಚರಿತ್ರೆ ವಿಶ್ವವಿದ್ಯಾಲಯಗಳ ಪದವಿ ಹಂತದ ಪಠ್ಯದಿಂದ ದೂರವೇ ಉಳಿದುಬಿಟ್ಟಿವೆ. ಇಂದಿಗೂ ಪದವಿ ತರಗತಿಗಳ ಇತಿಹಾಸದ ಪುಸ್ತಕಗಳನ್ನು ಗಮನಿಸಿದರೆ ರಾಜಮಹಾರಾಜರ ವೈಭವೋಪೇತ ಬದುಕು ಹಾಗೂ ಯುದ್ಧಗಳಿಗೆ ಸೀಮಿತವಾಗಿವೆ. ಗ್ರಾಮಭಾರತದ ಸ್ಪರ್ಶವೇ ಇಲ್ಲದ, ನೆಲದ ವಾಸನೆಯೇ ಇಲ್ಲದ ಜಡ ಇತಿಹಾಸವದು. ಭಾರತದ ಚರಿತ್ರೆಯೆಂದರೆ ಇಲ್ಲಿಯ ಲಕ್ಷಗಟ್ಟಲೇ ಗ್ರಾಮಗಳ ಚರಿತ್ರೆ ಎಂಬ ಪ್ರಜ್ಞೆಯಿಂದ ವಿದ್ಯಾರ್ಥಿಗಳನ್ನು ಕ್ರಿಯಾಶೀಲಗೊಳಿಸುವ ದೃಷ್ಟಿಯಿಂದ ಕೂಡ ಈ ಪ್ರಯತ್ನ ವಿಶಿಷ್ಟವಾದದ್ದು.

ಅಮ್ಮಣಗಿ ಗ್ರಾಮದ ಭೌಗೋಲಿಕ ವಿವರ, ದೇವಾಲಯಗಳು, ಹಬ್ಬ ಹರಿದಿನಗಳು, ಸಂಘ ಸಂಸ್ಥೆಗಳು, ಗಣ್ಯರು-ಸ್ಮರಣೀಯರು, ಸಾಹಿತಿ ಕಲಾವಿದರು ಇವೇ ಮೊದಲಾದ ಹತ್ತು ಭಾಗಗಳಲ್ಲಿ ಈ ಗ್ರಾಮದ ಚರಿತ್ರೆಯನ್ನು ಕಟ್ಟಲು ಯತ್ನಿಸಲಾಗಿದೆ. ಆದರೆ ಇಲ್ಲಿಯ ಮುಖ್ಯ ಸಮಸ್ಯೆಯೆಂದರೆ ಸಂಪಾದಕರ ಹಾಗೂ ಸಹಾಯಕ ಸಂಶೋಧಕರ ದೃಷ್ಟಿಕೋನದ್ದು. ಈಗಾಗಲೇ ಕನ್ನಡ ಸಂಶೋಧನೆ ಹಾಗೂ ಸಾಂಸ್ಕೃತಿಕ ಅಧ್ಯಯನ ಕ್ಷೇತ್ರದಲ್ಲಿ ತುಂಬಾ ಹಳತಾದ ಸವ್ಕದ ಮಟ್ಟಿಗೆ ಬದ್ದುಹೋದ ಅಧ್ಯಯನ ವಿಧಾನವನ್ನು ಅನುಸರಿಸಲಾಗಿದೆ. ತಮ್ಮದೆಲ್ಲವೂ ಶ್ರೇಷ್ಠವೆಂಬ ಓರಿಯಂಟಲಿಸ್ಟ್ ಮನೋಧರ್ಮ ಇಲ್ಲಿ ಕೆಲಸ ಮಾಡಿರುವದರಿಂದ ಉತ್ತಮವಾದ ಕೆಲವು ಅಂಶಗಳನ್ನು ಕಲೆಹಾಕಿ ಗ್ರಾಮದ ಹಿರಿಮೆ ಗರಿಮೆಗಳನ್ನು ಹಾಡಿ ಹೊಗಳಲಾಗಿದೆ. ಶಾಲೆಯ ಕಟ್ಟಡವನ್ನೂ ಒಟ್ಟು ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆಯನ್ನೂ ಉತ್ಸಾಹದಿಂದ ವಿವರಿಸುವ ಸಂಶೋಧಕರು ಸರಕಾರದ ನಿಗದಿತ ನಮೂನೆಯಲ್ಲಿ ಸಿದ್ಧಪಡಿಸುವ ಜಾತಿವಾರು, ವರ್ಗವಾರು ಪಟ್ಟಿಯನ್ನೊಮ್ಮೆ ಗಮನಿಸಿದ್ದರೆ ಗ್ರಾಮಭಾರತದ ಶೈಕ್ಷಣಿಕ ಶ್ರೇಣೀಕರಣದ ದರ್ಶನವಾಗುತ್ತಿತ್ತು. ಅಮ್ಮಣಗಿ ಗ್ರಾಮದ ಒಟ್ಟು ಮನೆಗಳು, ಓಣಿಗಳು, ಆಸ್ತಿಪಾಸ್ತಿ ಹಂಚಿಕೆ, ಪ್ರತಿ ಮನೆಯ ತಲಾ ವರಮಾನ ಇಂಥ ಸಾಮಾನ್ಯ ಅಂಶಗಳನ್ನು ಕ್ರೋಢೀಕರಿಸಿದ್ದರೂ ಗ್ರಾಮೀಣ ಭಾರತದ ಆರ್ಥಿಕ ವ್ಯವಸ್ಥೆಯ ಸ್ವರೂಪಕ್ಕೆ ಕನ್ನಡಿ ಹಿಡಿಯಬಹುದಿತ್ತು. ವಿವರಗಳನ್ನು ಕಲೆ ಹಾಕುವಾಗ ಇಲ್ಲವೇ ವಿಶ್ಲೇಷಿಸುವಾಗ ವಾಸ್ತವಮುಖೀ ಚಿಂತನೆ ಕಂಡುಬರುವದಿಲ್ಲ. ಇಂಥ ಮಿತಿಗಳಾಚೆ ಕೂಡ ಈ ಪ್ರಯತ್ನ ಪದವಿ ಕಾಲೇಜುಗಳಿಗೆ ಅನುಕರಣೀಯವಾದುದು.

– ಎಂ.ಡಿ.ವಕ್ಕುಂದ, ಮುಖ್ಯಸ್ಥರು, ಕನ್ನಡ ವಿಭಾಗ, ಶ್ರೀ ಸಿದ್ಧೇಶ್ವರ ಸರಕಾರಿ ಕಾಲೇಜು, ನರಗುಂದ, ಜಿ. ಗದಗ

## ೫. ಕನಸು ನನಸಾಯಿತು : ಅನು. ಕೃ. ಶಿ. ಹೆಗಡೆ

ನವನೀತ ಪಬ್ಲಿಕೇಶನ್ಸ್ ಲಿ., ಭವಾನಿಶಂಕರ ಮಾರ್ಗ, ದಾದರ, ಮುಂಬಯಿ-೨೮, ಪು. ೧೧೨, ರೂ. ೭೫/-

ಶ್ರೀನಿವಾಸ್ ಲಕ್ಷ್ಮಣ್ ಮುಂಬೈ ಅವರ ಚೊಚ್ಚಲು ಇಂಗ್ಲಿಷ್ ಕೃತಿ 'Dreams to Reality' ನಮ್ಮ ದೇಶದ ಪ್ರಸ್ತುತ ರಾಷ್ಟ್ರಪತಿ ಡಾ. ಎ. ಪಿ. ಜೆ. ಅಬ್ದುಲ್ ಕಲಾಂ ಅವರ ಜೀವನಚರಿತ್ರೆಯನ್ನು ನಮ್ಮ ದೇಶದ ತರುಣರಿಗೆ ಪ್ರೇರಣೆಯಾಗುವಂತೆ, ಒಂದು ಪ್ರವಾಸದ ಅನುಭವದಂತೆ ಚಿತ್ರಿಸುತ್ತದೆ. ಆ ಕೃತಿಯ ಕನ್ನಡ ಅನುವಾದ ಡಾ. ಕಲಾಂ ಅವರ ಜೀವನವನ್ನು ಒಂದು ವಿಜಯದ, ಗೆಲುವಿನ ಪೂರ್ಣ ಸ್ವರೂಪವೆಂಬಂತೆ ಚಿತ್ರಿಸುತ್ತದೆ. ಇದು ಅನುವಾದ ಸೃಷ್ಟಿಯ ವಿಜಯದ ಸಂಕೇತ. ಸಕಾರಾತ್ಮಕ ಶೀರ್ಷಿಕೆಯಿಂದಲೇ ಈ ಮಾತು ಸ್ಪಷ್ಟವಾಗುತ್ತದೆ.

ಅನುವಾದ ಕಾರ್ಯ ತಿಳಿದಷ್ಟು ಸುಲಭವಲ್ಲ. ಈ ಕಾರ್ಯ ಮಕ್ಕಳಿಗಾಗಿ, ತರುಣರಿಗಾಗಿ ಇದ್ದರಂತೂ ಜಾಗ್ರತೆ ವಹಿಸಿದಷ್ಟೂ ಕಡಿಮೆಯೇ. ಆರಂಭದಲ್ಲಿ ಈ ಕೃತಿಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬರುವ ವೈಮಾನಿಕ, ತಾಂತ್ರಿಕ, ವೈಜ್ಞಾನಿಕ ಶಬ್ದಗಳಿಗೆ ಅನುವಾದಕರು ಯಾವ ಪರ್ಯಾಯ ಶಬ್ದಗಳನ್ನು ಬಳಸಿರಬಹುದೆಂಬ ಕುತೂಹಲ ಕಾಡಿತ್ತು. ಕೃತಿಯನ್ನು ಕೈಗೆತ್ತಿಕೊಂಡು ಇಂಗ್ಲಿಷ್-ಕನ್ನಡ ಎರಡನ್ನೂ ತುಲನೆ ಮಾಡುತ್ತ ಹೋದಂತೆ ಈ ಇಂದ್ರಜಾಲವನ್ನು ತುಂಬ ಅಚ್ಚುಕಟ್ಟಾಗಿ ಬಿಡಿಸಿದ ಅನುಭವ ಪ್ರತಿಯೊಂದು ಪರಿಚ್ಛೇದದಲ್ಲೂ ಕಂಡುಬಂದಿತು. ಭಾರತೀಯ ಭಾಷೆಗಳಲ್ಲಿ ಅನುವಾದ ಕಾರ್ಯ ನಡೆಸುವಾಗ ಸಂಸ್ಕೃತಿಯ ಹಿನ್ನೆಲೆ ಸುಮಾರಾಗಿ ಒಂದೇ ಇರುವುದರಿಂದ ಅರ್ಥಕ್ಕೆ ಬಾಧೆಯಾಗದಂತೆ ಪಾರಿಭಾಷಿಕ ಶಬ್ದಗಳನ್ನು ಬಳಸುವುದು ಒಂದು ಅದ್ಭುತ ಕಲೆಯೇ ಸರಿ. ಇಲ್ಲಿಯೇ ಎಲ್ಲ ಅನುವಾದಕರು 'ಅಗ್ನಿಪರೀಕ್ಷೆ'ಗೆ ಒಳಗಾಗುವುದು. ಈ 'ಕನಸು ನನಸಾಯಿತು' ಕೃತಿಯನ್ನು ಇಡಿಯಾಗಿ ಆಸ್ವಾದಿಸಿದಾಗ ಅನುವಾದಕರು ಈ ಪರೀಕ್ಷೆಯಲ್ಲಿ ಯಶಸ್ವಿಯಾಗಿ ಉತ್ತೀರ್ಣರಾದ ಅನುಭವ ಉಂಟಾಗುತ್ತದೆ.

ಮೇಲಿನ ಅನುಭವವನ್ನು ಒಂದೆರಡು ಉದಾಹರಣೆಗಳಿಂದಲೂ ಸ್ಪಷ್ಟೀಕರಿಸಬಹುದು. ಮೊದಲನೆಯ ಭಾಗದ 'cool breeze'ಗೆ ಅನುವಾದಕರು ಬಳಸಿದ 'ಮಂದಮಾರುತ'ವು 'poetic beauty'ಯೊಂದಿಗೆ ಸಮರ್ಪಕವೆನಿಸಿತು. ಪುಟ ೧೯ ರಲ್ಲಿ "Let not thy winged days be spent in vain- when once gone, no gold can buy them back again" ಎಂಬ ವಾಕ್ಯ ಬರುತ್ತದೆ. ಇದನ್ನು "ನಿಮ್ಮ ಉಲ್ಲಾಸದ ಚಟುವಟಿಕೆಯ ದಿನಗಳು ವ್ಯರ್ಥವಾಗದಿರಲಿ, ಚಿನ್ನ ಕೊಟ್ಟರೂ ಚೆನ್ನಾದ ದಿನಗಳು ಹಿಂದಿರುಗಲಾರವು" ಎಂದು ತುಂಬ ಕಲಾತ್ಮಕವಾಗಿಯೇ ಅನುವಾದಿಸಲಾಗಿದೆ. ಕೃತಿಯುದ್ದಕ್ಕೂ ಇಂತಹ ಅನುಭವ ವೇದ್ಯವಾಗುತ್ತದೆ. "Thothathri"ಯಂತಹ ಮೂಲ ತಮಿಳು ಶಬ್ದವನ್ನು ಕನ್ನಡಕ್ಕೆ ತರ್ಜುಮೆ ಮಾಡುವಾಗಲೂ ಅತ್ಯಂತ ಎಚ್ಚರಿಕೆ ವಹಿಸಲಾಗಿದೆ. ಇಂಗ್ಲಿಷ್ ಪದಗಳಾದ interacted ಗೆ 'ಪ್ರತಿಕ್ರಿಯಿಸು' ಬಳಸಿದರೆ, 'passion' ಶಬ್ದಕ್ಕೆ 'ಅದಮ್ಯ ಪ್ರೀತಿ' ಎಂದು, "time flew" ಗೆ 'ಸಮಯವು ಮಿಂಚಿನ ವೇಗದಿಂದ ಓಡುತ್ತಿತ್ತು' ಎಂದು, 'hands on assignment'ಗೆ 'ಕಾರ್ಯವೈಖರಿ' ಎಂದು 'humble tribute'ಗೆ 'ವಿನಮ್ರ ಶ್ರದ್ಧಾಂಜಲಿ', 'extreme inhospitable terrain'ಗೆ 'ಅತ್ಯಂತ ಅನಪೇಕ್ಷಣೀಯ ಪ್ರದೇಶ', 'designing'ಗೆ 'ರಚನಾ ವಿನ್ಯಾಸ'– ಇಂತಹ ಅನೇಕ ಉದಾಹರಣೆಗಳನ್ನು ನೀಡಬಹುದು. ಹಲವು ಕಡೆಗಳಲ್ಲಿ ಮೂಲ ಇಂಗ್ಲಿಷ್ ಶಬ್ದಕ್ಕಿಂತಲೂ ಕನ್ನಡ ಶಬ್ದಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಪ್ರಯೋಗಿಸಿದ್ದು ಕೃತಿಯ ತುಂಬೆಲ್ಲ ಎದ್ದುಕಾಣುತ್ತವೆ.

ಪುಸ್ತಕದಲ್ಲಿ ಬಳಕೆಯಾದ ಸುಂದರ ರೇಖಾಚಿತ್ರಗಳು, ಕಟ್ಟಡಗಳು, ಉಪಗ್ರಹಗಳು, ಆಕರ್ಷಕ ವ್ಯಕ್ತಿಚಿತ್ರಗಳು ಕೃತಿಗೆ ಜೀವಂತಿಕೆ ತುಂಬಿದರೆ, ಪ್ರತಿಯೊಂದು ಅಧ್ಯಾಯದಲ್ಲಿ ಅಳವಡಿಸಿದ ಡಾ. ಕಲಾಮರ ವಿವಿಧ ಉಕ್ತಿಗಳು, ದೊಡ್ಡ ಚೌಕಟ್ಟುಗಳಲ್ಲಿ ಉಲ್ಲೇಖಿಸಿದ ವಿಷಯಗಳು, ಸ್ಥಳ, ಕಾಲ, ವೈಜ್ಞಾನಿಕ ವಿವರಣೆಗಳು ತರುಣರ ಜ್ಞಾನದ ಹಸಿವನ್ನು ಇಂಗಿಸುವಲ್ಲಿ ಸಮರ್ಥವಾಗುತ್ತವೆ. ಪುಸ್ತಕದ ಆರಂಭದಲ್ಲಿ ಅಳವಡಿಸಿದ ಡಾ. ಕಲಾಮರ ವಿಚಾರಗಳು ತರುಣರಿಗೆ ಪ್ರೇರಣೆ ನೀಡಿದರೆ, 'Book Mark'ನಲ್ಲೂ

ಅವರ (ರಾಷ್ಟ್ರಾಧ್ಯಕ್ಷರ) ಪ್ರತಿಜ್ಞೆಯನ್ನು ಅಳವಡಿಸಿ, ಮುನ್ನುಡಿಯಲ್ಲಿ ಪ್ರಾ. ಎಮ್. ಜಿ. ಕೆ. ಮೆನನ್ನರು ತಿಳಿಸಿದಂತೆ `ಮಕ್ಕಳ ರಾಷ್ಟ್ರಪತಿ`ಯನ್ನು ತರುಣರಿಗೆ ಪ್ರೇರಿಸುವಲ್ಲಿ ಈ ಅನುವಾದ ಕೃತಿ ಯಶಸ್ವಿಯಾಗಿದೆ ಯೆನ್ನಬಹುದು. ಅನುವಾದ ಕಲೆ ಪುನಃಸೃಷ್ಟಿ ಎಂಬುದಕ್ಕೆ `ಕನಸು ನನಸಾಯಿತು` ಉತ್ತಮ ಉದಾಹರಣೆ.

– ಪ್ರೊ. ವಿಜಯಲಕ್ಷ್ಮಿ ರೇವಣಕರ, ಪಿ-೬, ಪರ್ಣಾಲಿ ಅಪಾರ್ಟ್‌ಮೆಂಟ್ಸ್, ದಾಮ್ಲೆ ಪಥ್, ಏರಂಡವಣೆ, ಪುಣೆ-೪

## ೬. *ಮನುಷ್ಯರನ್ನು ನಂಬಬಹುದು : ಸುಹಾಸಂ*

ವಾಗ್ದೇವಿ, ಹಯಗ್ರೀವ ನಗರ, ಉಡುಪಿ-೫೭೬ ೧೦೨, ಪ್ರಮು. ೨೦೦೫. ಪು. ೧೦೪. ರೂ. ೬೦/-

ಮನುಷ್ಯನೆಂದರೆ ವಿಶ್ವಾಸಕ್ಕೆ ಅನರ್ಹ. ಸ್ವಾರ್ಥದ ಮೂಟೆ; ಸದಾ ಸ್ವಹಿತಾಕಾಂಕ್ಷಿ ಎಂಬೆಲ್ಲ ಭಾವನೆಗಳನ್ನು ಪ್ರಾಣಿಗಳೂ ತಳೆದಿರುವಾಗ, ಒಬ್ಬ ಮನುಷ್ಯ ಮತ್ತೊಬ್ಬ ಮನುಷ್ಯನನ್ನು ಸುಲಭವಾಗಿ ನಂಬದಿರುವ ಈ ಕಾಲದಲ್ಲಿ `ಮನುಷ್ಯರನ್ನು ನಂಬಬಹುದು` ಎಂದು ವಿಶ್ವಾಸ ಹುಟ್ಟಿಸುತ್ತಿದ್ದಾರೆ ಕಥೆಗಾರ ಬಿ. ಮಹೇಶ ಭಟ್ಟರು. ಕೃತಿಯ ನಾಮಧೇಯವೇ ಕುತೂಹಲ ಕೆರಳಿಸುವಂತಹದು. ಓದಲಾರಂಭಿಸಿದರೆ ಪಾತ್ರಗಳು ನಮ್ಮೊಡನೆ ಮಾತನಾಡತೊಡಗುತ್ತವೆ.

ಇಲ್ಲಿ ಒಟ್ಟು ೧೬ ಕತೆಗಳಿವೆ. ಎಲ್ಲವೂ ಬದುಕಿಗೆ ಹತ್ತಿರವಾದ ವಸ್ತು - ಸನ್ನಿವೇಶಗಳನ್ನೊಳಗೊಂಡಿವೆ. ಸಹಜ-ಸುಂದರ ನಿರೂಪಣೆ, ಆಡಂಬರ ರಹಿತ ಶೈಲಿ. ಆದರೆ ಮಹತ್ವದ ಸನ್ನಿವೇಶವನ್ನು ಉಲ್ಲೇಖಿಸುವಾಗ ಪುಟಿದೇಳುವ ಅದ್ಭುತ ಭಾಷಾವೈಖರಿ! ಹೀಗಾಗಿ ಶಾಂತ ಸಮುದ್ರ ಒಮ್ಮೆಲೆ ಚಂದ್ರನೆಡೆಗೆ ತೆರೆಯುಕ್ಕಿಸುವಂತಹ ರುದ್ರಗಂಭೀರತೆ. ಇವು ಓದುಗರನ್ನು ಸೆಳೆದು ಆಸಕ್ತಿ ಹೆಚ್ಚಿಸುವ ಅಂಶಗಳು.

'ಯಜಮಾನ್ತೀರು ಊರಿಗೋ?' ಎಂದು ಕೇಳಿದ ಶ್ರೀನಿವಾಸ `ಯಾರೋ ಬಂದಿದ್ದಾರೆ ನಿಮ್ಮನ್ನು ಕೇಳಿಕೊಂಡು', 'ಸ್ವಲ್ಪ ಸಂಶಯದ ಕೇಸು`. ಶ್ರೀನಿವಾಸನಿಗೆ ಎಲ್ಲರ ಮೇಲೂ ಸಂಶಯವೇ. ಕ್ಯಾಶ್‌ನಲ್ಲಿ ಕುಳಿತವನಿಗೆ ಇಡಿಯ ತೋಳಿನ ಅಂಗಿಯನ್ನು ಹಾಕಿಕೊಳ್ಳಲೂ ಬಿಡದವನು (ಮನುಷ್ಯರನ್ನು ನಂಬಬಹುದು) ಈ ವಾಕ್ಯಗಳು ಮೇಲ್ನೋಟಕ್ಕೆ ತುಂಬ ಸರಳವಾಗಿ ಕಂಡರೂ ಅದರ ಹಿಂದಿರುವ ಭಾವಗಳು ಮನುಷ್ಯಸಹಜ ವ್ಯಂಗ್ಯಾರ್ಥವನ್ನು ನವಿರಾಗಿ ಸೂಚಿಸುತ್ತವೆ.

'ಜೋಯಿಸರ ಕುರ್ಚಿಯಲ್ಲಿ` ತನ್ನಕ್ಕನ ಅಡುಗೆಯ ಚಾತುರ್ಯವನ್ನು ನಿರೂಪಕ ಹೇಳುವುದು ಹೀಗೆ : 'ನಾಲ್ಕು ಬಳಿಯ ದಾಸವಾಳದ ಹೂವು ಸಿಕ್ಕರೂ ಸಾಕು, ಆಕೆ ನಳಪಾಕ ಅಟ್ಟು ಬಡಿಸುತ್ತಾಳೆ', 'ಎಂಥ ಪ್ರಾವೀಣ್ಯತೆ ಅಕ್ಕನ ಅಡುಗೆಯಲ್ಲಿ' ಎಂಬ ಉದ್ಗಾರ ತನ್ನಷ್ಟಕ್ಕೆ ಹೊರಹೊಮ್ಮುವಂತಹ ಪರಿಸ್ಥಿತಿ ಓದುಗನದು.

ಇಲ್ಲಿಯ ಪ್ರತಿಯೊಂದು ಕತೆಯೂ ಜೀವನಪ್ರೀತಿಯನ್ನು ಉಕ್ಕಿಸುತ್ತದೆ. ಎಲ್ಲ ಕಥೆಗಳೂ ಒಂದಲ್ಲ ಒಂದು ಬಗೆಯಲ್ಲಿ ಮೆಲುಕು ಹಾಕುವಂತಹ ಮಹತ್ವದ ಅಂಶಗಳೊಂದಿಗೆ ಆಗಾಗ ಮುಖಾಮುಖಿಯಾಗಿ ನಿಂತುಬಿಡುವ ಬದುಕಿನ ಸನ್ನಿವೇಶಗಳನ್ನು ಸಾಕ್ಷಾತ್ಕರಿಸುವ ನಿಟ್ಟಿನಲ್ಲಿ ಉಪಯುಕ್ತ ಮಾಹಿತಿ ಒದಗಿಸಬಲ್ಲಂತಹವು. ಒಟ್ಟಾರೆ ನಿರ್ಭಾವುಕತೆಯ, ಸತ್ಯಕ್ಕೆ ಸಮೀಪವೆನಿಸಬಹುದಾದಂತಹ ನಿರೂಪಣಾ ಚಮತ್ಕಾರ ಓದುಗರನ್ನು ಚಿಂತನೆಗೆ ಹಚ್ಚುವಂತಹವು.

ಇನ್ನು ಎಲ್ಲಕ್ಕಿಂತ ಚಿಂತನ-ಮಂಥನ-ಪ್ರತಿಪಾದನ ಮುಂತಾದವುಗಳಿಗೆಲ್ಲ ಗ್ರಾಸವಾಗುವ ಕತೆಯೆಂದರೆ 'ಸುಮ್ಮನೆ', ನಿಜಕ್ಕೂ ಕಥೆ ಕಟ್ಟುವವರ ಚಮತ್ಕಾರಿಕ ಕಲ್ಪನಾವಿಲಾಸಕ್ಕೆ ಹೊಸ ಗರಿ ಮೂಡಿಸಬಲ್ಲ ಒಂದು ಅಪರೂಪದ ಕತೆಯೆನ್ನಬಹುದು.

ಹೀಗೆ ೧೬ ಕತೆಗಳನ್ನು ಒಂದಕ್ಕಿಂತ ಒಂದು ಭಿನ್ನವೆಂಬಂತೆ ರಚಿಸಿ, ಓದಿದರೆ ಮತ್ತೆ ಮತ್ತೆ ಓದಬೇಕೆಂಬ ಹಂಬಲ ಹುಟ್ಟಿಸುವ ಈ ಕಥಾಸಂಕಲನ, ಇಂದಿನ ಸಮಕಾಲೀನ ಜನಜೀವನದ ಪ್ರತಿಬಿಂಬ

ವೆನಿಸಿ ಬಹುಕಾಲ ನೆನಪಿನಲ್ಲಿರುವಂತಹದ್ದು. ಹೇಳಿದ್ದರೂ 'ಮನುಷ್ಯರನ್ನು ನಂಬಬಹುದು' ಎಂಬುದನ್ನು ಪ್ರತಿಪಾದಿಸುವ ರಮೇಶ ಭಟ್ಟರ ಒಳಗಿನ ಕಥಾಮಾಂತ್ರಿಕನನ್ನು ಶ್ಲಾಘಿಸಲೇಬೇಕು. ಇದೊಂದು ಉತ್ತಮ ಕಥಾಸಂಕಲನ.

**– ಪರಮೇಶ್ವರಿ ಲೋಕೇಶ್ವರ್, ೬೦೨, ಫ್ಯಾಂಟಸಿ ಅಪಾರ್ಟ್‌ಮೆಂಟ್ಸ್, ಕುದ್ಮುಲ್ ರಂಗರಾವ್ ರಸ್ತೆ, ಮಂಗಳೂರು-೫೭೫ ೦೦೩**

## ೭. *ವಲಸೆ ಹೋದ ಕನ್ನಡಿಗನ ಕತೆ : ಹಿರೇಮಲ್ಲೂರ ಈಶ್ವರನ್*

ಕರ್ನಾಟಕ ಸಂಘ, ಹಿರೇಮಲ್ಲೂರ ಈಶ್ವರನ್ ಪ.ಪೂ. ವಿಜ್ಞಾನ ಕಾಲೇಜು, ೭ನೇ ಅಡ್ಡ ರಸ್ತೆ, ಕಲ್ಯಾಣನಗರ, ಧಾರವಾಡ-೫೮೦ ೦೦೭, ದ್ವಿಮು. ೨೦೦೪, ಪು. ೩೧೦, ರೂ. ೨೦೦/-

ಬೆಟದೂರು, ಹಿರೇಮಲ್ಲೂರು, ಬ್ಯಾಡಗಿ, ಕುಂದಗೋಳ ಹಳ್ಳಿಗಳ ಸುತ್ತಲೂ ಸುತ್ತುತ್ತ ಆರಂಭವಾದ ಕತೆ ಬೆಳೆಯುತ್ತ ಕನ್ನಡ ಪ್ರಾಥಮಿಕ ಶಾಲೆಯ ಮಾಸ್ತರರ ಮಗನಾಗಿ ರಾಜಮಾನ್ಯರಾಗುವ ಈಶ್ವರನ್ ಅವರ ಬದುಕಿನ ಹೋರಾಟದ ಕತೆಯಾಗಿದೆ. ಆ ಕಾಲದ ಅಸಂಖ್ಯ ಸಾಂಸ್ಕೃತಿಕ ಹಾಗೂ ಸಾಮಾಜಿಕ ವಿವರಗಳ ಜೀವಂತ ಚರಿತ್ರೆ ಹಿರೇಮಲ್ಲೂರ ಈಶ್ವರನ್ ಅವರ ಈ ಆತ್ಮಕತೆಯಲ್ಲಿದೆ.

ವಲಸೆ ಹೋದ ಕನ್ನಡಿಗನು ಪಲಾಯನವಾದಿಯೇ? ಪಾಶ್ಚಾತ್ಯ ಸಂಸ್ಕೃತಿಯ ಆಕರ್ಷಣೆಯೂ ಅಲ್ಲ, ಹಣ ಮಾಡುವ ಪಹಾಹಪಿತನವೂ ಅಲ್ಲ, ಅವರು ಭಾರತ ತೊರೆದು ಕೆನಡಾ, ಅಮೆರಿಕವನ್ನು ಅರಸಿದ್ದೇಕೆ? ಇದಾವುದೂ ಕಾರಣವಾಗಿರದೆ ೧೨ನೆಯ ಶತಮಾನದ ಶರಣರ ಜೀವನ, ಶರಣ ಸಾಹಿತ್ಯದ ಪ್ರಭಾವವೇ ಕಾರಣ ಆಗಿತ್ತೆಂದರೆ ಆಶ್ಚರ್ಯವೆನಿಸಬಹುದು. ಆದರೆ ಇದು ನಿಜ. ಈಶ್ವರನ್ ಹೇಳುತ್ತಾರೆ– "ಕಾಲೇಜಿನಲ್ಲಿ ನಾನು ಓದುತ್ತಿದ್ದಾಗ ಬಸವರಾಜದೇವರ ರಗಳೆಯಲ್ಲಿ ಹರಿಹರನು ಬಸವಣ್ಣನವರ ಕಷ್ಟಕಾಲದ ಚಿತ್ರಣವನ್ನು ಚಿತ್ರಿಸುತ್ತ, 'ಸಾಕು ಮಾಡೈ ತಂದೆ ಲೋಕದಾಟವನಿನ್ನು, ಬಂದಿಹೆನು ಬಸವನು ನೊಂದೆ' –ಎಂದು ಹಾಡಿದ ನುಡಿಯೊಂದನ್ನು ನನ್ನ ಮೇಜಿನ ಮೇಲೆ ಬರೆದು ಹಾಕಿದ್ದೆನು."

ಜಾತೀಯತೆಯ ಪ್ರಭಾವ ಕುರಿತು ಉಲ್ಲೇಖಿಸುತ್ತ, "ಸಾಂಸ್ಕೃತಿಕ ನಗರಿ ಧಾರವಾಡ ಶಹರಕ್ಕೆ ಮಾಧ್ಯಮಿಕ ಶಿಕ್ಷಣ ಮುಂದುವರಿಕೆಗೆ ಆಗಮಿಸಲು ಕರ್ನಾಟಕ ಹೈಸ್ಕೂಲಿನಲ್ಲಿ ತಂದೆ ಮಾಸ್ತರರು ಮಗನಿಗೆ ಪ್ರವೇಶ ದೊರಕಿಸಿದರು. ಬ್ರಾಹ್ಮಣರ ಶಾಲೆಯಲ್ಲಿ ಬ್ರಾಹ್ಮಣ ಮಕ್ಕಳು ಹಾಗೂ ಶಿಕ್ಷಕರ ವಾತಾವರಣದಲ್ಲಿ ಕಲಿತು ವಿದ್ಯಾವಂತನಾಗಲೆಂಬ ಇಚ್ಛೆ ಪ್ರಬಲವಾಗಿದ್ದಿರಬೇಕು. ಆದರೆ ಊಟ, ವಸತಿಗಳಿಗಾಗಿ ಮುರುಘಾಮಠದಲ್ಲಿ ಸೇರಿದ್ದುದರ ಪರಿಣಾಮವಾಗಿ ಲಿಂಗಾಯತರ ಶಾಲೆ ರಾಜಾ ಲಖಮಗೌಡ ಸರದೇಸಾಯಿ ಹೈಸ್ಕೂಲಿಗೆ ನಾನೂ ಸೇರಲು ಬಯಸಿದ್ದು ಸಹಜವೇ. ಮುಂದೆ ಜಾತೀಯತೆ ಪ್ರಾಬಲ್ಯ ಎಷ್ಟು ಮೆರೆಯುತ್ತಿತ್ತೆಂದರೆ ಆಗಿನ ದಿನಗಳಲ್ಲಿ ಕ್ರೀಡಾ ಪಂದ್ಯಗಳಲ್ಲಿ ಕರ್ನಾಟಕ ಹೈಸ್ಕೂಲು ಹಾಗೂ ಆರ್.ಎಲ್.ಎಸ್. ಹೈಸ್ಕೂಲುಗಳ ಮಧ್ಯ ತುರುಸಿನ ಸ್ಪರ್ಧೆಯ ಸಂದರ್ಭದಲ್ಲಿ ಎಷ್ಟೋ ಸಲ ಹಾಕಿ ಸ್ಟಿಕ್ಕುಗಳಿಂದ ಹೊಡೆದಾಟಗಳೂ ನಡೆದು ಹೋಗುತ್ತಿದ್ದವು." ಈ ಜಾತೀಯತೆಯ ಪ್ರಾಬಲ್ಯ ಧಾರವಾಡಕ್ಕೆ ಮಾತ್ರ ಸೀಮಿತವಾಗಿರದೇ ಮುಂದೆ ಅವರು ಯುರೋಪ ರಾಷ್ಟ್ರಗಳಲ್ಲಿ ಕೂಡ ಕಾಣುತ್ತಾರೆ.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕೂಡ ಕಂಡುಬರುವ ಜಾತಿ ಧರ್ಮ ಪ್ರಾಬಲ್ಯ ಕುರಿತು ಹೇಳುತ್ತ, ಹಾಲಂಡ್‌ನ ಅವರ ಪ್ರೊಫೆಸರರೊಬ್ಬರು ತಮ್ಮ ರಾಷ್ಟ್ರದ ಸಮಾಜ ರಚನೆಯನ್ನು ಕುರಿತು ಒಮ್ಮೆ ಹೀಗೆ ಹೇಳಿದರು– 'ಹಾಲಂಡಿನಲ್ಲಿ ಧರ್ಮ ಎಷ್ಟರ ಮಟ್ಟಿಗೆ ತನ್ನ ಪ್ರಭಾವವನ್ನು ಬೀರಿದೆಯೆಂದರೆ ಕೆಥೊಲಿಕ ಮತ್ತು ಪ್ರೊಟೆಸ್ಟಂಟರ ಮೇಕೆ ಮತ್ತು ಟಗರು ಪರಸ್ಪರ ಕೂಡದಂತೆ ಡಚ್ ಜನರು ಎಚ್ಚರಿಕೆ ವಹಿಸುತ್ತಾರೆ.'

ಹಾಲಂಡ್ ದೇಶವೊಂದೇ ಅಲ್ಲ, ಯುರೋಪ್, ಉತ್ತರ ಅಮೆರಿಕೆ, ಆಸ್ಟ್ರೇಲಿಯಾ, ನ್ಯೂಝಿಲಂಡ್... ಇಂದು ಶ್ರೀಮಂತಿಕೆಯ ತುತ್ತ ತುದಿಯನ್ನೇರಿ ಕುಳಿತಿರುವ ಬಿಳಿಯರ ಎಲ್ಲ

ರಾಷ್ಟ್ರಗಳಲ್ಲಿಯೂ ನಮ್ಮ ಹಾಗೆಯೇ ಧರ್ಮ ಹಾಗೂ ಜಾತಿಯ ಕೈವಾಡ ಇದೆ. ಆದರೂ ಅವರ ರಾಷ್ಟ್ರಗಳು ಮುಂದುವರಿದಿವೆ. ಅವರು ಸಹಜೀವನವನ್ನು ನಡೆಸಿಕೊಂಡು ತಮ್ಮ ಬದುಕನ್ನು ಸಮೃದ್ಧಿಯತ್ತ ಕೊಂಡೊಯ್ಯುತ್ತಿದ್ದಾರೆ. ಈ ಸಮೃದ್ಧ ಜೀವನಕ್ಕೆ ಮುಖ್ಯ ಕಾರಣ, ಅವರು ಸಾರ್ವಜನಿಕ ಜೀವನದಲ್ಲಿ ಬುದ್ಧಿಮತ್ತೆಗೆ ಮತ್ತು ಗುಣಗಳಿಗೆ, ವಿಚಾರಕ್ಕೆ, ಶಿಸ್ತಿಗೆ, ಅರ್ಹತೆಗೆ ಪ್ರಾಧಾನ್ಯ ಕೊಡುವುದೇ ಆಗಿದೆ.

ಒಬ್ಬ ಸಮಾಜವಿಜ್ಞಾನದ ವೈದ್ಯನಂತೆ ಸಮಾಜವಿಜ್ಞಾನ ತಜ್ಞರಾದ ಡಾ. ಹಿರೇಮಲ್ಲೂರ ಈಶ್ವರನ್‌ರು ನಮ್ಮ ಪೌರ್ವಾತ್ಯ ಸಮಾಜದ ಶಲ್ಯ-ಚಿಕಿತ್ಸೆ ನಡೆಸಿದ್ದಷ್ಟೇ ಅಲ್ಲದೆ ಇಡೀ ಪ್ರಪಂಚದ ಸಮಾಜದ ಅಂತರಂಗ ತೆರೆದು ತೋರಿಸುವ ಶ್ಲಾಘನೀಯ ಕಾರ್ಯ ಮಾಡಿದ್ದಾರೆ. ಇದು ಕೇವಲ ಒಬ್ಬ ವ್ಯಕ್ತಿಯ ಆತ್ಮಕಥನವಾಗಿರದೆ ಒಬ್ಬ ವಿಶ್ವಪ್ರಜೆಯ ಆತ್ಮಕಥನವಾಗಿದೆ. ಕನ್ನಡ ಸಾಹಿತ್ಯದ ಆತ್ಮಚರಿತ್ರೆಗಳ ಪರಂಪರೆಯಲ್ಲಿಯೇ ಇದು ಒಂದು ಮೈಲಿಗಲ್ಲು. ೧೯೮೨ ರಲ್ಲಿ ಮೊದಲು ಪ್ರಕಟವಾಗಿದ್ದು, ಅನೇಕ ವರ್ಷಗಳಿಂದ ಅಲಭ್ಯವಿದ್ದ ಈ ಕೃತಿ ಈಗ ಮತ್ತೆ ಓದುಗರಿಗೆ ಲಭ್ಯವಾಗಿರುವುದು ಸಂತಸದ ವಿಷಯ.

**– ಡಾ. ಮೋತಿಲಾಲ ಹಲವಾಯಿ, 'ವಿಶಾಲ', ೨ನೇ ಮುಖ್ಯ ರಸ್ತೆ, ಶಕ್ತಿನಗರ, ಧಾರವಾಡ-೫೮೦ ೦೦೪**

## ೮. *ದೇಹವೀಣೆಯ ಸಪ್ತಸ್ವರ : ಡಾ.ವಸಂತ. ಅ. ಕುಲಕರ್ಣಿ*

ಭುವನೇಶ್ವರಿ ಪ್ರಕಾಶನ, ಶಿವಯೋಗಿನಗರ, ವಿಜಾಪುರ-೫೮೬ ೧೦೩, ಪ್ರಮು. ೨೦೦೫, ಪು. ೯೪, ರೂ. ೪೦/-

ಡಾ. ವಸಂತ ಕುಲಕರ್ಣಿಯವರು ಸ್ವಭಾವತಃ ಕವಿ. ಬೇಂದ್ರೆ ಅವರ ಅನುಗ್ರಹ ಪಡೆದ ಈ ಕವಿಗೆ ದೇಹವೀಣೆಯ ಸಪ್ತಸ್ವರಗಳು ಕಾವ್ಯಕ್ಕೆ ನೀರೆರೆದಿವೆ. ಇಲ್ಲಿ ದೇಹವೀಣೆ ಸ್ವಯಂ ಕವಿಯೇ. ಸುತ್ತಮುತ್ತ ಒಳಗು ಹೊರಗು ಕವಿಯ ದೃಷ್ಟಿ ಹರವಿಕೊಂಡಾಗ ಸಪ್ತಸ್ವರಗಳು ಹೊರಚಿಮ್ಮುತ್ತವೆ. ಅವು ರಾಗ, ಅನುರಾಗ, ರೋಷ, ಈರ್ಷ್ಯೆ, ನಿರಾಶೆ, ತಾಪ, ಸಾಂತ್ವನವಾಗಿ ಧ್ವನಿಸುತ್ತವೆ.

ನಮ್ಮ ಬದುಕಿನ ಬೆಲೆ ಕುಸಿದು ಬಾಳುವೆಯ ಬೆಲೆ ಏರಿದಾಗ ನಿರಾಶೆಯ ಹೊಗೆಯನ್ನು ಬದಿಗೆ ಸರಿಸಿ ಹೊಸ ವರುಷವನ್ನು ಸ್ವಾಗತಿಸುತ್ತೇವೆ. ಬಾಲ್ಯದ ಆಟ ಪಾಠಗಳನ್ನು ನೆನಪಿಸಿ-ಆನಂದಿಸಿ ಈಗ ಯಾರು ಕೇಳುವರು? ಇವರ ಬಿಟ್ಟು ಇವರ್‍ಯಾರು? ಮದುವೆಯ ಮೂರು ಚಿತ್ರಗಳು, ಬಾಲ್ಯದ ಗೊಂಬೆಯಾಟದ ನೆನಹುಗಳು, ಬೇಂದ್ರೆಯವರ ನಾನು ಪಾರ ನೀನು ಪೋರಿ ಮಾರಿಕಣ್ಣಿಗೆ ಮರುಳರಾಗಿ– ನೆನಪಿಸುತ್ತವೆ.

ಇನ್ನ ಮ್ಯಾಲೆ ನಿಮ್ಮ ಉಸಾಬರಿ ನಮಗ್ಯಾಕ್ರಿ? ಇಂದಿನ ಪುಢಾರಿಗಳ ಸಮಾಜಘಾತಕ ವೃತ್ತಿಗೆ ಚಾಟಿಯ ಏಟಿನ ವಿಡಂಬನೆ ಸ್ವಾಗತಾರ್ಹ : "ಅಂಧೇರಿ ನಗರಿ ಚೌಪಟ ರಾಜಾ / ಎಲ್ಲ ಕಡೆಗೂ ನಾಟಕ-ಮುಖವಾಡ / ನಾ ಸುಮ್ಮ ಕೂಡುದಿಲ್ಲ ಕ್ರಾಂತಿ ಮಾಡೇ ಮಾಡ್ತಿನಿ! ಹೀಗೆಂದು ಕವಿ 'ಕ್ರಾಂತಿ ಬೇಕ್ರಿ ಕ್ರಾಂತಿ' ಕರೆ ಕೊಟ್ಟಿದ್ದಾನೆ. ನಮ್ಮನ್ನ ನಾವು ತಿದ್ದಿಕೊಂಡ್ರ ಲಫಂಗರೊಳಗೆ ಒಬ್ಬ ಕಮ್ಮಿ ಆದನಲ್ಲ ಎಂಬ ಸಂತೃಪ್ತಿ ಕವಿಗೆ. ಸಂಕಲನದ ಕೊನೆಯಲ್ಲಿ ಹನಿಗವನಗಳ ಸರಮಾಲೆ. ಈ ಸಂಕಲನ ಇಂದಿನ ಪರಿಸರ-ಪರಿಸ್ಥಿತಿ ಪರಿಣಾಮಗಳಿಗೆ, ವೈದ್ಯಕೀಯ ಸಾಹಿತ್ಯಕ್ಕೆ ಸಂದ ವಿಶಿಷ್ಟ ಕೊಡುಗೆ.

**– ಈಶ್ವರಚಂದ್ರ ಚಿಂತಾಮಣಿ, ಭಾವಸಾರ ನಗರ, ವಿಜಾಪುರ-೫೮೬ ೧೦೩**

## ೯. *ಜುಮುರು ಮಳೆ : ಸುಮಂಗಲಾ*

ಛಂದ ಪುಸ್ತಕ, I-೦೦೪, ಮಂತ್ರಿಪಾರ್ಡ್ಮೆಸ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-೭೬, ಪ್ರಮು. ೨೦೦೫, ಪು.೧೬೦, ರೂ.೬೦/-

ಯಶವಂತ ಚಿತ್ತಾಲರು ಹೇಳುವ ಹಾಗೆ, ಕತೆ ಎನ್ನುವುದು ಅನುಭವಿಸುವ ಮನುಷ್ಯನ ಮನಸ್ಸಿಗೆ ತೀರ ಸಹಜವಾದ ಚಟುವಟಿಕೆ. ಬದುಕನ್ನು ಭಾಷೆಯಲ್ಲಿ ಅರಿಯುವ ಅನನ್ಯ ಪ್ರಯತ್ನ. ಸುಮಂಗಲಾರ ಶುದ್ಧ ಮನಸ್ಸಿನ ಈ 'ಜುಮುರು ಮಳೆ'ಯಲ್ಲಿ ತೋಯುತ್ತಿದ್ದರೆ ಸಹೃದಯರಿಗೆ ಆ ಅನುಭವ ಖಂಡಿತವಾಗಿ ದಕ್ಕುತ್ತದೆ. ೧೨ ಉತ್ತಮ ಕತೆಗಳ ಈ ಸಂಗ್ರಹ ಆಧುನಿಕ ಕನ್ನಡ ಕಥಾಲೋಕದ ನವನಿಧಿ.

ನೀರೇ ಇಲ್ಲದ ಬಾವಿಗಳು ಸಹ ಒಂದು ಜೀವಂತ ಪಾತ್ರವಾಗಿ ನಮ್ಮನ್ನು ಆವರಿಸಿಕೊಳ್ಳುವ ಬಗೆಯಲ್ಲಿ ಸುಮಂಗಲಾರ ಬರವಣಿಗೆಯ ಪ್ರತಿಭೆಯಿದೆ. ಈ ನಾಗರಿಕ ಜಗತ್ತಿನಿಂದ ಕಡೆಗಣಿಸಲ್ಪಟ್ಟ ಆ ಹಾಳುಬಾವಿಗಳ ಇತಿಹಾಸವೊಂದು ಮೂರ್ತ ಸ್ವರೂಪವಾಗಿ ನಿಲ್ಲುವ ಸಂವೇದನಾಶೀಲೆಯಾದ ಹೆಣ್ಣು. ಮನಸ್ಸಿನ ಭಾವ ಭಂಗಿಗಳು ಪಾತ್ರಗಳ ಅಂತರ್ಯವನ್ನು ಕೆಣಕುತ್ತಲೇ ನಮ್ಮ ಬದುಕಿನ ಚೌಕಟ್ಟೊಂದರ ಪ್ರತಿಫಲನ ಕತೆಯಲ್ಲಿ ಹೊಳೆಯುತ್ತದೆ. ಹೆಂಗರುಳೊಂದು 'ಯಾ ಅಲ್ಲಾ' ಎಂದು ಚೀರಿದ ಕ್ಷಣಗಳು, ಸಮಾಜದ ಹಿಂಸೆ ಮತ್ತು ಕ್ರೌರ್ಯವನ್ನು ಪ್ರಶ್ನಿಸುತ್ತವೆ (ಚೌಕಟ್ಟಿನಿಂದ ಹೊರಬಂದ ಚಿತ್ರ).

ವ್ಯಕ್ತಿಯೊಬ್ಬಳ ದೇಹ ಮತ್ತು ಮನಸ್ಸುಗಳು, ಇನ್ನೊಬ್ಬ ವ್ಯಕ್ತಿಯ 'ಖಾಸಗೀ ಆಸ್ತಿ'ಯಾಗುವ ನಮ್ಮ ಸಂಸ್ಕೃತಿಯನ್ನು ತರ್ಕಿಸುತ್ತ ಸುಮಂಗಲಾರ ಸಂವೇದನೆಗಳು ಇಲ್ಲಿ ಅನುರಣಗೊಂಡಿವೆ. ಸುಮಂಗಲಾ ಇಲ್ಲಿ ಹೇಳಲು ಬಯಸಿದ್ದು ಮಾನವ್ಯ ಸಂಸ್ಕೃತಿ. ದುಷ್ಟತನ ಹಾಗೂ ಹಿಂಸೆಗಳು ಯಾರು, ಯಾರ ಮೇಲೆ ನಡೆಸಿದರೂ ಅದು ಅಪರಾಧವೇ.

'ಎಷ್ಟೋ ರಾತ್ರಿಗಳಲ್ಲಿ ಆತ್ಮದ ಮೇಲೆ ಆಕ್ರಮಣವಾದಾಗ...' ಇಂಥ ಮಾನವಶಾಸ್ತ್ರದ ಸಾಲುಗಳನ್ನು ತಸ್ಲೀಮಾ ನಸ್ರೀನ್ ಅಥವಾ ಅಮೃತಾ ಪ್ರೀತಂ ಬರೆದರೆ ಎತ್ತಿ ಕೊಂಡಾಡುವ ನಾವು, ಸುಮಂಗಲಾ ಬರೆದಾಗ ಓದಿ ಸುಮ್ಮನಿರುತ್ತೇವೆ. ಇಲ್ಲಿಯ ಒಂದು ಕತೆಯಲ್ಲಿ, ನಿವೃತ್ತಿಯ ಅಂಚಿಗೆ ಬಂದ ಅವಿವಾಹಿತೆ ಶೀಲಾ ಮ್ಯಾಡಂ, ಅರ್ಧ ಹೆಣೆದಿಟ್ಟ ಗುಲಾಬಿ ಕಾಲುಚೀಲವು ನಮ್ಮ ಎದೆ ಕಣ್ಣಿಗೆ ಚುಚ್ಚುವ ಸಮಯದಲ್ಲಿ ವ್ಯಕ್ತಿಗತ ಲೋಕವೊಂದು ತೆರೆದುಕೊಳ್ಳುತ್ತದೆ ('ಅರ್ಧ ಹೆಣೆದ ಗುಲಾಬಿ ಕಾಲುಚೀಲ').

ಲತ್ಯಾ ಮಾಮುವಿನ ಅಂಗಿಯ ಜೇಬಿನಲ್ಲಿರುವ ಪೆನ್ನಿನ ಕ್ಯಾಪು ಮತ್ತು ಬಣ್ಣದ ಬ್ರಶ್ಶುಗಳಂತಹ ಸದೃಢ ರೂಪಕಗಳು ನಮ್ಮನ್ನು ಹಿಂಜುತ್ತಲೇ ಜತೆಗೆ ಸಂಪೂರ್ಣ ಕತೆಯ ಎಚ್ಚರದ ಓದನ್ನು ಬೇಡುತ್ತವೆ (ಆಲಿಕಲ್ಲು). ಕುಡಿದಾಗಲೂ ಸಹ ಬಾಯಿಬಿಡದ ದಿವಾಕರನ ವರ್ತಮಾನದ ವಿವರಗಳು, ಅವನ ಒಂಟಿತನದ ಬೇಗೆಗೆ ಸಿಕ್ಕ ನೆರಳಿನಂತೆ, ಕೆಲಸದಾಕೆ ಜಲ್ಲಿಯ ಒಣಕೂದಲಿಗೆ ಎಣ್ಣೆ ನೀಡುವ ಅಂತಃಕರಣ, ನಮ್ಮಲ್ಲಿ ಜೀವನಪ್ರೀತಿಯನ್ನು ಅರಳಿಸುತ್ತದೆ ('ಎದೆಯಲೊಂದು ಬಳೆಚೂರು').

ವಿದ್ಯಾರ್ಥಿಯೊಬ್ಬ ಕೊಟ್ಟ ಖಾಲಿ ಡೈರಿಯ ತುಂಬ ಪ್ರಾಜಕ್ತಾಳ ಭೂತ-ವರ್ತಮಾನದ ನೋಟ ಹಾಗೂ ಬಿಳಿ ಹಾಳೆಗಳು ಕಾಣಿಸುವ ಶೂನ್ಯವೇ ತುಂಬಿ ನಿಂತಂತಿದೆ. ಪ್ರಾಜಕ್ತಾಳ ಆ ಹೊಸ ವರ್ಷವು ಎಂದಿಗೂ ಬಾರದೇ ಇದ್ದುದು ಕೂಡ, ಭವಿಷ್ಯತ್ತಿನಲ್ಲಿ ಎಂದಾದರೂ ತೆರೆಯಬಹುದಾದ ಸ್ವಪ್ನಗಳ ಸಮಯದ ಮುಚ್ಚಳವೇ ಆಗಿದೆ. ಮನೆಯ ಎದುರು ಸುಳಿಯುವ ಘೂರ್ಕಾ ಮತ್ತು ಆ ಲೈಟುಕಂಬದ ಕಪ್ಪು ನೆರಳಿನಲ್ಲಿಯೇ ಕತೆಯೊಳಗೊಂದು ಬೇರೆಯದೇ ಆದ ಕತೆ ಹುಟ್ಟಿಸುವ ಸಾಮರ್ಥ್ಯವನ್ನು ಇಲ್ಲಿಯ ಬರವಣಿಗೆ ಹೊಂದಿದೆ 'ಪ್ರಾಜಕ್ತಾ ಡೈರಿ ಬರೆಯಲಿಲ್ಲ'. ವಿಜಾಪುರದ ಜೋಪಡಿಗಳಲ್ಲಿ ನಡೆವ ಕಲಾತ್ಮಕ ಸಿನೆಮಾಗಳಂತಹ ದೃಶ್ಯದ ತುಣುಕುಗಳು, ಬಸೂನ ಮುಂದಿರುವ ಪಾರ್ವತೀ ಗುಡ್ಡ, ಮೌಸಿಯ ಕೂಗು. ಆ ಪುಟ್ಟ ರೇಡಿಯೋ ಗುನುಗು ಹಾಗೂ ಬಾರದ ಮಳೆಯ ಕಥನಗಳು, ಮನುಷ್ಯಲೋಕದ ಘನತೆ ಮತ್ತು ಕನಸುಗಳನ್ನು ಮುಟ್ಟಲು ಹವಣಿಸುತ್ತವೆ ('ಎದೆ ಭೂಮಿಗೆ ಬರ ಬೀಳದಿರಲಿ').

ಇಲ್ಲಿಯ ಬಹು ಸಂಖ್ಯೆಯ ಕತೆಗಳಲ್ಲಿ ಹೊಮ್ಮುವ ಮಳೆಯ ಆಲಾಪ ಮತ್ತು ನೀಲಿ ಜೆಡ್ ಲ್ಯಾಂಪಿನ ಮಸುಕು ಬೆಳಕಿನಲ್ಲಿಯ ಕಪ್ಪು ರಾತ್ರಿಗಳು, ಮಾತಿಗೆ ನಿಲುಕಲಾರದ ಭಾವನೆಗಳನ್ನು ಅಭಿವ್ಯಕ್ತಿಸುತ್ತವೆ. ವ್ಯವಹಾರ ಮತ್ತು ಅನುಬಂಧಗಳನ್ನು ಬೇರೆ ಬೇರೆಯಾಗಿಯೇ ನೋಡುವುದನ್ನು ಕಲಿತ ಮನೀಷಾ, ಕನಸುಗಳ ಗಂಟನ್ನು ಎದೆಗವಚಿ ಹಿಡಿದು ನಿಂತ ತನ್ನ ಅನ್ಯೋನ್ಯ ದಾಂಪತ್ಯದಲ್ಲಿ ಎಲ್ಲಿಂದಲೋ ಎದ್ದ ಸಂಶಯದ ಪಿಶಾಚಿಯ ಎಳೆಯೊಂದು ಇಡೀ ಸಂಬಂಧವನ್ನು ಸುತ್ತಿಕೊಂಡು ಉಸಿರುಗಟ್ಟಿಸುವ ಬಗೆಗಳು, ನಮ್ಮನ್ನು ಸಾಮಾಜಿಕ ಪ್ರಜ್ಞೆಯೊಂದರ ಅನುಭೂತಿಗೆ ಪ್ರೇರೇಪಿಸುತ್ತವೆ ('ಆಯಿ ಬರೆದ ಭಾಷ್ಯ').

ಹೊಟ್ಟೆಯೊಳಗಿನ ಗಡ್ಡೆಯೊಂದು ತಂದ ವಿಷಾದವು, ಸರೋಜಳನ್ನು ಒಳಗಿನಿಂದ ಕಂಗಾಲಾಗಿಸುವ ಪರಿ, ಕೆಲಸದಾಕೆ ಫಾತೀಮಾಳೊಂದಿಗೆ ಅವಳು ಅನಾವರಣಗೊಂಡಾಗ ತಲ್ಲಣಿಸುವ ಗೋಪಾಲ, ಇವೆಲ್ಲ ಗಂಡು-ಹೆಣ್ಣಿನ ಜೈವಿಕ ವ್ಯತ್ಯಾಸವ ಅವಶೇಷವನ್ನು ಕಾಣಿಸುತ್ತವೆ (`ಫಾತೀಮಾಗೆ ಮಳೆಯೆಂದರೆ ಇಷ್ಟ').

`ಬೆಳದಿಂಗಳಲ್ಲಿ' ಹುಡುಕಾಡಿದ ಸುಮಧುರ ಹಾಡೊಂದರಿಂದಲೇ ಕಾಡಿ ಬೇಡಿ ಕ್ಯಾಸೆಟ್ಟುಗಳಲ್ಲಿ ತುರುಕಿದ ಆ ನೆನಪುಗಳು ಕಾವ್ಯದಂತೆ ವಿಸ್ತಾರವಾಗುತ್ತ ಹೊಸದೊಂದೇ ಜೀವನದ ಅನುಭವವನ್ನು ಜಿನುಗಿಸುತ್ತವೆ, `ವಯಸ್ಸಾದ್ಮೇಲೆ ಎಲ್ರೂ ಸಾಯ್ತಾರೆ ಅಂದ್ರೆ ನಿನಗೆ ವಯಸ್ಸಾಗೋದೇ ಬೇಡಮ್ಮಾ' ಎನ್ನುವ `ಭಂಯ್ಯಾ ಭಂಯ್ಯಾ'ದ ಮುದ್ದು ಬಾಲಕ ಓಮುಗರ ಮನಸ್ಸಿನ ಸಂಪ್ರದಾಯದ ಜೀಗ ತೆರೆಯುತ್ತ, ಕತೆಗಾರ್ತಿಯ ಅನುಭಾವದ ಕೊಂಡಿಯನ್ನು ಭದ್ರಪಡಿಸುತ್ತಾನೆ.

ಇಲ್ಲಿಯ ಕಥಾರಚನೆಯ ವಿಶಿಷ್ಟ ವಿನ್ಯಾಸಗಳು ಜುಂಪಾ ಲಾಹಿರಿಯವರ ಕತೆಗಳ ಹೊಸತನವನ್ನು ಜ್ಞಾಪಿಸುತ್ತವೆ. ದೇಹ ಹಾಗೂ ಆತ್ಮಗಳನ್ನು ಪ್ರತ್ಯೇಕಿಸುತ್ತ, ಮೌನ ಮತ್ತು ಮಾತುಗಳನ್ನು ವಿಂಗಡಿಸುತ್ತ, ಪಾತ್ರಗಳ ಅಂತರಂಗದ ಅಖಂಡ ಶೋಧನೆ ನಡೆಸುತ್ತ, ಅತ್ಯಂತ ಪ್ರಾಮಾಣಿಕವಾಗಿ ಸೃಜನಶೀಲ ಕಾರ್ಯದಲ್ಲಿ ತೊಡಗಿರುವ ಸುಮಂಗಲಾರಂತಹ ಇನ್ನೊಬ್ಬ ಕತೆಗಾರ್ತಿ ಕನ್ನಡದಲ್ಲಿಲ್ಲ. ಈ `ಜುಮುರು ಮಳೆ'ಯ ಕಥಾಸೃಷ್ಟಿ, ಮನಸ್ಸಿಗೆ ತೀರ ಹತ್ತಿರವಾದ ಅಂಥದೊಂದು ಅಪರೂಪದ ಚಟುವಟಿಕೆಯಾಗಿದೆ.

**– ಸುನಂದಾ ಪ್ರಕಾಶ ಕಡಮೆ, ೯೦, ಕಾಳಿದಾಸನಗರ, ವಿದ್ಯಾನಗರ ವಿಸ್ತರಣೆ, ಹುಬ್ಬಳ್ಳಿ-೫೮೦ ೦೩೧**

## *೧೦. ನೆರಳು ಚೆಲ್ಲಿದ ಮಾಮರ : ಸಂ. ಡಾ. ಶಿವರಾಂ ಪೈಲೂರು*

ಪೈಲೂರು ಮನೆ, ವ್ಯಾಸರಾವ್ ರಸ್ತೆ, ಮಂಗಳೂರು-೫೭೫ ೦೦೩. ಪ್ರಮು. ೨೦೦೫. ಪು. ೧೨೫, ರೂ. ನಮೂದಿಸಿಲ್ಲ.

ವಯಸ್ಸಾಗುತ್ತ ಆಗುತ್ತ ಬಂದಿದ್ದರೂ, ತಮ್ಮ ಹಿಂದಿನ `ನೊಸ್ಟಾಲ್ಜಿಯಾ'ದಲ್ಲಿಯೇ ಮುಳುಗದೆ, ನಾಳೆಗಳ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು (ಆ ಕುರಿತಂತೆ, ಭಿನ್ನವಾದ ಅನೇಕ ಯೋಜನೆಗಳನ್ನು ರೂಪಿಸಿ) ಅದಕ್ಕೆ ತಕ್ಕದಾಗಿ ವರ್ತಮಾನದಲ್ಲಿ ಅಹರ್ನಿಶಿ ದುಡಿದ ಒಂದು ವಿಶಿಷ್ಟ ಜೀವ ಪೈಲೂರು ಲಕ್ಷ್ಮೀನಾರಾಯಣ ರಾವ್. ತೊಂಬತ್ತೊಂದು ವರುಷಗಳ ಅವರ ಸಾರ್ಥಕ ಬದುಕನ್ನು ಕುರಿತು ವಿವಿಧ ಲೇಖಕರು, ವಿವಿಧ ಕೋನಗಳಿಂದ ಬರೆದ ಲೇಖನಗಳ ಸಂಗ್ರಹ 'ನೆರಳು ಚೆಲ್ಲಿದ ಮಾಮರ'.

ಮಂಗಳೂರಿನ ವ್ಯಾಸರಾವ್ ರಸ್ತೆಯ ಪೈಲೂರು ಮನೆಯ ಪೈಲೂರು ಲಕ್ಷ್ಮೀನಾರಾಯಣ ರಾವ್, ಇಲ್ಲಿ ಲೇಖನಗಳನ್ನು ಬರೆದ ಎಲ್ಲ ಲೇಖಕರಿಗಿಂತ ವಯದಲ್ಲಿ ಹಿರಿಯರು; ಎಲ್ಲ ರೀತಿಯಿಂದಲೂ ಹಿರಿಯರು. ಇಲ್ಲಿಯ ಲೇಖನಗಳನ್ನು ಬರೆದ ಅನೇಕರಿಗೆ; ಲಕ್ಷ್ಮೀನಾರಾಯಣ ರಾವ್ ಅವರು, ಅಜ್ಜ, ಅಪ್ಪ, ಚಿಕ್ಕಪ್ಪ, ತಮ್ಮ, ಮಾವ ಎಂಬ 'ಬಳಗದ ಭಾವ' ಬೆಸ್ಸಿಗಿದ್ದರೆ; ಇನ್ನೂ ಅನೇಕರಿಗೆ ಗೆಳೆಯ, ಸಮಾಲೋಚಕ, ಹಿತಚಿಂತಕ, ವ್ಯವಸಾಯಿ, ಮಾರ್ಗದರ್ಶಿ ಎಂಬ `ಭಾವದ ಬಳಗ' ಬೆಸ್ಸಿಗಿದೆ. ಹೀಗಾಗಿ, ಇಲ್ಲಿಯ ಲೇಖನಗಳು ಅನೇಕ ವಿಭಿನ್ನ ಮುಖಗಳನ್ನು ಹೊಂದಿವೆ, ಅನೇಕ ಕ್ಷೇತ್ರಗಳಲ್ಲಿ ಹರಿದಾಡಿವೆ. ಇಂತಹ ವೈವಿಧ್ಯಮಯ ಬರಹಗಳ ಬರಹಗಾರರ ದೃಷ್ಟಿಯಿಂದ ಅಷ್ಟೇ ಅಲ್ಲ, ಇನ್ನೂ ಒಂದು ದೃಷ್ಟಿಯಿಂದಲೂ ಈ ಬರಹ ಬಹುಮುಖಿ ಸ್ವಾಭಾವಿಕ. ಏಕೆಂದರೆ, ಸ್ವತಃ ಲಕ್ಷ್ಮೀನಾರಾಯಣ ಅವರು ಅನೇಕ ಮುಖಗಳಲ್ಲಿ ಬದುಕಿದವರು; ಅನೇಕ ಕ್ಷೇತ್ರಗಳಲ್ಲಿ ತೊಡಗಿಕೊಂಡವರು. ಒಂದಿಲ್ಲೊಂದು ರೀತಿಯ ದುಡಿಮೆಗೆ ತಮ್ಮನ್ನು ಸಮರ್ಪಿಸಿಕೊಂಡವರು.

ಮಿಲಿಟರಿಯ ಕೆಲಸ, ಸಹಕಾರಿ ಸಂಘದ ಕಾರ್ಯದರ್ಶಿ ಕೆಲಸ, ವ್ಯಾಪಾರ ವಹಿವಾಟು, ಪ್ರಿಂಟರಿಯ ಕಾರ್ಯ, ತೋಟಗಾರಿಕೆ, ಬಣ್ಣದ ಮೀನು ಸಾಕಣೆ, ಬಣ್ಣದ ಹಕ್ಕಿಗಳ ಸಾಕಣೆ, ಜೇನು ಸಾಕಣೆ, ಸತ್ಯ ಸೇವಾ ಸಮಿತಿಯ ಕಾರ್ಯ, ಪತ್ರಿಕೆ, ಸಂಪಾದನ, ಅಂಚೆಚೀಟಿ ನಾಣ್ಯ ಸಂಗ್ರಹ ಕಾರ್ಯ, ಪುಸ್ತಕ ಬರಹ –ಹೀಗೇ. ಒಂದೇ ಎರಡೇ. ಈ ಎಲ್ಲ ಕಾರ್ಯಗಳ ಹಿಂದೆಯೂ ಅದೇ ಶಿಸ್ತು, ಅದೇ ಕಾರ್ಯನಿಷ್ಠೆ, ಅದೇ ಪ್ರಾಮಾಣಿಕತೆ.

ಮೇಲಿನ ಎಲ್ಲ ಕ್ಷೇತ್ರಗಳ ಬಹುಮುಖ ದುಡಿಮೆಗಾರರು ಮಾತ್ರವಲ್ಲ, ಲಕ್ಷ್ಮೀನಾರಾಯಣ ರಾವ್ ಉದಾರಿಗಳು, ಕೊಡುಗೈ ದೊರೆಗಳು, ಅನ್ನದಾನಿಗಳು. ಅದಕ್ಕೂ ಮುಖ್ಯವಾಗಿ ಚಿಂತಕರು, ಸಮಾಜಮುಖಿಗಳು, ಸಾಮುದಾಯಿಕ ಕಳಕಳಿ ಉಳ್ಳವರು. ಬಹುಶಃ ಈ ಎಲ್ಲ ಗುಣಗಳಿಂದಾಗಿಯೇ ಇರಬೇಕು, ಡಾ. ಶಿವರಾಮ ಕಾರಂತ ಅವರಂಥವರಿಂದಲೂ ಮೆಚ್ಚುಗೆಯನ್ನು ಗಳಿಸಿಕೊಂಡವರು. ಪೈಲೂರು ಲಕ್ಷ್ಮೀನಾರಾಯಣ ರಾವ್ ಅವರಂತಹ ಆದರ್ಶಮಯ ಹಿರಿಯ ಜೀವಗಳ ಆಗೀಗಿನ ಈ ಬಗೆಯ ನೆನಪು, ಈ ಬಗೆಯ ಮಾಹಿತಿ ಮತ್ತು ಆ ಮುಖೇನ ಈ ಬಗೆಯ ಆಭಾರಮನ್ನಣೆ ಒಂದು ಸಾಮುದಾಯಿಕ ಕರ್ತವ್ಯ.

– ದೇಶಪಾಂಡೆ ಸುಬ್ಬರಾಯ, 'ನೆಲೆ', ೧೩, ಕುಸುಮನಗರ, ಶ್ರೀರಂಗಮಾರ್ಗ, ಧಾರವಾಡ-೫೮೦ ೦೦೮

## *೧೧. ಕಾಳಾಮುಖ ದರ್ಶನ : ಎಸ್. ಎಸ್. ಹಿರೇಮಠ*

ಸಮತಾ ಪ್ರಕಾಶನ, ಹರಪನಹಳ್ಳಿ, ಜಿ. ಬಳ್ಳಾರಿ, ಪ್ರಮು. ೨೦೦೪, ಪು. ೧೬೦, ರೂ. ೪೫/-

ವಸಾಹತುಶಾಹಿಯ ಏಕಮುಖ ಮಾದರಿ ಮತ್ತು ಅದನ್ನೇ ಅನುಸರಿಸಿದ ರಾಷ್ಟ್ರೀಯವಾದಿಗಳ ಏಕಮುಖ ಮಾದರಿಗಳು ಭಾರತವನ್ನು ಮತ್ತು ಅದರ ಆಲೋಚನಾ ಕ್ರಮ, ಸಂಸ್ಕೃತಿ, ದರ್ಶನ, ಜ್ಞಾನಶಾಖೆಗಳ ವೈವಿಧ್ಯಮಯತೆಯನ್ನು ಒಂದು ರೀತಿಯಲ್ಲಿ ಬಹು ದೊಡ್ಡ ತೊಡಕು ಎಂಬಂತೆ ಭಾವಿಸಿಕೊಂಡು ಬಂದಿತು. ಇದರಿಂದಾಗಿ ಒಂದು ಕಾಲದ, ಒಂದು ಆಲೋಚನಾ ಕ್ರಮವನ್ನು ಮುಂದೆ ಮಾಡಿಕೊಂಡು ರಾಷ್ಟ್ರವನ್ನು ಕಟ್ಟುವ ಆಲೋಚನಾ ಕ್ರಮವನ್ನು ಅನುಸರಿಸಿತು. ಇದರಿಂದಾಗಿ ಬಹುಮುಖೀ ದರ್ಶನವೂ ಸಹ ಮುಖ್ಯ ಆಲೋಚನಾ ಕ್ರಮದಿಂದ ಹೊರಗೆ ಚೆಲ್ಲಿಕೊಂಡುಬಿಟ್ಟಿತು. ಸ್ವಾತಂತ್ರ್ಯೋತ್ತರ ಭಾರತದ ಆಲೋಚನಾ ಕ್ರಮದಲ್ಲಿ ಮಾನಸಿಕವಾಗಿ ಈ ಹಿಡಿತದಿಂದ ತಪ್ಪಿಸಿಕೊಂಡು ಎಲ್ಲ ಕ್ಷೇತ್ರಗಳಲ್ಲೂ ಹೊರಬಂದು ನಮ್ಮ ಮನಸ್ಸನ್ನೂ ಸ್ವತಂತ್ರಗೊಳಿಸಿಕೊಳ್ಳುವ ಘಟ್ಟದಲ್ಲಿ ನಾವು ಈಗ ಇದ್ದೇವೆ.

ಈ ಹಿನ್ನೆಲೆಯಲ್ಲಿ ಎಸ್. ಎಸ್. ಹಿರೇಮಠರ 'ಕಾಳಾಮುಖ ದರ್ಶನ' ಒಂದು ವಿಶೇಷ ದಾರ್ಶನಿಕ ಕೃತಿಯಾಗಿ ಹೊರಬಂದಿದೆ. ಕಾಳಾಮುಖ ದರ್ಶನವು ಇತರ ದರ್ಶನಗಳಿಗಿಂತ ಹೇಗೆ ವಿಶಿಷ್ಟವಾದುದು ಎಂಬುದನ್ನು ಚಾರಿತ್ರಿಕವಾಗಿ, ಸಾಂಸ್ಕೃತಿಕವಾಗಿ ವಿಶ್ಲೇಷಿಸಿ ತೋರಿಸಿಕೊಡುತ್ತಾರೆ. ಇನ್ನೊಂದು ದೃಷ್ಟಿಯಲ್ಲಿ ಭಾರತದಲ್ಲಿ ಜಾತಿ, ಮತ ಮತ್ತು ದರ್ಶನದ ದೃಷ್ಟಿಯಲ್ಲಿ ನಿಂತ ನೀರಾಗಿ ಹೋಗಿತ್ತೋ ಎಂಬ ಭಾವನೆಯನ್ನು ಬದಿಗೊತ್ತಿ ಇವುಗಳೆಲ್ಲವೂ ಬದಲಾವಣೆಗೆ ಒಳಗಾಗುವ ರೀತಿಯನ್ನು ಸಹ ವಿಶ್ಲೇಷಿಸುತ್ತಾರೆ. ಕಾಳಾಮುಖರು ದ್ರಾವಿಡರೇ, ಆರ್ಯರೇ, ಕರ್ನಾಟಕ ಮೂಲದವರೇ ಅಥವಾ ಈ ಪಂಥಕ್ಕೆ ಸೇರಿದವರು ಬ್ರಾಹ್ಮಣರಿಂದ ಹಿಡಿದು ಉಳಿದೆಲ್ಲ ಜಾತಿಯವರೂ ಇದರ ಪ್ರಭಾವಕ್ಕೆ ಒಳಗಾಗಿದ್ದರೇ ಎಂಬುದನ್ನೂ ಸಹ ವಿಶ್ಲೇಷಿಸುತ್ತಾರೆ. ಈ ದೃಷ್ಟಿಯಲ್ಲಿ ಇದೊಂದು ಮೌಲಿಕವಾದ ಕೊಡುಗೆ. ಇದಕ್ಕಾಗಿ ಮಧ್ಯಕಾಲೀನ ಕರ್ನಾಟಕದ ಶಾಸನಗಳನ್ನೂ ಚಿದಾನಂದಮೂರ್ತಿಯವರಂತಹ ವಿದ್ವಾಂಸರ ಅಭಿಪ್ರಾಯಗಳನ್ನೂ, ಕರ್ನಾಟಕದ ವಾಸ್ತುಶಿಲ್ಪ ಮುಂತಾದವುಗಳನ್ನೆಲ್ಲಾ ಪರಿಗಣಿಸಿ ಹೊಸ ದೃಷ್ಟಿಯಿಂದ ವಿವೇಚಿಸಿದ್ದಾರೆ. ಈ ದೃಷ್ಟಿಯಿಂದ ಇದೊಂದು ಪ್ರಮುಖ ಗ್ರಂಥವಾಗಿದೆ.

– ಪ್ರೊ. ಕಿಕ್ಕೇರಿ ನಾರಾಯಣ್, ೨೬೨, ೧೯ನೇ ಮೇನ್, 'ಬಿ' ಬ್ಲಾಕ್
೩ನೇ ಹಂತ ವಿಜಯನಗರ, (ಜೆಸಿಇ ಹಿಂಭಾಗ), ಮೈಸೂರು-೫೭೦ ೦೧೭

## *೧೨. ಹರಿಯುವ ನದಿಗೆ ಮೈಯೆಲ್ಲ ಕಾಲು : ಜಂಬಣ್ಣ ಅಮರಚಿಂತ*

ನಾಗಶ್ರೀ ಪ್ರಕಾಶನ, ೧೪೭, ೭ನೇ ಮೇನ್, ಶ್ರೀನಿವಾಸನಗರ, ಬನಶಂಕರಿ ೧ನೇ ಹಂತ, ಬೆಂಗಳೂರು-೫೬೦ ೦೫೦.
ಪ್ರಮು. ೨೦೦೩, ಪು. ೯೬, ರೂ. ೮೦/-

ಸೂಕ್ಷ್ಮ ಮನಸ್ಸಿನ, ಅಪಾರ ಸಹಜ ಕಾಳಜಿಗಳೆಲ್ಲವನ್ನೂ ತನ್ನ ತೆಕ್ಕೆಯಲ್ಲಿ ಹಿಡಿದಿಟ್ಟುಕೊಳ್ಳಬೇಕೆನ್ನುವ, ಶಬ್ದಗಳಲ್ಲಿ ಅವನ್ನೆಲ್ಲ ಕಟ್ಟಿ, ತುಂಬಿ ತೋರಿಸಬೇಕೆನ್ನುವ ಕವಿ ಜಂಬಣ್ಣ ಅಮರಚಿಂತ.

ಗಂಭೀರ ಕಾಳಜಿಗಳ ಬಗೆಗೆ ಬರೆಯುವಾಗ ಕೂಡಾ ಅವರು ಭಾವುಕತೆಯ ಒತ್ತಡದಲ್ಲೇ ಬರೆಯುತ್ತಾರೆ. ಹೀಗಾಗಿ ಅವರ ಕಾವ್ಯದ ಮುಖ್ಯ ಗುಣ ಸಹಜವಾಗಿ ಓದಿಸಿಕೊಂಡು ಹೋಗುವ ಮೋಹಕತೆ, ಹಾಗೂ ಅವಘಡವಾಗದಿರುವಿಕೆ. ಶೋಷಣೆ ಹಾಗೂ ಶೋಷಣೆಗೊಳಗಾದವರ ಬಗೆಗೆ ಬರೆದಷ್ಟೇ ತೀವ್ರತೆಯಿಂದ ಗಡಿಯ ಬೇಲಿಗಳ ಬಗೆಗೆ, ಬೆಳಕು ಅರಸುವ ಬಗೆಗೆ, ಬೆತ್ತಲೆ ಹಾಗೂ ನಿಜವಾದ ವಸನದ ಬಗೆಗೂ ಬರೆಯುತ್ತಾರೆ : 'ಹಸಿವು ಆವರಿಸಿದ ಜನರೆದುರು/ಹಸಿರು ಕ್ರಾಂತಿ ಗೀತೆ ಹಾಡಿ ನಲಿದಾವ ಗಿಳಿಗಳು' ಎನ್ನುವಲ್ಲಿಯ ವ್ಯಂಗ್ಯವಷ್ಟೇ ತೀವ್ರವಾಗಿ ಚಿಂತನೆಯಿಂದ ಸಾಕ್ಷಾತ್ಕಾರಗೊಂಡ, 'ಗೆರೆಗಳಿರುವದಿಲ್ಲ ನೆಟ್ಟಗೆ; ನೇರ/ಯಾವಾಗಲೂ ಅವು ಸೊಟ್ಟ ಪಟ್ಟ ಪೂರ/ಸೃಷ್ಟಿಯ ಚೆಲುವು ಅಡಗಿದೆ ವಕ್ರ ರೇಖೆಯಲಿ', ಅಂತೆಯೇ 'ವಕ್ರೋಕ್ತಿ ವಕ್ರರೇಖೆಗಳಲ್ಲಿ ಅಡಗಿದೆ/ಕಲೆ ಸಾಹಿತ್ಯ ಸೌಂದರ್ಯ ಮೀಮಾಂಸೆ' ಸಾಲುಗಳು ಕೂಡ ಕ್ಷಣ ನಿಂತು ವಿಚಾರ ಮಾಡುವಂತೆ ತಟ್ಟುತ್ತವೆ.

ಜೀವನ ಚಲನಶೀಲ; ಅಂತೆಯೇ ನದಿ. 'ಕ್ಷಣಕ್ಷಣ ಅನುಕ್ಷಣ ಹೊಸತನ ಹೊಸರಾಗ-/ರಾಗಿಣಿಯಾಗಿ- ಜೀವನ ಸಂಜೀವಿನಿಯಾಗಿ/ಬಂದಳೋ ಅದೋ- ಅದೋ ನದಿ.' ಆದರೆ 'ಯಾವ ನದಿ ಮುಖ ತೊಳೆಯದು ಕೂತಲ್ಲಿಗೆ ಬಂದು, ನೀರುಣಿಸದು/ಜಿಗಿಯಬೇಕು ನದಿಯೊಳಗೆ' ಎನ್ನುವಲ್ಲಿ ಮನುಷ್ಯನನ್ನು ಕ್ರಿಯಾಶೀಲನನ್ನಾಗಿಸುವ ಆಹ್ವಾನವಿದೆ. ಈ ಚಲನಶೀಲತೆಯಿಂದಾಗಿಯೇ ಕಾಲದ ಪರಿಕಲ್ಪನೆಗೆ ವಿಶಿಷ್ಟ ಸ್ಥಾನವಿದೆ : 'ಕಾಲ ಬದುಕುವ ಸನ್ನಿವೇಶ ತಾನೇ ಸೃಷ್ಟಿಸುತ್ತಿದೆ/ಹಿಡಿದ ಹೂಗೊಂಚಲನು ಕಿತ್ತಿ ಕೈಗೆ ಖಡ್ಗ ತೊಡಿಸುತ್ತದೆ' ಹಾಗೆಯೇ 'ಮಣ್ಣಿನ ದೇಹದ ಮೇಲೆ ಶೀಶೆಯ ಶಿರ ಹೊತ್ತು ನಿಲ್ಲಬೇಕು/ನಿಲ್ಲಬೇಕು ಮುಕ್ಕಾಗದೆ ಕಾಲವೊಡ್ಡಿದ ಪರೀಕ್ಷೆಗೆ' ಈ ಸಾಲುಗಳು ಅಗಾಧ ಪರಿಣಾಮ ಬೀರುತ್ತವೆ.

ನನ್ನ ಗಮನಕ್ಕೆ ಬಂದುದೇನೆಂದರೆ, ಅಮರಚಿಂತ ಅವರು ರಚನೆಯ ದೃಷ್ಟಿಯಿಂದ ಒಂದು ಸೂತ್ರಕ್ಕೊಳಪಟ್ಟು ಬರೆದ ಕವಿತೆಗಳು ಹೆಚ್ಚು ಪರಿಣಾಮಕಾರಿಯಾಗಿರುತ್ತವೆ. 'ಶಾಹನಂಗಾ; ಒಂದು ಡಪ್ಪಿನ ಹಾಡು', 'ಪಲ್ಲಕ್ಕಿ ಹೊತ್ತ ಬೋವಿಗಳ ಹಾಡು', 'ಪಂಜಾಬಿನ ಮಾಹೆ' ಮಾದರಿಯ ಕೆಲವು ಕವನಗಳು ಹಾಗೂ ಕೆಲವು ಗಜಲ್‌ಗಳು ಇದಕ್ಕೆ ಉದಾಹರಣೆ. 'ಶಾಹನಂಗಾ'ದ ಬಹಳ ಅಪರೂಪದ ಈ ಕೆಳಗಿನ ಸಾಲುಗಳು ಕವಿಯ ಕಾವ್ಯಶಕ್ತಿಗಷ್ಟೇ ಅಲ್ಲದೆ ಕವಿಯ ಅಂತಃಸತ್ವಕ್ಕೂ ಸಾಕ್ಷಿ. ಓದಿ : 'ಬಟ್ಟೆ ತೊಟ್ಟರೂ ಬತ್ತಲೆ ಕಾಣುವ/ಕತ್ತಲೆಯೊಳಗೆ ಬತ್ತಲೆ ತಿರಗುವ ಚಲ್; ಕತ್ತಲೆಯೊಳಗೆ ಬತ್ತಲು ತಿರುಗುವ/ಜಗದ ಜನರಿಗೆ ದಟ್ಟಿ/ಉಡಿಸಲು ಎಳೆ ಎಳೆ ನೆಯ್ದಾನೆ', 'ಮೇಲೆ, ಕೆಳಗೆ, ಅಂತರದೊಳಗೆ/ಪ್ರೀತಿ ಬೀಜ ಸ್ವಾಮಿ ಬಿತ್ಯಾನೆ/ಚಲ್; ಪ್ರೇಮ ಬೀಜ ಸ್ವಾಮಿ ಬಿತ್ಯಾನೆ/ಮಾಸದ ಅಂಗಿ, ಪ್ರೇಮದ ಲುಂಗಿ ಸಿಗುವ ತನಕ ಬತ್ಲೆ ನಿಂತಾನೆ'.

**– ಪ್ರೊ. ದುಷ್ಯಂತ ನಾಡಗೌಡ, 'ವೆಂಕಟಾದ್ರಿ', ೧೨೪, ೨ನೇ ಮೇನ್, ಗಾಂಧೀನಗರ, ಧಾರವಾಡ-೪**

## ಸಂಕಲನ : ಅನಿಸಿಕೆ

೧. **ಸಂಕಲನ-೨೭** ರ ಹೊರಪಟ್ಟಿ ಬಿಚ್ಚಿ ನೋಡಿದಾಗ ಬಹಳ ಖುಷಿಯಾಯಿತು. ಮುಖಪುಟದ ವಿನ್ಯಾಸ, ಒಳ್ಳೆಯ ಕಾಗದ ಉಪಯೋಗ, ಒಳಗಿನ ಮೌಲಿಕ ಲೇಖನಗಳು– ಭೇಷ್ ತುಂಬಾ ತುಂಬಾ ಭಲೋ ಅನಿಸಿತು. **– ಎಚ್. ಜಿ. ಸೋಮಶೇಖರರಾವ್, ಬೆಂಗಳೂರು**

೨. ನಿಮ್ಮ 'ಕಡೇಪುಟ', 'ಒಸ್ನೇಪುಟ' ಇತ್ಯಾದಿ ಓದುತ್ತ ನನಗೆ ಧಾರವಾಡವೇ ಕಣ್ಣಮುಂದೆ ಸುಳಿದಂತಾಗುತ್ತದೆ. ಸಂಕಲನ ಆಪ್ತ ಒಡನಾಡಿಯಂತಿದೆ. ಇದು ಸಂಗ್ರಹಯೋಗ್ಯ ಪತ್ರಿಕೆಯಾದುದರಿಂದ ಮೊದಲ ಸಂಚಿಕೆಯಿಂದಲೂ ತಪ್ಪದೇ ಜೋಡಿಸಿಟ್ಟುಕೊಂಡಿರುವೆ. **– ಈರಪ್ಪ ಎಂ. ಕಂಬಳಿ, ಬೆಂಗಳೂರು**

೩. ಸಂಕಲನ ದ್ವೈಮಾಸಿಕ ವರ್ಷದಿಂದ ವರ್ಷಕ್ಕೆ ಎಷ್ಟು ಛಂದ ಮೈ ತುಂಬಿಕೊಂಡು ಬೆಳೆಯಾಕ ಹತ್ತೈತಿ: ಅಂತಃಕರಣದ ತಾಯಿ ಕಕ್ಕುಲಾತಿಯೊಳಗ ಮುದ್ದಾದ ಕೂಸು ಬೆಳದ್ಹಂಗ; ಪರಿಶ್ರಮ ಪಡೋ ರೈತನ ಕೈಯಾಗ ವಿಧ ವಿಧ ಹೂವಿನ ತೋಟ ಬೆಳದ್ಹಂಗ. ನಿಮಗ, ತಾಯಿಗಿ, ರೈತನಿಗೆ ಅಭಿನಂದನೆಗಳು.

ಕಳೆದ ಸಂಚಿಕೆಯೊಳಗ ಮೊದಲ ನೋಡ್ತಾ ಇದ್ದದ್ದು **ಕಡೀಪುಟ**. ಆದ್ರ ಈ ವರ್ಷದ ಸಂಚಿಕೆಗಳು `ಒನ್ನೇಪುಟ'ದಿಂದ ಕಣ್ಣ ಕದಲಸಲಾರದ್ಹಂಗ ಮಾಡಿದ್ವು. ಶೀರ್ಷಿಕೆಯೊಳಗ ಬಾಲ್ಯದ ನೆನಪು ದೇಸೀಯ ಸೊಗಡು, ಜಾನಪದ ಗಂಧ ತುಂ ತುಂಬಿ ತುಳಕ್ತಾವು; ಘಂ ಅನ್ನೋ ದೇಸೀ ವಾಸ-ನಿ. ಈ ಸಲದ **ಸಂಕಲನ-೨೭** ರ `ಒನ್ನೇ ಪುಟ ಒನ್ನೇ ನಂಬರ.' ಸಂತಶ್ರೇಷ್ಠರೂ ಹಿಂದೀ ಭಾಷಾ ದಿಗ್ಗಜರೂ ಆದ ಸೂರದಾಸರ ಬಗ್ಗೆ ಅದೆಷ್ಟು ಸೊಗಸಾಗಿ, ಸಂಗ್ರಹವಾಗಿ ಬರದೀರಿ; ಕರಸ್ಥಲದೊಳಗ ಲಿಂಗ ಚುಳುಕಾದ ರೀತಿ. ಪಂಪನ ಬಗೆಗಿನ ಹಿತ-ಮಿತ ಮೃದು ವಚನ ರಚನಾ **ಚತುರನ್** ಮಾತು ನೆನಪಿಗೆ ಬಂತು.

ನಿಮ್ದು ಗ್ರಾಮೀಣ ಮನಸ್ಸು; ಶುದ್ಧ, ಸ್ವಚ್ಛ, ಸ್ಫಟಿಕ, ನಿರ್ಮಲ. ಅದಕ್ಕ ತಕ್ಕುದಾದ ದೇಸೀ ಭಾಷೆ. ನವಿರು ಕಾಠಿಣ್ಯಗಳ ಹದವಾದ ಬೆರಕೆ. ತೋಂಡಿ ಭಾಷೆಯನ್ನ ಬರಹಕ್ಕಿಳಿಸೋದರಲ್ಲಿ ನಿಮ್ಮನ್ನ ಮೀರಿಸೋರಿಲ್ಲ. **ಚಹಾದ ಜೋಡಿ ಚೂಡಾದ್ಹಾಂಗ** ಅಂಕಣ ಬರಹದೊಳಗೆ ನೀವು ಭಾಷಾ ರಚನೆಯೊಳಗೆ ಮಾಡಿದ ಪ್ರಯೋಗ ಭಾಷಾವಿಜ್ಞಾನಿಗಳಿಗೆ ಅಧ್ಯಯನ ವಸ್ತು ಆಗುವಂಥಾದ್ದು. ಕನ್ನಡ ಉಳಿಯುವುದು ಬೆಳೆಯುವುದು ಇಂಥ ಸದ್ದಿಲ್ಲದ ಪ್ರಯತ್ನಗಳಿಂದ ಹೊರತು ಘೋಷಣೆ ಗಾಳಿ ಮಾತಿನಿಂದಲ್ಲ. ನಿಮ್ಮ ಹಾಳಿ ಮಾತು, ಬಾಳೋ ಮಾತು.

**ಸಂಕಲನ** ವೈವಿಧ್ಯಮಯವಾಗಿ ಹೊಸ ಹೊಸ ಅಂಕಣದೊಂದಿಗೆ ಹೊರಬರ್ತಾ ಇರೋದು ಕಂಡು ತುಂಬ ಸಂತೋಷ ಆಗೈತಿ. ಇದು ಹಿಂಗs ಮುಂದುವರಿಲಿ; ವಿಸ್ತಾರಗೊಳ್ತಾ, ವಿಸ್ತಾರಗೊಳ್ತಾ.......

**– ತೋಂಟದ ಸಿದ್ಧಲಿಂಗ ಸ್ವಾಮಿಗಳು, ಡಂಬಳ-ಗದಗ**

೪. **೨೭** ನೇ ಸಂಚಿಕೆಯ 'ಕಡೀಪುಟ'ವನ್ನು ಎಂದಿನಂತೆ ಮೊದಲಿಗೇ ಓದಿದೆ; ಅಲ್ಲ– ಓದಿಕೊಂಡೆ. ಲಘುಪ್ರಬಂಧವೆಂದರೇ ಹೀಗೆ : ಓದಿಸಿಕೊಳ್ಳುವ ಆತ್ಮೀಯತೆಯೊಂದೇ ಅದರ ಗುಣ. ಯಾವುವೇ ಗುಣಕ್ಕೆ ಬಣ್ಣ ಇರುವುದಿಲ್ಲ; ನಮ್ಮ ಮನಸ್ಸಿಗೆ ಬಣ್ಣ ಕೊಟ್ಟುಕೊಂಡವರು ನಾವು: ಬಿಳಿ ಶ್ರೇಷ್ಠ; ಕರಿ ಕೆಟ್ಟ. ಆದರೆ ಕೂದಲ ವಿಷಯದಲ್ಲಿ ಇದು ತಿರುವು ಮುರಿವು! ಈ ಭ್ರಮೆಯನ್ನು ಆ ನಾಲ್ವರು 'ರಿ-ಟಾಯರ್ಡ್' ಹಿರಿಯ ನಾಗರಿಕರ ಬಿಳಿತಲೆಯಿಂದ ಹೋಗಲಾಡಿಸುವ ಕಡೀಪುಟದ ಬೆಳಗಿನ ಚಿಂತನೆ ಲಘು ದಾಟಿಯ ಗಂಭೀರ ಬರಹ. ಇಂಥಾ ನಿದರ್ಶನಪೂರ್ವಕ ಚಿಂತನೆಗಳು ಕಡೀಪುಟವನ್ನು ತುಂಬುತ್ತಿರಲಿ. **– ಶ್ಯಾಮಸುಂದರ ಬಿದರಕುಂದಿ, ನವನಗರ-ಹುಬ್ಬಳ್ಳಿ**

೫. ಯಾವುದೋ ಒಬ್ಬ ರಾಜನ ಆಸ್ಥಾನಕ್ಕೆ ಯಾರೋ ಒಬ್ಬ ತಪಸ್ವಿ ದಿನಾ ಬಂದು ಏನೋ ಒಂದು ಹಣ್ಣು ಕೊಡ್ತಿದ್ನಂತೆ. ರಾಜ ವಿನೀತನಾಗಿಯೇ ಸ್ವೀಕರಿಸಿದರೂ ಪ್ರಶ್ನಿಸದೆ, ಪರೀಕ್ಷಿಸದೆ ಅದನ್ನು ಹಾಗೇ ಒಂದು ಕಡೆ ಸಂಗ್ರಹಿಸಿದನಂತೆ. ಅದೊಂದು ದಿನ ಹಳತು, ಹುಳತು, ಹೋಳಾತು ಒಳಗಿಂದೇನೋ ಹೊಳಪು! ಕೆದಕಿ ನೋಡಿದ್ರೆ ಪ್ರತಿಯೊಂದರಲ್ಲೂ ಒಂದೊಂದು ಅಮೂಲ್ಯ ಹೊಳಪು (ಮುತ್ತೋ ವಜ್ರವೋ ಏನೋ ಒಂದೂಂತ ಇಟ್ಕೊಳ್ಳಿ). ಮಾರಣೇ ದಿನ ವಿಚಾರಣೆ ಇತ್ಯಾದಿ. ಬೇತಾಳನ ಕಥೆ ಪೀಠಿಕೆಯಾಗಿ ಓದಿದ್ದು ಈಗ ನೆನಪಿಗೆ ಬಂತು. ಒಂದೇ ವ್ಯತ್ಯಾಸ. ಅಲ್ಲಿ ತಪಸ್ವಿ ರಾಜನ ಸೇವೆಯನ್ನು ಹಿಂದಿನಿಂದ ಕೇಳಿದ ನೀವು ಮುಂದಾಗಿ ಕೇಳಿಬಿಟ್ಟಿದ್ದೀರಿ!

[ಹೋಲಿಕೆಗಳನ್ನು ಉದ್ದಿಷ್ಟದಿಂದಾಚೆ ಬೆಳೆಸಬಾರದೆಂದು ನೀವು ತಿಳಿದವರೇ ಇರುವುದರಿಂದ ನಾನು ರಾಜ, ನೀವು ತಪಸ್ವಿ, ನನ್ನ 'ಸೇವೆ' ಅಮೋಘ ಎಂದೇನೂ ಅಲ್ಲ ಬಿಡಿ] ನಾನು ಚಂದಾ ಕೊಡದಿದ್ದರೂ (ಓದಲು ಸಮಯ ಸಾಲದೆಂಬ ಒಂದೇ ಕಾರಣ) ಎರಡು ಸಂಚಿಕೆ ಅಂದೇ ಕೊಟ್ಟಿದ್ದೀರಿ. ಈಗ ಇಂದು ಅಂಚೆಯಲ್ಲಿ! ನನ್ನ ಲೇಖನದ ಅನಿಶ್ಚಯತೆಯನ್ನೂ ಹೋಗಲಾಡಿಸುವುದಕ್ಕೆ ಚಂದಾ ಲಗತ್ತು.

ನಿಮ್ಮ ಕಡೀ ಪುಟಕ್ಕೊಂದು ಭಿನ್ನಮತ! ಹೂವೇನೋ ಬಿಳೀದು ಖರೆ, ದೇವ್ರು? (ಅಮೃತಶಿಲೆಯಲ್ಲಿ ಕಂಡರಿಸಿದ ಆಧುನಿಕ ದೇವರುಗಳ ಬಗ್ಗೆ ನಾ ಹೇಳಲಾರೆ.)

– ಜಿ. ಎನ್. ಅಶೋಕವರ್ಧನ, ಮಂಗಳೂರು

೬. ಮೇ-ಜೂನ್ ಸಂಚಿಕೆಯ 'ಕಡೀಪುಟ' ಬಹಳ ಮಾರ್ಮಿಕವಾಗಿದೆ. ತಲೆಯಲ್ಲಿ ಕೂದಲು ಬೆಳ್ಳಗಾಗುವುದನ್ನು ಕಂಡು ಕೊರಗುತ್ತಿರುವವರೊಂದಿಗಿನ ಹರಟೆ ಹೃದಯಕ್ಕೆ ತಾಗುವಂತಿದೆ. ಜೀವನವನ್ನು ಅದು ಬಂದಂತೆಯೇ ಸ್ವೀಕರಿಸಬೇಕು, ಅದೂ ಸಂತೋಷದಿಂದ, ಎನ್ನುವ ಸಂದೇಶವು ಅದರಲ್ಲಡಗಿದೆ. ನಾನು ಯಾವಾಗಲೂ ಮೊಟ್ಟಮೊದಲು ಓದುವುದು 'ಕಡೀಪುಟ'ವನ್ನು.

– ಬಸವರಾಜ ಚಿಕ್ಕನರಗುಂದ, ಹುಬ್ಬಳ್ಳಿ

೭. ಸಂಕಲನ-೨೩ ತುಂಬ ಉತ್ತಮವಾಗಿ ಬಂದಿದೆ. 'ಬರೀ'ಓದುಗರಿಗೆ ಹೆಚ್ಚಿಗೆ ಹಿಡಿಸುತ್ತಿದೆ. 'ಒನ್ನೇಪುಟ'ದಿಂದ 'ಕಡೀಪುಟ'ದ ವರೆಗಿನ ವೈವಿಧ್ಯಮಯ ಲೇಖನಗಳು ಮನಂಬಗುವಂತಿವೆ. ಯು. ವೆಂಕಟ್ರಾಜರಾವ್ ಅವರ ಸುದೀರ್ಘ–ಪರಿಸರವಾದ ಮತ್ತು ಔದ್ಯೋಗೀಕರಣ –ಲೇಖನ ಎಷ್ಟೋ ಪಿಹೆಚ್‌ಡಿ ಮಾಡುವ ಮಂದಿಗೆ ಆಕರ ಲೇಖನ ಎನ್ನಲಡ್ಡಿಯಿಲ್ಲ.

ಎಂ. ಡಿ. ಗೋಗೇರಿಯವರ ವಿಕಟ ವಚನ ಹಿಡಿಸಿತು. ಚಿದಾನಂದ ಸಾಲಿಯವರ 'ಬರಿ ಬಸ್ಸಲ್ಲೋ...' ನಿಮ್ಮ ಸಂಕಲನದಲ್ಲಿ ನಾನು ನೋಡಿದಂತೆ ಉತ್ತಮ ಪ್ರಬಂಧ/ಹಾಸ್ಯಲೇಖನ. ನಿತ್ಯ ನೋಡುವ ಅನುಭವಿಸುವ ಪ್ರಯಾಸದ ಪ್ರಸವದ ಪ್ರಹಸನ ಖುಷಿ ಕೊಟ್ಟಿತು. ಚಮತ್ಕಾರಿಕ ಪದಪ್ರಯೋಗಗಳು ನಗೆಕ್ಕಬ್ಬುಗಳಲ್ಲಿಯಂತೆ ಹ..ಹ..ಹಾ.. ಅನ್ನಿಸದಿದ್ದರೂ ಅದಕ್ಕಿಂತ ಹೆಚ್ಚಿನ ನಗೆಬುಗ್ಗೆಯನ್ನು ಸೃಷ್ಟಿಸಿತು. ರಾಘವೇಂದ್ರ ಪಾಟೀಲರ 'ತೇರು' ರಾಷ್ಟ್ರೀಯ ಬಹುಮಾನ ಪಡೆದ ಕೃತಿಯನ್ನು ವಿಸ್ತಾರವಾಗಿ ಪ್ರಸ್ತಾಪಿಸಿ, ಅದರ ಹೆಚ್ಚಿನ 'ಪ್ಲಸ್' ಪಾಯಿಂಟುಗಳೊಂದಿಗೆ 'ಮೈನಸ್' ಅಂಶಗಳನ್ನೂ ಹೊರೆಯಾಲ ದೊರೆಸ್ವಾಮಿ ಅವರು ತಿಳಿಸಿರುವುದು ನಿಷ್ಪಕ್ಷಪಾತ ವಿಮರ್ಶೆಗೆ ಕನ್ನಡಿ ಹಿಡಿದಹಾಗಿದೆ. ಬಿ. ಎಂ. ರೋಹಿಣಿಯವರ 'ನನ್ನ ಶಾಲಾ ಗುರುಗಳು' ಲೇಖನ ಓದಿದ ಮೇಲೆ, ಅಂತಹ ಪ್ರತಿಭಾವಂತ, ಶಿಕ್ಷಕ ಎಂದರೇನು? ಅವರ ಧ್ಯೇಯೋದ್ದೇಶಗಳು ಹೇಗಿರಬೇಕು? ಅವರು ಮಕ್ಕಳಿಗೆ ಹೇಗೆ ಮಾದರಿಯಾಗಿರಬೇಕು? ಇಂತಹ ಹಲವು ಹತ್ತು ಪ್ರಶ್ನೆಗಳನ್ನು ಮೈಗೂಡಿಸಿಕೊಂಡಂತಿದ್ದ ಮೇಷ್ಟ್ರುಗಳಡಿಯಲ್ಲಿ ಓದಿ ಈ ಮಟ್ಟಕ್ಕೆ ಬೆಳೆಯುವಂತಾದ ರೋಹಿಣಿ ಅವರೇ ಧನ್ಯರು. ಅಪರೂಪದ ಪರಿಸರದಲ್ಲಿ ಹಿಂದೂ-ಮುಸಲ್ಮಾನ್ ಎನ್ನದೇ ತನ್ನತನದ, ಪಿಂಜಾರರನ್ನು ಮುಸಲ್ಮಾನರು ತುಚ್ಛೀಕರಿಸಿ ನೋಡುವುದನ್ನು ಮುಚ್ಚುಮರೆಯಿಲ್ಲದೆ ಹೇಳುತ್ತ, ಆದರ್ಶವಾದಿ, ಸಾಮಾನ್ಯರಂತೆ ನಡೆದುಕೊಳ್ಳುವ ಶಿಸ್ತುಬದ್ಧ ತಂದೆ, ಜಾತಿಯ ಸೋಂಕಿಲ್ಲದ ದಯಾಮಯಿ ತಾಯಿಯ ಬಗ್ಗೆ 'ನನ್ನ ಅವ್ವ ನನ್ನ ಅಪ್ಪ' ಲೇಖನದಲ್ಲಿ ಮಿರ್ಜಾ ಬಷೀರ್ ಉತ್ತಮವಾಗಿ ನಿರೂಪಿಸಿದ್ದಾರೆ.

ಇನ್ನು ನಿಮ್ಮ 'ಕಡೀಪುಟ' ನನ್ನನ್ನು ಬಹುವಾಗಿ ಕಾಡಿತು. ನನ್ನ ಅಧೀನ ಸಿಬ್ಬಂದಿಯಲ್ಲಿ ಕೆ. ಗೋವಿಂದಪ್ಪ ಎಂಬವರದು ಸಂಪೂರ್ಣ ನರೆತ ಕೂದಲು. ಸಾರ್ವಜನಿಕರು ಬಂದ ತಕ್ಷಣವೇ ಗರ್ಭಗುಡಿಯಲ್ಲಿಯ ದೇವರಿಗೆ ಬಿಟ್ಟು, (ನರೆತ ಕೂದಲಿಲ್ಲದ ನನ್ನನ್ನು ಉಪೇಕ್ಷಿಸಿ) ಆತನಿಗೆ 'ಸರ್...' ಎಂದು ನಮಸ್ಕರಿಸುತ್ತಿದ್ದುದು ನನಗೆ ಮುಜುಗರವಾಗುತ್ತಿತ್ತಲ್ಲದೆ, ದೇವರೆ, ನನಗೆ ಬಿಳಿಗೂದಲನ್ನು ಕೊಟ್ಟು, ಕಛೇರಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಗೌರವ ಸಿಗುವಂತೆ ಮಾಡಪ್ಪ ಎಂದು ನೊಂದು ಕೇಳಿದ್ದಿದೆ. ನನಗೂ ನಿಮ್ಮ ಕೂದಲೇಕೆ ಕಪ್ಪು? ಡೈ ಮಾಡಿದವ್ರೋ ಏನೋ ಎಂದು ಮಂಗನಂತೆ ನನ್ನ ತಲೆಯತ್ತ ಪಿಳಿಪಿಳಿ ನೋಡುವುದಿದೆ. ಅದಕೊಂದೇ ನಾನು ವಾಕಿಂಗ್ ಹೋಗುವಾಗ (ಗಂಟೆಗೆ ೬-೭ ಕಿ.ಮೀ.) ವೇಗದಲ್ಲಿ ಬಿರಬಿರನೇ ಹೋಗಿಬರುವುದರಿಂದ ನನಗಿಂತ ಕಿರಿಯರಿಗಾಗಲಿ ಹಿರಿಯರಿಗಾಗಲಿ ಕೂದಲಿನ ಪುರಾಣ ಎತ್ತಲು ಶ್ರುತಿ ಮಾಡಲು ಅವಕಾಶವನ್ನೇ ಕೊಡುವುದಿಲ್ಲ. ನೀವು ಹಾಗೇ ಮಾಡಿ ಬಚಾವಾಗಿ. ನನಗೂ ನಿಮ್ಮ ಪ್ರಶ್ನೆ ಕೇಳಿದವರಿಗೆಲ್ಲ ನಾನು ಹೇಳುವುದಿಷ್ಟೇ! ನಾನು ಯಾವುದಕ್ಕೂ ತಲೆ ಕೆಡಿಸಿಕೊಳ್ಳುವುದಿಲ್ಲ. ತಲೆಯ ಮೇಲೆ ಕೈ ಇಟ್ಟುಕೊಳ್ಳುವುದಿಲ್ಲ. ಅದಕ್ಕೇ

ಅವು 'cool...cool...' ಇವೆ. ಆದರೆ ಸುಡುಗಾಡು ಸರ್ಕಾರಿ ಇಲಾಖೆ ಸೇರಿದ್ದಕ್ಕೆ 'ತೌಬಾ... ತೌಬಾ...' ಅಂತ ಕೆನ್ನೆ ಕೆನ್ನೆ ಬಡಿದುಕೊಂಡಿದ್ದೇನೆ. ಅದಕ್ಕೆ ಗಡ್ಡ ಮಾತ್ರ ಬಿಳಿದಾಗುತ್ತಿವೆ... ಎಂದು ಹೇಳಿದ್ದೇನೆ. ಇದಕ್ಕೆ ನೀವೇನಂತೀರೋ?

ಹೀಗೆ ನಿಮ್ಮ ಸಂಕಲನ ಬರೀ ಸಂಶೋಧಕರಿಗೆ ಮೀಸಲಿಡುವುದರ ಬದಲಿ, ವೈವಿಧ್ಯಮಯ ಲೇಖನಗಳಿಗೂ ಮೀಸಲಿಡಿ. **– ಶರಣಗೌಡ ಎರಡೆತ್ತಿನ, ಚಿತ್ರದುರ್ಗ**

೮. **ಸಂಲನ-೨೭** ತಲುಪಿತು. ನಿಮ್ಮ 'ಒನ್ನೇಪುಟ' ಮತ್ತು 'ಕಡೀಪುಟ' ಮೊದಲು ಓದುವುದು ನನ್ನ ವಾಡಿಕೆ. ಕವಿ ಸೂರದಾಸರ ಬಗ್ಗೆ ಬರೆಯುತ್ತ, ಕೇವಲ ಅವರ ಪರಿಚಯ ಕೊಡದೆ, ಅವರು ಮಾನವ ಜನಾಂಗಕ್ಕೆ ಕೊಟ್ಟ ಸಾರ್ವಕಾಲಿಕ ಸಂದೇಶವನ್ನೂ ತಿಳಿಯಪಡಿಸಿದ್ದೀರಿ. ಇದರಿಂದ ಅವರ ಸಮಗ್ರ ಜೀವನದ ಚಿತ್ರ ನಮ್ಮ ಕಣ್ಣಮುಂದೆ ಮೂಡುತ್ತದೆ. ಸೂರದಾಸರಂತೆ ಹೋಮರ್ (ಗ್ರೀಕ್ ಕವಿ) ಕುರುಡನಾಗಿದ್ದನಂತೆ. ಆದರೆ ಅವನು ಜಗತ್ತಿನಲ್ಲಿಯೇ ಅತ್ಯಂತ ಸುಂದರ ಸ್ತ್ರೀಯೋರ್ವಳನ್ನು (ಹೆಲೆನ್ ಆಫ್ ಟ್ರಾಯ್) ಸೃಷ್ಟಿಸಿದ್ದಾನೆ. 'ಕಡೀಪುಟ' ಸ್ವಲ್ಪ ಹಾಸ್ಯದಿಂದ ಕೂಡಿದ್ದರೂ ಖುಶಿ ಕೊಡುವ ಲೇಖನ. Ultimately it gives joy.

'ಬರಿ ಬಸ್ಸಲ್ಲೋ...' ಬಹಳ ಸ್ವಾರಸ್ಯಕರವಾಗಿದೆ. ಈ ಲೇಖನ ಓದಿದ ನಂತರ ಬಸ್ ಪ್ರವಾಸ ಮಾಡಿದರೆ ಕಷ್ಟಕರ ಪ್ರವಾಸದ ಅನುಭವವನ್ನು ಆನಂದಿಸುವ detachment ಖಂಡಿತ ಬರುತ್ತದೆ. ಬೇಂದ್ರೆಯವರ 'ಇದು ಬರಿ ಬೆಳಗಲ್ಲೋ ಅಣ್ಣ' ನೆನಪಿಗೆ ಬಂತು.

ಪರಿಸರವಾದ ಮತ್ತು ಔದ್ಯೋಗೀಕರಣವನ್ನು ಪ್ರತಿಯೊಬ್ಬನೂ ಓದಲೇಬೇಕು. ಏರುತ್ತಿರುವ ಜನಸಂಖ್ಯೆಗೆ ವೆಂಕಟ್ರಾಜ ರಾವ್ ಕೊಡುವ ಪರಿಹಾರ ಬೆಳವಣಿಗೆಯನ್ನು ಕುಂಠಿತಗೊಳಿಸದೆ ಸಮತೋಲನ ಕಾಯ್ದುಕೊಳ್ಳಲು ಸಹಾಯವಾಗುತ್ತದೆಂದು ನನ್ನ ಅನಿಸಿಕೆ. ಸುಮತೀಂದ್ರ ನಾಡಿಗರ 'ದಿವಸ್ಪತಿ'ಯ ಕೊನೆಯ ಸಾಲು 'ನರ್ಸಿಗ್ ಹೋಂ ದೊಡ್ಡಪ್ಪನೆ ಯಮಧರ್ಮನ ದೂತನೆ?' ಎಷ್ಟು ನೈಜವಾಗಿ ಇಂದಿನ ಹೈಟೆಕ್ ಆಸ್ಪತ್ರೆಗಳನ್ನು ವಿಡಂಬಿಸುತ್ತದೆ!

'ನನ್ನ ಶಾಲಾ ಗುರುಗಳು' ಮಾಲಿಕೆ ಅತ್ಯಂತ ಸುಂದರವಾಗಿ ಬರುತ್ತಲಿದೆ. ಇವನ್ನು ಬರೆಯುವವರಿಗೆ ಮತ್ತೊಮ್ಮೆ ಬಾಲ್ಯದ ಆ ವಿದ್ಯಾರ್ಥಿ ದೆಸೆಯ ಅನುಭವಗಳನ್ನು ನೆನೆಯುವ ಅವಕಾಶ. 'ನನ್ನ ಅವ್ವ ನನ್ನ ಅಪ್ಪ' ಲೇಖನಗಳ ಮಾಲಿಕೆ ಕೃತಜ್ಞತೆ ಸಲ್ಲಿಸುವ ವೇದಿಕೆಯೇ ಆಗಿದೆ. ವಿಂದಾ ಕರಂದೀಕರರ ಕವನಗಳನ್ನು ಸನದಿಯವರು ಸೊಗಸಾಗಿ ಅನುವಾದಿಸಿದ್ದಾರೆ. ಪುಸ್ತಕ ಪರಿಶೀಲನೆಗಳು ಸಹ ಶುಷ್ಕ ವಿಮರ್ಶೆಯಾಗದೆ ಸೃಜನಶೀಲವಾಗಿವೆ. **– ಪ್ರೊ. ಪಿ. ಎಂ. ಹೆಗಡೆ, ಶಿರಸಿ**

೯. ಪರಿಸರ ಸಮಸ್ಯೆಗೆ ಹೆಚ್ಚುತ್ತಿರುವ ಜನಸಂಖ್ಯೆಯ ನಂಟನ್ನು ವೆಂಕಟ್ರಾಜ ರಾವ್ ಅವರು ಸರಿಯಾಗಿ ಗುರುತಿಸಿದ್ದಾರೆ. ಬೆಳೆಯುತ್ತಿರುವ ಜನಸಂಖ್ಯೆಯಿಂದಾಗಿ ನಮ್ಮ ಯೋಜನೆಗಳು ತಲೆಕೆಳಗಾಗುತ್ತಿವೆ. ಯೋಜನೆಗಳಿಂದಾಗಿ ಪರಿಸರಕ್ಕೆ ಧಕ್ಕೆ ತಗಲುತ್ತಿದೆ. ಆದರೆ ಜನಸಂಖ್ಯೆ ನಿಯಂತ್ರಣವನ್ನು ಗಂಭೀರವಾಗಿ ಪರಿಗಣಿಸದಿರುವುದು ನಮ್ಮ ದುರಂತವಾಗಿದೆ. ಬರುವ ವರ್ಷಗಳಲ್ಲಿ ಪರಿಸರದ ತುಂಬೆಲ್ಲ ಜನ! ಆಗ ಪರಿಸರವೆಂದರೆ ಜನಜಾತ್ರೆ. ಪರಿಸರವನ್ನು ಜನ ಆಪೋಶನ ತೆಗೆದುಕೊಂಡಾದ ನಂತರ, ಅದೇ ಪರಿಸರ ಮನುಕುಲದ ಅಳಿವಿಗೆ ನಾಂದಿ ಹಾಡುತ್ತದೆ. It is only a matter of time. ಮಿರ್ಜಾ ಬಷೀರ್ ಅವರ ಲೇಖನ ಬಹಳ ಆಪ್ತವೆನಿಸಿತು. ಇಂಥ 'ಹಿಂಸ್ಲಿವ್' ಕುಟುಂಬಗಳು ನಮ್ಮ ಹಳ್ಳಿಗಳಲ್ಲಿ ಸಾಮಾನ್ಯ. ಪಿಂಜಾರ ಜನಾಂಗದ ಒಳನೋಟವನ್ನು, ಆತಂಕವನ್ನು ಮಿರ್ಜಾ ಬಷೀರ್ ಸರಿಯಾಗಿ ದಾಖಲಿಸಿದ್ದಾರೆ.

**– ವೆಂಕಟೇಶ ಮಾಚಕನೂರ, ಬೆಂಗಳೂರು**

೧೦. **ಸಂಕಲನ-೨೭** ರ 'ಕಡೀಪುಟ' ಚೆನ್ನಾಗಿದೆ. ಅಲ್ಲಿ ಬರೆದಿರುವ ಪ್ರತಿ ಸಾಲು ಚಿಂತನಾರ್ಹ. ಬದುಕನ್ನು ನಾವು ಆಹ್ವಾನಿಸುವ ಪರಿಕಲ್ಪನೆ ಬಹು ಅರ್ಥವತ್ತಾಗಿದೆ. ಆಯಾ ಕಾಲಕ್ಕೆ, ವಯಸ್ಸಿಗೆ ತಕ್ಕಂತೆ ಬಾಳನ್ನು ಸ್ವೀಕಾರ ಮಾಡೋದೆ ಪರಮ ಸುಖಾ ಎಂದಿದ್ದೀರಿ. ನಿಜ ತಾನೆ. ಬಿ. ಎಂ. ರೋಹಿಣಿಯವರ ಶಾಲಾ ಗುರುಗಳು ಲೇಖನ ಉತ್ತಮವಾಗಿದೆ. ಒಬ್ಬ ಶಿಕ್ಷಕರು ಒಳ್ಳೆಯ ಪ್ರತಿಭೆಯನ್ನು ಗುರ್ತಿಸಿ

ಸಾಣೆ ಹಿಡಿದುಕೊಡುವ ಶ್ರೇಷ್ಠತೆ ಅಲ್ಲಿ ವ್ಯಕ್ತವಾಗಿದೆ. ಅಪ್ಪ ಅಮ್ಮ ಕುರಿತು ಡಾ. ಮಿರ್ಜಾ ಬಷೀರ್ ಲೇಖನ ಬಹಳ ಇಷ್ಟವಾಯಿತು. ಒಂದು ಜನಾಂಗದಲ್ಲಿನ ಸಾಂಸ್ಕೃತಿಕ ಚಿತ್ರಣದ ಜೊತೆಗೆ ಸಾತ್ವಿಕ ತಾಯಿಯ ಮನೋಧರ್ಮದೊಳಗಿರುವ ಮಾನವೀಯ ಮುಗ್ಧತೆ, ಸೋಗುಗಳು ಇಲ್ಲದಂತಹ ಸಹಜ ಸ್ನೇಹಜೀವನ ತೆರೆದು ನಿಲ್ಲಿಸಿದ್ದು ಖುಶಿಯಾಯಿತು. ಸತೀಶ ಕುಲಕರ್ಣಿ, ನಾ. ಮೊಗಸಾಲೆ ಅವರ ಕವನಗಳೂ ಇಷ್ಟವಾದವು.

– ರಜಿಯಾ ಡಿ. ಬಿ., ಬೆಂಗಳೂರು

೧೧. ಶಾಸ್ತ್ರೀಯ ಭಾಷೆಯಾಗಿ ಕನ್ನಡವನ್ನು ಪುರಸ್ಕರಿಸಲು ಸಾಹಿತಿಗಳು ಭಾಷಾಭಿಮಾನಿಗಳು ಪ್ರಯತ್ನ ನಡೆಸುತ್ತಿರುವ ಈ ಸಂದರ್ಭದಲ್ಲಿ ಸಂಕಲನದಂಥ ಪತ್ರಿಕೆಯ ಕೊಡುಗೆಯನ್ನು, ಬೆಂಬಲವನ್ನು ಮರೆಯುವಂತಿಲ್ಲ. ಮಾನ್ಯ ಷ. ಶೆಟ್ಟರ್‌ರವರ 'ಶಂಗಂ ಕಾಲದ ಕನ್ನಡ ನಾಡು' ಸ್ಪಷ್ಟವಾಗಿ, ಖಚಿತವಾಗಿ ಡಾ. ಐರಾವತಂ ಮಹದೇವನ್‌ರವರ ಅಭಿಪ್ರಾಯನ್ನು ಉಲ್ಲೇಖಿಸುವುದರ ಮೂಲಕ ಕನ್ನಡಿಗರ ಅಭಿಮಾನವನ್ನು ಇಮ್ಮಡಿಸಲು ಸಹಾಯಕವಾಗಿದೆ. ಅದಕ್ಕಾಗಿ ಪ್ರೊ. ಷ. ಶೆಟ್ಟರ್ ಅವರಿಗೂ ಸಂಕಲನಕ್ಕೂ ಅನಂತ ಧನ್ಯವಾದಗಳು. ಇದೇ ಲೇಖನದ 'ಬಹುಭಾಷಾ ಪ್ರದೇಶವಾದ ತಕಡೂರು' (ಪು. ೬೨) ಉಪಶೀರ್ಷಿಕೆಯಲ್ಲಿ ಬಂದಿರುವ ನಾಡು ನುಡಿ ಕುರಿತ ಚಿಂತನೆಗಳು ತಲಸ್ಪರ್ಶಿಯಾಗಿವೆ. ನನ್ನೂರಿನ ಸಮೀಪದಲ್ಲಿನ ಗ್ರಾಮ ತಗಡೂರು ಒಂದು ಕಾಲದಲ್ಲಿ ತಮಿಳು-ಕನ್ನಡಿಗರು ಸಹಬಾಳ್ವೆ ನಡೆಸುತ್ತಿದ್ದ ಬಗ್ಗೆ, ಅಲ್ಲಿನ ಆಚರಣೆಗಳು, ಭಾಷೆಯ ಕೊಳು-ಕೊಡುಗೆಗಳ ಬಗ್ಗೆ ಶೆಟ್ಟರ್ ಲೇಖನ ಸಮರ್ಥವಾಗಿ ಬಿಂಬಿಸಿದೆ.

– ಎ. ಡಿ. ಸಂಜುಂಡಸ್ವಾಮಿ, ಮೈಸೂರು

೧೨. ಮೂರು ವರ್ಷಗಳ ಹಿಂದೆ ಪ್ರಕಟವಾದ ನನ್ನ 'ಹೀಗೊಂದು ವೃತ್ತಾಂತ'ದ ವಿಮರ್ಶೆ ಸಂಕಲನದಲ್ಲಿ ಬರಲಿಲ್ಲವೆಂದು ಸ್ವಲ್ಪ ಬೇಸರಿತ್ತು. ಈ ಸಂಕಲನ-೨೬ರ ಮಾತು ಅದನ್ನು ಅಳಿಸಿಹಾಕಿತು. ನಿಮ್ಮ ಕಷ್ಟ ತಿಳಿಯಿತು. ಸಂಕಲನದ ಲೇಖನಗಳು ಚಿಕ್ಕವಾಗಿರುವಂತೆ ಬರಹಗಾರರಿಗೆ ಮುನ್‌ಸೂಚನೆ ಕೊಡುವುದು ಸೂಕ್ತ. ಇದರಿಂದ ಹೆಚ್ಚು ಮಂದಿಗೆ ಅವಕಾಶ ದೊರೆಯುವುದು.

– ಪ್ರೊ. ವಿ. ಬಿ. ಅರ್ತಿಕಜೆ, ಪುತ್ತೂರು

೧೩. ಸಂಕಲನದಲ್ಲಿ ನಮ್ಮ ಲೇಖನಗಳನ್ನು ನೋಡುವುದೇ ನಮ್ಮಂಥವರಿಗೆ ತುಂಬ ಸಂತೋಷದ, ಅಭಿಮಾನದ ವಿಷಯ. ಜೊತೆಗೆ ಹೆಮ್ಮೆಯ, ಗೌರವದ ವಿಷಯವೂ ಹೌದು. ನಮ್ಮ ಈ ಹೆಮ್ಮೆ, ಗೌರವ, ಸಂತೋಷ– ಎಲ್ಲವೂ ಒಂದು ರೀತಿಯಲ್ಲಿ ನಿಮಗೇ ಸಮರ್ಪಣೆ. ನೀವು ಅದಕ್ಕೆ ಅರ್ಹರು.

– ಶ್ರೀನಿವಾಸ ವಿ. ಸುತ್ರಾವೆ, ದಾವಣಗೆರೆ

೧೪. ಸಂಕಲನದಲ್ಲಿ ಬರುತ್ತಿರುವ ಪದ್ಯಗಳ ಬಗ್ಗೆ ನನಗೆ ಸಂತೋಷವಿಲ್ಲ. ಈ ಮಾತು ಹಿಂದೆಯೂ ಒಮ್ಮೆ ನಿಮಗೆ ಬರೆದಿದ್ದೆ. ಹಿಂದೆ ಒಂದಿಷ್ಟು ಒಳ್ಳೆಯ ಕವಿತೆಗಳನ್ನು ಬರೆದು ಈಗ ದೀರ್ಘ ಮೌನ ತಾಳಿರುವ ಕೆಲವರಿಗೆ ಕಾಗದ ಬರೆದು ಪದ್ಯ ಬರೆಯಲು ಪ್ರೇರೇಪಿಸಿರಿ.

– ಮಾಧವ ಕುಲಕರ್ಣಿ, ಮೈಸೂರು

೧೫. ಸಂಕಲನ ಚೆನ್ನಾಗಿ ಬರುತ್ತಿದೆ. ಅದರಲ್ಲಿ ಪ್ರಕಟವಾಗುತ್ತಿರುವ ಕವನಗಳು ತಟ್ಟುತ್ತವೆ. ಅವು ಅತ್ಯಂತ ಸೂಕ್ತ ಆಯ್ಕೆ.

– ಸಿ. ಸೋಮಶೇಖರಯ್ಯ, ಚಿತ್ರದುರ್ಗ

೧೬. ಸಂಕಲನ-೨೭ ಬಂದೊಡನೆ 'ಒನ್ನೇಪುಟ', 'ಕಡೇಪುಟ' ಮೊದಲು ಓದಿದೆ. ಹೌದೇನ್ರೀ ಹೇಮಕ್ಕ ಸಿ.ಪ.ರವರ ತಲೆಕೂದಲು ಈಗಲೂ ಕಪ್ಪಗೆ ಅವೇನು? ಆಶ್ಚರ್ಯ, ನಮ್ಮನೆಯಲ್ಲಿ ೧೯-೨೦ಕ್ಕೆ ಎಲ್ಲರಿಗೂ ಬೆಳ್ಳಿಕೂದಲು!

– ಲಲಿತಾ ಸಿದ್ದಬಸವಯ್ಯ, ತುಮಕೂರು

# ಕಡೀಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

ಅಪಹ್ನುತಿ, ಭ್ರಮ, ಸಂದೇಹ ಮುಂತಾದವುಗಳನ್ನು ಸಯ್ತು ನಮ್ಮ ಸು-ಸಂಸ್ಕೃತ ಪೂರ್ವಜರು ಬದುಕಿನ ಆತಂಕ ಭಾವಗಳು, ಪೀಡೆಗಳು, ಕಷ್ಟಕಾರಕ ಕ್ಷಣಗಳು ಅಂತ ಭಾವಿಸಲಿಲ್ಲ. ಅವನ್ನ ಅಲಂಕಾರ ಮಾಡಿಕೊಂಡು ಸಿಂಗರಿಸಿಬಿಟ್ಟರು, ಭಾವಾಲಂಕಾರಗಳೇ ಅಂತ ಸ್ವೀಕರಿಸಿದರು. ಸಕಲ ಕಾಮೇಚ್ಛೆಗಳ– ವರ್ಣ, ಚಾಂಚಲ್ಯ, ನಿರಂತರತೆ, ಮಾರ್ದವತೆ, ವಿಷಾಕ್ತ ಮತ್ತತೆ, ಭಯಾವೃತ ಸೌಂದರ್ಯ ಮುಂತಾದವುಗಳ– ಸರ್ವಸಂಗ್ರಹವಾದ ಸರ್ಪವನ್ನೂ ಸಿಂಗಾರ ಮಾಡಿಕೊಂಡು ಕೊಳ್ಳಾಗ ಹಾಕಿಕೊಂಡ ಶಿವನನ್ನ್‌ಅ ಸೃಷ್ಟಿಸಿ ಮಹಾದೇವರನ್ನಾಗಿಸಿಕೊಂಡವರು ನಾವು. ಈ ರೀತಿಯೊಳಗ ಬದುಕು ಸರ್ವಗ್ರಾಹಿ, ಸರ್ವತ್ರಾಹಿ, ಸರ್ವರಕ್ಷಕ ಅಂತ ಭಾವಿಸಿಕೊಂಡವರು. ಹಿಂಗಾಗಿ ಹ್ನುತಿ, ಭ್ರಮ, ಸಂದೇಹ, ಸಂಶಯಗಳನ್ನ ನಮ್ಮವರು ಆತಂಕ ಅಂತ ಭಾವಿಸಲಿಲ್ಲ. ಅವನ್ನ ಬದುಕಿನ ಮನೆಯ ಆಧಾರದ ಗ್ವಾಡಿಗೆ ಇಟ್ಟ ನಿಚ್ಚಣಿಕೆಯ ಮ್ಯಾಲ ಒಂದೊಂದು ಹಲ್ಲಿನ ಮ್ಯಾಲ ಹತ್ತಿಸಿದವರು, ಏರಿಸಿದವರು, ಮೆರಿಸಿದವರು ನಮ್ಮವರು. ಸಾಹಿತ್ಯದೊಳಗ ಅವುಕ್ಕ ಶೃಂಗಾರ ಅಂದರು, ಶಾಸ್ತ್ರದೊಳಗ ಅಲಂಕಾರ ಅಂತ ಕರೆದರು.

ಹ್ನವ ಅಥವಾ ಹ್ನವನ ಅಂದರ ಮುಚ್ಚಿಡುವಿಕೆ, ಮುಚ್ಚಿಡುವುದು, ಅಸ್ವೀಕೃತಿ ಅಂತೆಲ್ಲಾ ಅರ್ಥ. ಅದರಿಂದನ್‌ಅ ಹುಟ್ಟಿದ ಇನ್ನೊಂದು ನಾಮಪದ ಹ್ನುತಿ. ಹ್ನುತ ಅಂದರ ಮುಚ್ಚಿಡಲ್ಪಟ್ಟದ್ದು, ಬೇರ್ಪಡಿಸಲ್ಪಟ್ಟದ್ದು ಅಂತ ಅರ್ಥ. ಈ ಹ್ನುತಿಗೆ ಅಪ ಅನ್ನುವ ಉಪಸರ್ಗ ಜೋಡಿಸಿದರ ಅದು ಮುಚ್ಚಿಡುವಿಕೆಯ ಅರ್ಥದ ಆಧಿಕ್ಯವನ್ನ ಬೋಧಿಸತಯ್ತಿ. 'ಅಪ'ಕ್ಕ ಆಧಿಕ್ಯ ಅಲ್ಲದ್‌ಅ ವೈಪರೀತ್ಯ, ವೈರುದ್ಧ್ಯ, ನಿಷೇಧ, ಹೀನಭಾವ, ದೂಷಣ, ವಿಕೃತಿ, ಕೆಟ್ಟದ್ದು, ವೈಶಿಷ್ಟ್ಯ ಮುಂತಾದ ಅರ್ಥಗಳೂ ದ್ಯೋತಿಸತಾವು. ಆದರ ಇಲ್ಲಿ ಆಧಿಕ್ಯದ ಅರ್ಥ ಪ್ರಧಾನ.

ಅಪಹ್ನುತಿ ಅನ್ನೂದು ಒಂದು ಅಲಂಕಾರ ಆದಾಗ, ಅದರಾಗ ಯಾವುದಾದರೊಂದು ವಸ್ತು ಅಥವಾ ಭಾವವನ್ನ ಮುಚ್ಚಿಟ್ಟು, ಅದರ ಸ್ಥಾನದೊಳಗ ಬ್ಯಾರೆ ಒಂದು ಸುಳ್ಳು ಅಥವಾ ಇಲ್ಲದ ವಸ್ತು ಅಥವಾ ಭಾವವನ್ನ ಕಲ್ಪಿಸಲಾಗತಯ್ತಿ. ಉದಾಹರಣೆಗೆ, ಪೀತಾಂಬರ ಧರಿಸಿದ ಕೃಷ್ಣನ ವರ್ಣನೆ ಮಾಡುವಾಗ, ಅಲ್ಲಿ ಕಾಣಸ್ತಿರಾವ್ನ ಕೃಷ್ಣ ಅಲ್ಲ, ಅದು ಮೋಡ; ಪೀತಾಂಬರ ಅಂದರ ಮೋಡದ ನಡುವ ಮಿಂಚಾಕ್ಹತ್ತಿದ ಮಿಂಚು ಅಂತ ಹೇಳ್ತೇವಿ. ಅಲ್ಲಿ ಮೋಡಾನೂ ಇರೂದಿಲ್ಲ, ಮಿಂಚೂ ಮಿಂಚತಿರೂದಿಲ್ಲ. ಆದರ ನಮ್ಮ ಕಲ್ಪನಾಶಕ್ತಿಯ ವಿಸ್ತಾರ-ವ್ಯಾಪ್ತಿಯಿಂದಾಗಿ ಇಂಥಾ ಮಾತು ಮೂಡತಾವು. ಇನ್ನೊಂದು ಉದಾಹರಣೆ : ಮುಂಜಾನೆ ಮಂಜು ಬಿದ್ದಿರತಯ್ತಿ. ಅದನ್ನ ನೋಡಿ ಸುಮ್ಮನ ಮಂಜು ಬಿದ್ದಯ್ತಿ ಅನ್ನೂದಿಲ್ಲ, ಅಲ್ಲೆ ನೀರಿಗೆ ಬೆಂಕಿ ಹತ್ತೇತಿ, ಇದು ಅದರ ಹೊಗಿ ಅಂತ ಅನ್ನೂದು. ಹಿಂಗ ಖರೆ ಇದ್ದ ಮಾತನ್ನ ಮರೆಮಾಚಿ, ಒಂದು ವಿಷಯ ಮುಚ್ಚಿಟ್ಟು ಬ್ಯಾರೆ ವಿಷಯ ಆರೋಪಿಸುವುದು ಅಪಹ್ನುತಿ.

ಇದರಂಥಾದ್ದ್‌ಅ ಇನ್ನೊಂದು ಭ್ರಮ ಅಥವಾ ಭ್ರಾಂತಿ ಅನ್ನೂದು. ಅಪಹ್ನುತಿಯೊಳಗ ನಾವು ಪ್ರಯತ್ನಪೂರ್ವಕ ಕಲ್ಪಿಸತೇವು. ಇದು ಪ್ರಯತ್ನ-ಭಾರ. ಆದರ ಭ್ರಮ ಅಥವಾ

ಭ್ರಾಂತಿಯೊಳಗ ಅದು, ಆ ಭಾವ ಅಪ್ರಯತ್ನಿತವಾಗಿ ಕಾಣಸತಯ್ತಿ. ಒಂದು ಉದಾಹರಣೆ : ಕತ್ತಲ ರಾತ್ರಿ. ಹೊಂಟಿರತೇವು. ದಾರ್‍ಯಾಗ ಒಂದು ಹಗ್ಗ ಬಿದ್ದಿರತಯ್ತಿ. ಆ ಮಬ್ಬಗಾವಳದಾಗ ಆ ಹಗ್ಗಾ ನೋಡಿದ ಕೂಡಲೇ ಅದು ಒಂದು ಹಾವ್ಹಿನ್ಹಂಗ ಕಾಣಸತಯ್ತಿ. ಹಗ್ಗದೊಳಗ ಹಾವ್ಹಿನ ಭ್ರಮಾ ಆಕ್ಕತಿ. ಹಿಂಗ ಉಪಮೇಯವಾದ ಹಗ್ಗದೊಳಗ ಉಪಮಾನವಾಗಿರುವ ಹಾವ್ಹಿನ ಭ್ರಮಾ ಆಕ್ಕತಿ. ಅಂದರೇನು ಉಪಮಾನನ್ಅ ಉಪಮೇಯದ್ಹಂಗ ಕಾಣಸತಯ್ತಿ ಅಂತ. ಇದು ಒಂದು ರೀತಿಯ ಅನುಮಾನಾಲಂಕಾರನ್ಅ.

ಇದ್ಅ ಮುಂದುವರಿದು ಸಂದೇಹ ಅಥವಾ ಸಂಶಯ ಆಕ್ಕತಿ. 'ಭ್ರಮ'ದೊಳಗ ಉಪಮೇಯ ಮತ್ತು ಉಪಮಾನಗಳಲ್ಲಿಯ ಸಾದೃಶ್ಯದ ಆಭಾಸವನ್ನ ನಿಜವಾದದ್ದು ಅಂತ ತಿಳೀತೇವಿ, ಆದರ ಸಂದೇಹದೊಳಗ ಉಪಮೇಯ ಮತ್ತು ಉಪಮಾನಗಳೊಳಗ ಎಷ್ಟು ಸಾಮ್ಯ ಇರತಯ್ತಿ ಅಂದರ, ಅವುಗಳನ್ನ ನೋಡಿ ಉಪಮಾನನ್ಅ ಉಪಮೇಯವೋ ಅಥವಾ ವಿಪರೀತ ಸ್ಥಿತಿ ಸತ್ಯವೋ ಅನ್ನೂದನ್ನ ಖಾತ್ರಿಯಾಗಿ ಹೇಳಾಕಾಗೂದುಲ್ಲ. ಈ ಖಚಿತ ಇಬ್ಬಂದಿತನದ ಸ್ಥಿತಿಗೆ ಸಂದೇಹ ಅಂತ ಹೆಸರಿಟ್ಟಾರ.

ದುರ್‍ಯೋಧನನ ಆಸ್ಥಾನದೊಳಗ ದ್ರೌಪದಿಯ ಚೀರಹರಣ, ಸೀರಿಸೆಳೆತ ನಡೆದಿತ್ತು. ದುಃಶಾಸನ ಸೀರಿ ಸೆಳದಾ... ಸೆಳದಾ... ಸೆಳದಾ. ಸೀರೀ ರಾಶಿ ಗುಡ್ಡದ್ಹಂಗ ಬಿತ್ತು (ಅಂತ ಹೇಳತಾರು, ಹಂಗ ತಿಳಕೋಬೇಕು. ಇಲ್ಲದಿದ್ದರ ಮುಂದಿನ ಮಾತು ಹೇಳಾಕಾಗೂದುಲ್ಲ, ನಿಮಗ ನಂಬಾಕ ಬರೂದುಲ್ಲ). ಎಷ್ಟು ಸೆಳೆದರೂ ಆಕೀ ಮೈಮ್ಯಾಗಿನ ಸೀರಿ ಮುಗೀಲಿಲ್ಲ, ತೀರಲಿಲ್ಲ, ಕಳಚಲಿಲ್ಲ. ನೋಡಿದ ಮಂದಿಗೆ, ಇದೇನಿದು, ಸೀರಿಯೊಳಗ ನಾರಿಯೋ, ಅಥವಾ ನಾರಿಯೊಳಗ ಸೀರಿಯೋ ಅಥವಾ ಸೀರಿಯೇ ನಾರಿಯೋ ಇಲ್ಲಾ ನಾರಿಯೇ ಸೀರಿಯೋ ಅಂತ ದಿಗಿಲಆತು. ಮನಸ್ಸಿನ್ಯಾಗ ಸಂದೇಹ ಬಂತು, ಸಂಶಯ ಹುಟ್ಟಿತು. ಪಾಪ, ಇಂಥಾ ದೃಶ್ಯ ನೋಡಿದವರೆಲ್ಲರೂ ಕವಿಹೃದಯಿಗಳಾಗಿಬಿಟ್ಟರು! ಮುಂದ ಮತ್ತ ಏನೇನ ನೋಡಿದರೋ, ಮಾಡಿದರೋ, ಏನೇನ ಕಲ್ಪನಾ ಕಟ್ಟಿದರೋ...

ಇಂಥಾ ಕಲ್ಪನಾದೊಳಗ, ಇಂಥಾ ಅನುಕೂಲ ಭಾವನಿರ್ಮ್ಯಾಣದೊಳಗ, ಭಾವನಾಭಾರಗಳನ್ನ ಕಡಿಮೆ ಮಾಡಿಕೊಳ್ಳುವ ಪ್ರಯತ್ನದೊಳಗ, ಸಹಜ ಭಾವವಿರೇಚನ-ಯತ್ನದೊಳಗ ನಮ್ಮ ಮನಸ್ಸಿನ ಅನೇಕ ಭಾವ-ಹ್ನುತಿಗಳನ್ನ, ಭ್ರಮಗಳನ್ನ, ಸಂದೇಹಗಳನ್ನ ನಾಗರಿಕಗೊಳಿಸುವ, ಸುಸಂಸ್ಕೃತಗೊಳಿಸುವ ಪ್ರಯತ್ನಗಳನ್ನ ನಾವು ಯಾವಾಗಲೂ ಮಾಡತಿರತೇವು. ಸಾಹಿತ್ಯ ಪ್ರಪಂಚದೊಳಗ ನಾವು ಬರೆಯುವ, ರಚಿಸುವ ಉಳಿದ ಸಾಹಿತ್ಯ ಪ್ರಕಾರಗಳಿಗಿಂತ ಮುಖ್ಯವಾಗಿ ಕಾವ್ಯ, ನಾಟಕ, ಕಥೆಗಳೊಳಗ ಹೆಚ್ಚಿನ ಪ್ರಮಾಣದೊಳಗ ಈ ಮೂರೂ ಭಾವಗಳ ತ್ರಿ-ಶೂಲಗಳನ್ನ ಬಳಸುವುದು ನಮ್ಮ ಸಾಹಿತಿಗಳ ಸ್ವಭಾವ. ಇವುಗಳನ್ನ ಅಸ್ತ್ರಗಳನ್ನಾಗಿ ಮಾಡಿಕೊಳ್ಳದೇ ಅಲಂಕಾರಗಳನ್ನಾಗಿ ಮಾಡಿಕೊಂಡರ ಬದುಕಿನೊಳಗ ಆನಂದ ಆವಿರ್ಭವಿಸತಯ್ತಿ, ಸಾಹಿತ್ಯದೊಳಗ ಶೃಂಗಾರ ಸ್ರವಿಸತಯ್ತಿ. ಆಗ ಜೀವನ ಸಹ್ಯ ಆಕ್ಕತಿ, ಸಾಹಿತ್ಯ ಭವ್ಯ ಆಕ್ಕತಿ. ಆದರ ಅವುಗಳ ಬಳಕೆ ಅತಿ ಆಗದ್ಹಂಗ, ಕೃತ್ರಿಮತೆಗೆ ಅವಕಾಶ ಲಭಿಸದ್ಹಂಗ, ಮಿತಿಯೊಳಗ ಮತಿ ಇರೂಹಂಗ ನೋಡಿಕೊಳ್ಳೂದು ಕಾಲಪಥದೊಳಗ ಉಸಿರಿನ ಕೂಡ ಓಡುವವರ, ಮತ್ತು ಕಾವ್ಯಪಥದೊಳಗ ಶಬ್ದದ ಕೂಡ ಆಡುವವರ ಕರ್ತವ್ಯ.

SANKALANA: RNI No. KARKAN 14160/10/1/2002-TC

ಸಂಕಲನ : ಜುಲಾಯಿ + ಆಗಸ್ಟ್ ೨೦೦೬

ಸಂಪುಟ ೫, ಸಂಚಿಕೆ ೪

ಸಂಪಾದಕರು : ಸಿದ್ಧಲಿಂಗ ಪಟ್ಟಣಶೆಟ್ಟಿ + ಹೇಮಾ ಪಟ್ಟಣಶೆಟ್ಟಿ

•

ರಾಮಚಂದ್ರ ದೇವ, ರೋಹಿತ ಚಕ್ರತೀರ್ಥ
ಜಿ. ಆರ್. ತಿಪ್ಪೇಸ್ವಾಮಿ, ಮಹಾಂತಪ್ಪ ನಂದೂರ, ಮಾಧವಿ ಭಂಡಾರಿ
ಪ್ರಕಾಶ ಹಲಗೇರಿ, ಎಸ್. ಎಂ. ಶಿವಪ್ರಕಾಶ್, ಸಿ. ಎನ್. ರಾಮಚಂದ್ರನ್
ಸುಶೀಲಾ ಆರ್. ರಾವ್, ಅಶೋಕ ಸರೋದೆ, ರಾಮಗಿರಿ ರವೀಂದ್ರ
ಆರ್. ನಿರ್ಮಲ, ಜೋಗಿಂದರ್ ಪಾಲ್ / ಅಬ್ದುಲ್ ಮಜೀದ್ ಖಾನ್
ಎಲ್. ವಿ. ಶಾಂತಕುಮಾರಿ, ವಸುಂಧರಾ ದೇಸಾಯಿ
ಆರ್. ಮೋಹನ್ ಕುಮಾರ್, ಸಿದ್ಧಲಿಂಗ ಪಟ್ಟಣಶೆಟ್ಟಿ

•

ಷ. ಶೆಟ್ಟರ್, ಎ. ಮುರಿಗೆಪ್ಪ, ಪ್ರಹ್ಲಾದ ಅಗಸನಕಟ್ಟೆ,
ಎಂ. ಡಿ. ವಕ್ಕುಂದ, ವಿಜಯಲಕ್ಷ್ಮಿ ರೇವಣಕರ, ಪರಮೇಶ್ವರಿ ಲೋಕೇಶ್ವರ್
ಮೋತಿಲಾಲ ಪಲವಾಯಿ, ಈಶ್ವರಚಂದ್ರ ಚಿಂತಾಮಣಿ, ಸುನಂದಾ ಕಡಮೆ
ದೇಶಪಾಂಡೆ ಸುಬ್ಬರಾಯ, ಕಿಕ್ಕೇರಿ ನಾರಾಯಣ್, ದುಷ್ಯಂತ ನಾಡಗೌಡ

•

ಎಚ್. ಜಿ. ಸೋಮಶೇಖರರಾವ್, ಈರಪ್ಪ ಎಂ. ಕಂಬಳಿ
ತೋಂಟದ ಸಿದ್ಧಲಿಂಗ ಸ್ವಾಮಿಗಳು
ಶ್ಯಾಮಸುಂದರ ಬಿದರಕುಂದಿ, ಜಿ. ಎನ್. ಅಶೋಕವರ್ಧನ
ಬಸವರಾಜ ಚಿಕ್ಕನರಗುಂದ, ಶರಣಗೌಡ ಎರಡೆತ್ತಿನ, ಪಿ. ಎಂ. ಹೆಗಡೆ
ವೆಂಕಟೇಶ ಮಾಚಕನೂರ, ರಜಿಯಾ ಡಿ. ಬಿ., ಎ. ಡಿ. ನಂಜುಂಡಸ್ವಾಮಿ
ವಿ. ಬಿ. ಅರ್ತಿಕಜೆ, ಶ್ರೀನಿವಾಸ ವಿ. ಸುತ್ರಾವೆ, ಮಾಧವ ಕುಲಕರ್ಣಿ
ಸಿ. ಸೋಮಶೇಖರಯ್ಯ, ಲಲಿತಾ ಸಿದ್ಧಬಸವಯ್ಯ

•

ಸಿದ್ಧಲಿಂಗ ಪಟ್ಟಣಶೆಟ್ಟಿ

•

ಸಂಕಲನ ಪ್ರಕಾಶನ

ಮೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪